ಹಂಪಿ ಕನ್ನಡ ವಿಶ್ವವಿದ್ಯಾನಿಲಯ

ಕಾವ್ಯಮಂಡಲ

(ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು)

"ದೇವನೂರು ಮಹಾದೇವ ಅವರ ಕೃತಿಗಳಲ್ಲಿ ಗಂಡು -ಹೆಣ್ಣಿನ ಸಂಬಂಧ"

(ಕನ್ನಡ ಎಂ.ಫಿಲ್. ಪದವಿಗಾಗಿ ಸಿದ್ಧಪಡಿಸಿದ ಸಂಶೋಧನಾ ಪ್ರಬಂಧ)

ಮುಖ್ಯಸ್ಥರು :

ಪ್ರೊ. ಕಿ. ರಂ. ನಾಗರಾಜು

ಕಾವ್ಯಮಂಡಲ,

ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು.

ಮಾರ್ಗದರ್ಶಕರು :

ಡಾ. ಚಂದ್ರಶೇಖರ್ ನಂಗಲಿ

ಕಾವ್ಯಮಂಡಲ,

ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು.

ಸಿದ್ಧಪಡಿಸಿದವರು

ಬಿ. ಆರ್. ಕೇಶವಕುಮಾರ್,

ಎಂ. ಫಿಲ್. ಸಂಶೋಧನಾ ವಿದ್ಯಾರ್ಥಿ,

ಕಾವ್ಯಮಂಡಲ,

ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು.

2006-07

ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ,

ಕಾವ್ಯಮಂಡಲ, ಬೆಂಗಳೂರು.

-ಃ ದೃಢೀಕರಣ ಪತ್ರ ಃ-

"ದೇವನೂರು ಮಹಾದೇವ ಅವರ ಕೃತಿಗಳಲ್ಲಿ ಗಂಡು-ಹೆಣ್ಣಿನ ಸಂಬಂಧ" ಎಂಬ ವಿಷಯವನ್ನು ಕುರಿತು ಟಿ. ಆರ್. ಕೇಶವಕುಮಾರ್ ಅವರು 2007-08ನೇ ಸಾಲಿನ ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆಯಾದ ಕಾವ್ಯಮಂಡಲದಲ್ಲಿ ಕನ್ನಡ ಎಂ.ಫಿಲ್., ಪದವಿಗಾಗಿ ಸಲ್ಲಿಸುತ್ತಿರುವ ಈ ಸಂಶೋಧನಾ ಪ್ರಬಂಧವನ್ನು ಸ್ವತಃ ಅವರೇ ಸಿದ್ಧಪಡಿಸಿದ್ದಾರೆ. ಇದರಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಪ್ರಬಂಧಕಾರರದ್ದಾಗಿವೆ. ಇದು ಇಡಿಯಾಗಿ ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ ಃ

ಸ್ಥಳ ಃ

ಮಾರ್ಗದರ್ಶಕರು

ಡಾ. ಚಂದ್ರಶೇಖರ್ ನಂಗಲಿ

ಕಾವ್ಯಮಂಡಲ, ಬೆಂಗಳೂರು.

-ಃ ದೃಢೀಕರಣ ಪತ್ರ ಃ-

"ದೇವನೂರು ಮಹಾದೇವ ಅವರ ಕೃತಿಗಳಲ್ಲಿ ಗಂಡು-ಹೆಣ್ಣಿನ ಸಂಬಂಧ" ಎಂಬ ವಿಷಯವನ್ನು ಕುರಿತು **ಟಿ. ಆರ್. ಕೇಶವಕುಮಾರ್** ಅವರು 2007-08ನೇ ಸಾಲಿನ ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆಯಾದ ಕಾವ್ಯಮಂಡಲದಲ್ಲಿ ಕನ್ನಡ ಎಂ.ಫಿಲ್., ಪದವಿಗಾಗಿ ಸಲ್ಲಿಸುತ್ತಿರುವ ಈ ಸಂಶೋಧನಾ ಪ್ರಬಂಧವನ್ನು ಸ್ವತಃ ಅವರೇ ಸಿದ್ಧಪಡಿಸಿದ್ದಾರೆ. ಇದರಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಪ್ರಬಂಧಕಾರರದ್ದಾಗಿವೆ. ಇದು ಇಡಿಯಾಗಿ ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ ಃ

ಸ್ಥಳ ಃ

ಮುಖ್ಯಸ್ಥರು

ಪ್ರೊ. ಕಿ. ರಂ. ನಾಗರಾಜು

ಕಾವ್ಯಮಂಡಲ, ಬೆಂಗಳೂರು.

-ಃ ಘೋಷಣಾ ಪತ್ರ ಃ-

"ದೇವನೂರು ಮಹಾದೇವ ಅವರ ಕೃತಿಗಳಲ್ಲಿ ಗಂಡು-ಹೆಣ್ಣಿನ ಸಂಬಂಧ" ಎಂಬ ವಿಷಯವನ್ನು ಕುರಿತು ಟಿ. ಆರ್. ಕೇಶವಕುಮಾರ್ ಅವರು 2007-08ನೇ ಸಾಲಿನ ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆಯಾದ ಕಾವ್ಯಮಂಡಲದಲ್ಲಿ ಕನ್ನಡ ಎಂ.ಫಿಲ್., ಪದವಿಗಾಗಿ ಸಲ್ಲಿಸುತ್ತಿರುವ ಈ ಸಂಶೋಧನಾ ಪ್ರಬಂಧವನ್ನು ಪ್ರೊ. ಕಿ. ರಂ. ನಾಗರಾಜು, ಮುಖ್ಯಸ್ಥರು, ಕಾವ್ಯಮಂಡಲ, ಬೆಂಗಳೂರು ಹಾಗೂ ಡಾ. ಚಂದ್ರಶೇಖರ್ ನಂಗಲಿ, ಪ್ರಾಚಾರ್ಯರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸಕೋಟೆ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಇದು ಇಡಿಯಾಗಿ ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ ಃ

ಸ್ಥಳ ಃ

ಸಂಶೋಧಕರು

ಟಿ. ಆರ್. ಕೇಶವಕುಮಾರ್

ಟಿ. ಆರ್. ಕೇಶವಕುಮಾರ್

ಸಂಶೋಧನಾ ವಿದ್ಯಾರ್ಥಿ,

ಕಾವ್ಯಮಂಡಲ, ಬೆಂಗಳೂರು.

-: ಪರಿವಿಡಿ :-

ಅಧ್ಯಯನದ ಉದ್ದೇಶ :-

ಹೊಸಗನ್ನಡ ಸಾಹಿತ್ಯ ಚರಿತ್ರೆಯ ಪ್ರಮುಖ ಘಟ್ಟಗಳಲ್ಲಿ ಒಂದು. ದಲಿತ - ಬಂಡಾಯ. ಈ ಕಾಲಘಟ್ಟದಲ್ಲಿ ಬಂದ ಪ್ರಮುಖ ಕಾದಂಬರಿಕಾರ, ಕತೆಗಾರ, ವಿದ್ವಾಂಸ, ತತ್ವಜ್ಞಾನಿ, ಚಿಂತಕ ಹೀಗೆ ಹಲವಾರು ಸಾಹಿತ್ಯ - ಸಂಸ್ಕೃತಿ ಕ್ಷೇತ್ರದಲ್ಲಿ ದುಡಿದವರು ದೇವನೂರು ಮಹದೇವ.

ಇವರ ಕೃತಿಗಳಲ್ಲಿ ಸಾಮಾಜಿಕ - ಸಂಸ್ಕೃತಿ, ಮನುಷ್ಯ - ಮನುಷ್ಯರ ನಡುವೆ ಜೀವಿಸಲಾಗದ, ಜನಾಂಗ - ಜಾತಿ ನಡುವಿನ ಘರ್ಷಣೆ, ಸಮಾನತೆಗಾಗಿ ಹೋರಾಡುವ ಪ್ರಯತ್ನ, ಶೋಷಣೆಗೆ ಒಳಪಡುವ ದಲಿತ ಜನರ ಜೀವನ ಚಿತ್ರಿಸುತ್ತವೆ ಮತ್ತು ಸಮಾನತೆಯ ಹೋರಾಟಕ್ಕಾಗಿ ಜೀವಿಸುವ ಜನರ ಗುಂಪು ದಲಿತ "ರು". ಈ ದಲಿತ ಜನಾಂಗದ ಅಥವಾ ಶೋಷಿತ ಜನರ ಸಾಂಸ್ಕೃತಿಕ ಜೀವನ, ಭಾಷೆ, ನೋವು- ನಲಿವು, ಆರ್ಥಿಕ ವಿಚಾರ, ಅವರು ಶೋಷಣೆಗೆ ಒಳಗಾಗುವ ಸಂದರ್ಭ, ಮನುಷ್ಯ - ಮನುಷ್ಯರ ನಡುವಿನ ಸಂಬಂಧ, ಗಂಡು ಹೆಣ್ಣಿನ ಸಂಬಂಧದ ಚಿತ್ರಣಗಳನ್ನು ತಮ್ಮ ಕೃತಿಗಳಲ್ಲಿ ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ.

ದಲಿತರು ಸಮಾಜದ ಶೋಷಣೆಯ ಜೀವಿಗಳು. ಈ ಶೋಷಣೆಯ ಜೀವಿಗಳಲ್ಲಿನ ಆಂತರಿಕ ಸಂಬಂಧಗಳು. ಗಂಡು ಹೆಣ್ಣಿನ ಮಧ್ಯೆ ಇರುವ ಸಂಬಂಧ, ಈ ಶೋಷಣೆಯ ಬದುಕಿನ ಸಮಾಜದಲ್ಲಿ ದಲಿತ ಪುರುಷರು ಸ್ತ್ರೀಯರಿಗೆ ಎಷ್ಟರ ಮಟ್ಟಿಗೆ ಸ್ವಾತಂತ್ರ್ಯವಿದೆ ಹಾಗೂ ಸಾಮಾನ್ಯವಾಗಿ ಜಗತ್ತಿನಲ್ಲಿ ಅನಾದಿಕಾಲದಿಂದಲೂ ಸ್ತ್ರೀಯರ ವಿರುದ್ಧ ಎಲ್ಲಾ ಜಾತಿ-ಮತ- ಧರ್ಮಗಳಲ್ಲಿ ದೌರ್ಜನ್ಯ, ಶೋಷಣೆ, ಅತ್ಯಾಚಾರಗಳು ನಡೆದುಕೊಂಡು ಬಂದಿವೆ. ಯಾವುದೇ ಸ್ಥಾನ ಮಾನ ನೀಡದೆ ಎಲ್ಲಾ ಕ್ಷೇತ್ರಗಳಲ್ಲಿಯೂ ಶೋಷಣೆಯ ಮೂಲಕ ಅತ್ಯಂತ ಕೀಳಾಗಿ ಸಮಾಜದಲ್ಲಿ ತಿರಸ್ಕರಿಸಲ್ಪಡುವಂತಾಗಿದೆ. ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯ ಸಮಾನತೆ ದೊರೆಯಲು ಸಾಧ್ಯವೇ? ಎಂಬುವುದೇ ಪ್ರಶ್ನಾತೀತವಾಗಿದೆ.

ಇಂತಹ ವಿಚಾರಗಳು ದಲಿತರಲ್ಲಿ ಮಾತ್ರವಲ್ಲದೆ ಎಲ್ಲಾ ಪಂಗಡಗಳಲ್ಲಿಯೂ, ಸರ್ವೆ ಸಾಮಾನ್ಯವಾಗಿದೆ. ಸ್ತ್ರೀಯರನ್ನು ಪ್ರಾಣಿಗಳಿಗಿಂತ ಕೀಳಾಗಿ ನಡೆಸಿಕೊಂಡು ಬಂದಿರುವುದಕ್ಕೆ ನಮ್ಮ ಇತಿಹಾಸದಲ್ಲಿ ಹಲವಾರು ಉದಾಹರಣೆಗಳಿವೆ. ಸ್ತ್ರೀಯನ್ನು ದೇವತೆ, ಭೂಮಿ, ಜಲ ಹೀಗೆ ಎಲ್ಲಾ ಪ್ರಕೃತಿಯ ಅಂಶಗಳಿಗೆ ಹೋಲಿಸಿ ಔದಾರ್ಯದಿಂದ ಗೌರವಿಸಿಕೊಂಡು ಬಂದಿರುವಂತೆ ನಮಗೆ ಗೋಚರವಾದರೂ, ದೀಪದ ಕೆಳಗೆ ಕತ್ತಲೆಯಂತೆ,

ಕಡಲ ಒಡಲಿನಲ್ಲಿ ಕಿಚ್ಚಿರುವಂತೆ ಅವಳನ್ನು ಹೆಚ್ಚು ಹೆಚ್ಚಾಗಿ ಗೌರವಿಸಿಕೊಂಡು ಬಂದಂತೆ ಅಷ್ಟೇ - ಅಷ್ಟೇ ನಿರ್ಭಯ ವಾಗಿ ಅವಳನ್ನು ಶೋಷಿಸಿದ್ದಾರೆ.

ದಲಿತರು ಸಮಾಜದಲ್ಲಿ ಶೋಷಣೆಗೊಳಗಾಗಿ ಶೋಷಣೆಯ ನೋವನ್ನು ಕಂಡುಂಡವರು. ಇಂತಹ ಶೋಷಿತರು, ಸಾರ್ವತ್ರಿಕವಾಗಿ ಶೋಷಿತವಾಗಿರುವ ಈ ಸ್ತ್ರೀಯನ್ನು ತಮ್ಮ ಸಮುದಾಯದಲ್ಲಿ ಎಷ್ಟರ ಮಟ್ಟಿಗೆ ಸ್ವತಂತ್ರವನ್ನು ನೀಡಿದ್ದಾರೆ, ಅವರನ್ನು ಎಷ್ಟರ ಮಟ್ಟಿಗೆ ಗೌರವಿಸುತ್ತಾ ಬಂದಿದ್ದಾರೆ, ಸಮಾಜದಲ್ಲಿ ಎಷ್ಟರ ಮಟ್ಟಿಗೆ ಅವರಲ್ಲಿ ಸ್ಥಾನ ಮಾನವಿದೆ. ಶೋಷಿತ ವ್ಯಕ್ತಿ, ಶೋಷಿತರನ್ನು ಹೇಗೆ ನಡೆಸಿಕೊಂಡು ಬಂದಿದ್ದಾರೆ ಎಂಬುದನ್ನು ತಿಳಿಸುವುದೇ ಅಧ್ಯಯನದ ಉದ್ದೇಶವಾಗಿದೆ. ತಾವುಗಳೇ ಬರೆದ ಕೃತಿಗಳಲ್ಲಿ ಹುಡುಕುವುದು. ಈ ದಲಿತ ಕೃತಿಕಾರರು ತಮ್ಮ ಕೃತಿಗಳಲ್ಲಿ ಈ ಸ್ತ್ರೀ ಪುರುಷ ಪಾತ್ರವನ್ನು ಇವರ ನೈಜ ಸಮಸ್ಯೆಗಳನ್ನು ಗುರುತಿಸಿದ್ದಾರೆಯೇ ಇಲ್ಲವೇ ಎಂಬ ಅಂಶಗಳನ್ನು ಹುಡುಕುವುದು ನನ್ನ ಅಧ್ಯಯನದ ಉದ್ದೇಶವಾಗಿದೆ.

ವ್ಯಾಪ್ತಿ:-

ದೇವನೂರು ಮಹದೇವ ಅವರ ಸಮಗ್ರ ಕತೆಗಳು, ಎರಡು ಕಾದಂಬರಿಗಳೂ ಒಡಲಾಳ - ಕುಸುಮ ಬಾಲೆ ಒಟ್ಟಾರೆಯಾಗಿ ಅವರ ಎಲ್ಲಾ ಬರಹಗಳಲ್ಲಿ ಗಂಡು ಹೆಣ್ಣಿನ ಸಂಬಂಧವನ್ನು ಗುರುತಿಸುವ ವ್ಯಾಪ್ತಿ ಒಳಗೊಂಡಿದೆ. ದಲಿತವಲ್ಲದ ಜನಾಂಗದಲ್ಲಿನ ಗಂಡು - ಹೆಣ್ಣಿನ ಸಂಬಂಧಕ್ಕೂ, ದಲಿತ ಜನಾಂಗದಲ್ಲಿನ ಗಂಡು - ಹೆಣ್ಣಿನ ಸಂಬಂಧಕ್ಕೂ ಇರುವ ವ್ಯತ್ಯಾಸ, ಆಂತರಿಕ ಸಂಬಂಧ, ಸಮಾನತೆ, ಸ್ವಾತಂತ್ರ್ಯ ಎಲ್ಲಾ ಕ್ಷೇತ್ರಗಳಲ್ಲಿಯೂ ಗಂಡು- ಹೆಣ್ಣು ದಲಿತ ಸಮಾಜದಲ್ಲಿ ಆಂತರಿಕವಾಗಿ ಹಾಗೂ ಬಾಹ್ಯ ಸಮಾಜದಲ್ಲಿ ಯಾವ ರೀತಿ ಸ್ಥಾನ - ಮಾನ ಸಂಬಂಧಗಳನ್ನು ಪಡೆದುಕೊಂಡಿದೆ ಎಂಬುದನ್ನು ಇವರ ಕೃತಿಗಳಲ್ಲಿ ಹುಡುಕುವುದು ನನ್ನ ಅಧ್ಯಯನದ ಉದ್ದೇಶದ ವ್ಯಾಪ್ತಿಯಾಗಿದೆ. ಪಾತ್ರಗಳಲ್ಲಿ, ಸಂಬಂಧಗಳಲ್ಲಿ ನೈಜತೆ, ದೇಶಿಯತೆ, ವಾಸ್ತವಿಕತೆ, ನೋವಿನ ತೀವ್ರತೆ ಮಿಡಿಯುವಂತೆ ಸಹೃದಯದಲ್ಲಿ ಚಿತ್ರಿಸುವುದು ದೇವನೂರರ ಬರವಣಿಗೆಯ ಒಂದು ವಿಶೇಷತೆಯಾಗಿದೆ. ಗಂಡು - ಹೆಣ್ಣಿನ ಆಂತರಿಕ -ಬಾಹ್ಯ ಸಂಬಂಧವನ್ನು, ಭಿನ್ನಾಭಿಪ್ರಾಯಗಳನ್ನು ಗುರುತಿಸಿ, ಚರ್ಚಿಸಿ ಸಂಶೋಧಿಸುವುದು ಉದ್ದೇಶದ ವ್ಯಾಪ್ತಿಯಾಗಿದೆ.

ಅಧ್ಯಾಯ - 1

" ದಲಿತ ಸಾಹಿತ್ಯ"

ಅ) ದಲಿತ ಪದದ ಅರ್ಥ

ಆ) ಕನ್ನಡದಲ್ಲಿ ದಲಿತ ಸಾಹಿತ್ಯದ ಉಗಮ - ವಿಕಾಸ - ಲಕ್ಷಣ ಮತ್ತು ಪ್ರೇರಣೆಗಳು

ಇ) ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ದಲಿತ ಸಾಹಿತ್ಯ

- ಕ) ದಲಿತ ಕಾವ್ಯ
- ಖ) ದಲಿತ ಕಥೆಗಳು
- ಗ) ದಲಿತ ನಾಟಕಗಳು
- ಘ) ದಲಿತ ಆತ್ಮಕಥೆಗಳು

ದಲಿತ ಪದದ ಅರ್ಥ :-

ಹೊಸಗನ್ನಡ ಸಾಹಿತ್ಯದ ಪ್ರಮುಖ ಘಟ್ಟಗಳಲ್ಲಿ ದಲಿತ ಸಾಹಿತ್ಯವೂ ಒಂದು. "ದಲಿತ" ಪದವನ್ನು ವಿವರಿಸುವುದು ಸುಲಭವಾದ ಸಂಗತಿಯಲ್ಲ. ಈ ಪದವು ತುಂಬಾ ಸಂಕೀರ್ಣವಾದ ಪದ. ಈ ಪದದ ಅರ್ಥ ನಿರ್ದುಷ್ಟತೆಗೆ ಹಲವಾರು ಸೃಜನರು ದುಡಿದಿದ್ದಾರೆ. "ದಲಿತ" ಎಂಬ ಪದಕ್ಕೆ ಜಾತಿಯನ್ನು ಮೂಲ ಮಾನದಂಡ ವಾಗಿರಿಸಿಕೊಳ್ಳಲಾಗಿದೆ. ಭಾರತದ ಜಾತಿ ಸಮಾಜದಲ್ಲಿ ಪೂರ್ಣ ಮೈಲಿಗೆಯೆಂದು ಪರಿಗಣಿಸಲಾದ ಅಸ್ಪೃಶ್ಯರನ್ನು ಈ ಪದದಲ್ಲಿ ಕರೆಯಲಾಗಿದೆ.

ಶೋಷಣೆ ಎಂಬ ಪದಕ್ಕೆ ಜಾತಿ-ಭೇದವಿಲ್ಲ. ಆರ್ಥಿಕ, ಸಾಮಾಜಿಕ, ರಾಜಕೀಯ, ರಂಗದಲ್ಲೆಲ್ಲಾ ಶೋಷಣೆಗೆ ಒಳಗಾದ ಎಲ್ಲಾ ಜನರು ದಲಿತರು ಪಂಚಮರು ಅಥವಾ ಬಹಿಷ್ಕೃತರು ಎಂದು ಕರೆಯಿಸಿಕೊಳ್ಳುವ ಅಸ್ಪೃಶ್ಯರೆಲ್ಲರೂ ದಲಿತರು ಎಂದು ಮಾಲಗತ್ತಿಯವರು ವ್ಯಾಖ್ಯಾನಿಸಿದ್ದಾರೆ.

ದಲಿತರೆಂದರೆ ಅಸ್ಪೃಶ್ಯರು. ಗಾಂಧೀಜಿಯವರು ಇವರನ್ನು "ಹರಿಜನ" ಎಂಬ ಆಧುನಿಕ ಪರಿಭಾಷೆಯಲ್ಲಿ ಗುರುತಿಸಿದ್ದಾರೆ. ಶತಮಾನಗಳಿಂದ ಜನ ಸಮುದಾಯದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದವರು. ಒಬ್ಬ ಸಮಾಜದೊಂದಿಗೆ ಬದುಕಲಾಗದೆ ಊರಹೊರಗೆ ವಾಸಿಸಿ, ಕೀಳು ವೃತ್ತಿಗೆ ಅವಲಂಬಿತರಾಗಿ ಹೆಸರು ಹೇಳಿಕೊಳ್ಳಲು ನಾಚಿಕೆಪಡುವ ಅಸ್ಪೃಶ್ಯರು ಅಥವಾ ಪಂಚಮರು, ಸಮಾಜದಲ್ಲಿ ಬಹಿಷ್ಕೃತ ರೆನಿಸಿಕೊಂಡವರೆಲ್ಲರು ದಲಿತರೆನಿಸಿಕೊಳ್ಳುತ್ತಾರೆ. ಇಂಥ ದಲಿತರು ಬರೆದ ಸಾಹಿತ್ಯವೇ ದಲಿತ ಸಾಹಿತ್ಯ. ಐತಿಹಾಸಿಕ ಕಾಲದಿಂದಲೂ ಅಕ್ಷರ ಅಥವಾ ವಿದ್ಯಾಭ್ಯಾಸದಿಂದ ವಂಚಿತರಾಗಿರುವ ಈ ಜನರು ಸಾಹಿತ್ಯ ಕ್ಷೇತ್ರದಲ್ಲಿ ಮಾಡಿದ ಕೃಷಿಕಾರ್ಯವನ್ನು ಪ್ರತ್ಯೇಕವಾಗಿ ಗಮನಿಸಲು ಸಾಧ್ಯವಿದೆ.

ಜಾತಿ ದೃಷ್ಟಿಯಿಂದಲೇ ಸಾಹಿತ್ಯವನ್ನು ಅಭ್ಯಾಸ ಮಾಡುವ ಸಾಂಪ್ರದಾಯಿಕ ನೋಟವೊಂದಕ್ಕೆ "ದಲಿತ ಸಾಹಿತ್ಯ" ಎನ್ನಲಾಗಿದೆ. ಒಟ್ಟಾರೆಯಾಗಿ "ದಲಿತ ಸಾಹಿತ್ಯ" ಎಂದರೆ ಹುಟ್ಟಿನಿಂದ ಅಸ್ಪೃಶ್ಯನಾದವನೊಬ್ಬ ಬರೆದ "ಜನಪರ ಸಾಹಿತ್ಯ" ಎಂದು ವ್ಯಾಖ್ಯಾನಿಸಬಹುದು.

ಬಂಡಾಯ - ದಲಿತ ಮೇಲ್ನೋಟದಲ್ಲಿ ಎರಡು ಒಂದೇ ಅರ್ಥವ್ಯಾಪ್ತಿಯನ್ನು ಒಳಗೊಂಡಿದೆ ಎಂದು ಭಾಸವಾದರೂ ಬೇರೆ ಬೇರೆ. ಎರಡೂ ಬೇರೆ ಬೇರೆಯಾದರೂ ಅವುಗಳ ಉದ್ದೇಶ ಗುರಿ, ತಲಪುವ ದಾರಿ ಎರಡೂ ಒಂದೇ ಆಗಿದೆ. ಬಂಡಾಯ ಸಾಹಿತ್ಯ ಎಂದರೆ ಸಮಾಜದ ಎಲ್ಲಾ ವರ್ಗದ ಜನರು ತಾವು ಅನುಭವಿಸುತ್ತಿರುವ ನೋವು, ಅವಮಾನ, ಅನ್ಯಾಯಗಳ ವಿರುದ್ಧ ಬಂಡೆದ್ದು, ಬರೆದದ್ದು, ಬಂಡಾಯ ಸಾಹಿತ್ಯವಾದರೆ, ಸಾಹಿತ್ಯದ ಮಟ್ಟಿಗೆ ಕೃತಿಯೊಂದರ ಅನುಭವ ಪ್ರಮಾಣದ ಆಧಾರದಿಂದ ಹುಟ್ಟಿನಿಂದ ದಲಿತರಾದವರು ತಮ್ಮ ರಕ್ತ ಮಾಂಸಗಳ ಜೀವಂಶ ಅನುಭವ, ಅನಿಸಿಕೆಗಳನ್ನು ಸೃಷ್ಟಿಸಿ ಒಂದು ಕೃತಿಯಲ್ಲಿ ಹಿಡಿದಿಟ್ಟ ಪ್ರಗತಿಪರ ಸಾಹಿತ್ಯವನ್ನು ದಲಿತ ಸಾಹಿತ್ಯ ಎಂದು ಪರಿಗಣಿಸಬಹುದು.

ಬಂಡಾಯ ಸಾಹಿತ್ಯ ಒಂದು ಸಿದ್ಧಾಂತ. ಎಲ್ಲಾ ವರ್ಗ ಎಲ್ಲಾ ಜಾತಿ ಎಲ್ಲಾ ಜನರ ನಡುವೆ ನಡೆಯುವ ಶೋಷಣೆಯ ವಿರುದ್ಧದ ಹೋರಾಟವಾದರೆ ಇದು ಬದುಕಿನ ಅನುಭವವನ್ನು ತಿಳಿಸುತ್ತದೆ. "ದಲ" ಎಂಬುದು ಸಂಸ್ಕೃತ ಪದ. ದಲ ಎಂದರೆ ಚೂರು, ತುಂಡು,ಭಾಗ,ಸೈನ್ಯ ಎಂಬ ಅರ್ಥಗಳಿವೆ. ಆದ್ದರಿಂದ ಇಲ್ಲಿ ಸೈನ್ಯದ ಹಿತವಾದ ಶಾಸ್ತ್ರ ಎಂಬ ಅರ್ಥ ಸಮಂಜಿಸಿದರೆ, ದಲಿತ ಎಂದರೆ "ದಮನಕ್ಕೆ ಒಳಗಾದವರು" ಎಂದರ್ಥ. ಶತಮಾನಗಳಿಂದ ತುಳಿತಕ್ಕೂ ಒಳಗಾದವರು ಅಸ್ಪೃಶ್ಯರೇ ಆಗಿದ್ದಾರೆ. (1. ದಲಿತ ಮಾರ್ಗ ಪುಟ 21 ಅರವಿಂದ ಮಾಲಗತ್ತಿ)

ಹೀಗಾಗಿ ಆರ್ಥಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಕ್ಷೇತ್ರದಲ್ಲಿ ತುಳಿತಕ್ಕೆ ಒಳಗಾದವರೆಂದು ಈ ಪದ ತಿಳಿಸುತ್ತದೆ. ಹೀಗೆ ತುಳಿತಕ್ಕೆ ಒಳಗಾದ ನೋವಿನ ಅನುಭವವನ್ನು ಕಂಡುಂಡ ವ್ಯಕ್ತಿ ಬರೆದ ಸಾಹಿತ್ಯ ದಲಿತ ಸಾಹಿತ್ಯವಾಗುತ್ತದೆ (2. ಪುಟ 10 ಬಂಡಾಯ - ದಲಿತ ಸಾಹಿತ್ಯ. ಡಾ. ಪುರುಷೋತ್ತಮ ಬಿಳಿಮಲೆ) ಇವರನ್ನು ಅಸ್ಪೃಶ್ಯರು, ಅಂತ್ಯಜರು, ಅಂತ್ಯದಸಾಯಿ, ದಸ್ಯು ಅದಿಮ ಜನಾಂಗ, ತಿರುಕುಲತ್ತರ್, ಪಂಚಮರು, ಬಹಿಷ್ಕೃತರು, ಆದಿ ಕರ್ನಾಟಕ, ಆದಿ ದ್ರಾವಿಡ, ಅನುಸೂಚಕ, ಪರಿಶಿಷ್ಟ ಜಾತಿ, ಹರಿಜನ ಮುಂತಾದ ಹೆಸರಿನಿಂದ ಕರೆಯಲಾಗಿದೆ.

1977ರ ಸಂದರ್ಭದಲ್ಲಿ ಬಿ. ಬಸವಲಿಂಗಪ್ಪನವರು " ಕನ್ನಡ ಸಾಹಿತ್ಯದ ಬೂಸಾ" ಎಂದು ಕರೆದುದರ ಪರಿಣಾಮವಾಗಿ ದಲಿತರೆಲ್ಲರು ಒಂದಾಗಲು ಅವಕಾಶವಾಯಿತು. "ಬೂಸಾ" ಪ್ರಕರಣ ಮುಂದೆ ದೊಡ್ಡ ಕೋಲಾಹಲ ವನ್ನು ತಂದಿತು. ಇದರಿಂದ ದಲಿತರಲ್ಲಿ ಆತ್ಮಸ್ಥೈರ್ಯ ಕಾಣಿಸಿಕೊಂಡು ದಲಿತರಲ್ಲಿ " ದಲಿತ ಪ್ರಜ್ಞೆ" ಮೂಡಿತು. ಇದರಿಂದ ಸ್ವಾಭಿಮಾನದಿಂದ ದಲಿತ ಪದವನ್ನು ರೂಢಿಗೆ ತಂದರು. ಇದಕ್ಕೂ ಮೊದಲು ಈ ಪದ ಮಹಾರಾಷ್ಟ್ರದಲ್ಲಿ ಬಳಕೆಯಲ್ಲಿತ್ತು.

ದಲಿತ ಎಂಬ ಪರಿಕಲ್ಪನೆಯನ್ನು 'ಅಂತ ' ಮತ್ತು 'ಅನಂತ'ಗಳ ಕೂಡಲ ಸಂಗಮದಲ್ಲಿ ಗ್ರಹಿಸಬೇಕು. 'ದಲಿತ' ಎಂಬುದು ಪ್ರತ್ಯೇಕ ದ್ವೀಪವಾಗಿ ಉಳಿಯದೆ ಸಮಾಜದ ಮುಖ್ಯ ಪ್ರವಾಹದಲ್ಲಿ ಐಕ್ಯವಾಗಬೇಕು. ದಲಿತ ಜಾತಿ, ದಲಿತ ವರ್ಗ ಮತ್ತು ದಲಿತ ಸಂವೇದನೆ ಎಂಬ ಮುಪ್ಪುರಿ ಬಂಧವೊಂದನ್ನು ಕಂಡುಕೊಳ್ಳಬೇಕು. ಇವು ಒಂದನ್ನೊಂದು ಮೀರುವ ಮತ್ತು ಒಳಗೊಳ್ಳುವ ಪರಿಭಾಷೆಗಳಾಗಿವೆ.

'ದಲಿತ' ಪರಿಕಲ್ಪನೆಯ ವ್ಯಾಪ್ತಿ ಮತ್ತು ವಿಸ್ತಾರಗಳನ್ನು ಸಮರ್ಪಕವಾಗಿ ಕಂಡುಕೊಳ್ಳುವ ಜವಾಬ್ದಾರಿ ಹೊರಬೇಕಾಗಿದೆ. ಆಗ ಮಾತ್ರ ಒಂದೊಂದು ಜಾತಿ, ಒಂದೊಂದು ಶ್ರೇಣಿಯೂ, ಒಂದೊಂದು ಪೊರಕೆ ಕಡ್ಡಿಗಳಾಗಿ ಒಗ್ಗೂಡುತ್ತಾ ಸಂಸ್ಕೃತಿಯ ಕಸಗುಡಿಸುವ 'ಕಸ ·ಪೊರಕೆಯೊಂದು ರೂಪುಗೊಳ್ಳುತ್ತದೆ. ಈ ಸಂದರ್ಭದಲ್ಲಿ ನೆನಪಿನಲ್ಲಿಡಬೇಕಾದ ವಿಚಾರವೊಂದಿದೆ. ಜೀವ ಮೂಲಗಳಾದ ಮಣ್ಣು-ನೀರು-ಗಾಳಿ-ಬೆಳಕು- ಆಕಾಶಗಳ ಮೇಲೆ ನಡೆಸುವ ಹಲ್ಲೆಯು ಪರೋಕ್ಷವಾಗಿ ಅದನ್ನೇ ನಂಬಿ ಬದುಕುತ್ತಿರುವ ಕೆಳಜಾತಿ - ಕೆಳವರ್ಗದ ಜನಸಮುದಾಯಗಳ ಮೇಲಣ ಹಲ್ಲೆಯೂ ಹೌದು ! 'ದಲಿತ' ಎಂಬ ಪರಿಕಲ್ಪನೆಯನ್ನು ಜಾತಿ -ವರ್ಗ- ಜೀವ ಮೂಲಗಳೆಂಬ ಅಂತ- ಅನಂತಗಳ ತ್ರಿವೇಣಿ ಸಂಗಮದಲ್ಲಿ ಗ್ರಹಿಸಿದಾಗ ಕ್ರಮವಾಗಿ ಒಂದನ್ನೊಂದು ಮೀರುವ ಮತ್ತು ಒಳಗೊಳ್ಳುವ ದಲಿತ ಜಾತಿ - ದಲಿತ ವರ್ಗ - ದಲಿತ ಭೂಮಿಯ ಸ್ಪಷ್ಟ ಚಿತ್ರವೊಂದು ರೂಪುಗೊಳ್ಳುತ್ತದೆ. ಕವಿ ಬೇಂದ್ರೆಯವರ 'ಚಿಗರಿಗಂಗಳ ಚೆಲುವಿ'ಯಲ್ಲಿ 'ಒಡವ್ಯಲ್ಲೊ ಮಗನೆ ! ಉಸಿರಿದ್ದ ಒಡಲು" ಎಂಬ ನುಡಿಯಿದೆ. (3.' ಕಾಡು ಮತ್ತು ತೋಪು' ಪು. 61-62 ಪ್ರೊ. ಚಂದ್ರಶೇಖರ್ ನಂಗಲಿ)

ಕನ್ನಡದಲ್ಲಿ ದಲಿತ ಸಾಹಿತ್ಯದ ಉಗಮ-ವಿಕಾಸ-ಲಕ್ಷಣ :-

ಕನ್ನಡದಲ್ಲಿ ದಲಿತ ಎಂಬ ಪದದ ಬಳಕೆ ಆರಂಭದಲ್ಲಿ ಧಾರವಾಡದಿಂದ ಬಳಕೆಗೆ ಬಂತು. ಇದಕ್ಕೆ ಮೂಲತಃ ಪ್ರೇರಣೆ ಮಹಾರಾಷ್ಟ್ರದ ದಲಿತ ಚಳುವಳಿಯೇ ಆಗಿತ್ತು ಎನ್ನುವುದು ಖಚಿತ. ಡಾ. ಬುದ್ದಣ್ಣ ಹಿಂಗಮಿರೆ ಇತರರು ಸೇರಿ 1973ರಲ್ಲಿ ದಲಿತ ಎಂಬ ಪತ್ರಿಕೆಯವನ್ನು ಪ್ರಾರಂಭಿಸಿ 1974ರಲ್ಲಿ ಜನವರಿಯಲ್ಲಿ ಮೊದಲ ಸಂಚಿಕೆ ಬರುವುದರ ಮೂಲಕ "ದಲಿತ ಪಂಥ" ಎಂಬ ಸಂಘಟನೆಯೂ ಕಾಣಿಸಿಕೊಂಡಿತು. 1974-75ರಲ್ಲಿ ಬಿ. ಕೃಷ್ಣಪ್ಪನವರ ನೇತೃತ್ವದಲ್ಲಿ ಭದ್ರಾವತಿಯಲ್ಲಿ ದಲಿತ ಸಂಘರ್ಷ ಸಮಿತಿ ರೂಪಗೊಂಡು ಇದೇ ಮುಂದೆ 1976ರಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಕ.ದ.ಸಂ) ಎಂದು ರೂಪುಗೊಂಡಿತು. ಇದೇ ರೀತಿ ದಲಿತರಲ್ಲಿ ಜಾಗೃತಿ ಉಂಟಾಗಿ ಇದೇ ಸಂದರ್ಭದಲ್ಲಿ ದಲಿತರ

ಲೇಖಕರು ಮತ್ತು ಕಲಾವಿದರ ಒಕ್ಕೂಟವೂ (ದ.ಲೇ.ಕ.ಒ.) ರೂಪುಗೊಂಡಿತು. ಅನೇಕ ಸಮ್ಮೇಳನಗಳನ್ನು ಎರಡು ಸಮಿತಿಗಳು ಮಾಡಿ ದಲಿತರಲ್ಲಿ ಜಾಗೃತಿ ಮೂಡಿಸಿ ಪ್ರಗತಿ ಪಥದತ್ತ ನಡೆಯುವಂತೆ ಮಾಡಿತು.

1960ರ ದಶಕದಲ್ಲಿ ಆರಂಭವಾದ ಮಹಾರಾಷ್ಟ್ರದ ದಲಿತ ಫ್ಯಾಂಥರ್ಸ್ ಚಳುವಳಿಯು ಹೆಚ್ಚು ಹೆಚ್ಚಾಗಿ ಎಲ್ಲಾ ಕಡೆಗಳಲ್ಲಿಯೂ ರಾಷ್ಟ್ರದ ಎಲ್ಲಾ ದಲಿತರನ್ನು ಕ್ರಿಯಾಶೀಲರನ್ನಾಗಿ ಮಾಡಿ ದಲಿತ ಸಾಹಿತ್ಯದ ಆರಂಭಕ್ಕೆ ಪ್ರೋತ್ಸಾಹ ನೀಡಿತು. ಈ ಚಳುವಳಿ ಕಾಲದಲ್ಲಿ ಅನೇಕ ಬಿಡಿ ಲೇಖನಗಳು, ಕವನಗಳು, ಪತ್ರಿಕೆಯಲ್ಲಿ ಬಂದವು. ನಾಮದೇವ ಢಸಾಳರ, ಗೋಲೀಪೀಠ, ಕವನ ಸಂಕಲನ ರಮೇಶಚಂದ್ರ ಪರಮಾರು ಸಂಪಾದಿಸಿದ "ಫ್ಯಾಂಥರ್" ಈ ಕೃತಿಗಳ ಸ್ಫೂರ್ತಿ ಸೆಲೆಯಿಂದ ಗುಜರಾತ್, ಪಶ್ಚಿಮ ಬಂಗಾಳ, ಪಂಜಾಬ್ ಹೀಗೆ ಅನೇಕ ರಾಜ್ಯಗಳಲ್ಲಿ ದಲಿತ ಸಂಘರ್ಷ ಸಮಿತಿ, ಸಭೆಗಳು ನಡೆದು ಇದು ಪರೋಕ್ಷವಾಗಿ ಸಾಹಿತ್ಯ ಕ್ಷೇತ್ರಕ್ಕೆ ನೀರೆರೆದು, ಪೋಷಿಸಿ ಬೆಳೆಸಿತು.

1974ರಲ್ಲಿ ಬಿ. ಬಸವಲಿಂಗಪ್ಪನವರು " ಬೂಸಾ ಪ್ರಕರಣ" ದಲಿತ ಚಟುವಟಿಕೆಗಳಿಗೆ ಚಾಲನೆ ಕೊಟ್ಟಿತು. ಈ ಸಂದರ್ಭದಲ್ಲಿ ಕರ್ನಾಟಕದಲ್ಲಿ "ದ. ಸಂ. ಸ", "ದ. ಲೇ. ಕ. ಒಕ್ಕೂಟ" ಪ್ರಾರಂಭವಾಗಲು ಕಾರಣವಾಯಿತು.

ಅ) ದಲಿತ ಸಂಘರ್ಷ ಸಮಿತಿ (ದ.ಸಂ.ಸ.)

ಆ) ದಲಿತ ಲೇಖಕರ ಹಾಗೂ ಕಲಾವಿದರ ಒಕ್ಕೂಟ (ದ.ಲೇ.ಕ.ಒ.)

(4. ದಲಿತ ಮಾರ್ಗ- ಅರವಿಂದ ಮಾಲಗತ್ತಿ ಪು. 30-31).

ದಲಿತ ಸಾಹಿತ್ಯದ ಲಕ್ಷಣಗಳು :-

ಶತಮಾನಗಳಿಂದ ನೋವಿನಿಂದ ನರಳಿ ಹೊರಬಿದ್ದ ಈ ದಲಿತರ ಸಾಹಿತ್ಯದಲ್ಲಿ ಸಿಟ್ಟು, ಅಬ್ಬರ, ರೊಚ್ಚು, ಆವೇಶಗಳು ಎದ್ದು ಕಾಣುತ್ತವೆ. ಆವೇಶ- ಅಬ್ಬರದ ಬರವಣಿಗೆ ಇದ್ದಾಗ ವಾಚಾಳಿತನ ಅನಿವಾರ್ಯವಾದರೂ ಗೌಣವಾಗಿದೆ. ಹೀಗಾಗಿ ಇದು ಕೂಡ ದಲಿತ ಸಾಹಿತ್ಯದ ಒಂದು ಪ್ರಮುಖ ಲಕ್ಷಣವಾಗಿದೆ.

ಜಾನಪದ ವಸ್ತು ಲಯಗಾರಿಕೆಯನ್ನು ಬಳಸಿಕೊಂಡಿದ್ದು, ದಲಿತ ಸಾಹಿತ್ಯದ ಯಶಸ್ಸಿಗೆ ಕಾರಣವಾಗಿದೆ. ದೇಶಿಭಾಷೆ ಎಲ್ಲಾ ಜನರನ್ನು ಮುಟ್ಟುವಂತೆ ಸರಳ-ಸುಂದರ ಅರ್ಥಪೂರ್ಣವಾಗಿದೆ. ಗೇಯತೆಯನ್ನು ಕಳೆದುಕೊಂಡಿದ್ದ ಕನ್ನಡ ಸಾಹಿತ್ಯಕ್ಕೆ ಗೇಯತೆಯ ಮೂಲಕ ಹೊಸ ಚೈತನ್ಯ ತಂದು ಕೊಟ್ಟಿತ್ತು. ನವೋದಯ ಭಾವಕ್ಕಿಂತ ಭಿನ್ನವಾಗಿ ನಾಜೂಕಿನ ನಡಿಗೆ ಇಲ್ಲದೆ ಹೋದರು ಸಹೃದಯದ ಮನದಾಳವನ್ನು ಮುಟ್ಟಿ ಕೇಳುಗರ ರೋಮಗಳನ್ನು ಕ್ರಮಶೀಲವಾಗಿರುವ ಪಕ್ವವುಳ್ಳ ಲಕ್ಷಣವನ್ನು ಪಡೆದಿದೆ.

ದಲಿತ ಸಾಹಿತ್ಯದ ಒಟ್ಟಾರೆ ತಿರುವು, ನೀತಿಯು ಶಿಕ್ಷಣಕ್ಕೆ ಮಹತ್ವದ ಸ್ಥಾನ ನೀಡಿದೆ. ಸಾಂಸ್ಕೃತಿಕ ಮೌಲ್ಯ ಗಳನ್ನು ಸಂಪ್ರದಾಯಿಕ ನೆಲೆಗಳನ್ನು ಗೌರವಿಸಿಕೊಂಡು ತನ್ನಲ್ಲಿ ರೂಢಿಸಿಕೊಂಡಿರುವುದರಿಂದ ಈ ಸಾಹಿತ್ಯವು ಯಶಸ್ಸಿನ ಹಾದಿಯನ್ನು ಹಿಡಿಯಲು ಕಾರಣವಾಗಿದೆ. ಮಾನವ ಬದುಕಿನ ಸಾಂಸ್ಕೃತಿಕ ನಿಲುವುಗಳನ್ನು ಪ್ರೋತ್ಸಾಹಿಸಿ ಹಾಸ್ಯ ವಿಚಾರ ಮನೋಭಾವನೆಗಳನ್ನು ತಿರಸ್ಕರಿಸಿದೆ. ಒಟ್ಟಾರೆಯಾಗಿ ಸಾಂಸ್ಕೃತಿಕ ಮೌಲ್ಯಗಳನ್ನು ತನ್ನ ಸಾಹಿತ್ಯದಲ್ಲಿ ಗುರುತಿಸಿರುವುದು ಒಂದು ಮುಖ್ಯ ಲಕ್ಷಣವಾಗಿದೆ.

ಬಸವಣ್ಣ, ಅಂಬೇಡ್ಕರ್, ಬುದ್ಧ, ಮಾರ್ಕ್ಸ್, ಲೋಹಿಯ, ಪುಲೆ ಚಿಂತನೆಗಳು ಈ ಸಾಹಿತ್ಯದಲ್ಲಿ ಪ್ರೇರಕ ಶಕ್ತಿಯಾಗಿ, ಇವರ ಸಾಹಿತ್ಯದಲ್ಲಿ ಪರೋಕ್ಷವಾಗಿ ನೆಲೆನಿಂತಿವೆ. ದಲಿತರ ಎಲ್ಲಾ ಸಮಸ್ಯೆಗಳಿಗೆ ಈ ಚಿಂತನೆಗಳು ಹೊಸ ಹೆಜ್ಜೆ ಹಾಕುವ ಲಕ್ಷಣದ ಹಾದಿಯನ್ನು ತೋರಿಸಿದೆ. (5. 'ಕನ್ನಡ ದಲಿತ ಸಾಹಿತ್ಯ' ಸಮಾಲೋಕನ. ಡಾ.ಅರ್ಜುನ ಗೊಳಸಂಗಿ ಪು.19)

ಈ ಸಾಹಿತ್ಯದಲ್ಲಿ ಪ್ರತಿಭಟನೆಗಳಿಗಿಂತ ಅಸಹಾಯಕತೆಯ ಗುಣವೇ ಪ್ರಧಾನವಾಗಿ ಕಂಡು ಬರುತ್ತದೆ. ಸಾಮಾಜಿಕ ಸಮಸ್ಯೆಗಳಾದ ಹಸಿವು, ಕಳ್ಳತನ, ಬಡತನ ಆಂತರಿಕ ಕಲಹ ಇವುಗಳು ದಲಿತರಲ್ಲೇ ಹೆಚ್ಚಾಗಿ ಕಾಣಲು ಕಾರಣವೇನು ? ಈ ಸಮಸ್ಯೆಗೆ ತಮ್ಮ ಬರವಣಿಗೆಯ ಮೂಲಕ ಕಾರಣಗಳನ್ನು ಸೃಷ್ಟಿಸಿದ್ದಾರೆ. ಸಮಾಜದಲ್ಲಿ ದಲಿತರ ಮೇಲಿನ ಶೋಷಣೆಗೆ ಕಾರಣವೇನು ? ಅದಕ್ಕೆ ಅವನ ಪ್ರತಿಕ್ರಿಯೆ ಹೇಗಿದೆ ? ಎಂದು ಚಿತ್ರಿಸಿದ್ದಾರೆ. ಅಲ್ಲದೇ ದಲಿತರಲ್ಲಿಯೇ ಇರುವ ನೈತಿಕ ಪರಿಕಲ್ಪನೆಯನ್ನು ಎತ್ತಿ ಹಿಡಿಯಲಾಗಿದೆ. ಬರವಣಿಗೆ ಭಾಷೆಯು ಆಡುಭಾಷೆ ಬಳಕೆ ನೀಡಿದ್ದುದು ಈ ಸಾಹಿತ್ಯದ ಪ್ರಮುಖ ಲಕ್ಷಣವಾಗಿದ್ದು, ಎಲ್ಲರನ್ನು ಸಾಹಿತ್ಯ ಗಮನಿಸುವಂತಾಯಿತು. ಇನ್ನು ಕೆಲವರು ಈ ದಲಿತ ಸಾಹಿತ್ಯದ ಬರವಣಿಗೆ ಭಾಷೆಯನ್ನು ಅನುಸರಿಸಿದರೆಂಬುದು ದೊಡ್ಡ ಆಶ್ಚರ್ಯವಾಗಿದೆ.

ದಲಿತ ಸಾಹಿತ್ಯಕ್ಕೆ ಪ್ರೇರಣೆ :-

ದಲಿತರೇ ಬರೆದ ಸಾಹಿತ್ಯವನ್ನು ದಲಿತ ಸಾಹಿತ್ಯ ಎಂದು ಕರೆಯಬೇಕಾ ಅಥವಾ ದಲಿತೇತರರು ದಲಿತ ಮನಸ್ಸಿನಿಂದ ಬರೆದ ಸಾಹಿತ್ಯವನ್ನು ದಲಿತ ಸಾಹಿತ್ಯ ಎಂದು ಕರೆಯಬೇಕಾ ಎಂಬುದು ಸಮಸ್ಯಾಸ್ಪದವಾಗಿದೆ. ಒಟ್ಟಾರೆಯಾಗಿ ದಲಿತರು ಬರೆದಿದ್ದು, ದಲಿತ ಸಾಹಿತ್ಯ ಎಂಬುದಾಗಿ ನಿರ್ಣಯಿಸಲಾಗಿದೆ.

ಭಾರತೀಯ ಮತ್ತು ಅನ್ಯಭಾಷಾ ಸಾಹಿತ್ಯದ ಪ್ರಭಾವ ದಲಿತ ಸಾಹಿತ್ಯಕ್ಕಿದೆ. ಉತ್ತರ ಕರ್ನಾಟಕದ ಲೇಖಕರ ಮೇಲೆ ಮಹಾರಾಷ್ಟ್ರದ ದಲಿತ ಫ್ಯಾಂಥರ್ಸ್ ಚಳುವಳಿಯ ಪ್ರಭಾವ ಅಧಿಕವಾಗಿರುವಂತೆ ದಕ್ಷಿಣ ಕರ್ನಾಟಕದ ದಲಿತ ಬರಹಗಾರರ ಮೇಲೆ ತೆಲುಗಿನ ದಿಗಂಬರ ಹಾಗೂ ತಿರುಗು ಬೀಳು ಕಾವ್ಯದ ಪ್ರಭಾವ ಅಧಿಕವಾಗಿದೆ. ದಕ್ಷಿಣ ಆಫ್ರಿಕಾದ ಕಪ್ಪು ಸಾಹಿತ್ಯದ ಪ್ರಭಾವ ಗಮನಾರ್ಹವಾದ ರೀತಿಯಲ್ಲಿ ಕಂಡು ಬಂದರೂ ಕಪ್ಪುತನದ ಶ್ರೇಷ್ಠತೆ ಅವರಿಗೆ ಸ್ವಾಭಿಮಾನದ ಸಂಕೇತವಾದಂತೆ ಇಲ್ಲಿಯ ದಲಿತರಿಗೆ ಸ್ಥಳೀಯ ವಿಚಾರಗಳು ಸ್ವಾಭಿಮಾನದ ಸಂಕೇತಗಳಾಗಿವೆ.

ಅಂಬೇಡ್ಕರ್, ಮಾರ್ಕ್ಸ್, ಲೋಹಿಯ ಚಿಂತನೆಗಳ ಪ್ರಭಾವಈ ಸಾಹಿತ್ಯಕ್ಕಿದೆ. ಎಲ್ಲದಕ್ಕಿಂತ ಹೆಚ್ಚಾಗಿ 1974ರಲ್ಲಿ ನಡೆದ ಮಂತ್ರಿ ಬಿ. ಬಸವಲಿಂಗಪ್ಪನವರ 'ಬೂಸಾ' ಪ್ರಕರಣ ಕರ್ನಾಟಕದಲ್ಲಿ ದಲಿತ ಸಾಹಿತ್ಯದ ರಚನೆಗೆ ಒಂದು ಹೊಸ ತಿರುವು ನೀಡಿತು. ಈ ಪ್ರಕರಣದಿಂದ ದಲಿತರಲ್ಲಿ ಜಾಗೃತಿ ಉಂಟು ಮಾಡಿತು. ಅನೇಕ ಸಮಿತಿಗಳು ರಚನೆಗೊಂಡು ಸಾಹಿತ್ಯದಲ್ಲಿ ಸುಧಾರಣೆಗಳನ್ನು ತಂದಿತು. ನವ್ಯ ಸಾಹಿತ್ಯದ ಸ್ವಾನುಭವಗಳು ಈ ಪಂಥದಲ್ಲಿನ ವಿಚಾರಗಳು - ಚಿಂತನೆಗಳು ದಲಿತ ಸಾಹಿತ್ಯಕ್ಕೆ ಪ್ರೇರಣೆಯನ್ನು ನೀಡಿ ಆರಂಭದಲ್ಲಿ ನವ್ಯದಂತಹ ವ್ಯಕ್ತಿಗತ ದ್ವಂದ್ವ ತೊಳಲಾಟದ ಸಾಹಿತ್ಯ ರಚನೆಗೊಂಡಿತು.

ಶಿಕ್ಷಣ ಕ್ಷೇತ್ರವು ದಲಿತರ ಬದುಕಿನಲ್ಲಿ ಮಹತ್ತರ ಪಾತ್ರ ವಹಿಸಿದೆ. ದಲಿತರಲ್ಲಿ ಅಕ್ಷರಜ್ಞಾನ ಹೊರಬಂದು ಲೇಖನಿ ಹಿಡಿದು ಬರೆಯಲಾರಂಭಿಸಿದ್ದು, ಕತ್ತಲಾವರಿಸಿದ ಸಾಹಿತ್ಯ ರಂಗಕ್ಕೆ ಹೊಸ ಆಶಾಕಿರಣ ಮೂಡಿದಂತಾಯಿತು. ಗ್ರಾಮೀಣ ಪರಿಸರದಿಂದ ಬಂದ ದಲಿತರಿಗೆ ಅನುಭವ ಸಾಂದ್ರತೆ ಅಧಿಕವಾಗಿತ್ತು. ಇದರೊಂದಿಗೆ ಜನಪದ ಕ್ಷೇತ್ರದಲ್ಲಿ ಅನಾಯಾಸವಾಗಿ ತಲೆ ಎತ್ತಿ ನಿಂತರು ಜನಪದದ ಅಧ್ಯಯನ ಜನಾಂಗೀಯ ಅಧ್ಯಯನ ದಲಿತ ಸಾಹಿತ್ಯಕ್ಕೆ ಒಂದು ಹೊಸ ಆಯಾಮವನ್ನು ತಂದು ಕೊಟ್ಟಿತು. ದಲಿತರ ಅನೇಕ ಶೋಷಣೆಯ ಚಳುವಳಿಗಳು ದಲಿತ ಸಾಹಿತ್ಯಕ್ಕೆ ಪ್ರೇರಣೆಯನ್ನು ನೀಡಿದೆ.

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ದಲಿತ ಸಾಹಿತ್ಯ :-

ಇಂದು ಕನ್ನಡ ದಲಿತ ಸಾಹಿತ್ಯ. ಸಾಹಿತ್ಯದ ಪ್ರಕಾರದ ಅನೇಕ ರೂಪಗಳಲ್ಲಿ ವ್ಯಕ್ತವಾಗುತ್ತಿದೆ. ಅವುಗಳಲ್ಲಿ ಮುಖ್ಯವಾಗಿ ಕಾವ್ಯ, ಕತೆ, ಕಾದಂಬರಿ, ನಾಟಕ, ಆತ್ಮಕತೆ, ಶೋಧನೆ, ವಿಚಾರ, ವಿಮರ್ಶೆ ಮತ್ತು ಪ್ರವಾಸ ಕಥನಗಳು ಇತ್ಯಾದಿ ಪ್ರತಿಯೊಂದು ಪ್ರಕಾರವು ತನ್ನದೇ ಆದ ಪ್ರತ್ಯೇಕ ಗುಣಲಕ್ಷಣಗಳನ್ನು ಹೊಂದಿದೆ. ಇವುಗಳಲ್ಲಿ ಬಳಕೆಯಾದ ಭಾಷೆ, ಬಂಧ, ಶಿಲ್ಪ, ಸಂಭಾಷಣೆ, ಶೈಲಿ, ತಂತ್ರ, ಸಂವಿಧಾನ, ನಿರೂಪಣೆ, ದಲಿತ ಸಾಹಿತ್ಯಕ್ಕೆ ಒಂದು ವಿಶಿಷ್ಟ ನೆಲೆಯನ್ನು ಒದಗಿಸಿ ಸಹೃದಯರಲ್ಲಿ ಸಾಹಿತ್ಯದ ಪ್ರತಿಬಿಂಬ ನಿಲ್ಲುವಂತೆ ಮಾಡಿದೆ. ಶೋಷಿತರ, ಶ್ರಮಿಕರ, ದುಡಿಯುವ ಸಮುದಾಯದ ಕಣ್ಣೀರಿನ, ಬೆವರಿನ ಚಿತ್ರಣಗಳು ಈ ಪ್ರಕಾರಗಳಲ್ಲಿ ಮೂಡಿಬಂದಿದೆ.

ದಲಿತ ಕಾವ್ಯ :-

ಕನ್ನಡದಲ್ಲಿ ದಲಿತ ಕಾವ್ಯವು ಇಂದು ಗಟ್ಟಿ ಹೆಜ್ಜೆ ಗಳನ್ನಿಟ್ಟು, ಹೊಸ ಹೊಸ ರೂಪಗಳನ್ನು ತೊಟ್ಟುಗೊಂಡಿದೆ. ಕನ್ನಡ ಕಾವ್ಯ ಪರಂಪರೆಯಲ್ಲಿ ದಲಿತ ಪರ ಕಾಳಜಿ ಅಥವಾ ದಲಿತ ಪ್ರಜ್ಞೆಯು ಪಂಪನ ಕಾವ್ಯದಿಂದಲೇ ಪ್ರಾರಂಭವಾಗುತ್ತದೆ. ಆದರೆ ಕನ್ನಡ ಕಾವ್ಯ ಪರಂಪರೆಯಲ್ಲಿ ದಲಿತ ಸಂವೇದನೆಯು 12ನೆಯ ಶತಮಾನದ ಮಾದಾರ ಚನ್ನಯ್ಯನಿಂದ ಪ್ರಾರಂಭವಾಗುತ್ತದೆ. ವಚನ ಚಳುವಳಿಯ ಸಂದರ್ಭದಲ್ಲಿಯೇ ದಲಿತ ಸಂವೇದನೆಗಳು ರಚನೆಗೊಂಡಿರುವುದು ಸ್ಪಷ್ಟವಾಗುತ್ತದೆ. ಜನಪದ ಕಾವ್ಯ ಪರಂಪರೆಯನ್ನು ಗಮನಿಸಿದಾಗ ಇಲ್ಲಿಯ ಶಿಷ್ಟ ಕಾವ್ಯ ಪರಂಪರೆಯ ಹಾಗೆ, ಜನಪದ ಕಾವ್ಯದ ಹುಟ್ಟಿನಿಂದಲೂ ದಲಿತ ಕಾಳಜಿ ಎದ್ದು ಕಾಣುತ್ತದೆ. 17ನೇ ಶತಮಾನದ ಮೇಲೆ ಮಾದೇಶ್ವರ ಮತ್ತು ಮಂಟೇಸ್ವಾಮಿ ಮಾಹಾಕಾವ್ಯಗಳಲ್ಲಿ ದಲಿತ ಸಂವೇದನೆ ಕಾಣಿಸುತ್ತದೆ. (6. ಬಸವರಾಜ ಸಬರದ " ಕನ್ನಡ ದಲಿತ ಕಾವ್ಯ- ಇಟ್ಟ ಹೆಜ್ಜೆ- ತೊಟ್ಟರೂಪ'' ಪು. 40)

ಆಧುನಿಕ ಕನ್ನಡ ಕಾವ್ಯ ಬಂಡಾಯ ಚಳುವಳಿಯ ಮೂಲಕ ಹುಟ್ಟಿಕೊಂಡಿದೆ. ದಲಿತ ಸಂಘರ್ಷ ಸಮಿತಿಯ ಮುಖಾಂತರ ವ್ಯಾಪಿಸಿಕೊಂಡಿದೆ. ಹೀಗಾಗಿ ಇದು ಬರೀ ಕಾವ್ಯವಲ್ಲ ಚಳುವಳಿಯೊಂದಿಗಿನ ಕಾವ್ಯವಾಗಿದೆ. ಆಧುನಿಕ ದಲಿತ ಕಾವ್ಯದ ಮೇಲೆ ಮಹಾರಾಷ್ಟ್ರದ ಪ್ಯಾಂಥರ್ಸ್ ಪ್ರಭಾವ, ಆಂಧ್ರದ ದಿಗಂಬರ ಕಾವ್ಯದ ಪ್ರೇರಣೆಯೂ ಇದೆ. ಅಲ್ಲದೆ, ಲೋಹಿಯ ಅಂಬೇಡ್ಕರ್, ಪುಲೆ, ಪಿರಿಯಾರ್ ರಾಮಸ್ವಾಮಿ, ಮಾರ್ಕ್ಸ್ ಮೊದಲಾದ ರಾಜಕೀಯ ಚಿಂತಕರಾದ ಸೈದ್ಧಾಂತಿಕ ನೆಲೆಗಳು ಕಾವ್ಯದ ಮೇಲೆ ಪ್ರಭಾವ ಬೀರಿದೆ. ಡಾ. ಎಲ್. ಬಸವರಾಜು ಅವರು ವಚನ ಚಳುವಳಿಯನ್ನು ಕರ್ನಾಟಕದ ಪ್ರಪ್ರಥಮ ದಲಿತ ಚಳುವಳಿ ಎಂದು, ಇಂತಹ ಹೋರಾಟವನ್ನು ಬಿತ್ತಿ ಬೆಳಸಿದವರೇ ದಲಿತ ವಚನಕಾರರೆಂದು ಹೇಳಿದ್ದಾರೆ. (7. "ಕಾಡು ಮತ್ತು ತೋಪು'' ಪು.60 ಪ್ರೊ. ಚಂದ್ರಶೇಖರ್ ನಂಗಲಿ) ಆಧುನಿಕ ದಲಿತ ಕಾವ್ಯವು ಡಿ. ಗೋವಿಂದದಾಸ್ ಅವರಿಂದ ಪ್ರಾರಂಭವಾಗಿದ್ದರೂ ಕೂಡ ಅದು ಚಳುವಳಿ ಕಾವ್ಯವಾಗಿ ಮೊಟ್ಟ ಮೊದಲು ಪ್ರಕಟವಾದದ್ದು ಡಾ. ಸಿದ್ದಲಿಂಗಯ್ಯನವರ " ಹೊಲೆ ಮಾದಿಗರ ಹಾಡು'' ಕವನ ಸಂಕಲನದ ಮೂಲಕವೆಂಬ ಸಂಗತಿಯನ್ನು ಗಮನಿಸಬೇಕು.

ಡಾ. ಸಿದ್ದಲಿಂಗಯ್ಯ, ಮುಳ್ಳೂರು ನಾಗರಾಜ್, ವಿ. ಮುನಿವೆಂಕಟಪ್ಪ, ಅರವಿಂದ ಮಾಲಗತ್ತಿ, ಕೆ. ರಾಮಯ್ಯ ಕೋಲಾರ, ಲಕ್ಷ್ಮೀಪತಿ, ಇಂದೂಧರ, ಹೊನ್ನಾಪುರ, ಮ.ನ.ಜವರಯ್ಯ ಎಲ್. ಹನುಮಂತಯ್ಯ, ಗೋವಿಂದಯ್ಯ, ಕೆ. ಬಿ. ಸಿದ್ದಯ್ಯ ಈ ಮೊದಲಾದ ಕವಿಗಳು ದಲಿತ ಕಾವ್ಯದ ಮೊದಲ ಘಟ್ಟದಲ್ಲಿ ಕಾವ್ಯಕೃಷಿ ಪ್ರಾರಂಭಿಸಿ ದವರಾಗಿದ್ದಾರೆ.

ಮಾಗಳಿ ಗಣೇಶ, ಸುಬ್ಬು ಹೊಲೆಯಾರ, ಬಿ. ಬಿ. ಜಾಹ್ನವಿ, ಅನುಸುಯಾ ಕಾಂಬಳೆ, ಹೊಸೂರು, ಮುನಿಶಾಮಪ್ಪ, ಬಾಣಂದೂರು ಕೆಂಪಯ್ಯ, ಮೋಹನ ನಾಗಮ್ಮ ಚಾದಾಲಾ, ಡಿ. ಎಂ. ಭಾಸ್ಕರ್ ಮೊದಲಾದವರು ಅನಂತರ ಘಟ್ಟದಲ್ಲಿ ಬಂದ ಪ್ರಮುಖ ಕವಿಗಳಾಗಿದ್ದಾರೆ. ದಲಿತ ಕಾವ್ಯ ಏಕಕಾಲಕ್ಕೆ ಚಳುವಳಿಯ ಅಬ್ಬರವನ್ನು ಅಂತರಂಗದ ಸಂಕಟಗಳನ್ನು ಅಭಿವ್ಯಕ್ತಿಸಿದ ಕಾವ್ಯ ಮಾರ್ಗವಾಗಿದೆ. ಕನ್ನಡ ಕಾವ್ಯ ಪರಂಪರೆಯಲ್ಲಿಯೇ ದಲಿತ ಕಾವ್ಯ ವಿಶಿಷ್ಟವಾಗಿ ಕಾಣಲು ಅದರ ವಸ್ತು ಹಾಗೂ ಅಭಿವ್ಯಕ್ತಿಯ ಕ್ರಿಯೆ ಎರಡೂ ಕಾರಣವಾಗಿದೆ.

ದಲಿತ ಕಾವ್ಯವು ಕವಿತೆ, ಹನಿಗವಿತೆ, ನೀಳ್ಗವಿತೆ, ಖಂಡಕಾವ್ಯ, ಮಹಾಕಾವ್ಯ ರೂಪಗಳ ಜೊತೆಗೆ ಕಥನ ಕಾವ್ಯವು ಪ್ರಕಟವಾಗಿದೆ. ದಲಿತ ಕಾವ್ಯ ಆರಂಭದಲ್ಲಿ ಸಿಟ್ಟು, ಆಕ್ರೋಶ, ಅಬ್ಬರಗಳಿಂದ ಕೂಡಿತ್ತು. ವಾಚ್ಯತೆ, ಅನುಭವದ ಸಾಂದ್ರತೆ, ಗೇಯತೆಯೊಂದಿಗೆ ಭಿನ್ನವಾದ ಲಯಪುರಾಣದ ಮೂಲಸೆಲೆಯೊಂದಿಗೆ ಅಭಿವ್ಯಕ್ತಗೊಂಡು, ಜಾನಪದದ ಸಂವೇದನೆ, ಆಡುಭಾಷೆಯ ಅಭಿವ್ಯಕ್ತಿಗಳು ದಲಿತ ಕಾವ್ಯದಲ್ಲಿ ಪ್ರಧಾನವಾಗಿದೆ.

ದಲಿತ ಕಥೆಗಳು :-

ದಲಿತ ಕಥೆಗಳು ದಲಿತರ ಬದುಕು ಮತ್ತು ಅದರ ಸತ್ವ ಹಾಗೂ ನಡಿಗೆಯನ್ನು ಉತ್ತಮವಾಗಿ ಕಟ್ಟಿಕೊಟ್ಟಿದೆ. ದಲಿತ ಕಥಾ ಲೋಕದ ನಿರೂಪಣೆ ತುಂಬಾ ಪರಿಣಾಮಕಾರಿಯಾದುದು. ಅಂಗೈಯಲ್ಲಿ ಆಕಾಶ ತೋರಿಸುವುದು ದಲಿತ ಕಥಾಲೋಕದ ಒಂದು ವೈಶಿಷ್ಟ್ಯ. ದಲಿತ ಕಥಾಲೋಕದಲ್ಲಿ ಇನ್ನೊಂದು ವಿಶೇಷ ಇದೆ. ಈ ಮುಂಚೆ ದಲಿತರು ಎಂದರೆ ನೋವಿನಲ್ಲಿರುವರು, ಅಭದ್ರತೆಯಲ್ಲಿರುವವರು, ಕತ್ತಲಲ್ಲಿರುವವರು, ನಗುವೆ ಗೊತ್ತಿಲ್ಲದವರು, ಅನುಕಂಪಕ್ಕೆ ಯೋಗ್ಯರು ಹೀಗೆ ದಲಿತೇತರ ಚಿತ್ರಣದಲ್ಲಿ ಇದೆ ಅರ್ಥ ಬರುವಂತೆ ನೋಡಿದ್ದಾರೆ. ಈ ನೋವಿನಲ್ಲೂ ಬದುಕಿನ ಅಪಾರ ಸಾಧ್ಯತೆಗಳ ಕಡೆ ಕ್ರಿಯಾಶೀಲತೆಯು ಕಡೆ ಹೊರಳಬಹುದು ಎಂಬುದನ್ನು ತೋರಿಸಿದ್ದು, ದಲಿತ ಕಥಾಲೋಕದ ಹೆಗ್ಗಳಿಕೆ. ದಲಿತ ಕಥಾ ಸಾಹಿತ್ಯದ ವಿಶೇಷತೆಗಳಲ್ಲಿ ಭಾಷೆ ಮತ್ತು ಶೈಲಿ ಮುಖ್ಯವಾದದ್ದು. ದಲಿತರು ರೂಪಿಸಿದ ಗದ್ಯ, ತಾಯ್ತನದ ಗದ್ಯ ಇದು ನಿಜವಾದ ಕನ್ನಡದ ಭಾಷೆ ಈ ಶೈಲಿ ದಲಿತ ಕೇರಿಗಳ ಅಡುಗೂಳಜ್ಜಿಯ ಗದ್ಯದಿಂದ ಬಂದಿದೆ. ತಮ್ಮ ಅನುಭವಗಳನ್ನು, ಸ್ಥಿತಿಗತಿಗಳನ್ನು ಕಲೆಯನ್ನಾಗಿಸಬಹುದು ಎಂಬ ಆತ್ಮವಿಶ್ವಾಸ ಬಂದ ದಲಿತರು ಶಿಷ್ಟ ಕನ್ನಡಕ್ಕೆ ದೂರ ಉಳಿದ ಜಾನಪದೀಯ ಶೈಲಿಯಲ್ಲಿ ತಮ್ಮ ಅನುಭವಗಳನ್ನು ದಾಖಲಿಸಿದುದ್ದು ಒಂದು ಅಪೂರ್ವ ಸಂಗತಿ.

ದೇವನೂರು ಮಹಾದೇವ	-	ದ್ಯಾವನೂರು - ಕಥಾ ಸಂಕಲನ
ಅರವಿಂದ ಮಾಲಗತ್ತಿ	-	ಮುಗಿಯತ ಕಥೆಗಳು
ಚನ್ನಣ್ಣ ವಾಲೀಕಾರ ಅವರ	-	ಕುದ್ದವರ ಕಥೆಗಳು
ಮ. ನ. ಜವರಯ್ಯ	-	ಬುಡೆಗೆ ಸ್ವರ್ಗ
ಮೊಗಳ ಗಣೇಶ	-	ಬುಗುರಿ, ಭೂಮಿ
ಜನಾರ್ಧನ	-	ಪ್ರಕ್ರಿಯೆ, ತಿರಸ್ಕೃತರು
ತಮ್ಮಸಂದ್ರ ಭದ್ರಯ್ಯ	-	ಬಾಗಿಲ ಬೀಗ ಮತ್ತು ರೇಣು
ನಟರಾಜ್ ಹುಳಿಯಾರ್	-	ಮತ್ತೊಬ್ಬ ಸರ್ವಾಧಿಕಾರಿ ಇತ್ಯಾದಿ ಇವುಗಳು ದಲಿತ

ಕಥೆಗಾರರು ಬರೆದು. ದಲಿತ ಸಾಹಿತ್ಯಕ್ಕೆ ತಮ್ಮದೇ ಕಾಣಿಕೆಗಳನ್ನು ನೀಡಿದ್ದಾರೆ. ಕೊರಡ್ಕಲ್ ಶ್ರೀನಿವಾಸರಾಯರ "ದಸಿಯರ ಸತ್ಯನಾರಾಯಣ". ಭಾರತೀ ಪ್ರಿಯರ "ಮೋಚಿ", ಕುವೆಂಪು ಅವರ "ಸಾಲದ ಮಗು", ಶಂಕರಭಟ್ಟರ "ದುಡಿಯುವ

ಮಕ್ಕಳು" ಇಂತಹ ಕಥೆಗಳಲ್ಲಿ ಕೆಳವರ್ಗದ ಅಕ್ಷರ ಕಲಿಯುವ ಬಯಕೆ, ಜೀವಕ್ಕೆ ಮುಳುವಾಗುವ ಕರುಣಾಜನಕ ದೃಶ್ಯವನ್ನು ಲೇಖಕರು ಹೃದಯಂಗಮವಾಗಿ ಚಿತ್ರಿಸಿದ್ದಾರೆ. ಜೀತಗಾರರಿಗೆ, ಅಸ್ಪೃಶ್ಯರಿಗೆ ಅಕ್ಷರ ಕಲಿಯುವ ಅವಕಾಶವನ್ನೇ ಕಿತ್ತುಕೊಂಡು ಚರಿತ್ರೆಯ ಹೃದಯಹೀನ ಸಂಗತಿಯನ್ನು ಲೇಖಕರು ಕಥೆಯನ್ನಾಗಿ ಮಾಡಿರುವುದು ಐತಿಹಾಸಿಕ ಸಂಗತಿಯಾಗುತ್ತದೆ. ವಸ್ತುವಿನ ಆಯ್ಕೆ ಮತ್ತು ಅದರ ವಾಸ್ತವ ಚಿತ್ರದಿಂದ ನಮ್ಮನ್ನು ಸೆಳೆಯುತ್ತದೆ. ಕರುಣಾಜನಕ ದೃಶ್ಯವನ್ನು ಲೇಖಕರು ಹೃದಯಂಗಮವಾಗಿ ಚಿತ್ರಿಸಿದ್ದಾರೆ. (8. 'ಕಥಾ -ಕಥನ' ಪು. 25. ಪ್ರೊ. ಎಲ್. ಹನುಮಂತಯ್ಯ)

ದಲಿತ ನಾಟಕಗಳು :-

ದಲಿತ ಸಾಹಿತ್ಯ ಸಂದರ್ಭದಲ್ಲಿ ಪ್ರಕಟವಾದ ನಾಟಕಗಳು ಸಂಖ್ಯೆಯಲ್ಲಿ ತುಂಬಾ ಕಡಿಮೆ. ಅಂದರೆ ಈ ಕ್ಷೇತ್ರದಲ್ಲಿ ಕೃಷಿಕಾರ್ಯ ದಲಿತರು ನಡೆಸಿಲ್ಲ ಎಂದರ್ಥವಲ್ಲ. ರಂಗಕ್ಕಾಗಿಯೇ ನಾಟಕಗಳನ್ನು ಬರೆಯುವ ಪ್ರಯತ್ನ ಹಿಂದೆ ಬಿದ್ದವು. ದಲಿತರು ಪ್ರಕಟಿಸಿರುವ ನಾಟಕಗಳಲ್ಲಿ ಮುಖ್ಯವಾಗಿ ಈ ರೀತಿ ಇದೆ.

ಸಿದ್ಧಲಿಂಗಯ್ಯನವರ	-	ಪಂಚಮ, ನೆಲಸಮ, ಏಕಲವ್ಯ
ಅರವಿಂದ ಮಾಲಗತ್ತಿ	-	ಸಮುದ್ರದೊಳಗಿನ ಉಪ್ಪು
ಎಂ. ಸಿ. ರಾಮು	-	ದಲಿತನ ಮತಾಂತರ ಪ್ರಸಂಗ
ಬಿ. ಚಿನ್ನಸ್ವಾಮಿ	-	ಕೆಂಡಮಂಡಲ
ಎಲ್. ಹನುಮಂತಯ್ಯ	-	ಡಾ. ಅಂಬೇಡ್ಕರ್

ಈ ಸಾಮಾಜಿಕ ನಾಟಕಗಳಲ್ಲದೇ, 12ನೇಯ ಶತಮಾನದ ಅಂತರ್‌ಜಾತಿಯ ವಿವಾಹ ಪ್ರಸಂಗ, ಏಕಲವ್ಯ, ಶಂಭೂಕನ ಕುರಿತಾದ ಐತಿಹಾಸಿಕ ನಾಟಕಗಳು ರಚನೆಗೊಂಡಿದೆ.

ದಲಿತ ಆತ್ಮಕಥೆಗಳು :-

ದಲಿತ ಆತ್ಮಕಥೆಗಳು ಅವಮಾನ ಮತ್ತು ಸ್ವಾಭಿಮಾನದ ಸ್ಮಾರಕಗಳು. ಇವೇ ಆತ್ಮಕತೆಗಳ ಅಂತರಾತ್ಮದಿಂದ ಎದ್ದು ಬಂದಿರುವುದು ಕಂಡು ಬರುತ್ತದೆ. ಇವುಗಳ ಹಿಂದಿರುವ ಆಶಯವೇ ಈ ಅಸಮಾನತೆಯ ಸಮಾಜವನ್ನು ಸಮಾನತೆಯೆಡೆಗೆ ಕರೆದೊಯ್ಯಬೇಕು ಎನ್ನುವುದಾಗಿದೆ. ಎಲ್ಲಾ ಆತ್ಮಕಥೆಗಳಲ್ಲಿ ಕಂಡು ಬರುವ ಸಹಜ ಪ್ರಕ್ರಿಯೆ ಎಂದರೆ ಈ ಆತ್ಮಕಥೆಗಳ ಬರಹ ವಿದ್ಯಾರ್ಥಿ ಜೀವನದ ನಡಿಗೆಯವರಿಗೆ ಮಾತ್ರ ಸೀಮಿತವಾಗಿದೆ. ಇದಕ್ಕೆ ಕಾರಣ ಇಳಿ ವಯಸ್ಸಿನಲ್ಲಿ ರೂಪುಗೊಂಡ ಆತ್ಮಕತೆಗಳು. ಈ ಆತ್ಮಕತೆಗಳಿಗೆ ದಾಖಲಾತಿಯೇ ಕೇಂದ್ರ ಆಶಯದಲ್ಲಿ ಬದಲಾಗಿ ಸಾಮಾಜಿಕ ಬದಲಾವಣೆಯೇ ಕೇಂದ್ರ ಆಶಯವಾಗಿದೆ.

ಕೆಲವು ದಲಿತ ಆತ್ಮಕತೆಗಳಲ್ಲಿ ವ್ಯಕ್ತಿನಿಷ್ಠ ಅನುಭವ ಗೌಣವಾಗಿ ಪರಿಸರ ಕಥನವೇ ಮೈಲುಗಲ್ಲಾಗಿದೆ. ಗ್ರಾಮೀಣ ಪರಿಸರದ ಸಂವೇದನೆಗೆ ಆತ್ಮಕತೆಗಳು ತಿರುಗುತ್ತವೆ ಎನ್ನಬಹುದು. ಅಕ್ಷರಗಳೇ ಹೋರಾಟಕ್ಕೆ ಪ್ರೇರಕ, ಅಕ್ಷರಗಳೇ ಜೀವನಾನುಭವದ ಮೂರ್ತರೂಪ ಎನ್ನುವುದಕ್ಕೆ ಸಹಕರಿಸಿವೆ ಎನ್ನುವುದನ್ನು ಎಲ್ಲಾ ಆತ್ಮಕಥೆಗಳು ಸಾರುತ್ತವೆ. ಜಾತಿಯು ದಲಿತ ಆತ್ಮಕಥೆಗಳಲ್ಲಿ ಸ್ಥಾಯಿಭಾವವಾಗಿ, ವ್ಯಕ್ತವಾಗುತ್ತದೆ. ಹೀಗಾಗಿ ಸಮಾಜದ ಬದುಕು ಸಮಾಜ ಬಾಹಿರತನದ ಬದುಕುಗಳ ಸಂಕಥನವಾಗಿ ದಲಿತ ಆತ್ಮಕಥೆಗಳು ಕಾಣುತ್ತವೆ. ದಲಿತರ ಆತ್ಮಕಥೆಗಳು ಶ್ರೀಸಾಮಾನ್ಯರ ಸಿದ್ಧಾಂತಗಳು ಎನ್ನುವಂತೆ ವ್ಯಕ್ತವಾಗಿದೆ.

ಕನ್ನಡದಲ್ಲಿ ಈಗಾಗಲೇ ನಾಲ್ಕು ದಲಿತರ ಆತ್ಮಕಥೆಗಳು ಪ್ರಕಟಗೊಂಡಿವೆ.

1) ಮಣೆಗಾರ

2) ಊರುಕೇರಿ

3) ಗೌರ್ಮೆಂಟ್ ಬ್ರಾಹ್ಮಣ

4) ಮನವಿಲ್ಲದವರ ಮಧ್ಯೆ

" ನನ್ನ ಆತ್ಮಕಥೆ ನನ್ನೊಬ್ಬನ ಅನುಭವದ ಕಥನವಲ್ಲ. ಅದು ದಲಿತ ಜಗತ್ತಿನ ಅನುಭವ ಕಥನ. ಹೀಗೆ ಅದು ಈ ಮೂಕಲೋಕದ ಸಾವಿರಾರು ಬಾಯಿಗಳಲ್ಲಿ ಕತ್ತಲ ಕನಸುಗಳನ್ನು ಹುದುಗಿಸಿಕೊಂಡ ಕಥನ" ಎಂದು ಎಲ್ಲಾ ದಲಿತರ ಪರವಾಗಿ ಸಿದ್ಧಲಿಂಗಯ್ಯನವರು ತಮ್ಮ ಆತ್ಮಕಥನ ಈ ರೀತಿಯಲ್ಲಿ ಚಿಂತಿಸಿದ್ದಾರೆ. (9. "ಊರು-ಕೇರಿ" ಡಾ. ಸಿದ್ಧಲಿಂಗಯ್ಯ)

----0----

ಅಡಿ ಟಿಪ್ಪಣಿಗಳು

1 . ದಲಿತ ಮಾರ್ಗ ಪುಟ 21 ಅರವಿಂದ ಮಾಲಗತ್ತಿ

2. ಪುಟ 10 ಬಂಡಾಯ - ದಲಿತ ಸಾಹಿತ್ಯ. ಡಾ. ಪುರುಷೋತ್ತಮ ಬಿಳಿಮಲೆ

3.' ಕಾಡು ಮತ್ತು ತೋಪು' ಪು. 61-62 ಪ್ರೊ. ಚಂದ್ರಶೇಖರ್ ನಂಗಲಿ

4. ದಲಿತ ಮಾರ್ಗ- ಅರವಿಂದ ಮಾಲಗತ್ತಿ ಪು. 30-31

5. 'ಕನ್ನಡ ದಲಿತ ಸಾಹಿತ್ಯ' ಸಮಾಲೋಕನ. ಡಾ.ಅರ್ಜುನ ಗೊಳಸಂಗಿ ಪು.19

6. ಬಸವರಾಜ ಸಬರದ " ಕನ್ನಡ ದಲಿತ ಕಾವ್ಯ- ಇಟ್ಟ ಹೆಜ್ಜೆ- ತೊಟ್ಟರೂಪ" ಪು. 40

7. "ಕಾಡು ಮತ್ತು ತೋಪು" ಪು.60 ಪ್ರೊ. ಚಂದ್ರಶೇಖರ್ ನಂಗಲಿ.

8. ' ಕಥಾ -ಕಥನಾ' ಪು. 25. ಪ್ರೊ. ಎಲ್. ಹನುಮಂತಯ್ಯ

9. " ಊರು-ಕೇರಿ" ಡಾ. ಸಿದ್ಧಲಿಂಗಯ್ಯ

ಅಧ್ಯಾಯ - 2

" ದೇವನೂರು ಮಹಾದೇವ ಅವರ ಕೃತಿಗಳ ಸಾಂಸ್ಕೃತಿಕ ಅಧ್ಯಯನ - ಚಿಂತನೆ "

ಅ) " ದ್ಯಾವನೂರು " - ಕಥಾ ಸಂಕಲನ (ಸಮಗ್ರ ಕಥೆ)

ಆ) " ಒಡಲಾಳ"

ಇ) " ಕುಸುಮ ಬಾಲೆ"

ದೇವನೂರು ಮಹಾದೇವ ಅವರ ಕೃತಿಗಳ ಸಾಂಸ್ಕೃತಿಕ ಅಧ್ಯಯನ :-

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ದೇವನೂರು ಎಂಬ ಗ್ರಾಮದಲ್ಲಿ ಜನಿಸಿದವರು ದೇವನೂರು ಮಹಾದೇವ. ಹೊಸಗನ್ನಡ ಸಾಹಿತ್ಯದ ಪ್ರಮುಖ ಘಟ್ಟಗಳಲ್ಲಿ ಒಂದಾದ ದಲಿತ ಸಾಹಿತ್ಯ ಘಟ್ಟದಲ್ಲಿ ತನ್ನದೇ ಆದ ವಿಶಿಷ್ಟ ಶೈಲಿ. ದೇಶಿಭಾಷೆ, ಗ್ರಾಮದ ಸೊಗಡು, ತಾನುಂಡು ಬೆಳೆದ ವರ್ಗ-ವರ್ಣದ ನೋವು ನಲಿವುಗಳನ್ನು ಆಚಾರ ವಿಚಾರಗಳನ್ನು ಸಹೃದಯದ ಮನಸ್ಸಿನಲ್ಲಿ ಪ್ರತಿಬಿಂಬದ ಛಾಯೆ ಮೂರ್ತಿ ವೆತ್ತುವಂತೆ ವಿಚಾರ-ಚಿಂತನೆಗಳನ್ನು ತೀಕ್ಷ್ಣ ಹಾಗೂ ಸೂಕ್ಷ್ಮದಲ್ಲಿ ಶೀತಲ ಸಮರದಂತೆ, ಬಡವಾಗ್ನಿಯಂತೆ ತಮ್ಮ ಕೃತಿಗಳಲ್ಲಿ ಭಾರತಾಂತರ್ಗತ ಕನ್ನಡ ಸಂಸ್ಕೃತಿಯ ನೆಲದ ವಿವೇಕಕ್ಕೆ ನಿದರ್ಶಕರಾಗಿದ್ದಾರೆ.

ಮೈಸೂರು ನಂಜನಗೂಡಿನಲ್ಲಿ ವಿದ್ಯಾಭ್ಯಾಸ ಮಾಡಿ ಮೈಸೂರಿನ ಸೆಂಟ್ರಲ್ ಇನ್ಸ್‌ಟಿಟ್ಯೂಟ್ ಆಫ್ ಇಂಡಿಯನ್ ಲಾಂಗ್‌ವೇಜಸ್‌ನಲ್ಲಿ ಕೆಲಸ ಮಾಡಿ ಹಲವಾರು ಪ್ರಶಸ್ತಿಗಳನ್ನು ಕನ್ನಡ ಸೇವೆಗೆ ಪಡೆದಿದ್ದಾರೆ. " ನಾನು ಬಹಳವಾಗಿ ಬರೆದಿರುವುದಾಗಿ ಅಂದಿಕೊಂಡಿದ್ದೆ. ನಾನು 1968 ರಿಂದ ಇದುವರೆಗೆ ಬರೆದಿರುವುದೆಲ್ಲಾ ಒಟ್ಟಾಗಿ ಪ್ರಕಟಿಸಿದಾಗ 169 ಪುಟಗಳಷ್ಟೇ ಆಗಿರುವುದು ನನ್ನನ್ನು ಚಕಿತಗೊಳಿಸಿದೆ. ನನ್ನ ಭ್ರಮೆ ಮತ್ತು ದಿಗ್ಭ್ರಮೆಗೆ ಕಾರಣರು. ನಾನು ಬಹಳವಾಗಿ ಬರೆದಂತೆ ಸ್ವೀಕರಿಸಿದ ಕನ್ನಡ ಸಹೃದಯವಂತ ಓದುಗರು, ವಿಮರ್ಶಕರು ಮತ್ತು ಲೇಖಕರಿಗೆ ನಾನು ಋಣಿ"(1. ನೆನಕೆ, ದೇವನೂರು ಮಹಾದೇವ ಅವರ ಕೃತಿಗಳು) ಎಂದು ಅವರು ಬರವಣಿಗೆಯನ್ನು ಕುರಿತು ಅವರು ಈ ರೀತಿಯಾಗಿ ಹೇಳಿದ್ದಾರೆ. ಅವರು ಬರೆದ ಸಮಗ್ರ ಕೃತಿಗಳು ಈ ಕೆಳಕಂಡಂತಿದೆ.

1. "ದ್ಯಾವನೂರು" (ಎಂಬ ಶೀರ್ಷಿಕೆಯ ಅಡಿಯಲ್ಲಿ ಬರೆದ ಏಳು ಕಥೆಗಳ ಸಂಗ್ರಹ.)
2. "ಒಡಲಾಳ" (ಒಂದು ಕಾದಂಬರಿ)
3. "ಕುಸುಮ ಬಾಲೆ" (ಸಾಹಿತ್ಯ ಪ್ರಕಾರದ ವರ್ಗೀಕರಣವನ್ನು ನಿರಾಕರಿಸಿದ ಕೃತಿ)

ಅವರ ಈ ಬರವಣಿಗೆಯಲ್ಲಿ ಸಮಾಜದ ಶೋಷಣೆ, ಮೂಲವಾಗಿ ಬಿಂಬಿಸಿದ್ದಾರೆ. ಆವೇಶ-ರೊಚ್ಚುಗಳಿಗಿಂತ ಹರಿತವಾದ ಪರಿಣಾಮಕಾರಿಯಾದ ವೃತ್ತಾಂತ ಧ್ವನಿಯನ್ನು ಅವರು ಪಡೆದು ಕೊಂಡರೆಂಬುದು ಮಹತ್ವದ ಸಂಗತಿ ಇದರಿಂದ ನೈತಿಕ ತೀರ್ಮಾನಗಳು ತಾವಾಗಿಯೇ ಓದುಗರಲ್ಲಿ ಮೂಡುತ್ತದೆ ಎಂದು ಎಲ್. ಎಸ್. ಶೇಷಗಿರಿರಾವ್ ಹೇಳಿದ್ದಾರೆ. (2. ಹೊಸಗನ್ನಡ ಸಾಹಿತ್ಯ ಚರಿತ್ರೆ ಪುಟ 325) ಇದರ ಜೊತೆಗೆ ಹಿತವಾದ ಹಾಸ್ಯವೂ ನಿರೂಪಣೆಯಲ್ಲಿ ಬೆರೆತು, ವಸ್ತುವನ್ನು ಒಂದು ಮಾನಸಿಕವಾಗಿ ಕಾಣಿಸುವುದು ಸಾಧ್ಯವಾಗುತ್ತದೆ. ಅನುಕಂಪ, ಪ್ರತಿಭಟನೆ ಇವು ಪ್ರಕಟವಾಗಿದೆ. ಅಷ್ಟೆ ಅಲ್ಲದೆ ದಲಿತರ ಬದುಕಿನ ವಿವರಗಳು ಸೇರಿಕೊಳ್ಳುತ್ತಾ ಹೋದಂತೆ ಈ ಬದುಕಿನ ಸ್ವರೂಪದ ವಿನ್ಯಾಸ ದಾಖಲಾಗುತ್ತಾ ಹೋಗುತ್ತದೆ.

ಪ್ರಾಚೀನ ಕನ್ನಡಿಗರ ಸಂಸ್ಕೃತಿಯನ್ನು ಎತ್ತಿ ತೋರಿಸತಕ್ಕಂತಹ ಅವರ ಬದುಕಿನ ರೀತಿ, ಅವರ ಧರ್ಮಗಳು ಆರ್ಥಿಕ ವ್ಯವಸ್ಥೆ,ಜಾತಿ ನೀತಿಗಳು ಅವರ ಬಾಳನ್ನು ಹಿಡಿದು ನಡೆಯಿಸಿದ ಮೌಲ್ಯಗಳು ಅವರ ಜೀವನದ ವಿಧಾನಗಳನ್ನು ನಿರೂಪಿಸುವುದು ಸಾಂಸ್ಕೃತಿಕ ಅಧ್ಯಯನದ ಪೀಠಿಕೆಯಾಗಿದೆ. ಇಂತಹ ಭಾರತಾಂತರ್ಗತ ಕನ್ನಡ ಸಂಸ್ಕೃತಿಯ ನೆಲೆಯಲ್ಲಿ ಬೆಳೆದ ದೇವನೂರು ಅವರ ಬರಹಗಳಲ್ಲಿ ಸಂದರ್ಭಕ್ಕೆ ತಕ್ಕಂತೆ ಸಾಂಸ್ಕೃತಿಕ ಸನ್ನಿವೇಶಗಳನ್ನು ಚಿತ್ರಿಸಿದ್ದಾರೆ.

ಸಂಸ್ಕೃತಿ ಮಾನವ ಜೀವನದ ಒಂದು ಪ್ರಮುಖ ಅಂಗ. ಮಾನವ ಸಮಾಜದಲ್ಲಿ ಬಾಳಬೇಕಾದರೆ ಅವನು ರೂಢಿಸಿಕೊಂಡು ಬಂದಿರುವ ಸಂಸ್ಕೃತಿ ಅವನ ಸ್ಥಾನವನ್ನು ಎತ್ತಿ ಹಿಡಿಯುವಲ್ಲಿ ಸಹಕಾರಿಯಾಗುತ್ತದೆ. ಸಂಸ್ಕೃತಿ ಎಂಬುದು ಪರಂಪರಾಗತದಿಂದ ಹರಿದು ಬಂದರೂ ಸಹ ಕಾಲಕ್ಕನುಗುಣವಾಗಿ ಜನರ ಮನೋಭಿಲಾಷೆಗೆ ತಕ್ಕಂತೆ ಬದಲಾಗುತ್ತದೆ. ಸಂಸ್ಕೃತಿ ಸದಾ ಚಲನಶೀಲವಾದುದು ಪ್ರಕೃತಿಯೊಂದಿಗಿನ ಮಾನವನ ಒಡನಾಟವಿದ್ದಂತೆ ಸಂಸ್ಕೃತಿಯೂ ಸಹ ಒಡನಾಟವನ್ನು ಬಳಸಿಕೊಂಡಿದೆ. ಶಿಕ್ಷಣದ ಪ್ರಭಾವ ಮತ್ತು ಜನರ ಆಲೋಚನಾಶಕ್ತಿ ಹೆಚ್ಚಿದಂತೆಲ್ಲಾ ಸಂಸ್ಕೃತಿ ಬದಲಾವಣೆಯನ್ನು ಪಡೆಯುತ್ತದೆ. ಮತ್ತು ಬೆಳೆಯುತ್ತಾ ಹೋಗುತ್ತದೆ.

ಇದಕ್ಕೆ ಉದಾಹರಣೆಯಾಗಿ ದೇವನೂರು ಮಹಾದೇವ ಅವರ ಕಥೆಗಳು ಹಾಗೂ ಕಾದಂಬರಿಗಳಲ್ಲಿನ ಸಾಂಸ್ಕೃತಿಕ ವಿಚಾರಗಳು ಏನೆಂಬುದನ್ನು ತಿಳಿಯುವುದು ಅತ್ಯಗತ್ಯ ಹಾಗೂ ದಲಿತರಿಗೂ ಮೇಲ್ವರ್ಗದವರಿಗೂ ಇರುವ ಜೀವನ ಶೈಲಿ ಮತ್ತು ಸಂಸ್ಕೃತಿಗಳ ತಾರತಮ್ಯವನ್ನು ಇವರ ಕೃತಿಗಳಲ್ಲಿ ಪರೋಕ್ಷವಾಗಿ ಗುರುತಿಸಬಹುದು.

ದೇವನೂರು ಕಥೆಗಳಲ್ಲಿ ಎದ್ದು ಕಾಣುವ ಗುಣವೆಂದರೆ ವಸ್ತುವಿನ ಹೊಸತನ ಮತ್ತು ಹೊಸದನ್ನು ಹೇಳುವಾಗ ಸಹಜವಾಗಿ ಹೊರ ಹೊಮ್ಮುವ, ಉತ್ಸಾಹ, ಆವೇಶ, ಆರ್ಭಟಗಳಿಂದ ಮುಕ್ತವಾದ ನಿರ್ಲಿಪ್ತದಾಟಿ, ಅಷ್ಟೆ ಅಲ್ಲದೆ ಜನಾಂಗದ ಬದುಕನ್ನು ಒಳಗಿನವರಾಗಿಯೇ ಸೆರೆ ಹಿಡಿದಿರುವುದರಿಂದ ಅದು ಹೊಚ್ಚ ಹೊಸದಾಗಿ ಕಾಣುತ್ತದೆ. ಮಧ್ಯಮ ವರ್ಗದ ಬದುಕನ್ನು ಕುರಿತ ಸಾಹಿತ್ಯ ನಮ್ಮ ಸಂವೇದನೆಗಳನ್ನು ಜಿಡ್ಡುಗಟ್ಟಿಸಿಬಿಟ್ಟ ಸಂದರ್ಭದಲ್ಲಿ ಮಹಾದೇವ ಅವರು ಕಥೆಗಳನ್ನು ಬರೆಯಲಾರಂಭಿಸಿದರು. ಈ ಹಿಂದೆ ದಲಿತರ ಬದುಕು ನಮ್ಮ ಸಾಹಿತ್ಯದಲ್ಲಿ ಚಿತ್ರಿತವಾಗಿರಲಿಲ್ಲವೆಂದಲ್ಲ "ಜ್ಯೋಮನದುಡಿ", "ಮೋಚಿ" ಮುಂತಾದ ಕೃತಿಗಳು ಕುವೆಂಪು, ಗೊರೂರು ಮುಂತಾದವರ ಕಥೆ, ಕಾದಂಬರಿಗಳಲ್ಲಿ ಹಲವಾರು ದಲಿತ ಪ್ರಯತ್ನಗಳೂ ಇವೆ. (3. ಟಿ.ಪಿ. ಅಶೋಕ ಅವರ ಹೊಸಹೆಜ್ಜೆ, ಹೊಸಹಾದಿ ಪು.69) ದೇವನೂರು ಬರವಣಿಗೆ ಪ್ರಧಾನವಾಗಿ ಬದುಕಿನ ಶೋಷಣೆ, ಅದು ಎರಡು ನೆಲೆಗಳಲ್ಲಿ ವ್ಯಕ್ತವಾಗುತ್ತದೆ. ಒಂದು ಒಳಗಿನ ಶೋಷಣೆ ಮತ್ತೊಂದು ಹೊರಗಿನ ಶೋಷಣೆ. ಹಾಗೆಂದ ಮಾತ್ರಕ್ಕೆ ಅವರ ಕಥನ ಕಲೆಯಲ್ಲಿ ಪ್ರತಿಭಟನೆ, ಸಂಘರ್ಷವಿಲ್ಲವೆಂದು ಅರ್ಥವಲ್ಲ ಅದರಲ್ಲಿ ಎಲ್ಲವೂ ಗುಪ್ತಗಾಮಿನಿಯಂತೆ ಕೆಲಸ ಮಾಡುತ್ತಿರುತ್ತದೆ.

ದೇವನೂರು ಅವರ " ಮಾರಿಕೊಂಡವರು" ಕತೆಯಲ್ಲಿ ಲಕ್ಷ್ಮೀ ಬೀರನ ಹೆಂಡತಿ ದಲಿತ ಕುಟುಂಬ, ಕಿಟ್ಟಪ್ಪ ಜಮೀನ್ದಾರರ ಮಗ, ಲಕ್ಷ್ಮೀ ಕಿಟ್ಟಪ್ಪನ ಪ್ರೀತಿ -ಪ್ರೇಮಕ್ಕೆ ಮಾರಿಕೊಂಡಿದ್ದಾಳೆ. ಕಿಟ್ಟಪ್ಪ ಲಕ್ಷ್ಮೀಗೆ ಮಾರಿಕೊಂಡಿಲ್ಲ. ಆತನು ಕೊಂಡುಕೊಳ್ಳುವವ, ಇಂತಹ ಹೆಣ್ಣುಗಳು ಎಷ್ಟೋ ಅವನಿಗೆ. ಇವರಿಬ್ಬರ ಅನೈತಿಕ ಸಂಬಂಧವನ್ನು ಮರೆಯಲು ಬೀರ ಕುಡಿತಕ್ಕೆ ಜಾರಿಕೊಳ್ಳುತ್ತಾನೆ. ಬೀರನ ಕುಡಿತದ ದೌರ್ಬಲ್ಯ, ಕಿಟ್ಟಪ್ಪ ಧೈರ್ಯವಾಗಿ ಲಕ್ಷ್ಮೀಯ ಜೊತೆ ಸೇರಲು ಅನುಕೂಲವಾಗುತ್ತದೆ.

ಕಿಟ್ಟಪ್ಪನ ಗೈರು ಹಾಜರಲ್ಲಿ ಇಬ್ಬರ ಹೆಂಡವನ್ನು ಒಬ್ಬನೆ ಕುಡಿದು, ಕುಡಿದ ಅಮಲಿನಲ್ಲಿ " ನನ್ನ ಲಚಮಿ ಚಂದುಳ್ಳಿ 'ಲಚುಮಿ' ಅಂದನು" - ಲಕ್ಷ್ಮೀ ಮಾತಾಡಲಿಲ್ಲ "ಇನ್ನೂ ನಾಚ್ಕೆಯಾ ನಿಂಗೇ ? ಈಟು ದಿನ ಆದ್ರೂ ! ಬಾ ಅಂದರೆ ಬರ್ಬೇಕು" ಈಗಲೂ ಮಾತಾಡಲಿಲ್ಲ, ಎಳೆ ಕೂಸಂತೆ ನಕ್ಕಳು, ಬೀರನಿಗೆ ಕೋಪ ನೆತ್ತಿಗೇರಿತು. " ನಾ ಕರದ್ರೂ ನೀ ಬರಾಕಿಲ್ವಮ್ಮಿ" ಅಂತಲೇ ಲಕ್ಷ್ಮೀ " ಸುಮ್ನೆ ಬಿದ್ಕೋ ಎಂದು" ಗಡಿಸಿನಿಂದ ಹೇಳಿದಳು. ಏನಮ್ಮಿ ನಿನ್ನ ಧಿಮಾಕು ! ಇಷ್ಟಕ್ಕೂ ಬಂದು ಬ್ಬುಟ್ಯಾ" ಚೀರದ. ಲಕ್ಷ್ಮೀ ಏನನ್ನೋ ಗೊಣಗಿದಳು. " ನೀ ಮಾತಾಡದಿಲ್ಲ ? ನನ್ನೊಂದಿಗೂ ಯಾಕೆ ಮಾತಾಡ್ತಿ ಹೇಳು....... ಕಿಟ್ಟಪ್ಪನೊಂದಿಗೆ ಮಾತಾಡೋದು ಬಿಟ್ಟು ಎಷ್ಟಾದ್ರೂ ಅವ ನಿನ್ನ ಮಿಂಡಾ ಅಲ್ವ ? ಎಂದನು". ಲಕ್ಷ್ಮಿಗೆಬಾಸೇ ಬಂದು ಮೊಗಚಿಕೊಂಡಂತಾಯ್ತು. ಮೈ ಕೈ ಸಣ್ಣಕ್ಕೆ ನಡುಗಿದವು.

ಕುಡಿತದ ಮತ್ತಿನಲ್ಲಿ ಬೀರ ಈ ಸಂಬಂಧವನ್ನು ಕುರಿತು ಆಕ್ರೋಶ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾನೆ. ಲಕ್ಷ್ಮಿಗೆ ಎಚ್ಚರಿಕೆಯನ್ನು ಕೊಡುತ್ತಾನೆ. ಅದು ಬೀರನ ಗಂಡಸತ್ವದ ಸ್ವಾಭಿಮಾನ ಕುಡಿದಾಗ ಗುಟರಿಕ್ಕುತ್ತದೆ. ಅದು ಗಂಡಸೊಬ್ಬನ ಪುರುಷತ್ವದ ಪ್ರಶ್ನೆಯಾಗಿಯೂ ನಿಲ್ಲುತ್ತದೆ. ಸಹಜ ಸ್ಥಿತಿಯಲ್ಲಿ ಮಾರಿಕೊಂಡ ಬೀರನ ಸ್ಥಿತಿಯು ಕುಡಿದಾಗ ಅದರ ಬಗ್ಗೆ ಪ್ರತಿಭಟನೆ ಉಸಿರುಕಟ್ಟಿಸುತ್ತದೆ. " ಹ್ಞೆ ಹ್ಞೆ ಹ್ಞೆ ಗತಿ ಕಾಣಿಸ್ತೀನಿ ಕೊತ್ತಿ , ಕಣ್ ಮುಚ್ಚಿಕೊಂಡು ಹಾಲು ಕುಡಿದರೆ ಗೊತ್ತಾಗಲ್ವಂತೆ ! ಬೆಳಗಾಗೋದೆ ಇಲ್ಲಾ ! ನಾಳೆ ಅವ್ನು ಬರೋದೆ ಇಲ್ವಾ ಬಂದೆ ಬರ್ತಾನೆ ಮಿಂಡಗಾತಿ ಮೊಖ ನೋಡಾಕೆ, ಬೆಳ್ಯಾಗಲಿ ನೀನು ಇಲ್ಲಾ, ಅವ್ನೂ ಇಲ್ಲಾ, ಬಾಪ್ಗ ತರದ್ ತರದ್ ಹಾಕ್ತಿನಿ ಮಚ್ ಮಡಿಗಿದಿನಿ ತಲೆಮ್ಯಾಗ ರೆಡಿ ರೆಡಿಯಾಗೈತೆ " ಎನ್ನುವುದರಲ್ಲಿ ದಲಿತ ಕುಟುಂಬವೊಂದರಲ್ಲಿನ ಬಡತನ, ಗಂಡು ಹೆಣ್ಣಿನ ಸಂಬಂಧ, ಕುಡಿತದ ದುಷ್ಪರಿಣಾಮ ಮತ್ತು ತಪ್ಪು ಎಂದು ಲಕ್ಷ್ಮೀಗೆ ತಿಳಿದಿದ್ದರೂ ಅವಳ ಅಸಹಾಯಕತೆ, ಬೀರನ ದೌರ್ಬಲ್ಯ, ಕಿಟ್ಟಪ್ಪನ ದೌರ್ಜನ್ಯ ಇವುಗಳು ಸಂಸ್ಕೃತಿಯ ತಳಹದಿಯಲ್ಲಿ ರೂಪಿತವಾಗಿದೆ. ಲಕ್ಷ್ಮೀಯ ದೇಹದಲ್ಲಿ ಬೀರನ ಮಾತುಗಳು ಉಸಿರುಗಟ್ಟಿಸಿ ಕೊಲ್ಲುತ್ತಿವೆ. ಅಷ್ಟೇ ಅಲ್ಲ ಆ ರಭಸದಲ್ಲಿ ಆಶ್ರಯಕೊಟ್ಟ ಲಕ್ಷ್ಮಿಯನ್ನು ಅನುಭವಿಸುತ್ತಿರುವ ಕಿಟ್ಟಪ್ಪನ ಬಗ್ಗೆಯೂ ಬೀರನ ಆಕ್ರೋಶದ ಕ್ರೋಧಾಗ್ನಿ ಉರಿಯುತ್ತದೆ. ಆದರೆ ವಾಸ್ತವ್ಯದ ಕ್ರೂರ ವ್ಯವಸ್ಥೆಯ, ಶೋಷಣೆಯ ಮರ್ಜಿನೊಳಗೆ ಸಿಕ್ಕಿದ ಬೀರನಂತಹ ಅಮಾಯಕ ಏನು ತಾನೇ ಮಾಡಲು ಸಾಧ್ಯ ? ಆರ್ಥಿಕ, ಸಾಮಾಜಿಕ, ಅಸಮತೋಲನದ ವಿರುದ್ಧ ಈಜಲು ಸಾಧ್ಯವೇ ? ಆತನು ಪ್ರವಾಹದ ವಿರುದ್ಧ ಈಜಿದರು ಅದರಿಂದ ಕೊಚ್ಚಿ ಹೋಗುತ್ತಾನೆಯೇ ಹೊರತು, ಉಳಿಯಲು ಸಾಧ್ಯವಾಗುವುದಿಲ್ಲ." ಕಿಟ್ಟಪ್ಪನ ರಗ್ಗು ಲಚಮೀನ ಕವಿಚಿಕೊಂಡಿದೆ. ಕಿಟ್ಟಪ್ಪನ ಮನೆ ಇಬ್ಬರನ್ನು ಕವಿಚಿಕೊಂಡಿದೆ." ಎಂಬ ಮಾತಿನ ಧ್ವನಿಶಕ್ತಿಯಲ್ಲಿ ಇಡೀ ಕಥೆ ಮಾರಿಕೊಂಡವರ ಅಸಹಾಯಕ ಸ್ಥಿತಿಯನ್ನು ಅರ್ಥೈಸುತ್ತದೆ.

" ಗ್ರಸ್ತರು" ಕಥೆಯಲ್ಲಿ ವಿದ್ಯಾವಂತ ನಾಯಕನು ತನ್ನ ಬದುಕಿನಿಂದ ಬಿಡಿಸಿಕೊಳ್ಳಲಾರದೆ, ಮಾನಸಿಕವಾಗಿ ಒದ್ದಾಡುವ ಚಿತ್ರಣವಿದೆ. ಆಧುನಿಕ ಶಿಕ್ಷಣದಿಂದ ವಿದ್ಯೆ, ಬುದ್ಧಿಯಿಂದ ನಾಯಕ ಪ್ರಜ್ಞೆಯನ್ನು ಬೆಳೆಸಿಕೊಂಡಿದ್ದಾನೆ. ಆತನ ಪ್ರಗತಿಪರ ಆಲೋಚನೆ, ಆದರ್ಶ ಗುಣ, ಸ್ವಾಭಿಮಾನ, ಸ್ವಾವಲಂಬನೆಗಳಿಂದ ಬಂಡಾಯವೆದ್ದು, ಊರಿನ ಗೌಡರು ಮಠದಲ್ಲಿ ಕೊಡಿಸಿದ ಕೆಲಸಕ್ಕೆ ಕಲ್ಲು ಹಾಕಿ ಧರ್ಮ, ಮಠ, ಮಂದಿಗಳೆಲ್ಲ ಸೋಗು, ಎಂದು ಭಾಷಣ ಬಿಗಿದು, ಕೆಲಸ ಬಿಟ್ಟು ಊರಿಗೆ ಬಂದಿದ್ದಾನೆ. ಮಳೆ ಬಂದರೆ ಸೋರುವ ಹಟ್ಟಿಯಲ್ಲಿ ಬಡತನ, ದೀರ್ಘಕಾಲದಿಂದಲೂ ಅನಾರೋಗ್ಯದಿಂದ ಹಾಸಿಗೆ ಹಿಡಿದು ಮಲಗಿರುವ ತಾಯಿ, ದೊಡ್ಡಪ್ಪನ ದೊಡ್ಡತನದ ವಿಶಾಲ ಮನಸ್ಸಿನಿಂದ ಸಾಗುತ್ತಿರುವ ಮನೆ ಇಂತಹ ಹಲವಾರು ಸಮಸ್ಯೆಗಳಿಂದ ಒದ್ದಾಡುವ ನಾಯಕ ಸಂದಿಗ್ಧ ಪರಿಸ್ಥಿತಿಯಲ್ಲಿ ಆತ ಗೌಡರು ಕೊಡಿಸಿದ ಕೆಲಸವನ್ನು ಬಿಟ್ಟು ಆತನ ಸ್ವಾಭಿಮಾನ, ಸ್ವಾವಲಂಬನೆಯ ಪ್ರಗತಿಪರ ಧೋರಣೆಯನ್ನು ಚಿತ್ರಿಸಿದೆ. ಇದು ದೇವನೂರು ಅವರ ಬಂಡಾಯದ ಪ್ರತಿರೂಪವಾಗಿದೆ. ಮಹಾದೇವ ಅವರ ಕಥೆಗಳಲ್ಲಿ " ಗ್ರಸ್ತರು" ಒಂದು ದಹನದ ಕಥೆ ಮತ್ತು " ದತ್ತ" ಕಥೆಗಳ ನಾಯಕರುಗಳ ಸಮಸ್ಯೆ ಬೇರೆ ತರಹದ್ದೇ ಆಗಿದೆ. ಈ ಕಥೆಗಳ ನಾಯಕರು ಬೌದ್ಧಿಕವಾಗಿ ತಮ್ಮ ಇತರ ಬಂಧುಗಳಿಗಿಂತ ಭಿನ್ನವಾಗಿದ್ದಾರೆ. ಕೊಂಚ ವಿದ್ಯಾವಂತರಾದ, ಪಟ್ಟಣ ನೋಡಿ ಬಂದ ಇವರಿಗೆ ತಮ್ಮವರೊಡನೆ ಅರ್ಥಪೂರ್ಣ ಸಂಬಂಧವನ್ನು ಬೆಳೆಸಿಕೊಳ್ಳಲು ಸಾಧ್ಯವಾಗಿಲ್ಲ.

ಗೌಡರಿಗೆ ಜಾತಿಬೇಧವಿಲ್ಲ ನಾಯಕನಿಗೆ ತಮ್ಮ ಮನೆಯ ಲೋಟದಲ್ಲಿ ಕಾಫಿಯನ್ನು ಕುಡಿಸುತ್ತಾನೆ. ಗೌಡರು ಜನರು ಮಾಡುವ ಸಾಲ, ಬಡ್ಡಿ ವ್ಯವಹಾರದಲ್ಲಿ ಪಕ್ಕಾ ವ್ಯವಹಾರಿಯಾಗಿ ನಿಲ್ಲುತ್ತಾರೆ. ಆಧುನಿಕತೆಯನ್ನು ಮೈಗೂಡಿಸಿಕೊಂಡ ವ್ಯವಹಾರಿಕ ಗುಣ ಗೌಡರನ್ನು ಜಾತಿಬೇಧದಿಂದ ದೂರವಿಟ್ಟಿದೆ. ನಾಯಕ ಗೌಡರನ್ನು ಕುರಿತು, " ಈಗೆಲ್ಲಿಂದ ತಲ್ಲಿ, ಕೆಲ್ಲ

ಬಿಟ್ಟು ಬಂದುದು ಗೊತ್ತೆ ಇದೆ'' ಎಂದು ಹೇಳಿದಾಗ ಗೌಡರು ಆತನನ್ನು ಗುರಾಯಿಸಿದತರ ನೋಡುತ್ತಾ " ಸರಿಯಪ್ಪ ನೀಯೇನೋ ಕೆಲ್ಸ ಬಿಟ್ಟೆ, ಕೆಲ್ಸ ಕೊಡಿಸಿದವ್ರ ಮಾನ ಏನಾಗ್ಬೇಕು. ಅಂದಾಗ ನಾಯಕನಿಗೆ ಬಾಯಿ ಕಟ್ಟಿದಂತಾಗುತ್ತದೆ. ಗೊಂದಲಕ್ಕೊಳಗಾಗುತ್ತಾನೆ. ಏಕೆಂದರೆ ಗೌಡರು ಶಿಫಾರಸ್ಸು ಮಾಡಿ ಕೆಲಸ ಕೊಡಿಸಿ ಕೊಟ್ಟ ಕೃತಜ್ಞತಾ ಭಾವನೆ ಆತನಲ್ಲಿ ಸೇರಿಕೊಂಡಿವೆ. ಇಲ್ಲಿ ಗೌಡರ ಮನದಾಳದ ಆಸೆ, ಅವನ ನಡವಳಿಕೆ ಎಲ್ಲವೂ ಅರ್ಥವಾಗಿದೆ. ಆದರೆ ಗೌಡರಿಗೆ ಕಥಾನಾಯಕ ಅರ್ಥವಾಗಿಲ್ಲ. ಪ್ರಜ್ಞಾವಂತ ನಾಯಕನ ಎಲ್ಲಾ ಮಾತುಗಳು ಗೌಡರಿಗೆ ಅಸಹಜವಾಗಿ, ಅನುಮಾನವಾಗಿ ಪ್ರತಿಷ್ಠೆಯಾಗಿ ತಮ್ಮ ದರ್ಪ ತೋರುತ್ತಾರೆ.

ನಾಯಕ "ಸರಿ ಬರ್ತೀನಿ'' ಎಂದು ಹೊರಟು ಹೋಗುತ್ತಾನೆ. ನಾಯಕನು ತನ್ನ ಸಿಟ್ಟನ್ನು ಮಾತ್ರ ವ್ಯಕ್ತಪಡಿಸಿ ಹೇಳಬಹುದೇ ಹೊರತು ಗೌಡರ ವಿರುದ್ಧ ಬಂಡಾಯವೇಳಲು ಸಾಧ್ಯವಾಗುವುದಿಲ್ಲ. ಗೌಡರೊಂದಿಗೆ ನಡೆದ ಸಂಗತಿಯನ್ನೆಲ್ಲಾ ತಾಯಿಗೆ ಹೇಳಿ ನೋಡಿದಾಗ , "ಅವ್ವನ ಕಣ್ಣಿನಲ್ಲಿ ದುಃಖ ತುಂಬಿಕೊಂಡು ನರಳಿ ಗೌಡರಲ್ಲಿಗೆ ಕ್ಷಮೆ ಕೇಳಲು ಆಗ್ರಹಿಸುತ್ತಾಳೆ. ಮಗ ನಿರಾಕರಿಸುತ್ತಾನೆ. ತಾಯಿ " ಹೀಗಂದ್ರೆ ನಾವು ಹೇಗೆ ಬದ್ಕೋದು'' ದೇವರಂಥವರ್ನ ನೀನು ಎದುರಾಕಿಕೊಳ್ಳುತ್ತೀಯಾ ಎಂದು ನೋವಿನಿಂದ ಮಗನ ಭವಿಷ್ಯ ನೆನೆದು ಬೀರುತ್ತಾ ದುಃಖಿಸುತ್ತಾಳೆ. ಮಗನ ಅಂತ ಮನಸ್ಸಿನ ಒಳಗಿನ ಕುದಿ ಆಕೆಗೆ ಅರ್ಥವಾಗುವುದಿಲ್ಲ. ಆತ ಮಾತನಾಡುವುದು ಸರಿಯೆನಿಸುತ್ತದೆ. ಅದಕ್ಕೆ ನಾಯಕ ತಾಯಿಯೊಂದಿಗೆ ಹೆಚ್ಚಾಗಿ ಯಾವ ವಿಷಯವನ್ನು ಚರ್ಚಿಸದೆ. " ಈಗ ನಾವು ಬದ್ಕಿದ್ದೀವಾ'' ಎಂದಷ್ಟೇ ಹೇಳಿ ಎದ್ದು ಬರುತ್ತಾನೆ . ಇಲ್ಲಿ ಕತೆಗಾರ ನಾಯಕನ ನೋವು, ಸಿಟ್ಟು, ತಳಮಳ, ಅಸಹಾಯಕತೆ ಎಲ್ಲವನ್ನು ಒಂದೇ ಮಾತಿನಲ್ಲಿ ಎರಕ ಹೊಯ್ದಿದ್ದಾರೆ.

ಒಂದು ದಹನದ ಕಥೆಯಲ್ಲಿ ವಿದ್ಯಾವಂತನ ಸಮಸ್ಯೆ ಇನ್ನೊಂದು ರೀತಿಯದ್ದಾಗಿದೆ. ಉದ್ಯೋಗಸ್ಥನಾದ ನಾಯಕ ಜಾತಿ ಮತ ಮೀರಿದ ಪಾಶದಲ್ಲಿ ಅಂತರ್ಜಾತಿಯ ವಿವಾಹವಾಗಿ ಅದರಿಂದ ಊರಿನಲ್ಲಿ ಎದುರಿಸಬೇಕಾದ ಸಮಸ್ಯೆಯು ಗಂಭೀರತೆಯನ್ನು ಈ ಕಥೆ ನಿರೂಪಿಸುತ್ತದೆ. ಇದು ದೇವನೂರು ಅವರ ಒಳಗಿನ ಸಾಂಪ್ರದಾಯಿಕ ಸಂಸ್ಕೃತಿಯು ಬಂಡಾಯ ಪ್ರಜ್ಞೆಯನ್ನು ಪ್ರತಿಪಾದಿಸುವ ಕಥೆಯಾಗಿ ನಿರೂಪಿತವಾಗಿದೆ.

ಗ್ರಸ್ತರು ಕತೆಯ ಮುಂದುವರಿದ ರೂಪವೇ " ಒಂದು ದಹನದ ಕತೆ " ಎಂಬುವುದು ಡಾ. ಸಿ. ಬಿ. ಹೊನ್ನಯ್ಯ ಅವರ ವಾದವಾಗಿದೆ. (4. ಕನ್ನಡ ಸಣ್ಣ ಕಥೆಗಳಲ್ಲಿ ದಲಿತ ಸಂಸ್ಕೃತಿ, ಪುಟ 221. ಸಿ. ಬಿ. ಹೊನ್ನಯ್ಯ)

ನಾಯಕನ ಪ್ರೇಯಸಿ ಕಮಲಿ ಮೇಲ್ಜಾತಿಯವಳು. ನಾಯಕ ಕೀಳು ಜಾತಿಯವನು. ಇವನ ಅಜ್ಜಿಯ ಜೊತೆಯಲ್ಲಿ ಹನ್ನೆರಡು ವರ್ಷ ಯಾವುದೇ ಕಿತ್ತಾಟವಿಲ್ಲದೆ, ಭೇದ - ಭಾವವಿಲ್ಲದೆ ಹೊಂದಾಣಿಕೆ ಮಾಡಿಕೊಂಡು ಸಂಸಾರ ಸಾಗಿಸಿದ್ದು, ಅದು ಅಂತರಜಾತಿಯ ವಿವಾಹದ ಉತ್ತಮ ಬೆಳವಣಿಗೆ ಕಂಡು ಬರುತ್ತದೆ. ಅವರ ಪ್ರೀತಿ ಮತ್ತು ಪ್ರೇಮ ಸಂಬಂಧಗಳು ಮುಂದುವರೆದು ಮಗು ಪಡೆಯುವ ಸಂಬಂಧಕ್ಕೆ ಬೆಳೆದಿದೆ ಇಲ್ಲಿ ಇವರ ಪ್ರೀತಿಗೆ ಫಲಸಿಕ್ಕಿದೆ. ಈ ಕಥೆಯಲ್ಲಿ ನಾಯಕನಿಗೆ ಸಮಸ್ಯೆ ಉಂಟಾಗುವುದು ಸತ್ತ ಅಜ್ಜಿಯ ದೇಹವನ್ನು ಊರಿನಲ್ಲಿ ಮಣ್ಣು ಮಾಡಲು ತಂದಾಗ ನಾಯಕ ಮೇಲ್ಜಾತಿಯ ಕಮಲಿಯೊಡನೆ ಮದುವೆಯಾದ್ದರಿಂದ ಅಜ್ಜಿಯ ಹೆಣ ಮಣ್ಣು ಮಾಡಲು ಅವಕಾಶ ಕೊಡುವುದಿಲ್ಲ. ಹೀಗೆ ಈ ಸಮಸ್ಯೆ ಬಿಗಡಾಯಿಸಿಕೊಂಡಿದೆ. ಇಲ್ಲಿ ಯಾವ ದಹನವೂ ನಡೆಯುವುದಿಲ್ಲ. ಆದರೆ ನಾಯಕ ಭಾರತೀಯ ಸಂಸ್ಕೃತಿಯನ್ನು ವಿರೋಧಿಸಿಕೊಂಡು ಕೊನೆಗೆ ಅದನ್ನು ಅಂಗೀಕರಿಸಿಕೊಳ್ಳುವಲ್ಲಿ ತನ್ನ ಮಾನಸಿಕ ದಹನದ ಚಿತ್ರಣ ಈ ಕಥೆಯಲ್ಲಿದೆ. ಇಲ್ಲಿ ಯು. ಆರ್. ಅನಂತಮೂರ್ತಿಯವರ "ಸಂಸ್ಕಾರ'' ಕಾದಂಬರಿ ನೆನಪಿಗೆ ಬರುತ್ತದೆ.

ತನ್ನ ಸ್ವಂತ ದೊಡ್ಡಪ್ಪನೆ ಈ ಕಥೆಯಲ್ಲಿ ಪರೋಕ್ಷವಾಗಿ ಖಳನಾಯಕನಾಗಿ ಕಾಣುತ್ತಾನೆ. ಕುಲಸ್ಥರ ಪಂಚಾಯ್ತಿಯಲ್ಲಿ ನಾಯಕ ಭಯ, ನೋವು, ದುಃಖಗಳಿಂದ ಜರ್ಜರಿತನಾಗಿದ್ದಾನೆ. ವ್ಯವಸ್ಥೆಯ ದೌರ್ಜನ್ಯ ಇವುಗಳ ಮಧ್ಯ ಅಜ್ಜಿಯ ದೇಹವನ್ನು ಮಣ್ಣು ಮಾಡಬೇಕಾದ ಜವಾಬ್ದಾರಿ ಮುಂತಾದ ಇಕ್ಕಟ್ಟುಗಳಲ್ಲಿ ನಾಯಕ ಸಿಕ್ಕಿ ಬಿದ್ದಿದ್ದು ಅವನ ಇಂತಹ ಚಿಂತನೆಯಲ್ಲಿ ಪಂಚಾಯಿತಿಯ ಮುಖಂಡರ ಮುಂದೆ ಅಜ್ಜಿಯ ಮಣ್ಣು ಮಾಡುವ ಸಮಸ್ಯೆ ಬಗೆಹರಿಯದೆ ಹೋಗಿ ವಿಫಲವಾಗಿದೆ. ಪಂಚಾಯ್ತಿಯಲ್ಲಿ ಯಜಮಾನ ಸಿದ್ದಪ್ಪ ಒಂದು ಕೈ ಅಲ್ಲಾಡಿಸುತ್ತಾ "ನಾನೂನು ಬೇಕಾದಷ್ಟು ಯತ್ನ ಮಾಡ್ದೆ ಸರಿ ಹೊಂದಿಲ್ಲ, ಊರ ಮಾನ ತೆಗೆದವ, ವಿಷ ಹಾವಾ ಎಲ್ಲರು ಸೇರಿಸಿಕೊಳ್ಳುವುದು ಉಂಟಾ ಅಂತಾನೆ ಪಟ್ಟು ಕುಂತು ಬಿಟ್ಟರು.ಕೊನೆಗೆ ಸಿಟ್ಟು ಬಂದ ನಾಯಕ "ಮನುಷ್ಯರಾ ನೀವು ? ತೊಲಗಿ ಇಲ್ಲಿಂದ" ಎಂದು ಬೈದು ತನ್ನ ಆಲೋಚನೆಯಲ್ಲಿ ಪಂಚಾಯ್ತಿಗೆ ಸೇರುವಾಗಲೇ ಪರ್ಯಾಯವಾಗಿ ಚಿಂತಿಸಿದಂತೆ ಮನೆಯ ಅಂಗಳದಲ್ಲಿ ಇದ್ದಬದ್ದ ಸೌದೆ, ವರಾಂಡದಲ್ಲಿದ್ದ ಗಳಗಳನ್ನು ತಂದು ಹಾಕಿ ಅಜ್ಜಿಯ ಹಣವನ್ನು ಸುಟ್ಟು ಹಾಕಿ ಕತ್ತಲಲ್ಲಿ ಓಡಿ ಹೋಗುತ್ತಾನೆ. ನಾಯಕನ ಈ ಓಡುವಿಕೆಯನ್ನು ಕುರಿತು ಅನೇಕ ವಿಮರ್ಶಕರು ಪಲಾಯನವೆಂದು ಕರೆಯುತ್ತಾರೆ. ಆದರೆ ಇದು ಪಲಾಯನದಲ್ಲಿ ಅದು ನಾಯಕನ ಬಂಡಾಯಕ್ಕೆ ಪ್ರತಿಭಟನೆಯ ಸಾಕ್ಷಿಯಾಗಿದೆ. (5. ಡಾ. ಸಿ. ಬಿ. ಹೊನ್ನಯ್ಯ ಕನ್ನಡ ಸಣ್ಣ ಕಥೆಗಳಲ್ಲಿ ದಲಿತ ಸಂಸ್ಕೃತಿ ಪುಟ 222)

"ದತ್ತ"ಕಥೆಯ ವಿದ್ಯಾವಂತನ ಸಮಸ್ಯೆ ಮತ್ತೊಂದು ರೀತಿಯದು ದತ್ತು ನೆಪದಲ್ಲಿ ಜನ್ಮನೀಡಿದ ತಂದೆ - ತಾಯಿಗಳು ಮಗನನ್ನು ಮಾರಿಕೊಳ್ಳುವ ದಾರಿದ್ರ್ಯ ಸ್ಥಿತಿಯ ಸ್ವಾರ್ಥಿಗಳ ಆಲೋಚನೆ ಇಲ್ಲಿವೆ. ಮಾರಿಕೊಂಡವರು ಕಥೆಯಲ್ಲಿ ದಲಿತರ ಮಾರಿಕೊಂಡ ಸ್ಥಿತಿ ಒಂದು ರೀತಿಯಲ್ಲಿ ನಡೆದರೆ ಇಲ್ಲಿ ಮಗನನ್ನು ಮಾರಿಕೊಳ್ಳುವ ಸ್ಥಿತಿ ಇನ್ನೊಂದು ರೀತಿಯದಾಗುತ್ತದೆ.ಇಲ್ಲಿ ಬದುಕಿನ ಸ್ವಾರ್ಥ ಮುಖ್ಯವಾದರೆ ಅಲ್ಲಿ ಬದುಕಿನ ಅನಿವಾರ್ಯತೆಯ ಅನಾವರಣವಾಗಿದೆ. ಸಾಕಿದ ತಾಯಿ ಕರೆದು ಪ್ರೇಮ ಬುದ್ಧಿ ಹೇಳಿದರೂ ಅದನ್ನು ಲೆಕ್ಕಕ್ಕೂ ತೆಗೆದುಕೊಳ್ಳವವರಲ್ಲ ಕಾರಣ ಅವರು ಸ್ವಂತ ತಂದೆ ತಾಯಿಗಳಲ್ಲ ಎಂಬ ಮನೋ ಚಿಂತೆ ಇರಬೇಕು. ಈ ಕಡೆ ಹುಟ್ಟಿಸಿದ ತಂದೆ-ತಾಯಿಗಳ ಕರೆಯ ಮೇರೆಗೆ ಊರಿನಲ್ಲಿಯೇ ಇರಬೇಕೆಂದು ಆನಂದು ಬಂದರೆ ಇಲ್ಲಿಯ ಇವರ ವರ್ತನೆ ಬೇರೆಯಾಗಿಯೇ ಕಂಡು ಬರುತ್ತವೆ. "ಆನಂದುವಿನ ರೀತಿ ಕಂಡು ಅಪ್ಪ" ನೀಯೇನೋ ಸಣ್ಣವನಲ್ಲ ಹಿರೀಮಗ, ನಿನಿಗಿಂತ 'ಸಣ್ಣವು ಮೂರು ಐಕಳು ನೀನೆ ನೋಡು" ಎಂದು "ಒಂದೇ ಉಸುರ " ಅಂದನು. ಇದರಿಂದ ಕರೆಸಿದ್ದು ತನ್ನ ಮಗನನ್ನಾಗಿ ಮನೆಯಲ್ಲಿಟ್ಟುಕೊಳ್ಳಲು ಅಲ್ಲ ಎಂಬುವುದು ಆತನಿಗೆ ಗೊತ್ತಾಗುತ್ತದೆ. ತಂದೆ ಕಾಗದ ಬರೆದು ಕರೆಸಿದರ ಒತ್ತಾಯ ಮಾಡುತ್ತಿದ್ದರ ಹಿಂದಿನ ಅನುಮಾನ ಆನಂದುದನ್ನು ಕಾಡುತ್ತದೆ. ಸಾಕಿದ ತಂದೆ - ತಾಯಿಗಳು ಸಹ ಇವನ ಕೆಟ್ಟ ನಡತೆಯ ನೋವಿನಲ್ಲಿಯೇ ಇವನನ್ನು ಬೇರೆ ಮನೆಗೆ ಮತ್ತೆ ದತ್ತು ಹೋಗುವ ವಿಚಾರ ತೆಗೆದಾಗ ಆತನು ಗೊಂದಲಕ್ಕೆ ಕಾರಣವಾಗಿ ಸಿಡಿಮಿಡಿಗೊಳ್ಳುತ್ತಾನೆ.

" ಊರ ಸೇರಿದರೆ ಮಾರಿಗುಡಿ ಪೂಜೆಯಾದ ಮೇಲೆ ತನ್ನ ಅಪ್ಪ ಅವ್ವ ತಂಗಿ ತಮ್ಮಂದಿರು ಅನ್ನಿಸಿಕೊಂಡವರ ಮುಖ ಎಣ್ಣೆಯಲ್ಲಿ ಕಾಣುವುದು. ಇವೆಲ್ಲಕ್ಕೂ ಒಪ್ಪಿಕೊಳ್ಳಬೇಕಾಗುತ್ತೊ ಏನೋ " ಎಂದು ಇದು " ನನ್ನ ಕೈಯಲ್ಲಿ ಆಗುವುದಿಲ್ಲ" ಎಂಬುದಕ್ಕೆ ಗಾಡಿಯವ " ಎಲ್ಲಾರು ಉಂಟಾ ಸೋಮಿ. ಹನ್ನೇಡುವರ್ಸ ನೋಡಿದ್ದವು, ಮೊದ್ಲು ಎಣ್ಣೇಲಿ ನೋಡಿ ತಾನೇ ಆಮೇಲೆ " ಎಂಬುದಕ್ಕೆ ಮಾತನಾಡಲಿಲ್ಲ. ಇಲ್ಲಿ ಸಹ ಅವನ ಜೀವನದ ಜೊತೆಯಲ್ಲಿಯೇ ಸಂಸ್ಕೃತಿಯ ಚಿಂತನೆಯು ಜನಮನದಾಳದಲ್ಲಿ ಎಷ್ಟರಮಟ್ಟಿಗೆ ಬೇರೂರಿದೆ ಎಂಬುದು ಗೊತ್ತಾಗುತ್ತದೆ.

ಹುಟ್ಟಿಸಿದ ತಂದೆ ತಾಯಿಗಳಿಗೆ ಹೆತ್ತ ಮಗನೆನ್ನುವ ಕರಳು ಬಳ್ಳಿಯ ಸಂಬಂಧ, ಅಕ್ಕರೆ ಪ್ರೀತಿ ಇದೆ. ಜೊತೆಗೆ ಆರ್ಥಿಕವಾಗಿ ದುರ್ಬಲತೆ ಇದೆ. ಆದ್ದರಿಂದ ಮಗನನ್ನು ಇನ್ನೊಂದು ಸಾರಿ ಅನುಕೂಲಸ್ಥರ ಮನೆಗೆ ದತ್ತು ಕೊಡುವ ಯೋಚನೆ ಮಾಡಿದ್ದಾರೆ. ಒಂದು ದಹನದ ಕಥೆಯಲ್ಲಿ ವಿದ್ಯಾವಂತ ನಾಯಕನ ದೊಡ್ಡಪ್ಪನ ಸ್ವಾರ್ಥವನ್ನು ಒಂದು ರೀತಿಯಲ್ಲಿ ಎದುರಿಸಿದರೆ ಈ ಕಥೆಯಲ್ಲಿ ಹುಟ್ಟಿಸಿದ ತಂದೆ-ತಾಯಿಗಳ ಸ್ವಾರ್ಥ ಬದುಕನ್ನು ಎದುರಿಸಬೇಕಾಗುತ್ತದೆ. ಇದು ಆನಂದುವಿನ ಬದುಕಾಗಿದೆ. ಎಲ್ಲಿಯೂ ಸಲ್ಲದ ಅವನ ಬದುಕು ಡೋಲಾಯಾಮಾನದ ಸ್ಥಿತಿಯಾಗಿದೆ.

ಹೊಸದಾಗಿ ಬಂದ ಅಣ್ಣ ತಂಗಿಯ ಜೊತೆಯಲ್ಲಿ ಮನಸ್ಸಿನ ಡೋಲಾಯಮಾನ ಸ್ಥಿತಿಯನ್ನು ಕುರಿತು ತನ್ನ ಆಂತರಿಕ ನೋವಿನ ವಿಮರ್ಶೆ ಈ ರೀತಿಯಲ್ಲಿ ನಡೆಯುತ್ತದೆ.

" ಒಂದ್ಮಾತು ಕೇಳ್ತೇನಿ ನೀನು ತಿಳ್ಕೋಬೇಡ
ಸಮ್ಮನೆ ನೋಡಿದಳು.
ನಾನು ನಿಂಗ ಅಣ್ಣ ಅಂತ ಅನ್ನಿಸ್ತಾವ,
ನೀನು ನಂಗೆ ಅಣ್ಣಾನೆ ಅಲ್ವಾ?
ಅದ್ಸರಿ, ಅಣ್ಣ ಅಂತ ಅನ್ನಿಸ್ತಾದ ಅಂತ..........?
ತಂಗಿ ತೊಡಕಾಡಿದಳು.
ಎಂಥವನಪ್ಪ, ನೀ ಕೇಳೊದ ಗೊತ್ತಾಗಲ್ಲ
ಹಾಗೆ ಕುಳಿತಿದ್ದರು.
ನಿನ್ನ ಜೊತೇಲಿ ಕುಂತ್ಕಂಡ್ರು ಕೆಲ್ಸ ಆಯ್ತದ"

ಎದ್ದು ನಿಂತು ನಗು ಚೆಲ್ಲಿ ಅಂದಳು. (6. ಪುಟ 26. ದೇ. ಮ. ಅವರ ಕೃತಿಗಳು ದೇವರನೂರ ಮಹಾದೇವ)

" ಇಲ್ಲಿ ಸಂಬಂಧಗಳ ತೀಕಲಾಟದಲ್ಲಿ ಆನಂದನ ಮನಸ್ಸು ಯಾವ ನಿರ್ಧಾರವು ಕೈಗೊಳ್ಳದೆ, ಹೊಂದಾಣಿಕೆ ಮಾಡಿಕೊಳ್ಳಲು ಆಂತರಿಕವಾಗಿ ಎಲ್ಲಾ ಹೊಸತನವನ್ನು ರೂಢಿಗತದ ರೀತಿಯಲ್ಲಿ ಅನುಭವಿಸಲು ಅನುಸರಿಸಲು ಸಾಧ್ಯವಾಗಿದೆ. " ನಿಮ್ಮ ಮಗ ನಿಮ್ಮ ಪಾಲಿಗೆ ಇಲ್ಲ" ಎಂಬ ಉತ್ತರವನ್ನು ಅವರಿಗೆ ಕಾಗದಲ್ಲಿ ತಿಳಿದ ರಾತ್ರೋರಾತ್ರಿ ಮನೆ ಬಿಟ್ಟು ಸಮಸ್ಯೆಯನ್ನು ಎದುರಿಸದೆ ಪಲಾಯನ ಮಾಡಿದನು. ಇಲ್ಲಿ ಸಂಸ್ಕೃತಿಯ ಹೊಂದಾಣಿಕೆಯ ನ್ಯೂನ್ಯತೆ ಎದ್ದು ಕಾಣುತ್ತದೆ.

ಒಟ್ಟಾರೆಯಾಗಿ ಮಹಾದೇವ ಅವರ ಬರವಣಿಗೆಯ ಮೊದಲಲ್ಲಿ ಅಂದರೆ, " ದತ್ತ", " ಒಂದು ದಹನದ ಕತೆ, ಗ್ರಸ್ತರು ಕತೆಗಳಲ್ಲಿ ನವ್ಯ ಸಾಹಿತ್ಯದ ಪ್ರಭಾವವಿರುವುದು ತಿಳಿದುಬರುತ್ತದೆ.

" ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ" ಕತೆಯಲ್ಲಿ ದಲಿತರ ಹಸಿವಿನ ಬರ್ಬರತೆ ರಂಗಪ್ಪನ ಮೂಲಕ ಕಟ್ಟಿಕೊಡುವ ಈ ಕಥೆ ತುಂಬಾ ಕಲಾತ್ಮಕವಾದುದು. ಇಲ್ಲಿ ಯಾವುದೇ ಕೊಲೆ ನಡೆಯುವುದಿಲ್ಲ. ಬದಲಿಗೆ ರಂಗಪ್ಪನ ದಿನನಿತ್ಯದ ಹಸಿವು ಶೋಷಣೆಯ ಬದುಕು ಕೊಲೆ ಮಾಡುತ್ತಾ ಹೋಗುತ್ತದೆ. ರಂಗಪ್ಪನ ಸ್ವಂತ ಆಸ್ತಿ ಊರಿನಾಚೆಗೆ ಇರುವ ಒಂದು ಜೋಪಡಿ, ಹೆಂಡತಿ ಪಾರೋತಿ, ಮಗ ರಾಜ ಇಷ್ಟೆ ಆತನ ಆಸ್ತಿ. ಗೌಡರು ಕಣ್ಣು ಬಿಟ್ಟರೆ ತನ್ನ ಹೊಟ್ಟೆಯೊಳಗೆ ಜೀವ ಆಡುತ್ತೆ ಅನ್ನುತ್ತಾನೆ ರಂಗಪ್ಪ. ರಂಗಪ್ಪ ಹುಟ್ಟಿದಾಗಿನಿಂದ ಗೌಡರ ಹಟ್ಟಿಯಲ್ಲಿ ದಿಕ್ಕುದೆಸೆ ಗೊತ್ತಿಲ್ಲದ ಅನಾಥನಾಗಿ ಹೊಲ-ಮನೆಯಲ್ಲಿ ದುಡಿಯುತ್ತಾ ಬಂದಿದ್ದಾನೆ. ರಂಗಪ್ಪನ ರಟ್ಟೆ ಶಕ್ತಿಯ ಮೇಲೆ ಅವನ ಬದುಕಿನ ಜೋಪಡಿ, ಹೆಂಡತಿ,

ಮಗ ನಿಂತಿರುವುದು. ಅಷ್ಟೇ ಅಲ್ಲದೇ ಗೌಡರ ಹಟ್ಟಿ ಕಂಬ ನಿಂತಿರುವುದು ಸಹ ರಂಗಪ್ಪನಿಂದಲೇ ಎಂಬುದು ಊರಿನ ಜನ ಹಾಗೂ ಗೌಡರಿಗೂ ಗೊತ್ತಿರುವ ವಿಷಯ. ರಂಗಪ್ಪನ ಹೆಂಡತಿ, ಮಗನ ಹರಿದ ಚಡ್ಡಿಗೆ ಸೂಜಿ ಚುಚ್ಚುತ್ತಾ ಅದನ್ನು ಹೊಲೆಯುವುದರ ಸಂಕೇತದಲ್ಲಿ ರಂಗಪ್ಪನ ಬದುಕಿನ ನೋವು-ಅವನ ಸ್ಥಿತಿಗತಿಯನ್ನು ಕತೆಗಾರ ಪರೋಕ್ಷವಾಗಿ ದಲಿತರ ಬದುಕನ್ನು ಇದರಲ್ಲಿ ಕಟ್ಟಿಕೊಡುತ್ತಾರೆ.

ಮೂರುದಿನದಿಂದ ಹೊಟ್ಟೆಗೆ ಹಿಟ್ಟಿಲ್ಲದ ರಂಗಪ್ಪ ತನ್ನ ಜೇಬನ್ನು ಅತ್ತಗೂ ಇತ್ತಗೂ ತಡಕಾಡುವ ಆತನ ಬದುಕಿಗೆ ಸೇದುವ ಬೀಡಿಯೊಂದೇ ಮುಂದಿನ ಮಾರ್ಗ ತೋರುವ ಸ್ನೇಹಿತನಂತಿದೆ. ರಂಗಪ್ಪ ತನ್ನ ಗುಡಿಸಲಿನಿಂದ ಗೌಡರ ಹತ್ತಿರ ಅನ್ನ ತರಲು ಹೊರಟಾಗಿನಿಂದ ಗೌಡರ ಹಟ್ಟಿ ಮುಟ್ಟುವ ವರೆಗಿನ ಇತರ ಜಾತಿ ಜನಗಳ ಬದುಕು ಪ್ರಗತಿಯಾಗುತ್ತಿರುವುದು ಆತನ ಕಣ್ಣಿಗೆ ಕಟ್ಟುತ್ತದೆ. ಏನೂ ಕೆಲಸವಿಲ್ಲದೆ ಮುನ್ನೂರು ರೂಪಾಯಿ ಸಂಬಳ ತೆಗೆದುಕೊಳ್ಳುವ ನರಸಮ್ಮ, ನೆನ್ನೆ ಮೊನ್ನೆ ಊರಿಗೆ ಬಂದ ಶಾಸ್ತ್ರಿ ಮೇಷ್ಟ್ರು ಮನೆ, ಬಾವಿ ತೋಟ ಅಂತ ಬೆಳೆದಿದ್ದಾನೆ. ಹಾಗೆ ತಮ್ಮ ಜಾತಿಯ ಮೇಷ್ಟ್ರು ಮಡಿ, ಮೈಲಿಗೆ ಅನ್ನದೆ ಶಾಸ್ತ್ರಿ ಮನೆ ಲೋಟದಲ್ಲಿ ಕಾಫಿ ಕುಡಿಯುತ್ತಾ ಅವರ ಪಡಸಾಲೆಯ ಮೇಲೆ ಕುಳಿತಿದ್ದಾನೆ. ಹೀಗೆ ಎಲ್ಲರೂ ಊರಲ್ಲಿ ಸಮೃದ್ಧವಾಗಿ ಬೆಳೆದಿದ್ದಾರೆ. ಕಾರಣ ಶಿಕ್ಷಣ ಅವರಲ್ಲಿ ಇಂತಹ ಮಾರ್ಪಾಡು ತಂದಿದೆ. ಕೆಳಜಾತಿಯ ಜನರಲ್ಲಿ ಶಿಕ್ಷಣದಿಂದ ಮುಂದೆ ಸಾಗಿದರೆ ಮಾತ್ರ ಅವರು ಸಮಾಜದಲ್ಲಿ ಸಮಾನತೆ, ಅಂತಸ್ತು, ಗೌರವ, ಪ್ರಾಣಿ ಸಮುದಾಯದ ಜೀವನದಿಂದ ನಾಗರೀಕ ಸುಸಂಸ್ಕೃತ ಬದುಕಿನಲ್ಲಿ ಬದುಕಲು ಸಾಧ್ಯ ಎಂದು ಲೇಖಕರು ಇಲ್ಲಿ ಪರೋಕ್ಷವಾಗಿ ತಿಳಿಸಿದ್ದಾರೆ.

ರಂಗಪ್ಪನಿಗೆ ನಾಲ್ಕು ಸೇರು ಜೋಳ ಕೊಟ್ಟು ಗೌಡರ ಹೆಂಡತಿ ಮುಖ ತಿರುಗಿಸಿಕೊಂಡು ಒಳಗೆ ಹೋದ ಮೇಲೆ " ಗೌಡರು ಕಂಡೀಷನ್ ಆಗಿ ಇನ್ನು ಫಸಲು ಬರಗಂಟ ಕೇಳಬೇಡ ಇವ್ನೆ" ಎಂದು ಹೇಳುವುದು ಊಳಿಗಮಾನ್ಯ ವ್ಯವಸ್ಥೆಯ ಶೋಷಣೆಗೆ ಸಾಕ್ಷಿಯಾಗಿದೆ. ರಂಗಪ್ಪನ ನಿಯತ್ತಿನ ದುಡಿಮೆಗೆ ಗೌಡರು ತೋರುವ ಪ್ರತಿಫಲ ಇಷ್ಟೆಯೇ ಜಾತಿಯಿಲ್ಲದ ಜಾತಿಯವಳಿಗೆ ವಾಸ ಮಾಡಲು ಮನೆಕೊಟ್ಟು ಆಕೆಯ ವರ್ಗಾವಣೆಗಾಗಿ ಓಡಾಡುವರು, ತಮ್ಮ ಮನೆಯಲ್ಲಿ ಅವಳಿಗೆ ವಾಸ್ತವ್ಯದ ವ್ಯವಸ್ಥೆ. ಆದರೆ ತನ್ನ ಮನೆಯಲ್ಲಿಯೇ ರಂಗಪ್ಪ ರಾತ್ರಿ-ಹಗಲು ಎನ್ನದೆ ದುಡಿದು ಧೂಳಾಗುತ್ತಿದ್ದು, ಅವನಿಗೆ ಅನ್ನ ಬಟ್ಟೆ, ಮನೆ ಇಲ್ಲದೆ ಸಾಯುತ್ತಿದ್ದರೆ ಗೌಡರಿಗೆ ಏನೂ ಅನ್ನಿಸುವುದಿಲ್ಲ. ಇದೇ ರಂಗಪ್ಪನ ಬದುಕಿನ ವೈರುಧ್ಯ.

ರಂಗಪ್ಪನ ಮಗ ರಾಜ ಶಾಲೆಗೆ ಹೋಗುವ ಹುಡುಗ. ಆತನಲ್ಲಿ ವಿದ್ಯೆಯಿಂದ ಪ್ರಜ್ಞೆ ಬೆಳೆಯುತ್ತಾ ಸ್ವಾಭಿಮಾನಕ್ಕೆ ಎಡೆ ಮಾಡಿಕೊಡುತ್ತದೆ. ಆದ್ದರಿಂದಲೇ ರಾಜನಿಗೆ ತಾನು ತೊಟ್ಟು ಕೊಳ್ಳುವ ಚಡ್ಡಿ ಮುಖ್ಯವಾಗುತ್ತದೆ. ತಾಯಿಯು ಹತ್ತಿರ ಚಡ್ಡಿಗಾಗಿ ಚಂಡಿ ಹಿಡಿಯುತ್ತಾನೆ. ಹಾಗೆಯೇ ಆತನ ಪ್ರಜ್ಞೆಯೂ ಪರಿಸರದಲ್ಲಿ ವ್ಯತ್ಯಾಸವಾಗುತ್ತಿರುವುದನ್ನು ಗಮನಿಸುತ್ತಾನೆ. ಕನಸಿನಿಂದ ಕನವರಿಸಿಕೊಂಡ ರಾಜ ತನ್ನ ತಾಯಿಗೆ ಕೇಳುವ ವಿವರದಲ್ಲಿಯೇ ಅದು ವ್ಯಕ್ತವಾಗುತ್ತದೆ. " ನೋಡವ್ವ, ನೋಡವ್ವ, ಪಟೇಲ ಶಂಭಪ್ಪ ಅವ್ನಲ್ಲ, ಅವ ನನ್ನನ್ನು ರಾಜ ಅನ್ನಕ್ಕಿಲ್ವಂತೆ " ಅಂದ ಪಾರೋತಿ ಯಾಕಂತೇ ? ಅಂತಂತಲೆ ರಾಜ ಶಂಭಪ್ಪ ಇಸ್ಕೂಲು ಬುಡ್ತಲೆ ಅಂದ " ನೀವು ವಲಾರ್‍ರು ಕಲಾ ಅದ್ನ ನಿನ್ನ ರಾಜನಾನ್ನಕ್ಕಿಲ್ಲ ಗೀಜ ಅಂತೀನಿ " ಅಂದ ಎಂದು ಅವ್ವನನ್ನು ನೋಡುತ್ತಾನೆ. ಮುಖ್ಯವಾಗಿ ರಾಜನಿಗೆ ವಿದ್ಯೆಯ ಸ್ವಾಭಿಮಾನ ಆತನಿಗೆ ಈ ಪ್ರಜ್ಞೆ ಬೆಳೆಸಿವೆ. ಬೆಳದ ಪ್ರಜ್ಞೆಯೇ ಇಲ್ಲಿ ರಾಜನ ಪ್ರತಿಭಟನೆಯ ಮನೋಧರ್ಮವಾಗಿದೆ. " ಅದೇ ನಮ್ಮ ಹೊಸ ಮೇಸ್ಟ್ರ ನೋಡಿದ್ದೀ ? ಊಂ ಅವ್ರು ನಮ್ಮ ಜಾತಿನಂತೆ.... ಅದೇ ಅವ್ರು, ಊಂ ದೊಡ್ಡ ಮೇಸ್ಟ್ರ ಹಟ್ಟೀಲಿ ಊಂ ಅವರ ಗಳಾಸ್ನಾಗೆ, ಅದೇ ಗಳಾಸ್ಗಗೆ ನೀರನ್ನು ಕುಡಿತ್ತಾರೆ" ಇವನ ಇಂತಹ ಆಲೋಚನೆ ಜಾಗೃತ ಪ್ರಜ್ಞೆಯನ್ನು ತೋಡಿಕೊಳ್ಳುತ್ತಾನೆ. ಅವನಿಗೆ ಈ ವಿಷಯ ರಾಜನ ಅವ್ವ ತನಗೆ ತಿಳಿದಿದೆ ಎಂದು ಗೊತ್ತಾದಾಗ ಮುಗ್ಧ ಮನಸ್ಸಿನ ಪ್ರತಿಭಟನೆಯು ಅವನ ಕಣ್ಣಲ್ಲಿ ನೀರನ್ನು ತರಿಸುತ್ತದೆ.

ದೇವನೂರರ " ಅಮಾಸ" ಸಾಂಸ್ಕೃತವಾಗಿ ದಲಿತರ ಬದುಕಿನ ಸಾಧ್ಯತೆಗಳನ್ನು ತಕ್ಕ ಒಡಲಲ್ಲಿ ಇಟ್ಟುಕೊಂಡಿರುವ ಕಥೆ. ಅಮಾಸ ಮತ್ತು ಕುರಿಯಯ್ಯ ದಲಿತರ ಸಾಂಸ್ಕೃತಿಕ ಪ್ರತೀಕವಾಗಿದ್ದರೆ, ಊರಿನ ಮಠ ಮತ್ತು ಮಾರಿಗುಡಿ ಅವರನ್ನು ಉಳಿಸಿ ಬೆಳೆಸಿದ ಮೇಲ್ಜಾತಿಯ ಮಠ ಮತ್ತು ಮಾರಿಗುಡಿಗಳು ಊರಿನ ಸಾಂಸ್ಕೃತಿಕ ಕೇಂದ್ರಗಳು ಮಠದ ಊಟವನ್ನು ನೆಚ್ಚಿಕೊಂಡ ಅಮಾಸ ಮತ್ತು ಕುರಿಮಯ್ಯ ಇಬ್ಬರೂ ಕಲಾಹಾಕಿ ಬದುಕಿರುವವರು. ಮಾರಿಗುಡಿಯ ಹೆಸರಿನಲ್ಲಿ ನಡೆಯುವ ಊರಿನ ಮಾರಿಹಬ್ಬ ದಲಿತರಿಗೆ ಎಲ್ಲಾ ಹಬ್ಬಗಳಿಗಿಂತ ದೊಡ್ಡ ಹಬ್ಬ. ಮಾರಿ ಕುಣಿತ, ಹುಲಿವೇಷ, ಮರಿಗಳ ಬಲಿ, ಹೆಂಡ ಬಾಡು, ದಲಿತರಿಗೆ ಹಬ್ಬದಲ್ಲಿ ಮುಖ್ಯವಾಗುತ್ತದೆ. ಇಂತಹ ಹಬ್ಬದಿಂದಲೇ ದಲಿತರ ಬದುಕು ಹಳೆಯ ನೆನಪುಗಳ ಹೊಸ ಬಯಕೆಗಳನ್ನು ಒಟ್ಟೊಟ್ಟಿಗೆ ನೆರವೇರಿಸಿಕೊಳ್ಳುವುದು. ಇದು ವರ್ಷದ ಬದುಕಿಗೆ ಸಾಂಸ್ಕೃತಿಕ ಚಲನೆಯಾಗುತ್ತದೆ. ಎಷ್ಟೇ ಕಷ್ಟವಿದ್ದರೂ ಈ ಹಬ್ಬದಲ್ಲಿ ಸಾಲ ಸೋಲವನ್ನಾದರೂ ಮಾಡಿ ಬಿದ್ದು ಹೋಗಿರುವ ತಮ್ಮ ಬದುಕುಗಳನ್ನು ಎರಡು ದಿನದ ಮಟ್ಟಿಗೆ ಎತ್ತಿ ನಿಲ್ಲಿಸಿಕೊಳ್ಳುತ್ತಾರೆ. ಮಾರಿಹಬ್ಬ ಸಡಗರ ಸಂಭ್ರಮಗಳ ಚಲನವಲನಗಳಲ್ಲಿ ಅವರ ಕ್ರಿಯಾಶೀಲತೆಯಲ್ಲಿ ಇದು ನಮ್ಮ ಗಮನ ಸೆಳೆಯುತ್ತದೆ.

ಕುರಿಯಯ್ಯ ಅಮಾಸನ ವಯಸ್ಸಿನವನಿದ್ದಾಗ ಮಾರಿಹಬ್ಬದಲ್ಲಿ ಹುಲಿವೇಷ ಹಾಕಿ ಕುಣಿದು ಘರ್ಜಿಸಿ, ಮೆರೆದು ತನ್ನ ಪ್ರತಿಭೆ ತೋರಿಸಿದ್ದ ಅದರ ಪ್ರತಿಫಲವಾಗಿ ಊರಿನ ಗೌಡರು ಹುಲಿವೇಷಕ್ಕೆ ತೆಲೆಬಾಗಿ ಇನಾಮು ಕೊಡುತ್ತಾರೆ. ಗೌಡರು ಕೊಡುವ ಇನಾಮು ಅಂಗಿ ಬಟ್ಟೆ ಮಾತ್ರ. ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ ಗೌಡರು ಕುರಿಯಯ್ಯನನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸಲಿಲ್ಲ, ಹಣ ಕೊಡಲಿಲ್ಲ ಬದಲಾಗಿ "ನೀ ಇರೊಷ್ಟು ಕಾಲ ನಮ್ಮ ಹಟ್ಟೀಲೇ ಇರು ನೀನು ಉಂಡ ಊಟ. ಹಾಕಿಕೊಂಡ ಬಟ್ಟೆ ಒಂದಿಷ್ಟು ಕುರಿ ನೋಡ್ಕೊ ಅಷ್ಟೇನೆ " ಎಂದು ಬಹುಮಾನ ನೀಡುತ್ತಾರೆ. ಈತನ ಪ್ರತಿಭೆ ಶೋಷಣೆಗೊಳಗಾಗುತ್ತದೆ. ಕುರಿಯಯ್ಯ ಗೌಡರ ಸ್ವತ್ತಾಗುತ್ತಾನೆ. ಮುಂದಿನ ದಿನಗಳಲ್ಲಿ ಕುರಿಯಯ್ಯ ಹುಲಿಯಾಗಿ ಮಾಡಬಹುದಾದ ಪ್ರತಿಭಟಿಸಬಹುದಾದ ಪ್ರಜ್ಞೆಯನ್ನು ಗೌಡರು ಕಿತ್ತುಕೊಂಡಿರುವುದು ಅವರ ಸಂಚಿನ ಫಲವಾಗಿದೆ. ಈ ಹಿನ್ನೆಲೆಯಲ್ಲಿ ಕುರಿಯಯ್ಯ ಸ್ಥಿರತೆಯ ಸಂಕೇತವಾಗಿ ಕಂಡು ಬರುತ್ತಾನೆ. ಕುರಿಯಯ್ಯನ ಗರಡಿಯಲ್ಲಿ ಬೆಳೆದ ಹೊಸ ಪೀಳಿಗೆಯ ಅಮಾಸ ಊರಿನ ಮಾರಿಹಬ್ಬದಲ್ಲಿ ಹುಲಿವೇಷ ಹಾಕಿ ಎಲ್ಲರಿಗಿಂತಲೂ ವೈನಾಗಿ ಕುಣಿದು, ಘರ್ಜಿಸಿ, ಬಂಗಾಂರಿಯಂಥ ವಳಿಗೆ ನಿದ್ದೆ ಕೆಡಿಸಿ ಆಕೆಯ ಕನಸಿನ ಕಂದಮ್ಮನ ರಾಜನಾಗುತ್ತಾನೆ. ಈ ಕಡೆ ಗೌಡರ ಮುಖ ಚರ್ಚೆಯಲ್ಲಿ ಅಮಾಸನ ಹುಲಿವೇಷವನ್ನು ನೋಡಿ ಗಂಭೀರವಾದ ಬದಲಾವಣೆ ಕಂಡು ಬರುತ್ತದೆ. ಅದನ್ನು ಕತೆಗಾರ ಗೌಡರು ಬೀಡಿಯ ಹೊಗೆ ನುಂಗುತ್ತಾ ಹಟ್ಟಿಯ ಜೀತಗಾರನ ಕಡೆ ತಿರುಗಿ ಮಾತನಾಡುವಾಗ ಸೂಚಿಸಿರುತ್ತಾರೆ. ನಂತರ ಗೌಡರು ಜೀತಗಾರನೊಂದಿಗೆ ಮಾತನಾಡಲು ತೊಡಗುತ್ತಾರೆ.

" ಅದೇ ಆ ಮರಿ ಹುಲಿ ಮಾಡಿತ್ತಲ್ಲ, ಆ ಹೈದ ಯಾರ ಎಂದರು." ಜೀತಗಾರ ಅದೇ ಅಳು ಕುರಿಯಯ್ಯನ ಜೊತೇಲಿ ಒಂದು ತಾಯಿ ತಂದೆ ಇಲ್ಲ ತಬ್ಬಲಿ ಹೈದ ಇತ್ತಲ್ಲ ಬುದ್ಧಿ ಅದೇನೆ" ಗೌಡರು ಕೇಳಿದವರೇ ಆಶ್ಚರ್ಯಗೊಂಡರು. " ಎಲ್ಲಾ ಅವ್ನ ಆಗ್ಲೆ ಅಷ್ಟು ಬೆಳೆದುಬಿಟ್ಟವ್ನ " ಅಂದರು ಗೌಡರು ಕಣ್ಣುಗಳ ಮುಂದಕ್ಕೆ ಅಮಾಸ ಹುಲಿವೇಷ ಹಾಕಿ ಬಗೆ ಬಗೆಯಾಗಿ ಕುಣಿಯುತ್ತಾ ಬಂದಾಗ ಗೌಡರು ಆತನನ್ನು ಇನಾಮು ಕೊಟ್ಟು ಕೊಂಡು ಕೊಳ್ಳಲಿಲ್ಲ ಎಂಬುದನ್ನು ಗಮನಿಸಬೇಕು. ದಿಕ್ಕುದೆಸಿಯಿಲ್ಲದ ಅಮಾಸನನ್ನು ಜೀತದಾಳಾಗಿ ಮಾಡಿಕೊಳ್ಳುವ ಅವಕಾಶ ಗೌಡರಿಗಿತ್ತು. ಮಾರಿ ಹಬ್ಬದ ಬಲಿಕೋಣನಂತೆ ಅಮಾಸ ಗುರಿಯಾಗುತ್ತಾನೆ. ಆದ್ದರಿಂದ " ಅಮಾಸ" ಈ ಕತೆಯ ಚಲನ ಶೀಲ ಸಾಂಸ್ಕೃತಿಕ ಸಂಕೇತವಾಗಿ ಕಂಡು ಬರುತ್ತಾನೆ.

" ಡಾಂಬರು ಬಂದುದು'' ಕತೆಯಲ್ಲಿ ಸಾಂಪ್ರದಾಯಕ ಸಂಸ್ಕೃತಿ ಹಾಗೂ ನಾಗರೀಕ ಸಂಸ್ಕೃತಿಗಳ ಹೊಂದಾಣಿಕೆಯಿಲ್ಲದ ಪ್ರಸಂಗದಲ್ಲಿ ವರ್ಗ-ವರ್ಣಗಳ ಸಾಂಸ್ಕೃತಿಕ ಸಂಘರ್ಷ ಈ ಕತೆಯಲ್ಲಿದೆ. ಇಲ್ಲಿ ಜಾತಿ, ಭೇದವಿಲ್ಲದ ನಾಗರೀಕ ಸಂಸ್ಕೃತಿಯು ಬೆರೆತುಕೊಂಡಿದೆ. ಲಕುಮ, ರಾಜಪ್ಪ, ಮಾದು, ಶಂಭು ಈ ನಾಲ್ಕು ಜನ ಸ್ನೇಹಿತರಲ್ಲಿ ಲಕುಮ ಹೊಲೆಯರ ಹುಡುಗ ಇಲ್ಲಿ ಮೇಲು ಕೀಳು ಎಂಬ ಭಾವನೆ ಇಲ್ಲದೆ ನಾಲ್ವರಲ್ಲಿಯೂ ಸಮಾನತೆ ಇದೆ. ಇದು ಆ ಊರಿನ ಹಿರಿಯ ಸಾಂಪ್ರದಾಯರಿಗೆ ಅತಿಯಾದ ಬೇಸರಿಕೆ ತಂದಿದೆ. ಅದು ಎಷ್ಟರ ಮಟ್ಟಿಗೆ ಎಂದರೆ " ಆ ಹೈಕಳು ಯಾವುದಾದರೂ ಹೆಣ್ಣ ಕೆಣಕಿ ಸಿಕ್ಕರೆ ಭಾವಡಿಗೆ ಎಳಸಿ ಬರಿ ನಿಕ್ಕರು ಮಾಡಿ ಕಂಬಕ್ಕೆ ಕಟ್ಟಿಸಿ,ಸೆಬ್ಬದಲ್ಲಿ ಸಮಾ ಬಡಿಯುವಂಥ ಟೇಮಿಗೆ ಕಾದಿದ್ದಾರೆ. ಡಾಂಬರು ಬಂದುದು ಕಥೆ ಹಳ್ಳಿಗಳಿಗೆ ನಾಗರೀಕತೆ ಕಾಲಿಟ್ಟಾಗ ಆಗುವ ಗಲಿಬಿಲಿಯನ್ನು ಯಥಾವತ್ತಾಗಿ ಚಿತ್ರಿಸುವ ಕತೆ ಈ ಕತೆಯನ್ನೋದಿದಾಗ ತೇಜಸ್ವಿಯವರ " ಅಬಚೂರಿನ ಪೋಸ್ಟುಫೀಸು ಮತ್ತು ತುಕ್ಕೋಜಿ'' ನೆನಪಿಗೆ ಬರುತ್ತವೆ. ಸಾಮಾಜಿಕವಾಗಿ ಹಿಂದುಳಿದವರನ್ನು ಹಾಗೇ ಇಡಬೇಕೆಂಬ,ಸಾಮಾಜಿಕವಾಗಿ ಮುಂದುವರಿದವರ ಇಚ್ಛೆ ಕಥೆಯ ಪ್ರಾರಂಭದಲ್ಲಿ ಕಂಡೂ ಕಾಣದಂತೆ ಬಂದಿದೆ (7. ಪುಟ 355 "ದಲಿತಮಾರ್ಗ" ಅರವಿಂದ ಮಾಲಗತ್ತಿ)

ಡಾಂಬರು ಒಂದುದು ಕತೆಯೂ ಸಂಕೀರ್ಣವಾಗುವುದು ಇಂಥದೇ ಕಾರಣಗಳಿಂದ ಹಳ್ಳಿಯನ್ನು ಪ್ರವೇಶಿಸುವ ಹೊಸ ಮೌಲ್ಯಗಳು ನಿಶ್ಚಲ ಸ್ಥಿತಿಯನ್ನು ಕಲಕುತ್ತವೆ. ಆದರೆ ಇಲ್ಲಿ ಡಾಂಬರು ಕೇವಲ ಕ್ರೌರ್ಯವನ್ನು ಧ್ವನಿಸದೆ ಲಕುಮಿ, ರಾಜ, ಮಾದು, ಶಂಭು ಇದರ ಹೊಸ ಮನೋಧರ್ಮವನ್ನು ಸಾಂಕೇತಿಸುವುದರಿಂದ ಹೆಚ್ಚು ಸಂಕೀರ್ಣವಾಗುತ್ತದೆ. ಊರ ನ್ಯಾಯದಲ್ಲಿ ಹಳತು-ಹೊಸತುಗಳ ಮೌಲ್ಯ ಕತೆಯೆಂದು ಸರಳವಾಗಿ ವರ್ಗೀಕರಿಸಲು ಸಾಧ್ಯವಿಲ್ಲ. ಪೂರ್ಣಚಂದ್ರ ತೇಜಸ್ವಿಯವರ " ಅಬಚೂರಿನ ಪೋಸ್ಟಾಫೀಸು'' ಕತೆಯನ್ನು ಈ ಸಂದರ್ಭದಲ್ಲಿ ನೆನೆಯಬಹುದು. ಹಳ್ಳಿಗೆ ಡಾಂಬರು ಬಂದದ್ದು ಅಲ್ಲಿನ ರಾಜಕೀಯ ಚಟುವಟಿಕೆಗಳಲ್ಲಿ ಒಂದು ತಿರುವು ಕೊಟ್ಟಂತೆ ದೈನಂದಿನ ಜೀವನದ ಮೇಲೆ ಬೀರಿದ ಪ್ರಭಾವವನ್ನು ಮಹಾದೇವ ಮರೆಯುವುದಿಲ್ಲ ಅವರು ಪರೀಕ್ಷಿಸಿರುವ ಸಣ್ಣ ಸಣ್ಣ ವಿವರಗಳಿಂದಲೇ ಕತೆಗೆ ಪೂರ್ಣತ್ವ ಬಂದಿದೆ ಎನಿಸುತ್ತದೆ.

ಗೌಡರಿಗೆ ತಮ್ಮ ಮರ್ಯಾದೆ ಉಳಿಸಿಕೊಳ್ಳುವ ಪ್ರಸಂಗ ಊರಿಗೆ ರೋಡ್ ಮಾಡುವ ಪ್ರಸಂಗ, ಗೌಡರ ಪ್ರತಿಷ್ಠೆ ರೋಡು ಮಾಡಲು ಆರ್ಡರ್ ಮಾಡಿಸಿದವರು ಇವರಾಗಿದ್ದು, ಅದರ ಕಂಟ್ರಾಕ್ಟ್ ಜವಾಬ್ದಾರಿಯು ಇವರದ್ದೇ ಆಗಿದ್ದರಿಂದ ಇವರ ವಾದ ರೋಡಿನಿಂದ ಉಳಿದ ಹಣದಿಂದ ದೇವಸ್ಥಾನವನ್ನು ಊರ್ಜಿತಗೊಳಿಸುವುದೆಂದು ತೀರ್ಮಾನಿಸಿಕೊಂಡಿದ್ದು, ಇದು ಎಲ್ಲಾ ಹಿರಿಯರು ಒಪ್ಪಿಕೊಂಡಿದ್ದರು. ಜೊತೆಗೆ ಇದನ್ನು ತರ್ಕಿಸುವ ಧೈರ್ಯ ಅದರ ಚಿಂತನೆ, ವಿಮರ್ಶೆ, ಯಾರಿಗೂ ಬೇಕಾಗಿರಲಿಲ್ಲ. ಗೌಡರನ್ನು ಎದುರಾಕಿಕೊಂಡು ಬದುಕುವ ಧೈರ್ಯ ಯಾರಿಗೂ ಇಲ್ಲದೆ ಎಲ್ಲರು ಸುಮ್ಮನಿದ್ದು, ತಮ್ಮ ಕಾರ್ಯಗಳಲ್ಲಿ ನಿರತರಾಗಿದ್ದರು. ಆದರೆ ಎಸ್.ಎಸ್.ಎಲ್.ಸಿ. ವರೆವಿಗೂ ಓದು ಮುಗಿಸಿದ್ದ ಪಟ್ಟಣದ ಅರಿವಿದ್ದ ನಾಗರೀಕ ಸೋಗಿಗೆ ಬೆರಗಾಗಿದ್ದ ನಾಗರೀಕ ಯುವಕರ ವಾದ ಗೌಡರಿಗೆ ಪ್ರತಿಸ್ಪರ್ಧಿಯಾಗಿತ್ತು. ಅದಕ್ಕೆ ಇವರು ಪತ್ರಿಕೆಯೊಂದರಲ್ಲಿ ಗೌಡರ ಕೆಲಸದ ವಿರುದ್ಧ ಪ್ರತಿಭಟನೆಯ ಪತ್ರ ಮುದ್ರಿಸಿದರು.

" ಸ್ವಾಮಿ ನಮ್ಮೂರಿಗೆ ರೋಡು ಆಗಬೇಕೆಂದು ದೊಡ್ಡ ಮನಸ್ಸು ಮಾಡಿ ಸರ್ಕಾರ ನೆಡೆಸಿಕೊಡುತ್ತಿರುವುದೂ ಈಗ ರೋಡು ಆಗುತ್ತಿರುವುದು ಸರಿಯಷ್ಟೆ. ಆದರೆ ಈ ರೋಡಿನ ಕಂಟ್ರಾಕ್ಟರಾದ ಪಟೇಲರು ಸರ್ಕಾರಿ ದುಡ್ಡಲ್ಲಿ ಮುಗಿಸಿ ದೇವಸ್ಥಾನ ಊರ್ಜಿತಗೊಳಿಸುತ್ತಾರೆಂದು ತಿಳಿದುಬಂದಿದೆ. ಏನೆ ಆಗಲಿ ಇದು ಸರ್ಕಾರಿ ಹಣದ ದುರುಪಯೋಗ ಇಂತಹುದು ಆಗದಂತೆ ತಡೆಗಟ್ಟಬೇಕೆಂದು ನಾವು ಸಂಬಂಧಪಟ್ಟವರಲ್ಲಿ ಪ್ರಾರ್ಥಿಸುತ್ತೇವೆ. ನೊಂದವರು'' ಎಂಬ ಹೇಳಿಕೆ

ಪತ್ರಿಕೆಯಲ್ಲಿದ್ದುದರಿಂದ ಗೌಡರಿಗೆ ಇದು ಸಹಿಸಲಾಗದ ತುತ್ತಾಗಿತ್ತು. ಛಾವಡಿ ಏರ್ಪಡಿಸಿ ನ್ಯಾಯಕ್ಕೆ ಎಲ್ಲರೂ ಬರುವಂತೆ ಹೇಳಿ ಅಲ್ಲಿ ಯಾವ ತೀರ್ಮಾನವೂ ಆಗದೆ ರಸ್ತೆಗಾಗಿ ಬಂದ ಟಾರು, ಮನೆ - ಮನೆ ತೂತು ಬಿದ್ದ ಪಾತ್ರೆಗಳ ಮಾನ ಮುಚ್ಚಿದೆ. ಐಕಳ ಮುಖಿ-ಮೂತಿ ಬಟ್ಟೆಯಲ್ಲಾ ಟಾರು ಮಾಡಿಕೊಂಡು ಹೆಂಗಸರು ಮಕ್ಕಳು ಎಲ್ಲಾ ಸೇರಿ ಟಾರು ; ರೋಡಿನ ಕೆಲಸ ಬಂಡೆ ಗಾತ್ರದ ಯಂತ್ರಗಳು ಕೆಲಸದವರ ಹೋರಾಟ, ಗೌಡರ ತರಾತುರಿ ಎಲ್ಲವೂ ಎಂದಿಲ್ಲದಂತೆ ರಸ್ತೆ ಕಾಮಗಾರಿಯಿಂದ ನಡೆಯುತ್ತಿದ್ದವು. ಹೊಂದಾಣಿಕೆಯ ಮನೋಭಾವವಿಲ್ಲದೆ ರಸ್ತೆಗಾಗಿ ಬಂದ ಟಾರು ಊರ ಹೊರಗಿನ ಗುಂಡಿಯಲ್ಲಿ ಚೆಲ್ಲಾಡಿ ಹಲವಾರು ದುರಂತಕ್ಕೆ ಅದು ಕಾರಣವಾಗಿದೆ.

ದೇವನೂರು ಮಹಾದೇವರು ವಿನೋದ ಮತ್ತು ವಿಷಾದ ಎರಡನ್ನು ಹಿಡಿಯಬಲ್ಲರಾದ್ದರಿಂದ ಅವರ ಕತೆಗಳ ಸಾಧ್ಯತೆಗಳೂ ದ್ವಿಗುಣಗೊಳ್ಳುತ್ತದೆ. ಇದು ಸಮಸ್ಯೆ ಎಲ್ಲಾ ಮುಖಗಳನ್ನೂ ಪರಿಚಯಿಸುವಂತೆ, ಎಲ್ಲಾ ಬಗೆಯ ಓದುಗರನ್ನೂ ತನ್ನ ಪ್ರಭಾವ ವಲಯದಲ್ಲಿ ಸಿಲುಕಿಕೊಳ್ಳುತ್ತದೆ. ಮಹಾದೇವ ಒಡಲಾಳ ಕಾದಂಬರಿ ಈ ದೃಷ್ಟಿಯಿಂದ ಅವರ ಅತ್ಯುತ್ತಮ ಕೃತಿಯಾಗಿದೆ. ಕನ್ನಡದ ಉತ್ತಮ ಕಾದಂಬರಿಗಳಲ್ಲಿ ಇದು ಕೂಡ ಒಂದು ಎಂದೂ ಧಾರಾಳವಾಗಿ ಹೇಳಬಹುದು. ಎಲ್ಲಾ ಪಾತ್ರಗಳಲ್ಲಿ ತನ್ನದೇ ಆದ ಗುಣಾತ್ಮಕಗಳಿರುವುದು ಇವರ ಇನ್ನೊಂದು ವೈಶಿಷ್ಟ್ಯ. ಇಲ್ಲಿನ ಬಡತನ, ಮಾನವೀಯ ಸುಸಂಸ್ಕೃತ ಸಂಬಂಧ ಗಳು, ಆಸೆ-ಆಕಾಂಕ್ಷೆಗಳು, ಕೌಟುಂಬಿಕ ಕಲಹಗಳು, ಒಂದು ಪುಟ್ಟ ವಿಶ್ವವನ್ನೇ ತಮ್ಮ ಕಣ್ಣೆದುರಿಗೆ ಇಡುವಂತೆ ಮಾಡುತ್ತದೆ. ಇದೊಂದು ವೈನೋದಿಕ ಪ್ರಪಂಚವೆಂದು ಮೇಲು ನೋಟಕ್ಕೆ ಕಂಡರೂ, ವಿನೋದದ ಹಿಂದಿರುವ ವಿಷಾದ ಕತೆಗೆ ಮತ್ತೊಂದು ಆಯಾಮವನ್ನು ನೀಡುತ್ತದೆ. ದಲಿತರ ಬವಣೆಯನ್ನು ಇನ್ನೊಂದು ರೀತಿಯಲ್ಲಿ ಕಟ್ಟಿಕೊಡುತ್ತದೆ. ದಲಿತ ಸಂಸ್ಕೃತಿ, ಅವರ ಜೀವನ ಕ್ರಮ, ಆಚಾರ-ವಿಚಾರ, ಸಂಪ್ರದಾಯಗಳು, ಅವರ ನಡತೆ, ಅವಕಾಶತನ, ಆಶಾವಾದಿತನ, ಕನಸುಗಳ ಮಧ್ಯೆ ದಲಿತರ ಬದುಕಿನ ಪುಟ್ಟ ವಿಶ್ವಕೋಶವನ್ನು ತೆರೆದಿಡುತ್ತದೆ.

ದೇವನೂರರ ಬರವಣಿಗೆಯಲ್ಲಿ ದಲಿತ ಜನಾಂಗವೊಂದರ ಸುತ್ತ ಹೆಣೆದು ಕೊಂಡಿರುವುದರಿಂದ ಸಹಜವಾಗಿಯೇ ಇಲ್ಲಿ ಶೋಷಿತ ಮತ್ತು ಶೋಷಕ ಎಂಬ ಎರಡು ಸ್ಪಷ್ಟ ವರ್ಗಗಳನ್ನು ಕಾಣಬಹುದಾಗಿದೆ. ಸ್ಥಿರೀಕೃತವಾದ ಸಮಾಜವೊಂದರ ವರ್ಗ, ಪರಿಕಲ್ಪನೆಗಳಿಗಿಂತ ತೀರ ಭಿನ್ನವಾದ ಸಮಾಜದ ಸಂರಚನೆ ಇಂತಹ ಪರಿಸರಗಳಲ್ಲಿ ಕಂಡು ಬರುವುದರಿಂದ ಬಹಳ ಸೂಕ್ಷ್ಮವಾದ ಎಳೆಗಳ ಮೂಲಕವೇ ಅದನ್ನು ಅರ್ಥೈಸಬೇಕಾಗುತ್ತದೆ.

ಸಾಹಿತ್ಯ ಮಾಧ್ಯಮವೊಂದರ ಮೂಲಕ ತನ್ನ ಸಮಕಾಲೀನ ಸಮಾಜದ ಆಶೋತ್ತರಗಳಿಗೆ ಸ್ಪಂದಿಸಿ, ಪ್ರತಿಕ್ರಿಯಿಸ ಬೇಕಾದ ಸೃಜನಶೀಲ ಸಾಹಿತಿಗೆ " ಕಲೆಗಾಗಿ ಕಲೆ" ಎಂಬ ಗೀಳಿಗಿಂತ ಮಿಗಿಲಾಗಿ ತನ್ನ ಹಾಗೂ ತನ್ನ ಮೂಲಕ ಇಡೀ ಸಮಾಜವೊಂದನ್ನು ಪ್ರತಿನಿಧಿಸುವಂತಹ ಬದ್ಧತೆ ಕೂಡ ಇದ್ದಂತಹ ಲೇಖಕನ ಬರಹ ಸಹಜವಾಗಿಯೇ ಚಳುವಳಿಗಾರ ಘೋಷಣೆಯಂತೆಯೇ ಹಸಿ-ಬಿಸಿ ಆಲಾಪಗಳ ಗಂಟಲು ಹರಿತದ ಕೂಗಿನಂತೆಯೇ ಆಗಿಬಿಟ್ಟು ಸಾಹಿತ್ಯದ ಕಲಾತ್ಮಕತೆ ಎಂಬ ಆದರ್ಶವನ್ನು ಬಲಿಗೊಟ್ಟು ಕ್ರಾಂತಿಕಾರನೊಬ್ಬನ ಹೋರಾಟದ ಕೂಗುಗಳು ಕರಪತ್ರವಾಗಿ ಬಿಡುವ ಅಪಾಯವೇ ಹೆಚ್ಚು ಕಲೆ ಹಾಗೂ ಸಮಾಜ -ಸಂಸ್ಕೃತಿಯ ಕಳಕಳಿಗಳು ದೀಕ್ಷೆ ಕೊಟ್ಟ ಬರಹಗಾರನ ಜವಾಬ್ದಾರಿಯಾಗುತ್ತದೆ.

ದೇವನೂರು "ಒಡಲಾಳ" ದಲಿತರ ಬವಣೆಯನ್ನು ಇನ್ನೊಂದು ರೀತಿಯಲ್ಲಿ ಕಟ್ಟಿಕೊಡುತ್ತದೆ. ವಿಷಾದ ವಿನೋದಗಳ ಮಧ್ಯ ದಲಿತರ ಬದುಕಿನ ಪುಟ್ಟ ವಿಶ್ವವನ್ನು ತೆರೆದಿಡುತ್ತದೆ. ಇಲ್ಲಿಯ ಕಥೆಯ ಕೇಂದ್ರ ವ್ಯಕ್ತಿ ಸಾಕವ್ವ. ಆಕೆಯ ಹುಂಜ ಕಳುವಾಗಿ ಹುಡುಕುವುದರೊಂದಿಗೆ ಸಾಕವ್ವನ ಬದುಕು ತೆರೆದುಕೊಳ್ಳುತ್ತದೆ. ಸಾಕವ್ವಳ ಹುಂಜ ಕೇವಲಹುಂಜವಲ್ಲ. ಅದು ಆಕೆಯ ಬದುಕಿನ ಪ್ರಶ್ನೆ ಅದನ್ನು ಕಳೆದುಕೊಂಡು ಹುಡುಕುವುದೇ ಆಕೆಯ ಗುರಿ. ಸಾಕವ್ವನ ಕೋಳಿ ಹುಂಜದ ಕಳವು

ಇಡೀ ದಲಿತರು ಕಳೆದುಕೊಂಡ ಅವರ ಬದುಕು, ಅದಕ್ಕಾಗಿಯೇ ಇಲ್ಲಿ ಅದರ ಹುಡುಕಾಟ ಮುಖ್ಯವಾಗಿದೆ. ಆದರೆ ಅದು ಸಿಕ್ಕುವುದಿಲ್ಲ ಎಂಥಹ ವೈರುದ್ಧವೆಂದರೆ, ಕಥೆಯ ಕೊನೆಯಲ್ಲಿ ಲವಲವಿಕೆಯಿಂದ ಬದುಕನ್ನು ಉಳಿಸಿಕೊಂಡು, ಓಡಾಡಿ, ಪೊಲೀಸರ ಕೈಗೆ ಸಿಗದೆ, ಆಟವಾಡುತ್ತಿದ್ದ ಮತ್ತೊಂದು ಕೋಳಿಯನ್ನು ಕಳೆದುಕೊಳ್ಳುವುದು ಸಾಕವ್ವನ ಕುಟುಂಬದ ದುರಂತ ವಾಗುತ್ತದೆ. ಹುಂಜದ ಕಳವು ಸಾಕವ್ವಳಿಗೆ ಒಂದು ಸಂಗತಿಯಲ್ಲ. ಅದೂ ದೇವರಿಗೆಂದು ಬಿಟ್ಟ ಹುಂಜವಾದ್ದರಿಂದ ಸಾಕಪ್ಪ ತನ್ನ ಜೀವನಕ್ಕೆ ಆಘಾತವಾದಂತೆ ಚಡಪಡಿಸುತ್ತಾಳೆ.

" ನನ್ನ ಕೋಳಿ ತಿಂದವರ ಮನ ಮಣ್ಣಾಗ್ಲೋ'' ಎಂದು ನಟಿಕೆ ಮುರಿದು ಶಪಿಸುವಲ್ಲಿ ಅವಳ ಅಂತರಂಗದ ನೋವು ಅಭಿವ್ಯಕ್ತವಾಗುತ್ತದೆ. ಕುಟುಂಬದ ಮಿಕ್ಕವರು ತನ್ನ ಸಂಕಟದಲ್ಲಿ ಪಾಲ್ಗೊಳ್ಳುವ ಬದಲು ನಿರ್ಲಿಪ್ತರಾಗಿರುವುದನ್ನು ಕಂಡು ಆಕೆಗೆ ಸಿಟ್ಟು. ತನ್ನ ಮಗ ಸಣ್ಣಯ್ಯನ ಮಾತೊಂದರಿಂದ ಕ್ಷುದ್ರಳಾದ ಸಾಕವ್ವ ಈ ಗುಡಿಸಿಲಿನಲ್ಲಿ ಸಮಸ್ತ ಆಸ್ತಿಗೂ ತಾನೇ ವಾರಸುದಾರಳು ಎಂಬುದನ್ನು ತಾನೂ ಹೆಂಗ್ಸಾದ್ರು ಕಚ್ಚೆ ಕಟುಗೊಂಡು ಗೇದಿರುವುದನ್ನು ಮಗನಿಗೆ ಗಟ್ಟಿ ಧ್ವನಿಯಲ್ಲಿ ಹೇಳುತ್ತಾಳೆ. ದುಡಿಯಲಾರದ ಷಂಡರು ಎಂದು ಹೀಗೆಳದು "ಕೆರ್ಗೆಬೀಳು'' ಎಂದು ಉಗಿಯುತ್ತಾಳೆ.

ಕಾಳಣ್ಣ ಕದ್ದು ತಂದ ಕಡಲೆಕಾಯಿ ಕಥೆಯ ದಿಕ್ಕನ್ನೇ ಬದಲಿಸಿ ಹೊಸ ತಿರುವನ್ನು ನೀಡುತ್ತದೆ. ಕುಟುಂಬದ ಎಲ್ಲರ ಅಸಮಾಧಾನವೂ ಈ ಗಳಿಗೆಯಲ್ಲಿ ಮರೆಯಾಗಿ ಕಡಲೆಕಾಯಿ ಗುಡ್ಡವನ್ನು ಕರಗಿಸುವುದರಲ್ಲಿ ಒಂದಾಗುತ್ತಾರೆ. ಕಳ್ಳನ ತಪಾಸಣೆಗೆಂದು ಬಂದ ಪೇದೆಗಳು ಹಟ್ಟಿಯನ್ನೆಲ್ಲಾ ಜಾಲಾಡಿದರೂ ಯಾವ ಸುಳಿವೂ ಸಿಕ್ಕುವುದಿಲ್ಲ. ಯಾಕೆಂದರೆ ಒಬ್ಬೊಬ್ಬರ ಹೊಟ್ಟೆಗೂ ಅಷ್ಟಿಷ್ಟು ಸೇರಿ, ಬೆಂಕಗಾಹುತಿಯಾಗಿತ್ತು, ಪೇದೆಗಳ ತಪಾಸಣೆಯ ವಿವರಗಳನ್ನು ಚಿತ್ರಿಸಿರುವ ಬಗ್ಗೆ ಅತ್ಯದ್ಭುತ "ನನ್ನ ಕೋಳಿ ಹುಂಜ ಮೊನ್ನೆ ಜಿನ ಚಂದಗಾಣವಾಗಿ ಹಟ್ಟಿ ಬುಡ್ತು, ನನ್ನೊಡ್ಯ ಇನ್ನೂ ಹಟ್ಟಿ ಮುಟ್ಟಿಲ್ಲ ನನ್ನಪ್ಪ'' ಎಂದು ಭಿನ್ನವಿಸಿಕೊಳ್ಳುತ್ತಾಳೆ. ಮುದುಕಿಯ ಮಾತಿಗೆ ನಕ್ಕ ಪೊಲೀಸ್ " ಕಳೆದು ಹೋದ ಹುಂಜ ಯಾವ ರೀತಿ ಇತ್ತು'' ಎನ್ನುತ್ತಾನೆ. ಸಾಕವ್ವ ಮತ್ತೊಂದನ್ನು ತಂದು ತೋರಿಸಿ " ಅದೂನು ಇದ್ರ ಜೊತೇದೆ ಬುದ್ಧಿ'' ಎನ್ನುತ್ತಾಳೆ. ಭರ್ಜರಿಯಾಗಿದ್ದ ಹುಂಜವನ್ನು ಕಂಡ ಪೇದೆಗಳು " ಇದನ್ನು ಅದ ಹುಡುಕ್ಕೊಂಡು ಬರಾಕೆ ಕಳಿಸ್ತೀವಿ'' ಎಂದು ಹೇಳಿ ಅದರ ಕಾಲಿಗ ಹಗ್ಗ ಬಿಗಿದು ಜೀಪಿಗೆ ಹಾಕಿಕೊಂಡು ಧೂಳೆಬ್ಬಿಸಿ ಹೋಗುತ್ತಾರೆ. ಎಂಥ ಕ್ರೌರ್ಯ!.

ಇದು ಸ್ಥೂಲಕಥೆಯಾದರೂ ಇದರ ಅಂತರಂಗದಲ್ಲಿ ಪಡಿಮೂಡಿಸಿರುವ ದಲಿತರ ಬದುಕಿನ ದುರಂತ ಕೃತಿ ಉದ್ದಕ್ಕೂ ಕೆನೆಗಟ್ಟಿರುವುದನ್ನು ಕಾಣಬಹುದು. ಲೇಖಕ ಇಂಥದೊಂದು ಕಥೆ ಬರೆಯುವಾಗ ಅವನಿಗೆ ಒದಗಿದ ಅನುಕೂಲ ಇಂಥ ಬಗೆಯದು. ಶೋಷಣೆ ಅಸಹಾಯಕತೆಗಳೇ ಇವರ ಜೀವನದ ಪ್ರಧಾನ ಅಂಶಗಳಾದರೂ ಶಿವೂನ ಮುಗ್ಧತೆ, ಪುಟ್ಟಗೌರಿಯ ಯೌವ್ವನ ಸಹಜ ಜೀವನೋತ್ಸಾಹ, ಸಾಕವ್ವನ ಸ್ವಾಭಿಮಾನ, ಅತ್ತೆ-ಸೊಸೆ, ತಾಯಿ ಮಗರ ಕಲಹಗಳು, ರಾಜಿ ಇತ್ಯಾದಿಗಳು, ಅವರ ಜೀವನದಲ್ಲಿ ಸಾವಯವ ಸಂಬಂಧ ಹೊಂದಿದೆ. ಆದರೆ ದೇವನೂರು ಯಾವುದನ್ನು ರೋಮ್ಯಾಂಟಸೈಸ್ ಮಾಡದೇ, ಆದರಿಂದ ಇದನ್ನು ಇಲ್ಲದೆ ಇದರಿಂದ ಅದನ್ನು ಮುಚ್ಚಿಹಾಕುವ ಕೆಳದರ್ಜೆ ತಂತ್ರಗಳಿಗೆ ಆತುಕೊಳ್ಳದೆ ಅತೀವ ಸಂಯಮ ತೋರುತ್ತಾ ಸಮಗ್ರತೆ ಸಾಧಿಸುತ್ತಾರೆ.

ಒಡಲಾಳ ಕಾದಂಬರಿಯಲ್ಲಿ ಸಾಕವ್ವ ತನ್ನ ಕಳೆದುಹೋದ ಹುಂಜಕ್ಕಾಗಿ ಊರಿನ ಸುತ್ತಲೂ ಹುಡುಕುವ ರೀತಿ ಮತ್ತು ತನ್ನ ಹುಡುಕುವಿಕೆಯಲ್ಲಿಯೇ ವ್ಯವಸ್ಥೆಯ ವಿರುದ್ಧ ಬಂಡಾಯವೇಳುವುದನ್ನು ನೋಡಬಹುದು. ಹುಂಜವನ್ನುಯಾರಾದರೂ ಕದ್ದು ಕೊಯ್ದಿರಬೇಕೆಂದು ತಿಪ್ಪೆಯಲ್ಲಿ ಹುಡುಕುವ ರೀತಿ ಸಮಾಜದ ಅನಿಷ್ಟ ಪದ್ಧತಿಗಳು ಮತ್ತು ಶೋಷಕ ವರ್ಗ ಶೋಷಿತರನ್ನು ಹೇಗೆ ನಡೆಸುತ್ತಿದೆ ಎಂಬುದನ್ನು ಪ್ರತಿಬಿಂಬಿಸುತ್ತದೆ. ಈ ವ್ಯವಸ್ಥೆಯೇ ಒಂದು ತಿಪ್ಪೆ ಇದ್ದ ಹಾಗೆ. ಅದನ್ನು

ಹೊಕ್ಕಿ ಕೆದಕುವ ರೀತಿ ಶೋಷಿತರು ಮತ್ತು ದಲಿತರು ಸಿಡಿದೆದ್ದರೆ, ಒಂದು ಸಮಾಜದ ವ್ಯವಸ್ಥೆಯನ್ನೇ ಬುಡಮೇಲು ಮಾಡಬಹುದು ಎಂದು ಲೇಖಕರು ಪರೋಕ್ಷವಾಗಿ ಸಾಕವ್ವನ ಪಾತ್ರದಲ್ಲಿ ಅಭಿವ್ಯಕ್ತಪಡಿಸಿರಬಹುದು ಮತ್ತು ಇದರ ವಿಸ್ತಾರ. ಆಳ ಅರಿವು ಸಹಜವಾಗಿ ಓದುಗನಿಗೆ ವ್ಯಕ್ತವಾಗುತ್ತದೆ.

ಒಡಲಾಳ ಕತೆಯಲ್ಲಿನ ಸಾಕವ್ವನ ಸೊಸೆಯರ ಮೇಲಿನ ಸಿಟ್ಟು ಮೇಲ್ಮೈಗೆ ಒಂದು ಹಾಸ್ಯ ದೃಶ್ಯ ರೂಪಕದಂತೆ ನಗಿಸುತ್ತಾವೆಯಾದರೂ, ತನ್ನ ಜನಾಂಗಕ್ಕೆ ಸಿಗದೇ ಹೋದ ಸವಲತ್ತುಗಳ ಬಗೆಗೆ ಆಕೆಗಿರುವ ಕೊರಗನ್ನು ಗಮನಿಸಿದಾಗ ವಿಷಾದವಾಗುತ್ತದೆ. ತನ್ನ ಮುಂದಿನ ಪೀಳಿಗೆಗಾದರೂ ರಾಜಕೀಯ ಸವಲತ್ತುಗಳು ಸಿಗಲಿ ಎಂಬ ಆಶಯ ಅವಳ ಮಾತುಗಳಲ್ಲಿ ಕಾಣ ಸಿಗುತ್ತದೆ.

" ನನ್ನ ಮೊಮ್ಮೊಗುಗೆ ನರಲೋಕದಲ್ಲಿ ರಾಜ್‌ಭಾರ ಮಾಡುವಂಥ ವರಕೊಡು ಸಾಕು ಅಂತೀನಿ'' ಎಂದು ಯಮರಾಜ ಏನು ವರ ಬೇಕೋ ಕೇಳಿಕೋ ಎಂದಾಗ ಸಾಕವ್ವ ವ್ಯಕ್ತಪಡಿಸುವ ಈ ಅಭಿಲಾಷೆಯಲ್ಲಿ ದಲಿತರಿಗೆ ರಾಜಕೀಯ ಸಮಾನತೆ ದೊರೆಯದ ಹೊರತು, ಅವರ ಸಾಮಾಜಿಕ ದುಸ್ಥಿತಿ ಬದಲಾಗದೆಂಬ ಲೇಖಕರ ಆಶಯವೂ ವ್ಯಕ್ತವಾಗುತ್ತದೆ. ಹಾಗೆಯೇ " ನರಲೋಕದಲ್ಲಿ ನಾನು ಪಟ್ಟಂತಹ ಕಷ್ಟಕ್ಕೆ ನರಕದ ಶಿಕ್ಷೆ ಎಲ್ಲಿಗೆ ಸಮನಾಗುತ್ತದೆ.'' ಎಂದು ಕೇಳುವ ಅವಳ ಮಾತುಗಳಲ್ಲಿ ತಾನು ಅನುಭವಿಸಿರಬಹುದಾದ ನೋವು, ಹಿಂಸೆ, ಒಳಗಾಗಿರಬಹುದಾದ ಶೋಷಣೆಯ ಬಗ್ಗೆ ಆಕೆಯಲ್ಲಿ ಸಿಡುಕಾಗಲೀ, ರೋಷವಾಗಲೀ ವ್ಯಕ್ತವಾಗಿರುವುದಕ್ಕಿಂತ ಹೆಚ್ಚಾಗಿ ನರಕ ಸದೃಶವಾದ ಹಿಂಸೆಯನ್ನು ದಲಿತರು ಈ ಭೂಮಿಯ ಮೇಲಿನ ಬದುಕಿನಲ್ಲೇ ಅನುಭವಿಸಿದ್ದಾರೆ ಎಂಬ ದುರಂತ ವ್ಯಂಗ್ಯವನ್ನು ವಿಡಂಬಿಸುತ್ತದೆ.

ದಲಿತ ಸಾಹಿತ್ಯ ಚಳುವಳಿ ಎಂಬ ಅಬ್ಬರ ಪ್ರಚಾರದ ನಡುವೆ ಬದುಕುತ್ತಿರುವ ದೇವನೂರರಂತಹ ಸಾಹಿತಿಗಳು ಆಧುನಿಕ ಜಗತ್ತಿನ ಸವಾಲುಗಳು ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮುಖಾಮುಖಿಯಾಗಿ ಮುನ್ನಡೆಯಬೇಕಾದ ಇಕ್ಕಟ್ಟಿನಲ್ಲಿರುವಾಗ, ಸಾಮಾಜಿತ ಬದ್ಧತೆ ಮತ್ತು ಪರಿವರ್ತನೆಗಾಗಿ ಬಂಡಾಯ ಎಂಬುದೊಂದು **Option** ಅಲ್ಲ **Compulsion** ಅದೊಂದು ಎಂಬ ಭ್ರಮೆಯನ್ನೇ ವಾಸ್ತವ ಎಂದು ಭಾವಿಸುತ್ತಿರುವವರ ನಡುವೆ ದೇವನೂರರ ಸಾಹಿತ್ಯವನ್ನು ಇರಿಸಿ ನೋಡಿದಾಗ ಅವರ ಸಾಹಿತ್ಯ ಕೇವಲ ದಲಿತ ಸಾಹಿತ್ಯವಾಗಿ ಮಾತ್ರ ಉಳಿಯುವುದಿಲ್ಲ ಎಂಬುದ ಬೆಳಕಿನಷ್ಟು ಸತ್ಯವಾದ ಸಂಗತಿ.

ಸಾಹುಕಾರರ ಕಡಳೆಕಾಯಿ ಕಳುವಾಗುತ್ತಿದ್ದುದರ ಸಲುವಾಗಿ ಅತೀವ ಮುತುವರ್ಜಿವಹಿಸಿದ್ದ ಪೊಲೀಸ್ ಇನ್ಸ್‌ಪೆಕ್ಟರ್ ಸಾಕವ್ವನ ಕೋಳಿ ಕಳುವಾದುದರ ಬಗ್ಗೆ ಮಾಡುವ ಜೋಕು ನಮ್ಮ 'ಪೊಲೀಸ್ ಸಂಸ್ಕೃತಿಯ ಪರಿಚಯ ಮಾಡಿಕೊಟ್ಟರೆ, ಕೊನೆಯಲ್ಲಿ ಸಾಹುಕಾರರು ಸಾಕವ್ವನಿಗೆ ನೀಡುವ ಒಂದು ರೂಪಾಯಿ ಭಕ್ಷೀಸು ಶೋಷಣೆಯನ್ನು ನಯವಾಗಿ ಮರೆಸಲು ಪ್ರಯತ್ನಿಸುವ ಕುತಂತ್ರಗಳಿಗೆ ಹಿಡಿದ ಕನ್ನಡಿಯಾಗುತ್ತದೆ. ಇದು ಕತೆಯ " ಹಂದರ'' ಎನ್ನಬಹುದಾದರೂ ಕತೆಯ ಒಳಗೆ ದೇವನೂರರು ಕಟ್ಟಿಕೊಡುವ ಚಿಕ್ಕ ಚಿಕ್ಕ ಚಿತ್ರಗಳೇ ಹೆಚ್ಚು ಪರಿಣಾಮಕಾರಿಯಾಗುತ್ತವೆ. ಆದ್ದರಿಂದಲೇ "ಒಡಲಾಳ ' ಕಾದಂಬರಿ ಎನಿಸಿದೆ ದಲಿತ ಜೀವನದ ಕೆಲ ಭಾಗಗಳನ್ನು ಕಿತ್ತು ನಮ್ಮೆದುರಿಗೆ ಇಟ್ಟ ಅನುಭವವಾಗುವುದು. ಸಾಕವ್ವನ ಕುಟುಂಬ ಶೋಷಣೆಗೆ ಒಳಗಾಗಿದ್ದರೂ ಅದಕ್ಕೆ ತನ್ನದೇ ಆದ ಅಸ್ತಿತ್ವವಿರುವುದನ್ನು ಮರೆಯುವಂತಿಲ್ಲ. 'ಒಳಗಿನ' ಲೇಖಕ ಇಂಥದೊಂದು ಕತೆ ಬರೆಯುವಾಗ ಅವನಿಗೆ ಒದಗುವ ಅನುಕೂಲ ಇಂಥ ಬಗೆಯದು. ಬಡತನ, ಶೋಷಣೆ, ಅಸಹಾಯಕತೆಗಳೇ ಇವರ ಜೀವನದ ಪ್ರಧಾನ ಅಂಶಗಳಾದರೂ, ಶಿವೂನ ಮುಗ್ಧತೆ, ಪುಟ್ಟಗೌರಿಯ ಯೌವ್ವನ ಸಹಜ ಜೀವನೋತ್ಸಾವ, ಸಾಕವ್ವನ ಸ್ವಾಭಿಮಾನ, ಅತ್ತೆ-ಸೊಸೆ, ತಾಯಿ-ಮಗರ ಕಲಹಗಳು,

ರಾಜಿ ಇತ್ಯಾದಿಗಳೂ ಅವರ ಜೀವನದಲ್ಲಿ ಸಾವಯವ ಸಂಬಂಧವನ್ನು ಹೊಂದಿವೆ. ಆದರೆ ದೇವನೂರರು ಯಾವುದನ್ನೂ ರೋಮಾಂಟಸೈಸ್ ಮಾಡದೆ, 'ಅದರಿಂದ ಇದನ್ನು' ಮುಚ್ಚಿಹಾಕುವ ಕೆಳದರ್ಜೆಯ ತಂತ್ರಗಳಿಗೆ ಆತುಕೊಳ್ಳದ ಅತೀವ ಸಂಯಮವನ್ನು ತೋರುವುದರಿಂದಲೇ ಸಮಗ್ರತೆಯನ್ನು ಸಾಧಿಸುತ್ತಾರೆ. ಆದ್ದರಿಂದಲೇ ತೀರ ಸಾಮಾನ್ಯವಾಗಿ ಮೇಲು ನೋಟಕ್ಕೆ ಕಾಣಬಹುದಾದ ವಿವರಗಳು ದೇವನೂರರ ಕಾದಂಬರಿಯಲ್ಲಿ ಮಹತ್ವವನ್ನು ಪಡೆದುಕೊಳ್ಳುವುದು.

ದೇವನೂರು ಮಹಾದೇವರ " ಕುಸುಮಬಾಲೆ''ಹುಟ್ಟಿದಂದಿನಿಂದ (1984) ಇಲ್ಲಿಯವರೆಗೆ, ಅದೂ ಈ ಕೃತಿಗೆ ಕೇಂದ್ರ ಸಾ ಹಿತ್ಯ ಅಕಾಡೆಮಿಯ ಪ್ರಶಸ್ತಿ (1990) ಬಂದ ಮೇಲೆ, 1991ರ ಪೂರ್ತಿ " ಕುಸುಮಬಾಲೆ'' ವರ್ಷವೊ ಎಂಬಂತೆ, ಸಾಕಷ್ಟು ಚರ್ಚೆಗೆ, ವಾದ-ವಿವಾದಗಳಿಗೆ ಟೀಕೆ-ಟಿಪ್ಪಣಿಗಳಿಗೆ ಖಾಸಗೀ ಚರ್ಚೆಗೆ ಗ್ರಾಸವಾಗಿದೆಯಷ್ಟೆ.ಇದೆ ಮೊದಲೆಂಬಂತೆ ಎಪ್ಪತ್ತೇಳು ಪುಟದ ಈ ಪುಟ್ಟ ಕಾದಂಬರಿಯೊಂದನ್ನು ಕುರಿತು ಕನ್ನಡ ವಿಮರ್ಶನ ಲೋಕದಲ್ಲಿ ಇಷ್ಟು ವಿಪುಲವಾದ ಚರ್ಚೆನಡೆಯುತ್ತಿರುವುದೇ ಸಾಕ್ಷಿ ಇದರ ಮಹತ್ವವನ್ನು ಸಂಸ್ಥಾಪಿಸುವುದಕ್ಕೆ 'ಕುಸುಮಬಾಲೆ' ವಿಚಾರ ಮುಖಿಯಾದರೂ ವಿಭಿನ್ನ ಆಲೋಚನೆಗೆ ಹೆಸರಾದ ಜನ ಸಾಮಾನ್ಯರ ಒಡನಾಡಿ ದೇವನೂರು ಮಹಾದೇವ, ತನ್ನ ಆಡು ಭಾಷೆಯನ್ನೇ ಕಾವ್ಯ ಭಾಷೆಯಾಗಿ ಕಟ್ಟಿ, ಮತ್ತೊಂದು ಸಾರಿ ಓದುವ ಹಂಬಲವನ್ನು ಹೆಚ್ಚಿಸುವುದರೊಂದಿಗೆ, ಕಲ್ಪನೆಯನ್ನೂ ಮೀರಿ ಹೊಸ ಹೊಸ ಹೊಳಹುಗಳನ್ನು ದೊರಕಿಸಿಕೊಡುವುದರಲ್ಲಿ ಯಶಸ್ವಿಯಾದ ಕೃತಿ "ಕುಸುಮಬಾಲೆ''.

'ಕುಸುಮಬಾಲೆ' ಎಂಬ ಹೆಸರೇ, ಸುಪ್ತ ಮನಸ್ಸಿನ ಮುಗ್ಧ ಪ್ರೀತಿಯ ಜೊತೆಗೆ ಕೋಮಲವಾದ ಹೂವು ಅರಳಿ ಬಾಡುವ ರೀತಿ - ಅಂತರ್ಜಾತಿಯ ಆಪ್ತತೆಯಲ್ಲೇ ಕೊರಗಿ ಕುಸುಮಳ ಪಾತ್ರ ಚಿತ್ರಿತವಾಗಿದೆ.

ಭಾಷಿಕ ದೃಷ್ಟಿಯಿಂದ 'ಕುಸುಮಬಾಲೆ' ಯನ್ನು ಗ್ರಹಿಸುವುದಾದರೆ ಆಡು ನುಡಿ, ದೇಸಿಯತೆಯಲ್ಲೇ ಸೊಗಡುಗೊಂಡದ್ದಾಗಿದೆ. ಪ್ರೀತಿಸಿದವನೊಂದಿಗೆ ಬದುಕಲಾಗದೆ, ಸಂಸಾರದಲ್ಲಿ ನೆಮ್ಮದಿ ಇಲ್ಲದೆ ಬದುಕುತ್ತಿರುವ ನಿರಾಶಾ ಜೀವನ ಕುಸುಮಳದ್ದು. ಇವರಿಬ್ಬರ ಪ್ರೀತಿಯನ್ನು ಕುರಿತು ಜೋತಮ್ಮಂದಿರ ಸಂಭಾಷಣೆ ಮತ್ತು ಅವರ ಅನುಕಂಪದ ಮಾತುಗಳು ತುಂಬಾ ಗಮನೀಯವಾದಂತವುಗಳು.

ಎಲ್ಲಾ ಪಂಗಡಗಳ ಜೋತಮ್ಮಂದಿರೂ ಒಟ್ಟುಗೂಡುವಿಕೆ ಮತ್ತು ಸಂಭಾಷಣೆ ಗಮನಿಸಿದಾಗ ಮಾನವೀಯತೆ ಸರಳ ಸ್ವಭಾವದೊಂದಿಗೆ ಏಕತೆಯ ದೃಷ್ಟಿಕೋನ ಒಡಮೂಡುತ್ತವೆ. ಜೋತಮ್ಮಂದಿರ ಸಂಭಾಷಣೆಯಲ್ಲಿ ಅಕ್ಕಯ್ಯ ಎಂಬ ಸಂಭೋಧನೆಯ ಮಾತುಗಳು ಒಂದು ರೀತಿಯ ಭಾವನಾತ್ಮಕ ಸಂಬಂಧವೇರ್ಪಟ್ಟು ಜಾತಿಯ ಅಡ್ಡ ಬರುವಿಕೆ ಅಗತ್ಯವಿಲ್ಲ, ಇದು ಲೇಖಕರ ಆಶಯವೂ ಇರಬಹುದು.

ದಲಿತನಾದರೂ ಆಧುನಿಕ ಶೋಕಿಗೆ ಒಳಪಟ್ಟು ಚನ್ನ ಕುಸುಮಳ ಆಕರ್ಷಣೆಗೆ ಒಳಗಾಗುವುದು ಸಹಜ, ಕಾದಂಬರಿಯ ಪ್ರಾರಂಭದಲ್ಲೇ ಚನ್ನನ ಕೊಲೆಯಾಗುವುದು ಕಂಡು ಬರುತ್ತದೆ. ಚನ್ನನ ಕೊಲೆ ಮನೆಯವರಿಗೆ ತಿಳಿಯದೆ ಅವನ ಬರುವಿಕೆಗಾಗಿ ಕಾಯುವುದನ್ನು ನೋಡಬಹುದು:

ಈ ಕೃತಿಯಲ್ಲಿ ಕುರಿಯಯ್ಯ ಮತ್ತು ಅಮಾಸರ ಪಾತ್ರ ಬಹಳ ಮುಖ್ಯವಾದುದು. ಮಾರಿಗುಡಿಯ ಬಳಿ ಸಂಭಾಷಣೆ ಮಾಡುತ್ತಾ ಕುಳಿತ ಕುರಿಯಯ್ಯ ಅಮಾಸ ಮತ್ತು ಜೋತಮ್ಮಂದಿರ ಮಾತುಗಳು ಜಾತಿ - ಮತಗಳನ್ನು ವಿಡಂಬಿಸುತ್ತಾ ಅದರ ಒಳ ತಾರ್ಕಿತ ನಿಲುವುಗಳನ್ನು ಪ್ರತಿಬಿಂಬಿಸುತ್ತವೆ. ತೋರಾರ ಹಟ್ಟಿ ಜೋತಮ್ಮ ಕುರಿಯಯ್ಯನ ಮೈ ತುಂಬಿಕೊಂಡಾಗ ಅವನಾಡುವ ಮಾತುಗಳು ಸಂಪ್ರದಾಯವನ್ನು ಮೈಗೂಡಿಸಿಕೊಂಡು ಬಂದ ಹಿಂದೂ ಸಂಸ್ಕೃತಿ ಮತ್ತು ಜಾತಿಯ ಅನಿಷ್ಟ ಪದ್ಧತಿಯನ್ನು ಪ್ರಶ್ನೆ ಮಾಡುವಂತಿದೆ.

ಆಗಲೀಗ ಮೋಟು ಬೀಡ್ಗಳ ಮೌಲ್ಯ ಮಲುಗಿದ್ದಂಥ ಕುರಿಯಯ್ಯನು ತನ್ನ ಬಿಳಿಗಡ್ಡ, ಮೀಸೆ, ರಾರಾಜುಸ್ತೆ ಸೇದೋಗಿದ್ದ ಕಯ್ಯ ಎತ್ತಿ ಸ್ಮಯವಾಗಿ ಆಡುಸ್ತಾ, '' ನಿಲ್ಲು ಕೊಸುನಿಸ್‌ಮಾತ, ಎಲ್ಲಿದ್ದದೂ ಜಾತಿ ? '' ಅನ್ನಲು ಎಲ್ಲರ್ರೂ ಕಕ್ಕಾಬಿಕ್ಕಿ ತುಂಬ್ಕಂಡು ಚೆಲ್ಲಾಡ್ತ ಆ ಪರಿ ದೊಂಧೋಂತಗಲ ಡಾಕ್ಟರು '' ಇಲ್ಲೂ ಸಿಐಎ ಏಜೆಂಟಿಲ್ಲ ' ಅಂದ್ಕತ್ತ ಕುರಿಯ್ಯಗ ನೋಡಲು, ಆ ಕುರಿಯಯ್ಯ ನೂ '' ಆ ದಾಕ್ಟರ ಆಕಾಸದುದ್ದ ಇದ್ದಂಥ ಜಲ್ಮತ್ಕ ತನ್ನದೊಂದು ಬಿಳಿಗೂದಲು ಸಮಾನ'' ಎಂಬಂತೆ ತಾನೂ ನೋಡಿ ಕಿರುನಕ್ಕು:

ನೋಡ್ರಪ್ಪ ಕೂಸ್ಗಳ...........ಕೇಳೆ ನಾನು ದಿಕ್ಕುದೆಸೆ ಇಲ್ದವ

ಬಿದ್ದಿರೋ ಅನಾದಿ............. ಹಿರೀಕ

ಅಂಥಾ ನಾನೇ ಜಾತ್ಯ ಕಂಡಿಲ್ಲ ಅಂತೀನಿ ನಂಗ ಆ ಜಾತ್ಯ ಅರತ ಮಾನ ಮಾಡ್ಸಿ, ನೀವು ಮುಂದ್ಕ ಮಾತಾಡಿ... '' ಎಂದು ಕುರಿಯಯ್ಯ ಕೇಳುವ ಪ್ರಶ್ನೆ, ಒಂದು ಸಮೂಹವನ್ನು ಮಾತ್ರ ಪ್ರಶ್ನಿಸದೆ ಇಡೀ ಸಮಾಜದ ಒಟ್ಟಾರೆ ತಳಮೂಲ ಸಂಸ್ಕೃತಿಯನ್ನೇ ಪ್ರಶ್ನೆ ಮಾಡುತ್ತದೆ. ದೇವನೂರರ ಕಾದಂಬರಿಗಳಲ್ಲಿ ಅಥವಾ ಕಥೆಗಳಲ್ಲಿ ಸನ್ನಿವೇಶ ನಿರ್ಮಾಣವೇ, ಕಥಾವ್ಯಕ್ತಿಗಳ ಕಥಾ ಪರಿಸರದ ಸ್ಥಿತಿಗತಿಗಳನ್ನು ಅದರ ಗಂಭೀರತೆ ತೀವ್ರತೆಯನ್ನು ಒಂದು ಜೀವಂತ ಪಾತ್ರದಷ್ಟೇ ಪರಿಣಾಮಕಾರಿ ಯಾಗಿ ಮಾಡುತ್ತದೆ. ಒಡಲಾಳದ ಕುಸುಮಬಾಲೆಯ ಕುರಿಯಯ್ಯನ ಪಾತ್ರ ಇದಕ್ಕೆ ಉದಾಹರಣೆ. ಮಹಾದೇವರರ ಕಾದಂಬರಿಗಳಲ್ಲಿ ವ್ಯವಸ್ಥೆಯೊಂದರ ವಿರುದ್ಧ ಬಂಡಾಯವೇಳುವ ವ್ಯಕ್ತಿಗಳನ್ನು ಎರಡು ರೀತಿಯಲ್ಲಿ ವರ್ಗೀಕರಿಸಬಹುದು.

1) ವರ್ಗದಲ್ಲಿ ಪ್ರಜ್ಞಾವಂತರೂ, ವಿದ್ಯಾವಂತರೂ ಆಗಿದ್ದು, ಪರಂಪರಾಗತವಾದ ವ್ಯವಸ್ಥೆಯ ಹಿಡಿತವಾಗಲೀ, ದಬ್ಬಾಳಿಕೆಗೆ ಶೋಷಣೆಯನ್ನಾಗಲೀ, ಏಕಾಏಕಿ ಎದುರಿಸಲಾಗದೆ, ಹಾಗೆಂದು ಅವರೊಡನೆ ರಾಜಿಮಾಡಿಕೊಳ್ಳಲು ಆಗದೆ ಅಸಹಾಯಕವಾಗಿ ವಿಲಿವಿಲಿ ಒದ್ದಾಡುವ ಪ್ರಜ್ಞಾವಂತ ಮನಸ್ಸು ಒಂದು ಕಡೆ.

2) ವ್ಯವಸ್ಥೆಯೊಂದರ ಅವಸ್ಥೆಯನ್ನಾಗಲೀ, ಶೋಷಣೆ ದಬ್ಬಾಳಿಕೆಯನ್ನಾಗಲೀ, ನೇರವಾಗಿರಲಿ, ಅಪ್ರಜ್ಞಾಪೂರ್ವಕವಾಗಿ ಶಂಕಿಸದೆ, ಆ ವ್ಯವಸ್ಥೆಯನ್ನೇ ಒಂದು ಆದರ್ಶವೋ ಅಥವಾ ಒಂದು ಮೌಲ್ಯವೋ ಎಂದು ವಿಧೇಯತೆಯಿಂದ ನಡೆದುಕೊಂಡು ಹೋಗುವ ಜನರನ್ನು ಕಾಣುತ್ತಾರೆ. ಬಹುಪಾಲು ಈ ಜನ ಅವಿದ್ಯಾವಂತರಾಗಿರುತ್ತಾರೆ. ವ್ಯವಸ್ಥೆಯ ವಿರುದ್ಧ ಪ್ರಶ್ನೆ ಮಾಡುವುದೇ ಇಂತಹವರಿಗೆ ಅಪರಾಧವಾಗಿ ಕಾಣುತ್ತದೆ. ಇದಕ್ಕೆಉದಾಹರಣೆಯಾಗಿ ಒಡಲಾಳ ಮತ್ತು ಕುಸುಮಬಾಲೆ ಕಾದಂಬರಿಗಳಲ್ಲಿ ಪಾತ್ರಗಳ ನಿದರ್ಶನವಿದೆ.

ಎರಡೂ ಕಾದಂಬರಿಯಲ್ಲಿ ಶೋಷಕವರ್ಗ ಪ್ರತಿನಿಧಿಯಾಗಿ ಗೌಡ ಮತ್ತು ಪಟೇಲರೇ ಹೆಚ್ಚಿಗೆ ಕಾಣಿಸಿಕೊಳ್ಳುತ್ತಾರೆ.ಆಯಾ ಪ್ರದೇಶದಲ್ಲಿ ಆರ್ಥಿಕ ಹಾಗೂ ಸಾಮಾಜಿಕವಾಗಿ ಸ್ವಲ್ಪ ಮೇಲ್‌ಸ್ತರಕ್ಕೆ ಸೇರಿದ ಜಮೀನ್ದಾರರೇ ಶೋಷಕರಾಗಿದ್ದು, ನಿರೀಕ್ಷೆಯಂತೆ ಫ್ಯೂಡಲಿಸ್ಟಿಕ್ ಸಮಾಜದ ದರ್ಪ ದೌರ್ಜನ್ಯಗಳೇ ಇವರ ಕಥೆಯ ಗೌಡ ಪಟೇಲರದ್ದು. ಶೋಷಣೆಗೆ ಒಳಗಾಗುವ ಪಾತ್ರಗಳು ವಿದ್ಯಾವಂತರಿರಲಿ, ಅವಿದ್ಯಾವಂತರಿರಲಿ, ಮುಗ್ಧರಿರಲಿ, ಹೆಚ್ಚು ಸಹನಾಮಯಿಗಳು ಹಾಗೂ ಭಾವನಾ ಜೀವಿಗಳೂ ಆಗಿ ಕಂಡು ಬರುತ್ತಾರೆ. ವ್ಯವಸ್ಥೆಗೆ ಏಕಾ ಏಕಿ ತಿರುಗಿಬೀಳುವ ಬದಲು ಒಂದು ರೀತಿಯ ಆತ್ಮ ವಿಮರ್ಶೆ ಹಾಗೂ **Self Conversation** ನಲ್ಲಿ ತೊಡಗುವುದರಿಂದ ಪ್ರತಿಭಟನೆಯ ಪರಿಣಾಮ ಅಷ್ಟು ಭೀಕರ ವಾಗುವುದಿಲ್ಲ. ಅದೇ ಕಾರಣಕ್ಕೆ '' ಮಹಾದೇವರ ಯಾವುದೇ ಕಥನ ಕಾದಂಬರಿಗಳಲ್ಲೂ ಶೋಷಿತರ ಕ್ಲೈಮಾಕ್ಸ್‌ನಲ್ಲೂ ಕೊಲೆ ಸುಲಿಗೆ ರಕ್ತಪಾತಗಳಲ್ಲಿ ತೊಡಗಿ ಟ್ರಾಜಿಡಿಯ ಅಂತ್ಯವನ್ನು ಒದಗಿಸುವುದಿಲ್ಲ. ಅವರೇ ಅವರ ತಳಮಳ ಮತ್ತು ಅಸಹಾಯಕತೆಗಳು ಮಾತ್ರ ಇದಕ್ಕಿಂತ ಹೆಚ್ಚಿನ ಪರಿಣಾಮವನ್ನು ಓದುಗರ ಮನಸ್ಸಿನ ಮೇಲೆ ಉಂಟು ಮಾಡುತ್ತದೆ.

ಪರಿಸರದೊಂದಿಗೆ ಏಕತೆ ಮತ್ತು ತಳಮಳಗಳನ್ನು ಸೃಷ್ಟಿಸುವುದು ಲೇಖಕನ ಕೌಶಲವಾಗಿ ಅಭಿವ್ಯಕ್ತಿಸುವ ರೀತಿಯನ್ನು ಮಹಾದೇವರ ಕಾದಂಬರಿಗಳಲ್ಲಿ ನೋಡಬಹುದಾಗಿದೆ. ಸಾಮಾನ್ಯವಾಗಿ ಕಾದಂಬರಿಗಳಲ್ಲಿನ ಪಾತ್ರಗಳು ಸುತ್ತಲ ಜಗತ್ತಿನ ಪರಿಸರವನ್ನು ವ್ಯಕ್ತಪಡಿಸುತ್ತಾ ಪಾತ್ರಗಳ ಮುಖಾಂತರವಾಗಿ ಸಾಂಸ್ಕೃತಿಕ ಆನನ್ಯತೆಯನ್ನು ವ್ಯಕ್ತಪಡಿಸಿದರೆ ದೇವನೂರರ ಕೃತಿಗಳಲ್ಲಿ ಮನುಷ್ಯ ಕೇಂದ್ರ ಪಾತ್ರವಾಗಿ ಪರಿಣಮಿಸಿ, ಸುತ್ತಲಿನ ಪರಿಸರ ಅವನಿಗೆ ಅಭಿವ್ಯಕ್ತಪಡಿಸುವ ರೀತಿ ತುಂಬಾ ಮನೋಜ್ಞವಾದುದಾಗಿದೆ.

ದೇವನೂರರ ಪಾತ್ರಗಳು ಕೇವಲ 'ನೆರಳು'ಗಳಾಗಿವೆ. ರಕ್ತ ಮಾಂಸಗಳಿಂದ ಕೂಡಿದ ಜೀವಂತ ಪಾತ್ರಗಳೇ ಆಗಿರುವುದರಿಂದ ಅವರ ದೈನಂದಿನ ಚಟುವಟಿಕೆಗಳು ಆ ಜನಾಂಗದ ಒಟ್ಟು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಚಿತ್ರಗಳೇ ಆಗುತ್ತವೆ. ಈ ಚಿತ್ರಗಳನ್ನು ಕಟ್ಟಿಕೊಡುವಾಗ ದೇವನೂರು ಮಹಾದೇವ ಕೋರುವ ಸಂಯಮ, ಯಾವ ವಿವರಗಳನ್ನು ಎಲ್ಲಿ ಇಡಬೇಕೆಂಬ ಕಲಾತ್ಮಕ ನಿಖರತೆ, ಆ ಚಿತ್ರಗಳ ಹಿಂದಿನ ವಿಷಾದ ದನಿ, ಯಾವಾಗ ಸಿಡಿಯುವುದೋ ಹೇಳಲಾಗದ ಮೂಕ ಸಿಟ್ಟು, ಗುಪ್ತವಾಗಿ ಮೊಳೆಯುತ್ತಿರುವ ಬಂಡಾಯ, ಇವೆಲ್ಲದರಲ್ಲೂ ವೈಯಕ್ತಿಕ " ಹಸ್ತಕ್ಷೇಪ" ಮಾಡದೆ ತಿಳಿಹಾಸ್ಯ ವಿನೋದಗಳಿಂದ ಕಾಯ್ದುಕೊಂಡಿರುವ ತಾಂತ್ರಿಕ ಅಂತರ ಇವುಗಳಿಂದಾಗಿ ಅವರ ಕತೆಗಳು ಕನ್ನಡ ಸಾಹಿತ್ಯಕ್ಕೆ ಹೊಸರಕ್ತ ತುಂಬುವ ಭರವಸೆ ಮೂಡಿಸಿದೆ.

-----------0-----------

ಅಡಿ ಟಿಪ್ಪಣಿಗಳು

1. ನೆನೆಕೆ, ದೇವನೂರು ಮಹಾದೇವ ಅವರ ಕೃತಿಗಳು

2. ಹೊಸಗನ್ನಡ ಸಾಹಿತ್ಯ ಚರಿತ್ರೆ ಪುಟ 325

3. ಟಿ.ಪಿ. ಅಶೋಕ ಅವರ ಹೊಸಹೆಜ್ಜೆ, ಹೊಸಹಾದಿ ಪು.69

4. ಕನ್ನಡ ಸಣ್ಣ ಕಥೆಗಳಲ್ಲಿ ದಲಿತ ಸಂಸ್ಕೃತಿ, ಪುಟ 221. ಡಾ. ಸಿ. ಬಿ. ಹೊನ್ನಯ್ಯ

5. ಡಾ. ಸಿ. ಬಿ. ಹೊನ್ನಯ್ಯ ಕನ್ನಡ ಸಣ್ಣ ಕಥೆಗಳಲ್ಲಿ ದಲಿತ ಸಂಸ್ಕೃತಿ ಪುಟ 222

6. ಪುಟ 26. ದೇ. ಮ. ಅವರ ಕೃತಿಗಳು ದೇವರನೂರ ಮಹಾದೇವ

7. ಪುಟ 355 "ದಲಿತಮಾರ್ಗ" ಅರವಿಂದ ಮಾಲಗತ್ತಿ.

<u>ಅಧ್ಯಾಯ - 3</u>

“ ದೇವನೂರು ಮಹಾದೇವ ಅವರ ಕೃತಿಗಳಲ್ಲಿ ಗಂಡು - ಹೆಣ್ಣಿನ ಸಂಬಂಧ ”

ಅ) “ ದ್ಯಾವನೂರು ” - ಕಥಾ ಸಂಕಲನ (ಸಮಗ್ರ ಕಥೆ)

ಆ) “ ಒಡಲಾಳ”

ಇ) “ ಕುಸುಮ ಬಾಲೆ”

ಹೊಸಗನ್ನಡ ಸಾಹಿತ್ಯ ಚರಿತ್ರೆಯ ಪ್ರಮುಖ ಘಟ್ಟಗಳಲ್ಲಿ ಒಂದು ದಲಿತ - ಬಂಡಾಯ. ಈ ಕಾಲಘಟ್ಟದಲ್ಲಿ ಬಂದ ಪ್ರಮುಖ ಕಾದಂಬರಿಕಾರ, ಕತೆಗಾರ, ವಿದ್ವಾಂಸ, ತತ್ವಜ್ಞಾನಿ, ಚಿಂತಕ ಹೀಗೆ ಹಲವಾರು ಸಾಹಿತ್ಯ - ಸಂಸ್ಕೃತಿ ಕ್ಷೇತ್ರದಲ್ಲಿ ದುಡಿದವರು ದೇವನೂರು ಮಹಾದೇವ.

ಇವರ ಕೃತಿಗಳಲ್ಲಿ ಸಾಮಾಜಿಕ/ಸಾಂಸ್ಕೃತಿಕ, ಮನುಷ್ಯ - ಮನುಷ್ಯರ ನಡುವೆ ಜೀವಿಸಲಾಗದ, ಜನಾಂಗ - ಜಾತಿ ನಡುವಿನ ಘರ್ಷಣೆ, ಸಮಾನತೆಗೆ ಹೋರಾಡುವ ಪ್ರಯತ್ನ, ಶೋಷಣೆಗೆ ಒಳಪಡುವ ದಲಿತ ಜನರ ಜೀವನ ಚಿತ್ರಿಸುತ್ತವೆ ಮತ್ತು ಸಮಾನತೆಯ ಹೋರಾಟಕ್ಕಾಗಿ ಜೀವಿಸುವ ಜನರ ಗುಂಪು "ದಲಿತರು". ಈ ದಲಿತ ಜನಾಂಗದ ಅಥವಾ ಶೋಷಿತ ಜನರ ಸಾಂಸ್ಕೃತಿಕ ಜೀವನ, ಭಾಷೆ, ನೋವು, ನಲಿವು, ಆರ್ಥಿಕ ವಿಚಾರ, ಶಿಕ್ಷಣ, ಸಾಮಾಜಿಕ ಜೀವನ ಅವರು ಶೋಷಣೆಗೆ ಒಳಗಾಗುವ ಸಂದರ್ಭ. ಮನುಷ್ಯ - ಮನುಷ್ಯರ ನಡುವಿನ ಸಂಬಂಧ, ಗಂಡು ಹೆಣ್ಣಿನ ಸಂಬಂಧದ ಚಿತ್ರಣಗಳನ್ನು ತಮ್ಮ ಕೃತಿಗಳಲ್ಲಿ ಅರ್ಥಪೂರ್ಣವಾಗಿ ಚಿತ್ರಿಸಿದ್ದಾರೆ.

ದಲಿತರು ಸಮಾಜದ ಶೋಷಣೆಯ ಜೀವಿಗಳು. ಈ ಶೋಷಣೆಯ ಜೀವಿಗಳಲ್ಲಿನ ಆಂತರಿಕ ಸಂಬಂಧಗಳು, ಗಂಡು ಹೆಣ್ಣಿನ ಮಧ್ಯೆ ಇರುವ ಸಂಬಂಧ, ಈ ಶೋಷಣೆಯ ಬದುಕಿನ ಸಮಾಜದಲ್ಲಿ ದಲಿತ ಪುರುಷರು ಸ್ತ್ರೀಯರಿಗೆ ಎಷ್ಟರ ಮಟ್ಟಿಗೆ ಸ್ವಾತಂತ್ರ್ಯವಿದೆ ಹಾಗೂ ಸಾಮಾನ್ಯವಾಗಿ ಜಗತ್ತಿನಲ್ಲಿ ಅನಾದಿಕಾಲದಿಂದಲೂ ಸ್ತ್ರೀಯರ ವಿರುದ್ಧ ಎಲ್ಲಾ ಜಾತಿ - ಮತ - ಧರ್ಮಗಳಲ್ಲಿ ದೌರ್ಜನ್ಯ, ಶೋಷಣೆ, ಅತ್ಯಾಚಾರಗಳು ನಡೆದುಕೊಂಡು ಬಂದಿವೆ. ಯಾವುದೇ ಸ್ಥಾನಮಾನ ನೀಡಿದೆ ಎಲ್ಲಾ ಕ್ಷೇತ್ರಗಳಲ್ಲಿಯೂ ಶೋಷಣೆಯ ಮೂಲಕ ಅತ್ಯಂತ ಕೀಳಾಗಿ ಸಮಾಜದಲ್ಲಿ ತಿರಸ್ಕರಿಸಲ್ಪಡುವಂತಾಗಿದೆ. ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯ ಸಮಾನತೆ ದೊರೆಯಲು ಸಾಧ್ಯವೇ? ಎಂಬುದೇ ಶೇಷ ಪ್ರಶ್ನೆಯಾಗಿದೆ?

ಇಂತಹ ವಿಚಾರಗಳು ದಲಿತರಲ್ಲಿ ಮಾತ್ರವಲ್ಲದೆ ಎಲ್ಲಾ ಪಂಗಡಗಳಲ್ಲಿಯೂ, ಸರ್ವೆ ಸಾಮಾನ್ಯವಾಗಿದೆ. ಸ್ತ್ರೀಯರನ್ನು ಪ್ರಾಣಿಗಳಿಗಿಂತ ಕೀಳಾಗಿ ನಡೆಸಿಕೊಂಡು ಬಂದಿರುವುದಕ್ಕೆ ನಮ್ಮ ಇತಿಹಾಸದಲ್ಲಿ ಹಲವಾರು ಉದಾಹರಣೆಗಳಿವೆ. (1. "ಹೆಣ್ಣಿನ - ಸ್ಥಾನಮಾನ" ವಿಚಾರಸಾಹಿತ್ಯ ಭಾಗ - 1 ಮತ್ತು ಭಾಗ - 2 ಹೆಚ್ಚಿನ ವಿವರಗಳಿಗಾಗಿ ನೋಡುವುದು - ಶರಶ್ಚಂದ್ರ ಚಟ್ಟೋಪಧ್ಯಾಯ) ಸ್ತ್ರೀಯರನ್ನು ದೇವತೆ, ಭೂಮಿ, ಜಲ ಹೀಗೆ ಎಲ್ಲಾ ಪ್ರಕೃತಿಯ ಅಂಶಗಳಿಗೆ ಹೋಲಿಸಿ ಔದಾರ್ಯದಿಂದ ಗೌರವಿಸಿಕೊಂಡು ಬಂದಿರುವಂತೆ ನಮಗೆ ಗೋಚರವಾದರೂ, ದೀಪದ ಕೆಳಗೆ ಕತ್ತಲೆಯಂತೆ, ಕಡಲ ಒಡಲಿನಲ್ಲಿ ಕಿಚ್ಚಿರುವಂತೆ ಅವಳನ್ನು ಹೆಚ್ಚು ಹೆಚ್ಚಾಗಿ ಗೌರವಿಸಿಕೊಂಡು ಬಂದಂತೆ ಅಷ್ಟೇ - ಅಷ್ಟೇ ನಿರ್ಭಯವಾಗಿ ಅವಳನ್ನು ಶೋಷಿಸಿದ್ದಾರೆ.

ದಲಿತರು ಸಮಾಜದಲ್ಲಿ ಶೋಷಣೆಗೊಳಗಾಗಿ ಶೋಷಣೆಯ ನೋವನ್ನು ಕಂಡುಂಡವರು. ಇಂತಹ ಶೋಷಿತರು. ಸಾರ್ವತ್ರಿಕವಾಗಿರುವ ಈ ಸ್ತ್ರೀಯನ್ನು ತಮ್ಮ ಸಮುದಾಯದಲ್ಲಿ ಎಷ್ಟರ ಮಟ್ಟಿಗೆ ಸ್ವಾತಂತ್ರ್ಯವನ್ನು ನೀಡಿದ್ದಾರೆ. ಅವರನ್ನು ಎಷ್ಟರ ಮಟ್ಟಿಗೆ ಗೌರವಿಸುತ್ತಾ ಬಂದಿದ್ದಾರೆ. ಸಮಾಜದಲ್ಲಿ ಎಷ್ಟರ ಮಟ್ಟಿಗೆ ಅವರಲ್ಲಿ ಸ್ಥಾನ ಮಾನವಿದೆ. ಶೋಷಿತ ವ್ಯಕ್ತಿ ಶೋಷಿತರನ್ನು ಹೇಗೆ ನಡೆಸಿಕೊಂಡು ಬಂದಿದ್ದಾರೆ ಎಂಬುದನ್ನು ತಿಳಿಸುವುದೇ ಅಧ್ಯಯನದ ಉದ್ದೇಶವಾಗಿದೆ.

ಅಷ್ಟೇ ಅಲ್ಲದೆ ಶೋಷಿತ ಜೀವಿಯು ತನ್ನ ನೈಜ ಸಮಸ್ಯೆಯನ್ನು ಗುರುತಿಸಿದ್ದಾರೆಯೆ ಅಥವಾ ಇಲ್ಲವೆ ಅದು ಇನ್ನೆಷ್ಟರ ಮಟ್ಟಿಗೆ ಮತ್ತೊಂದು ಶೋಷಿತ ಜೀವಿಗೆ ನೋವನ್ನು ನೀಡಿದೆ ಎಂಬುವಂತಹ ವಿಚಾರಗಳನ್ನು ಈ ಪಂಥದ ಜನರು ತಾವು ಕಂಡುಕಂಡ ವಿಚಾರಗಳನ್ನು ತಾವುಗಳೇ ಬರೆದ ಕೃತಿಗಳಲ್ಲಿ ಹುಡುಕುವುದು. ಈ ದಲಿತ ಕೃತಿಕಾರರು ತಮ್ಮ ಕೃತಿಗಳಲ್ಲಿ ಈ ಸ್ತ್ರೀ ಪುರುಷ ಪಾತ್ರವನ್ನು ಇವರ ನೈಜ ಸಮಸ್ಯೆಯನ್ನು ಗುರುತಿಸಿದ್ದಾರೆಯೇ ಇಲ್ಲವೇ ಎಂಬ ಅಂಶಗಳನ್ನು ಹುಡುಕುವುದು ನನ್ನ ಅಧ್ಯಯನದ ಮಹತ್ವದ ಅಂಶವಾಗಿದೆ.

ಮಾರಿಕೊಂಡವರು ಕತೆಯಲ್ಲಿ ಲಕ್ಷ್ಮಿ - ಬೀರ, ಕಿಟ್ಟಪ್ಪ - ಲಕ್ಷ್ಮೀ, ಬೀರ - ಕಿಟ್ಟಪ್ಪ ಇಲ್ಲಿನ ಹೆಣ್ಣು - ಗಂಡುಗಳ ಸಂಬಂಧಗಳ ಚಿತ್ರಣ ಕೊಡು ಕೊಳ್ಳುವಿಕೆಯಂತೆ ತೋರುತ್ತದೆ. ಬೀರ ಮತ್ತು ಲಕ್ಷ್ಮಿಯ ಹಸಿವು, ಬಡತನಗಳಿಂದಲೇ ಊರಿಂದ ಊರು ಬಿಟ್ಟು, ಕೈಯಲ್ಲಿ ಬಿಡಿಗಾಸು ಇಲ್ಲದೆ ಹೇಗೋ ಜೀವನದ ರೈಲು ಹತ್ತಿ, ಮೈಸೂರಿನಲ್ಲಿಳಿದು ಬದುಕಿಗಾಗಿ ತಡಕಾಡುತ್ತಾರೆ. ಹೆಂಡತಿಯ ಮಾತು ಕೇಳಿ ಬೀರ ನಂಜನಗೂಡಿನ ಕಡೆಗೆ ರೈಲು ಹತ್ತಿ ಹೋರಟಾಗ ಟಿಕೇಟಿಗೆ ಕಾಸಿಲ್ಲದೆ ಇನ್ಸ್‌ಪೆಕ್ಟರ್ ಕೈಗೆ ಸಿಕ್ಕಿಹಾಕಿಕೊಳ್ಳುತ್ತಾರೆ. ಬದುಕು ಇವರನ್ನು ಅವಮಾನ ಮಾಡುತ್ತದೆ. ಮುಂದಿನ ದಾರಿ ಕಾಣದೆ ಕಣ್ಣು ಬಿಡುತ್ತಿದ್ದಾಗ ತಮ್ಮ ಮಾನ ಕಾಪಾಡುವ ದೇವರಂತೆ ಗೌಡರು ಮಧ್ಯ ಪ್ರವೇಶಿಸಿ ಮಾನ ಉಳಿಸುತ್ತಾರೆ. ಅವರನ್ನು ಏನು ಎತ್ತ ಅಂತ ವಿಚಾರಿಸಿ, ಕೆಲಸಕ್ಕಾಗಿ ಊರು ಬಿಟ್ಟು ಬಂದಿದ್ದೀವಿ ಎಂದಾಗ ಗೌಡರ ಮನಸ್ಸು ಕರಗಿ "ನಮ್ಮ ತೋಟದಲ್ಲೇ ಮನೆ ಮಠವಿದೆ. ನೀವು ಇರೋದಾದ್ರೆ ಎರಡಾಳು ಬೇಕು...... " ಎಂದಾಗ ಬೀರ ಲಕ್ಷ್ಮಿಗೆ ಗೌಡರು ದೇವರಂತೆ ಕಾಣುತ್ತಾರೆ.

ಗೌಡರು ಅವರಿಬ್ಬರನ್ನು ಕೈಹಿಡಿದು ಆತುಕೊಳ್ಳುತ್ತಾರೆ. ವಾಸವಾಗಲು ಮನೆಕೊಟ್ಟು, ತೋಟದ ಕೆಲಸಕ್ಕಾಗಿ ನೇಮಿಸಿಕೊಂಡು ಬೆಳಕಾಗುತ್ತಾರೆ. ಇಲ್ಲಿಯ ಗೌಡರು ಊಳಿಗಮಾನ್ಯ ವ್ಯವಸ್ಥೆಯ ಕ್ರೌರಿಗಳಲ್ಲಿ ಮಾನವೀಯತೆ ದಯೆ, ಕರುಣೆ ಇರುವ ದೊಡ್ಡವರು. ಗೌಡರ ದೊಡ್ಡತನಕ್ಕೆ ಬೀರ ಮತ್ತು ಲಕ್ಷ್ಮಿ ನಿಯತ್ತಿನ ವಾರಸುದಾರರಾಗುತ್ತಾರೆ. ಗೌಡರಿಗೆ ಮೋಸ ಮಾಡುವ ಕೆಟ್ಟತನಕ್ಕೆ ಹೋಗುವುದಿಲ್ಲ. ಗೌಡರ ಉಪಕಾರಕ್ಕೆ ಪರೋಪಕಾರಿಗಳಾಗಿ ದುಡಿಯುತ್ತಾರೆ. ಲಕ್ಷ್ಮಿ - ಗೌಡರ ಸಂಬಂಧದಲ್ಲಿ ಒಳ್ಳೆಯ ಭಾವನೆ ಸಂಬಂಧ ಮೂಡಿಬಂದಿದೆ. ಗೌಡರು ಲಕ್ಷ್ಮಿಯನ್ನು ಕೆಟ್ಟ ದೃಷ್ಟಿಯಲ್ಲಿ ನೋಡುವುದಿಲ್ಲ. ಹಾಗೆಯೇ ಬೀರ - ಗೌಡರ ಸಂಬಂಧವು ಸಹ ಮಾನವೀಯ ಸಂಬಂಧವಾಗಿದೆ. ಆದರೆ ಗೌಡರ ಮಗ ಕಿಟ್ಟಪ್ಪನ ಜೊತೆಯಲ್ಲಿ ಬೀರನ ಹೆಂಡತಿಯು ಅನೈತಿಕ ಸಂಬಂಧ ಇಟ್ಟು ಕೊಂಡಿದ್ದಾಳೆಂದು ಬೀರನಿಗೂ ಗೊತ್ತು.

"ಈ ಗುಳ್ಳಲೇ ಎಷ್ಟುದಿನ ಕುಡಿದು ಬಿದ್ದಿಲ್ಲ? ವಾರ ಹದಿನೈದು ದಿನಕ್ಕೆ ಇದನ್ನೇ ಪಟ್ಟಾಗಿ ಹಿಡಿದು ಬಿಟ್ಟವನೆ ಎಷ್ಟು ಹೇಳಿದರೂ ವಸಕಿ ಬಿಡುತ್ತಾನೆ. ಹೆಚ್ಚಾಗಿ ಮಾತಾಡೋಕೆ ಅನ್ನ ಹಾಕಿದ ಧಣಿ ಎಂಬ ಪ್ರಜ್ಞೆಯಲ್ಲಿ ಬೀರನ ಮನಸ್ಸು ಮುಳುಗುತ್ತದೆ". (2. ದೇವನೂರು ಮಹದೇವರರವರ ಸಮಗ್ರ ಕೃತಿ)

ಗೌಡರ ಮಗ, ಜೋಳದ ಪಾಳಿ, ಜೊತೆಗೆ ನಾವು ಜೀತದವರೆಂಬ ವರ್ಣದ ಕೀಳರಿಮೆ ಬೀರನಲ್ಲಿ ಆವೇಶ, ಆಕ್ರೋಶ, ಕಿಚ್ಚು ಇದ್ದರು ಅದು ಕುಡಿದಾಗ ಮಾತ್ರ ವ್ಯಕ್ತವಾಗಿ ಅದು ಮನೆಯಲ್ಲಿ ಕಿಟ್ಟಪ್ಪನಿಲ್ಲ ಎಂಬ ಕಲ್ಪನೆಯು ಸ್ಪಷ್ಟಮಾಡಿಕೊಂಡು ತನ್ನ ಮನದಾಳದ ಕಾರ್ಯ ಪ್ರತಿಭಟನೆ ಹೊರಹಾಕುತ್ತಾನೆ. ಕುಡಿತದ ಅಮಲು ಇಳಿದ ಮೇಲೆ ಮತ್ತೆ ಬೀರ ಶೋಷಣೆಗೆ ಮಾನಸಿಕ ದೌರ್ಬಲ್ಯಕ್ಕೆ ಒಳಗಾಗುತ್ತಾನೆ.

ಲಕ್ಷ್ಮಿ ಕಿಟ್ಟಪ್ಪನ ಪ್ರೀತಿ - ಪ್ರೇಮಕ್ಕೆ ಮಾರಿಕೊಂಡಿದ್ದಾಳೆ. ಆದರೆ ಕಿಟ್ಟಪ್ಪ ಮಾರಿಕೊಂಡಿಲ್ಲ. ಆತನು ಕೊಂಡು ಕೊಳ್ಳುವವ ಇಂತಹ ಹೆಣ್ಣುಗಳು ಎಷ್ಟೋ ಅವನಿಗೆ ಏಕೆಂದರೆ, ಕಿಟ್ಟಪ್ಪ ಕಾಲೇಜು ಹುಡುಗ, ಧಣಿಯ ಮಗ, ರಸಿಕ, ದೈಹಿಕ ಸುಖ ಕೊಡುವ ಪಡ್ಡೆ ಹುಡುಗ ಲಕ್ಷ್ಮಿ ಕಿಟ್ಟಪ್ಪರ ಅನೈತಿಕ ಸಂಬಂಧವನ್ನು ಮರೆಯಲು ಬೀರ ಕುಡಿತಕ್ಕೆ ಜಾರಿಕೊಳ್ಳುತ್ತಾನೆ. ಬೀರನ ಕುಡಿತದ ದೌರ್ಬಲ್ಯ ಕಿಟ್ಟಪ್ಪನಿಗೆ ಗೊತ್ತು. ಆದ್ದರಿಂದಲೇ ಕಿಟ್ಟಪ್ಪ ಧೈರ್ಯವಾಗಿ ಲಕ್ಷ್ಮೀಯ ಜೊತೆ ಸೇರಲು ಅನುಕೂಲವಾಗುತ್ತದೆ. ಕುಡಿತದ ಮತ್ತಿನಲ್ಲಿ ಬೀರ ಈ ಸಂಬಂಧದ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಾನೆ. ಲಕ್ಷ್ಮಿಗೆ ಎಚ್ಚರಿಕೆಯನ್ನು ಕೊಡುತ್ತಾನೆ. ಅದು ಬೀರನ ಗಂಡಸತ್ವದ ಸ್ವಾಭಿಮಾನ ಕುಡಿದಾಗ ಗುಟುಕುತ್ತದೆ. ಅದು ಗಂಡನೊಬ್ಬನ ಪುರುಷತ್ವದ ಪ್ರಶ್ನೆಯಾಗಿ ನಿಲ್ಲುತ್ತದೆ. ಸಹಜ ಸ್ಥಿತಿಯಲ್ಲಿ ಮಾರಿಕೊಂಡ ಬೀರ ಸ್ಥಿತಿಯು ಕುಡಿದಾಗ ಅದರ ಬಗ್ಗೆ ಪ್ರತಿಭಟಿಸಿ ಉಸಿರು ಕಟ್ಟಿಸುತ್ತದೆ. "ಹ್ಞೆ... ಹ್ಞೆ... ಹ್ಞೆ... ಗತಿ ಕಾಣಿಸ್ತೀನಿ ಕಂದಾ.... ಬೆಳ್ಳಾಗಲಿ ನೀನು ಇಲ್ಲಾ, ಅವ್ನೂ ಇಲ್ಲಾ, ಬಾವ್ಗ ತರದ್ ತರದ್ ಹಾಕ್ತಿನಿ ಬೆಳಗಾಗೋದೇ ಇಲ್ವಾ? ಬಂದೇ ಬತ್ತಾನೆ. ಮಿಂಡಗಾತಿ ಮುಖ ನೋಡಾಕೆ; ಅಷ್ಟೆ ಅಲ್ಲ ಆ ರಭಸದಲ್ಲಿ ತನಗೆ ಆಶ್ರಯ ಕೊಟ್ಟ ಲಕ್ಷ್ಮಿಯನ್ನು ಅನುಭವಿಸುತ್ತಿರುವ ಕಿಟ್ಟಪ್ಪನ ಬಗ್ಗೆಯೂ ಬೀರನ ಆಕ್ರೋಶದ ಕ್ರೊಧಾಗ್ನಿ ಉರಿಯತೊಡಗುತ್ತದೆ. ಅದು "ಮಚ್ಚು ಮಡಗಿವ್ನಿ ತಲೆಮ್ಯಾಗೆ ರೆಡಿ ರೆಡಿಯಾಗೈತೆ'' ಎಂಬಂಥ ಮಾತುಗಳು ಊಳಿಗಮಾನ್ಯ ವ್ಯವಸ್ಥೆಯ ಕಿಟ್ಟಪ್ಪ ಮತ್ತು ಲಕ್ಷ್ಮಿ ಇಬ್ಬರ ಸುತ್ತ ಸುಳಿದಾಡುತ್ತದೆ. ಆದರೆ ವಾಸ್ತವ ಕ್ರೂರ ವ್ಯವಸ್ಥೆಯ ಶೋಷಣೆಯ ಮರ್ಜಿನೊಳಗೆ ಸಿಕ್ಕಿದ ಬೀರನಂತಹ ಅಮಾಯಕ ಏನೂ ತಾನೆ ಮಾಡಲು ಸಾಧ್ಯ? ಆರ್ಥಿಕ, ಸಾಮಾಜಿಕ, ಅಸಮತೋಲನದ ವಿರುದ್ಧ ಈಜಲು ಆತನು ಪ್ರವಾಹದ ವಿರುದ್ಧ ಹೋರಾಡಲು ಸಾಧ್ಯವಾಗುವುದಿಲ್ಲ. "ಕಿಟ್ಟಪ್ಪ ಕೊಟ್ಟಿರುವ ರಗ್ಗು ಲಚಮೀನ ಕವಿಚಿಕೊಂಡಿದೆ. ಕಿಟ್ಟಪ್ಪ ಕಟ್ಟಿಸಿರುವ ಮನೆ ಇಬ್ಬರನ್ನು ಕವಿಚಿಕೊಂಡಿದೆ''. ಈ ಮಾತಿನ ಧ್ವನಿ ಶಕ್ತಿಯಲ್ಲಿ ಇಡೀ ಕಥೆ ಮಾರಿಕೊಂಡವರ ಅಸಾಹಕ ಸ್ಥಿತಿಯನ್ನು ಅರ್ಥೈಸುತ್ತದೆ.

ಬೀರನಿಗೆ ಲಕ್ಷ್ಮಿಯ ಮೇಲೆ ಪ್ರೀತಿ ಗೌರವವಿಲ್ಲ ಎಂದರ್ಥವಲ್ಲ ಬೀರನಿಗೂ ಲಕ್ಷ್ಮಿಯ ಮೇಲೆ ಬಹಳ ಪ್ರೀತಿಯಿದೆ. ಆದರೆ ಅವಳ ಕಿಟ್ಟಪ್ಪನ ಸಂಬಂಧ ಇವನಿಗೆ ಇಲ್ಲದ ಆವೇಶ ಬರಿಸುತ್ತದೆ. ಇದು ಸಹಜ ಕೂಡ, ಯಾವ ಗಂಡು ತನ್ನ ಹೆಂಡತಿಯ ಇಂಥ ವರ್ತನೆಯನ್ನು ಸಹಿಸುವುದಿಲ್ಲ. ಲಕ್ಷ್ಮೀಗೂ ಸಹ ತನ್ನ ಗಂಡನ ಶಾರೀರಿಕ ಹಾಗೂ ಮಾನಸಿಕ ಬದಲಾವಣೆಯನ್ನು ಗಮನಿಸಿದ್ದಳು. ಅದಕ್ಕೆ ಕಾರಣ ಅವಳಿಗೆ ಗೊತ್ತಿರಲಿಲ್ಲ.

"ಬೀರ ಈಗೀಗ ಬದಲಾಯಿಸಿ ಹೋಗವನೆ, ಕುಡಿಯೋದು ಅಮೇಲ ಉಸಿರು ತೆಗೆದರೂ ಬೀಡಿ ಬೀಡಿ ಅಂತ ಇಳಿದು ಹೊಗವನೆ, ಮೊದಲ ಕಳೆಯೇ ಇಲ್ಲ. ಎಷ್ಟು ಹೇಳಿದರೂ ತಳ್ಳಿಬಿಡುತ್ತಾನೆ.'' ಎಂಬುದು ಲಕ್ಷ್ಮಿಯ ಮನದಾಳದ ಮಾತಾಗಿದೆ. ಇಲ್ಲಿ ಬೀರ ಲಕ್ಷ್ಮಿಯ ಸಂಬಂಧದಲ್ಲಿ ಆತಂರಿಕ ಪ್ರೀತಿ ಪರಸ್ಪರ ಒಬ್ಬರಿಗೊಬ್ಬರಲ್ಲಿ ಅನ್ಯೂನ್ಯತೆ ಹೊರನೋಟಕ್ಕೆ ಕತೆಯಲ್ಲಿ ಕಂಡುಬರುತ್ತದೆ.

ಲಕ್ಷ್ಮಿಯನ್ನು ಕುಡಿದ ಅಮಲ್ನಿಲ್ಲಿ ಬೀರ "ಓಯ್ ನನ್ನ ಲಚಮಿ... ಬಾ ಚಿನ್ನ ಬಾ, ಎನ್ನು ಮಾತು ಹಾಗೆಯೇ ನನ್ನ ಲಚುಮಿ ಚಂದುಳ್ಳಿ ಲಚಮಿ'' ಅಂದನು. ಲಕ್ಷ್ಮಿ ಮಾತನಾಡಲಿಲ್ಲ. "ಇನ್ನೂ ನಾಚ್ಕೆಯಾ ನಿಂಗೆ? ಈಟು ದಿನ ಆದ್ರೂ! ಬಾ ಅಂದರೆ ಬರ್ಬೇಕು. ಲಕ್ಷ್ಮಿ ಈಗಲೂ ಮಾತನಾಡಲಿಲ್ಲ. ಎಳೆ ಕೂಸಂತೆ ನಕ್ಕಳು. ಬೀರನಿಗೆ ಕೋಪ ನೆತ್ತಿಗೇರಿತು. ಈ ಸಂದರ್ಭದಲ್ಲಿ ಬೀರನ ತನ್ನ ಲೈಂಗಿಕ ಆವಶ್ಯಕತೆಯನ್ನು ಈಡೇರಿಸುವಲ್ಲಿ ಆಕೆಯು ತನ್ನ ಸಹಕಾರ ನೀಡದಿದ್ದಾಗ ತನ್ನ

ಆಕ್ರೋಶ ವ್ಯಕ್ತಪಡಿಸುತ್ತಾನೆ. ಇದೇ ಸಂದರ್ಭದಲ್ಲಿ ಇವರಿಬ್ಬರ ಸಂಬಂಧವನ್ನು ತನ್ನ ಅಮಲಿನ ರೊಚ್ಚಿನಲ್ಲಿ ಹೊರಗಾಗುತ್ತಾನೆ. ಹಿಂದೆ "ಪಟೇಲ ಹಟ್ಟಿಗೆ ಚಲ್ಲಣ ಸಿಕ್ಕಿಸಿಕೊಂಡು ಬಂದಿದ್ದವ ಲಚಮೀನ ಕೆಣಕಿದಂತ ಅಂತ ಕಿವಿ ಬಿದ್ದುವೆ ತಡ, ಜಗಲಿಮ್ಯಾಗ ಕಾಲಮ್ಯಾಲ ಕಾಲ ಹಾಕಿ ಕುಳಿತಿದ್ದವನ ಕತ್ತಿನ ಪಟ್ಟ ಹಿಡಿದು ಎಳೆದು ನಿನ್ನ ಸಾವ್ಕಾರಿಕೆ ಇದ್ರೆ ನಿನ್ನ ಹಟ್ಟಿಗೆ ಕನ್ಲ, ನಂಗೂ ವಸಿ ತೋರಿಸೋಕೆ ಬತ್ತೀಯಾ" ಎಂದು ಬಿಗೀ ಬೇಕು. ಅಷ್ಟಕ್ಕೆ ಪಟೇಲರು ಮಧ್ಯಕ್ಕೆ ಬಂದು ಕೈ ಮುಗಿದು ಬೇರೆ ಊರ್ನ ಹೈದ ಏನೂ ಇಳಿಯದೇ ಅಂತ ಸುಮ್ಮನಿಗಾಸಿದರು. ಹಟ್ಟಿಗೆ ಬಂದಾಗ ಲಚುಮಿ ಎದೆಗೆ ಜೋತುಬಿದ್ದಳು.

ಅಲ್ಲಿ ಇದ್ದ ಇಬ್ಬಿರ ಪ್ರೀತಿ ಸಹಜವಾಗಿದ್ದು ಮನಸ್ಸಿನ ಅಂತರಾಳದಲ್ಲಿ ಬಚ್ಚಿಟ್ಟಿದ್ದ ಪ್ರೀತಿ ಹೊರಬಂದಿದೆ. ಬೀರ ಹೆಣ್ಣಿಗೆ ಸ್ವತಂತ್ರ, ಸಮಾನತೆ ಎಲ್ಲವನ್ನು ಕೊಟ್ಟಿದ್ದಾನೆ. ತಾನು ಶೋಷಣೆಗೆ ಒಳಗಾಗಿದ್ದರೂ ಲಚುಮಿ ಶೋಷಣೆಗೆ ಒಳಗಾಗಬಾರೆಂದು ಪ್ರತಿಭಟನೆ ಮಾಡಿ ಅದಕ್ಕೆ ತಕ್ಕ ಪ್ರತಿಫಲ ಪಡೆದಿದ್ದಾನೆ. ಕಿಟ್ಟಪ್ಪ - ಲಕ್ಷ್ಮಿಯ ಸಂಬಂಧವನ್ನು ಬೀರ ಅಸಾಹಯಕತೆಯಲ್ಲಿ ಹೆಂಡತಿ ನನ್ನ ಮಾತಿಗೆ ಬೆಲೆ ನೀಡಿಲಿಲ್ಲ ಎಂಬ ಮಾತಿಗೆ ಕುಡಿದ ಅಮಲಿನ ಧೈರ್ಯದಲ್ಲಿ ತನ್ನ ಮನಸ್ಸಿನಲ್ಲಿ ಆಳವಾಗಿ ಧೈರ್ಯವಾಗಿ ಸಹಜಸ್ಥಿತಿಯಲ್ಲಿದ್ದಾಗ ಹೇಳಲಾರದ ವಿಷಯವನ್ನು ಬೀರ ಕುಡಿದಾಗ ಹೇಳುತ್ತಾನೆ.

ಲಕ್ಷ್ಮೀಗೆ ಗರ ಹಿಡಿದಂತಾಯ್ತು. ಕುಡಿದು ಮಾತಾಡಿದ ಅಂತ ತಳ್ಳಿಹಾಕುವಂತಿಲ್ಲ. ಸುಳಿವು ಹತ್ತಿದ ಮಾತು ಹೇಗೆ ಬತ್ತದೆ? ಕುಡಿದು ಮಾತಾಡಿದರೂ ಬೀರನಿಗೆ ಎಲ್ಲಾ ಗೊತ್ತಿದೆ ಎಂಬುದನ್ನು ಮನವರಿಕೆ ಮಾಡಿಕೊಂಡ ಲಕ್ಷ್ಮಿಯ ದೇಹದಲ್ಲಿ ಬೀರನ ಮಾತುಗಳು ಉಸಿರುಕಟ್ಟಿ ಕೊಲ್ಲುತ್ತದೆ. ಲಕ್ಷ್ಮಿಯು ಸಹ ಈ ರೀತಿಯ ಸಂಬಂಧಗಳನ್ನು ಹಿಂದೆ ಎಲ್ಲಿಯೂ ಅವಳ ಜೀವನದಲ್ಲಿ ನೆಡೆದಿಲ್ಲ. ಆದರೆ ಈಗ ಊರು ಬಿಟ್ಟು ಊರಿಗೆ ಬಂದಾಗ ಆಶ್ರಯ ಕೊಟ್ಟ ಗೌಡರ ಮಗ ಗೌಡರಪ್ಪೆ ದೇವರು ಎಂಬ ಮನೋಭಾವದಿಂದ ಅತಿ ವಿನಯ ಹಾಗೂ ಕೃತಜ್ಞತೆ.ಇಂದ ವರ್ತಿಸಿದ ಲಕ್ಷ್ಮಿಗೆ ಕಿಟ್ಟಪ್ಪ ಮನದಾಳದ ಹಾಗೂ ದುರ್ನಡತೆಯ ಬಗ್ಗೆ ಕಳೆ ಕೀಳಲು ಬಂದಿದ್ದ ಪುಟ್ಟಿ ಕಿಟ್ಟಪ್ಪನ ಚರಿತ್ರಾನೆ ಒದರಿ ಹೋಗವಳೆ. ಹೀಗೆ ಎಲ್ಲಾ ಗೊತ್ತಿದ್ದರೂ ಲಕ್ಷ್ಮಿಯ ಮನಸ್ಸು ಕಿಟ್ಟಪ್ಪನ ದೌರ್ಜನ್ಯಕ್ಕೆ ಊಳಿಗಮಾನ್ಯ ಶೋಷಣೆಗೆ ಸಹಕರಿಸುತ್ತಾಳೆ. ಬೀರನ ಗೊರಕೆ ಕೇಳಿಸಿದಾಗ ಮೈ ನಡುಗುತ್ತದೆ. ಬೀರ ಮಲಗವನೆ, ಅನ್ನಲು ಕಿಟ್ಟಪ್ಪ ಅಂದದ್ದು - " ಹ್ಞ... ಹ್ಞ... ಕುಡಿದು ಬಿದ್ದೈತೆ"

ಲಕ್ಷ್ಮಿಗೂ ಸಹ ಧೈರ್ಯವಿಲ್ಲ. ಅಸಾಹಾಯಕತೆಯ ಬಲೆಯಲ್ಲಿ ಬಿದ್ದು ಕಿಟ್ಟಪ್ಪನಲ್ಲಿ ಈ ರೀತಿಯಾಗಿ ವರ್ತಿಸಿದ್ದಾಳೆ. ಹಾಗೆಂದ ಮಾತ್ರಕ್ಕೆ ಬೀರನ ಮೇಲೆ ಪ್ರೀತಿ ಇಲ್ಲ ಎಂದರ್ಥವಲ್ಲ. ಮಲ್ಲಿಪುರ್ದ ಸಾವ್ಕಾರು ಕುಡ್ಡು ಎದೆ ಒಡೆದು ಸತ್ತೋದ್ರಂತೆ ಕುಡ್ಡರೆ ಕಳ್ಳನ್ನೆಲ್ಲಾ ಕೊರೆದು ಹಾಕ್ಬಿಡ್ತದಂತೆ, ಕುಡಿ ಬೇಡ ಅಂತ ಎಷ್ಟು ಒಡ್ಕಂಡ್ರೂ ಕೇಳಿಲ್ಲ ಎಂದು ಲಕ್ಷ್ಮಿ ಹೇಳುತ್ತಿದ್ದದ್ದು ಅವನ ಮೇಲಿನ ಪ್ರೀತಿಯಿಂದಲೇ ಬೀರನ ರಾತ್ರಿಯ ಮಾತುಗಳಿಂದ ಹಾಗೂ ಲಕ್ಷ್ಮಿಯ ತನ್ನ ಹಿಂದಿನ ಬದುಕಿನ ಕೆಟ್ಟ ಯೋಚನೆಗಳಿಂದ ಎಚ್ಚೆತ್ತು ಚಣಹೊತ್ತು ಸುಧಾರಿಸಿಕೊಂಡರೂ ಮಂಕು ಆರಿರಲಿಲ್ಲ. ರಾತ್ರಿಯ ನೆಪ್ಪು ಮೈಚುರುಗುಟ್ಟಿಸಲು ತೊಲೆಕಡೆ ಕಣ್ಣೋಡಿದಾಗ ಮಚ್ಚು ಅಲ್ಲೇ ಇತ್ತು. ಹೇಗೇಗೊ ಆಗಿ ಹೊರಕ್ಕೆ ಬಗ್ಗಿ ನೋಡಿದಳು. ಬೀರ ಆಗಲೆ ಎದ್ದು ಹೊರಗೆ ಯಾರ ಜೊತೆಯಲ್ಲೊ ಮಾತಾಡುತ್ತಿದ್ದನು. ಸದ್ದು ಮಾಡದೆ ಬಾಗಿಲ ಬಳಿ ಬಂದು ನೆರಕ ಕಿಂಡಿಗೆ ಕಣ್ಣು ಹಾಕಿದಾಗ ಅಚ್ಚರಿ ಆಯ್ತು. ಕಿಟ್ಟಪ್ಪ ನಿಂತಿದ್ದನು. ಯಾತಕ್ಕೂ ಕಿಟ್ಟಪ್ಪ, ನಕ್ಕು ಬೀರನೂ ನಕ್ಕನು.

ರಾತ್ರಿಯ ಬೀರನ ಕೋಪ - ಕುಡಿದ ಅಮಲಿನ ಜೊತೆಯಲ್ಲಿಯೇ ಇಳಿದು ಹೋಗಿದೆ. ಕಿಟ್ಟಪ್ಪನ ಮೇಲೆ ಮಚ್ಚು ತೆಗೆದು ಕಡಿಯುವಷ್ಟು ಕೋಪ, ಆಕ್ರೋಶ, ಸಿಟ್ಟು ಇದ್ದರೂ ಹೊರಗೆ ತೋರ್ಪಡಿಸಿಕೊಳ್ಳಲಾಗದ ಅಸಹಾಯಕತೆಯಿಂದ ಎಲ್ಲವನ್ನು ಮಾರಿಕೊಂಡು ಗುಲಾಮರಾಗಿದ್ದಾರೆ. ದೇವನೂರು ದಲಿತರ ಬದುಕನ್ನು ಚಿತ್ರಿಸುವಾಗ ದಲಿತರನ್ನು ಕೇವಲ ಪಾಪದ ಪ್ರಾಣಿಗಳೆಂಬಂತೆ ಚಿತ್ರಿಸದೆ ಅವರ ಬದುಕಿನ ವಿವಿಧ ಸಾಧ್ಯತೆಗಳನ್ನು ಪರಿಶೀಲಿಸುತ್ತ ಹೋಗುತ್ತಾರೆ. ಮಹದೇವ ಅವನ ಮನಸ್ಸಿನ ಪ್ರತಿಬಿಂಬ ಅವರ ಬರವಣಿಗೆಯ ವಿದ್ಯಾವಂತ ಪಾತ್ರಗಳಲ್ಲಿ ಕಂಡುಬರುತ್ತದೆ. ಅಸ್ಪೃಶ್ಯತೆಯು ಸಮಸ್ಯೆ, ಶೋಷಣೆ ಇವು ನೇರವಾಗಿ ಕಾಣುವುದಿಲ್ಲ. ಅದರೆ ಕತೆಯ ಚಿಪ್ಪಿನೊಳಗೆ ಅದು ಇರುತ್ತದೆ. ಅದರ ಬೆನ್ನೆಲ್ಲೇ ಅವರ ಪ್ರಜ್ಞೆಯಲ್ಲಿ ಮೌನವಾಗಿ ಬಂಡಾಯ ಅಥವಾ ಪ್ರತಿಭಟನೆಯೂ ಕಾಣದಂತೆ ಮನೆ ಮಾಡಿಕೊಂಡಿರುತ್ತದೆ. ಮಾತಿನಲ್ಲಿ ಮಿತವಾದಿಗಳು ನಿಧಾನಗತಿಯವರು ಆದರೆ ಅವರು ಮಾತನಾಡಿದರೆ ಅಷ್ಟೇ ತಾಳ್ಮೆಯಿಂದ, ತೂಕಬದ್ದವಾಗಿ ಆಳಕ್ಕಿಳಿದು ಮಾತನಾಡುತ್ತಾರೆ. ಅವರಿಗೆ ವ್ಯವಸ್ಥೆಯ ಬಗ್ಗೆ ಸಿಟ್ಟು ಇದೆ. ಅದನ್ನು ತೋರಿಸಿಕೊಳ್ಳುವುದಿಲ್ಲ. ಮಾತಿಗಿಂತ ಕ್ರಿಯೆಯಲ್ಲಿ ಸಾಧಿಸುವುದೇ ಅವರ ವ್ಯಕ್ತಿತ್ವವಾಗಿದೆ. ಆ ಎಲ್ಲಾ ಲಕ್ಷಣಗಳಲ್ಲಿ ಇವರ ವಿದ್ಯಾವಂತ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತವೆ. ದಲಿತರ ಬದುಕಿನ ಪ್ರಗತಿಯನ್ನು ಸಮಾಜದ ಪ್ರಗತಿಯನ್ನು ಜಾತಿ ಮೀರಿದ ಪ್ರೀತಿಯನ್ನು ದಲಿತ ವಿದ್ಯಾವಂತರ ಕ್ರಿಯಾತ್ಮಕತೆಯನ್ನು ಹೆಣೆದು ತೋರಿಸುತ್ತಾರೆ. ಅಂತಹ ಕತೆಯಲ್ಲಿ "ಗ್ರಸ್ತರು", "ಡಾಂಬರು ಬಂದದ್ದು", "ಒಂದು ದಹನದ ಕಥೆ", "ದತ್ತ ಕತೆ" ಗಳಲ್ಲಿ ಕಾಣಬಹುದು.

"ಗ್ರಸ್ತರು" ಕತೆಯ ನಾಯಕನ ಸಮಸ್ಯೆ ಮಹಾದೇವರ ಎಲ್ಲ ಮುಖ್ಯ ಕತೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಪಟ್ಟಣದಿಂದ ಈಗತಾನೆ ಊರಿಗೆ ಬಂದ ಹುಡುಗ ಎಲ್ಲರನ್ನೂ ಬೆಚ್ಚಿ ಬೀಳಿಸಿದ್ದಾನೆ. ಅವನು ಗೌಡರನ್ನು ನೋಡಲು ಹೋಗುತ್ತಾನೆ. ಹುಡುಗ ದಲಿತ - ಗೌಡರು ಮೇಲು ಜಾತಿಯವರು. ಈ ಕತೆಗೆ ಅದು ಮುಖ್ಯವಾಗುವುದಿಲ್ಲ. ಗೌಡರು ಕೆಟ್ಟವರಲ್ಲಿ ಒಳ್ಳೆಯ ಆಶೆಯುವುಳ್ಳವರು. ಅವನಿಗೆ ಓದಲು ಸಾಲಕೊಟ್ಟು ಕೆಲಸ ಕೊಡಿಸಿದವರು ಗೌಡರು. ಈ ಬಡ ಹುಡುಗನ ತಾಯಿ ಲಕ್ವ ಹೊಡೆದು ಮಲಗಿದ್ದಾಳೆ. ಬಡತನ ಕಿತ್ತು ತಿನ್ನುತ್ತದೆ. ಅವನ ಪ್ರೇಯಸಿ ಕಾರಣವೇ ಇಲ್ಲದೆ ದೂರವಾಗಿದ್ದಾಳೆ. ಹುಡುಗ ಗೌಡರನ್ನು ನೋಡಲು ಬಂದಾಗ ಗೌಡರು ಅವನ ಲೆಕ್ಕ ಪತ್ರ ನೋಡುತ್ತಿದ್ದಾರೆ. ಹುಡುಗ ಗೌಡರ ಮೇಲೆ ಸಿಟ್ಟಿನಿಂದ ಎಗರಲಾರ, ತನ್ನನ್ನು ಸಮರ್ಥಿಸಿಕೊಳ್ಳಲಾರ. ಹುಡುಗ ಅವನ ತಾಯಿ ಮತ್ತು ಗೌಡರು ಹಾಗೂ ದೊಡ್ಡವ್ವ ಇಷ್ಟು ಪಾತ್ರಗಳು ಕತೆಯಲ್ಲಿ ಮೌನ ಮೂಕ ಪ್ರೇಕ್ಷಣೆಯಲ್ಲಿ ಅವರದ್ದೇ ಆದ ಆಲೋಚನೆಗಳಲ್ಲಿ ನವ್ಯ ಪಂಥದ ಮಾದರಿಯ ಅಭಿವ್ಯಕ್ತಿ ತಂತ್ರಗಾರಿಕೆಯಲ್ಲಿ ನಿರೂಪಿತವಾಗಿದೆ.

ಗೌಡರು ಚಾರಮಾರವಾಗಿ ನಾಯಕನ ಹಟ್ಟಿಯ ಮುಂದೆ ಬೈಯ್ದು "ಒಂದು ಕೈಯಲ್ಲಿ ಉರಿಯುವ ಸಿಗರೇಟು ಇನ್ನೊಂದು ಕೈ ಅಲ್ಲಾಡಿಸುತ್ತಾ" ಹುಡ್ಗ ಯೋಗ್ಯ ಅಂತ ಸಾವಿರದವರ್ಗೂ ಸಾಲಕೊಟ್ಟೆ ಸಾಮಿಗಳ ಕಾಲ್ಗೆ ಬಿದ್ದು ಕೆಲ್ಸ ಕೊಡ್ಸದವ ನಾನು ಇವ್ನೆ ಈಗ ಎಷ್ಟರವನು ಗೊತ್ತಾಯ್ತ ತಕ್ಕೊ. ನಾ ಹೇಳೋದು ಇಷ್ಟೆ ಅಸ್ಲು ಬಡ್ಡಿ ಚೊತ್ಮಾಡ್ಕೊಂಡು ಹಟ್ಟಿ ಬಾಗಿಲ್ಗ ಮುಟ್ಸೋದಕ್ಕೆ ಹೇಳು. ಇಲ್ಲಾ ನೀನೆ ಕಂಡಿದಿ, ಹೊಲ ಅಂಗೈಯಗ್ಲ ಉಳಿಯಾಕಿಲ್ಲ ಎಂದು ಅವ್ವನ ಮಾತಿನಿಂದ ಗೌಡರು ಮೂಡಿ ಬಂದಿದ್ದನ್ನು ತಿಳಿದ. ಕಾಯಿಲೆಯಿಂದ ನರಳುವ ತಾಯಿಯನ್ನು ನೋವಿಸಲಾರದೆ ಗೌಡರನ್ನು ಕಾಣಲು ಹೊರಟ. ಗೌಡರ ಮನೆಯ ಬಾಗಿಲು ತಟ್ಟಿದಾಗ ಗೌಡರ ಹೆಂಡತಿ ನಾಗಮ್ಮ ಬಾಗಿಲು ತೆರೆದು ಅವನನ್ನು ಮಾತನಾಡಿಸಿ ಹೊರಟು ಗೌಡರಿಗೆ ಸುದ್ದಿ ಮುಟ್ಟಿಸಿದಳು. ಇಲ್ಲಿ ನಾಗಮ್ಮ ಗೌಡರ ಹೆಂಡತಿಯಾಗಿ ಮೇಲು

ಜಾತಿಯ ಜೀವನವಾಗಿದ್ದರು. ನಾಗಮ್ಮನಲ್ಲಿ ಅಹಂಕಾರವಿಲ್ಲ. ಕೀಳುಜಾತಿಯವನು ಎಂಬ ಜಾತಿ ಭೇದವಿಲ್ಲದೆ ನಾಯಕನೊಂದಿಗೆ ಸರ್ವೆ ಸಾಮಾನ್ಯವಾಗಿ ಮಾತನಾಡುತ್ತಾಳೆ. ಗೌಡರು ಕತ್ತು, ಎತ್ತಿ **"ಬಾ ಇವನೆ"** ಎಂದು ಕರೆದು **"ಇವಳೇ ಟೀ ಕಾಯ್ಸು"** ಎಂದದ್ದು. ನಾಗಮ್ಮ **"ಆಯ್ತು"** ಅಂದದ್ದೇ ಇಲ್ಲಿ ಜಾತಿಯ ಪ್ರಶ್ನೆಯಿಲ್ಲದೆ ವಿದ್ಯಾವಂತ ನಾಯಕನಿಗೆ ಸಾಮಾನ್ಯರಂತೆ ವರ್ತಿಸುವ ರೀತಿ, ಟೀ ಕೊಡುವುದು. ಮನೆಯ ಒಳಗೆ ಕರೆದು ಅವರ ಸರಿಸಮಾನಕ್ಕೆ ಕೂರಿಸುವುದು ಅವನ ಶಿಕ್ಷಣದಿಂದ ದೊರತೆ ಸ್ಥಾನ ಮಾನವಾಗಿದೆ ಆದರೆ ಸ್ವಾಭಿಮಾನ ಹಾಗೂ ಗೌರವಕ್ಕೂ ದಕ್ಕೆ ಬಂದಾಗ ಗೌಡರಲ್ಲಿ ಆಗುವ ಬದಲಾವಣೆಗಳು ಬೇರೆ ಯಾಗುತ್ತದೆ.

"ಈಗೆಲ್ಲಿಂದ ತರ್ಲಿ ಹೇಳಿ ಕೆಲ್ಸ ಬಿಟ್ಟು ಬಂದುದು ಗೊತ್ತೆ ಇದೆ" ಎಂದು ನಾಯಕ ಹೇಳಿದಾಗ ಗೌಡರು ಗುರುಗಾಯಿಸುವ ಥರ ನೋಡಿದರು. ಆಡುವ ಮಾತುಗಳಿಗೆ ಭಾರ ಹಾಕುತ್ತಾ, "ಸರಿ ಮತ್ತೆ ನೀಯೆನೋ ಕೆಲ್ಸ ಬಿಟ್ಟೆ ಕೆಲ್ಸ ಕೊಡಿಸಿದವರ ಮಾನ ಏನಾಗಬೇಕು". ಎಂದು ಅವರದೇ ನಗು ತಂದು ಕೊಂಡಾಗ ಹೀಗೆ ಹೇಳಬೇಕೋ ಗೊಂದಲಿಸಿಕೊಂಡಿತು. "ಹಾಗಲ್ಲ ಅದು ನಿಮಗೆ ಗೊತ್ತಾಗಲ್ಲ" ಎಂದು ನಾಯಕ ಹೇಳಿದ್ದಕ್ಕೆ ಗೌಡರು ತಗುಲಿದ ಹಾಗೆ ಎಗರಿ ಕುಳಿತರು. "ಏನೆಂದೆ"? ಎಂದು ಜೋರಾಗಿ ಅಂದು ದನಿ ಏರಿಸಿ "ನಂಗೆಲ್ಲಯ್ಯ ಗೋತ್ತಾಗುತ್ತೆ"? ಸ್ವಾಮಿಗಳ ಮುಂದ ಏಷ್ಟರವ್ನ ನೀನು ಸ್ವಾಮಿಗಳೆಲ್ಲ ಹಾಗೆ ಹೀಗೆ ಅಂತ ಭಾಷಣ ಬೇರೆ ನಿಂಗೆ. ಈಗ್ಯಾಕೆ ಪಂಚಾಯ್ತಿ, ನಂದೂ ನಿಂದೂ ವ್ಯವಹಾರ ಮುಗೀತು. ಅಸ್ಲು ಬಡ್ಡಿ ತಂದೊಪ್ಪಿಸು. ಮುಂದಕ್ಕೆ ನೀನು ನಿನ್ನ ಹಾದಿ ಎಂದು ದುಮುಗುಡುತ್ತಾ ಕುಳಿತು ಬಿಟ್ಟರು. ಸುಮ್ಮನೆ ಕೂರಲು ಆಗಲಿಲ್ಲ ಎಂದು ಗೌಡರಿಗೆ ವಿರುದ್ಧವಾಗಿ ನಡೆದುಕೊಂಡಿದ್ದರಿಂದ ಗೌಡರು ತಮ್ಮ ನಡವಳಿಕೆಯಲ್ಲಿ ಬದಲಾವಣೆ ಮಾಡಿಕೊಂಡು ಪರೋಕ್ಷವಾಗಿ ಸಮಾಜದ ಸ್ಥಾನಮಾನ ಕುರಿತು ಅವರ ಪ್ರತಿಷ್ಠೆ, ಗೌರವ ಅವರ ಮನೋಧೋರಣೆ ವ್ಯಕ್ತಪಡಿಸಿಕೊಳ್ಳುತ್ತಾರೆ.

ಗೌಡರ ಮನೆಯಿಂದ ಬಂದಾಗ ನಾಯಕನಿಗೆ ಮಾನಸಿಕವಾಗಿ ಶಾಂತಿಯಿಂದ ಸಹಕರಿಸಿದವಳು ದೊಡ್ಡವ್ವ, ಇವಳು ಹೊಲ - ಮನೆ ಕೆಲಸಕ್ಕೆ ದೇಹ ತೇಯುವುದು, ಅವ್ವನಿಗೆ ಎರಡು ಹೊತ್ತು ಗಂಜಿ ಕುಡಿಸಿ ನಿಂಬಳ ಕಾಣುವುದು. ನನ್ನನ್ನು ಯಾರಾದರೂ ಹಾಗೆ ಹೀಗೆ ಎಂದರೆ ರೇಗುವುದು. ದೊಡ್ಡವ್ವ - ನಾಯಕನ ಕುಟುಂಬಕ್ಕಾಗಿ ಎರಡು ದಿಕ್ಕುಗಳಲ್ಲಿ ತನ್ನನ್ನು ದುಡಿಸಿಕೊಂಡವಳು. ನಾಯಕನ ಅವ್ವ - ನಾಯಕ ಹೊಲ ಮನೆ ಎಲ್ಲಕ್ಕೂ ಆಧಾರವಾಗಿ ನಿಂತವಳು ದೊಡ್ಡವ್ವ.

ಮನೆ - ಹೊಲ - ಅಂತ ಯಾವುದನ್ನು ಹಾಗೂ ನಾಯಕನ ಸ್ವಂತ ವಿಚಾರವಾಗಿ ಯಾವುದಕ್ಕೂ ಯೋಚಿಸಿದ ನಾಯಕನನ್ನು ಅವನ ತಾಯಿ ರೋಗಿಷ್ಟವಾಗಿ ಮಲಗಿದ್ದರೂ ಸದಾ ಅವನ ನೆನಪಿನ ಚಿಂತೆಯಲ್ಲಿಯೇ ಅವನ ಜೀವನಕ್ಕಾ ಸದಾ ಮರುಗುತ್ತಾಳೆ.

ಗೌಡರು ಮನೆಯಿಂದ ಬಂದವನು ಸುಮ್ಮನೆ ಕೂರುತ್ತಾನೆ. ಕಾಯಿಲೆಯ ತಾಯಿ ಸುಮ್ಮನೆ ಬಿಡುವುದಿಲ್ಲ. ಗೌಡರ ಮನೆಯಲ್ಲಾದುದನ್ನು ತಿಳಿಯುವ ಕುತೂಹಲ. ತಾಯಿಯ ಬಲವಂತದ ಮಾತಿಗೆ ಎಷ್ಟೋ ಹೊತ್ತು ಸುಮ್ಮನಿದ್ದು ಹಾಗೂ ಇರಲು ಆಗದೆ "ನಂಗ ಸರಿ ಅನ್ನಿಸ್ದನ್ನೇ ಹೇಳೋದು ತಪ್ಪಾ!" ಅಂದೆ ಸರಿ ಅಂದಳು. "ನಂಗೆ ಸರಿ ಕಾಣ್ತು, ಧರ್ಮ ಕರ್ಮ ಮಠ ಸ್ವಾಮಿಗಳೆಲ್ಲ ಸೋಗು ಅಂತ ಹೇಳ್ದೆ" ಅವ್ವ ದುರುದುರು ನೋಡತೊಡಗಿದಳು. ಯಾವುದೂ ಬೇಡ ಹೊಲ ಮನೆ ಅಂತ ಇರೋದು ಅಂತ ಬಂದ್ರೆ ಗೌಡ್ರಿಗೆ ಚುಚ್ಕೊಟ್ಟವರೆ.... ಎಂದು ಅಂದು

ನೋಡಿದೆ. ತುಂಬ ನೋವು ತಿನ್ನುತ್ತಿದ್ದಳು. ಸುಮ್ಮನೆ ನೋಡಿದೆ. ಅವ್ವ ಜೋರು ಉಸಿರು ತೆಗೆದುಕೊಂಡು ಹಣೆ ಚಚ್ಚಿಕೊಂಡಳು. ಬಹಳ ಕಷ್ಟ ಪಟ್ಟು ಕಣ್ಣು ತೆಗೆದು ಸೂರಿಗೆ ನೆಟ್ಟು ಆಗದೆ ಮತ್ತೆ ನೋಡಿದಾಗ ಬಿರಿಯುವ ತುಟಿಗಳು, ಕಣ್ಣಿಂದ ದೊಳ ದೊಳ ನೀರು ದಿಮುಗಿಡುತ್ತಿದ್ದ ಅವ್ವ ಕೆಟ್ಟ ದನಿಯಲ್ಲಿ "ಈಗ್ಗೆ ಹೋಗಿ ತಪ್ಪಾಯ್ತು ಅಂತ ಕೇಳ್ಕೋ ದೇವರಂಥವರತ್ರ ನಿಂದು ನಿಷ್ಟುರ ಇಷ್ಟಕ್ಕೂ ನಾ ಮಾಡಿದ ಕರ್ಮ ಈಗ್ಲೇ ಹೋಗು'' ಎಂದು ತವಕಿಸತೊಡಗಿದಳು. ಇಲ್ಲಿ ಗಂಡು - ಹೆಣ್ಣಿನ ಸಂಬಂಧ. ಸಮಾಜದ ಕಟ್ಟಳೆ ಮುಲಾಜು, ಸಹನೆ ಮತ್ತು ಅವಮಾನಗಳನ್ನು ಹೇಗೆ ಒಟ್ಟಿಗೆ ಕೊಡುತ್ತದೆ ಎಂಬುದನ್ನು ಗಮನಿಸಬಹುದು. ಗೌಡರಿಗೆ ನಿಜಕ್ಕೂ ಗೊತ್ತಿರುವುದಿಲ್ಲ. ಏಕೆಂದರೆ ಅವರ ಮನಸ್ಸು ಕೆಲಸ ಮಾಡುತ್ತಿರುವುದೇ ಬೇರೆ ಸ್ತರದಲ್ಲಿ ಅವ್ವನಿಗೆ ಗೊತ್ತಾಗುವುದಿಲ್ಲ. ಏಕೆಂದರೆ ತನ್ನ ಮಗ ಅವಮಾನ ಅನುಭವಿಸಲು ಕಾರಣಗಳೇ ಅವಳಿಗೆ ಹೊಳೆಯುವುದಿಲ್ಲ. ಈ ಕತೆಯ ಎಲ್ಲಾ ಪಾತ್ರಗಳಿಗೆ ಆತ್ಮಗೌರವ ಮತ್ತು ಅವಮಾನದ ನೀತಿಯ ಗೆರೆಗಳಿವೆ. ಕೊನೆಗೆ ನಾಯಕ ಅರ್ಥ ಮಾಡಿಕೊಳ್ಳದ ತಾಯಿಯೊಂದಿಗೆ ಹೆಚ್ಚಿಗೆ ಮಾತನಾಡದೆ "ಈಗ ನಾವು ಬಿದ್ದಿದ್ದೀವಾ'' ಎಂದಷ್ಟೇ ಹೇಳಿ ದಪದಪ ಎದ್ದು ಹೊರಬರುತ್ತಾನೆ. ಕಥೆಗಾರ ಕೊಡುವ ಪದ ವಿವರದಲ್ಲಿಯೇ ನಾಯಕನ ನೋವು, ಸಿಟ್ಟು, ತಳಮಳ ಅಸಹಾಯಕತೆ ಎಲ್ಲವನ್ನು ಎರೆಕ ಹೊಯ್ದಿದ್ದಾರೆ. ಮನಸ್ಸಿನ ಶಿತಲ ಸಮರದ ದ್ವಂದ್ವದೊಂದಿಗೆ ನಾಯಕ ಮೌನ ಬಿರುಗಾಳಿಯಲ್ಲಿ ಸಿಲುಕುತ್ತಾನೆ.

"ಒಂದು ದಹನ ಕತೆ''ಯಲ್ಲಿ ನಾಯಕ - ಕಮಲಿ, ಅಜ್ಜಿ, ದೊಡ್ಡಪ್ಪ - ಅವ್ವ - ನಾಗಿ ಇಷ್ಟು ಪಾತ್ರಗಳಲ್ಲಿನ ಆಂತರಿಕ ಸಂಬಂಧ ಶೀತಲ ಸಮರದಂತೆ, ಮೌನ ಬಿರುಗಾಳಿಯಂತೆ ಇದೆ. ನಾಯಕ - ಕಮಲಿ ಇಬ್ಬರನ್ನು ಬಿಟ್ಟರೆ ಇನ್ನು ಉಳಿದ ಎಲ್ಲಾ ಪಾತ್ರಗಳಲ್ಲಿಯೂ ಹೊಂದಾಣಿಕೆ ಇಲ್ಲದಂತಾಗಿದೆ.

ಆಧುನಿಕ ವಿದ್ಯಾವಂತರು, ಸ್ನೇಹ - ಪ್ರೀತಿ, ಪ್ರೇಮ - ಸಹಬಾಳ್ವೆ ಜಾತ್ಯಾತೀತತೆ ಗಂಡು - ಹೆಣ್ಣಿನ ಪ್ರೀತಿ, ಕಾಮ, ಸ್ನೇಹ - ಸಂಬಂಧಗಳು, ಬದುಕಿನ ಮೂಲಭೂತ ಸತ್ಯಗಳು, ಮನುಷ್ಯ ಕಟ್ಟಿಕೊಂಡಿರುವ ಸ್ವಾರ್ಥ, ಜಾತಿ, ಮತ, ಧರ್ಮಗಳ ಗೋಡೆಗಳನ್ನು ಮೀರಿ ಬದುಕು ಕಟ್ಟುವುದೇ ಅವುಗಳ ಜಾತ್ಯಾತೀತ ಲಕ್ಷಣ ಅವುಗಳ ಪರಿವರ್ತನೆ ಯಾರು ತಡೆಯಲಾರರು ಈ ಸತ್ಯವನ್ನು ದ್ಯಾವನೂರು ಅವರು ಅವರ "ಗ್ರಸ್ತರು'', ''ಒಂದು ದಹನದ ಕತೆ'' ಮತ್ತು "ದತ್ತ'' ಕತೆಗಳಲ್ಲಿ ಕಂಡುಬರುತ್ತದೆ. ಈ ಮೂರು ಕತೆಗಳಲ್ಲಿ ನಾಯಕರ ಪ್ರಗತಿಪರ ದೋರಣೆಗಳನ್ನು ಮೇಲೇರಬೇಕೆಂಬ ಆಕಾಂಷೆಯನ್ನು ಅವರ ಬಂದುಗಳೇ ಅರ್ಥಮಾಡಿಕೊಳ್ಳಲಾಗದ ಬಗೆಯನ್ನು ಮನೋಜ್ಞವಾಗಿ ದಾಖಲು ಮಾಡಿದ್ದಾರೆ. ನವ್ಯ ಚಳುವಳಿಯಿಂದ ತುಂಬಾ ಪ್ರಭಾವಿತವಾದುದರಿಂದಲೇ ಏನೋ ಇತರ ನವ್ಯ ಕತೆಗಳಿಗಿಂತ ಇವು ತುಂಬಾ ಭಿನ್ನವಾಗಿಲ್ಲ ಎನಿಸುತ್ತದೆ.

ಈ ಕತೆಯಲ್ಲಿ ವಿದ್ಯಾವಂತ ಸಮಸ್ಯೆ ಇನ್ನೊಂದು ರೀತಿಯದಾಗಿದೆ. ಉದ್ಯೋಗಸ್ಥನಾದ ನಾಯಕ ಜಾತಿ ಮತ ಮೀರಿದ ಪಾಶದಲ್ಲಿ ಅಂತರಜಾತಿಯ ವಿವಾಹವಾಗಿ ಅದರಿಂದ ಊರಿನಲ್ಲಿ ಎದುರಿಸಬೇಕಾದ ಸಮಸ್ಯೆಯ ಗಂಭೀರತೆಯನ್ನು ಈ ಕತೆ ನಿರೂಪಿಸುತ್ತದೆ. ಕತೆಯಲ್ಲಿ ಜಾತಿಯಿಲ್ಲದ ಜಾತಿಯ ಹುಡುಗಿಯನ್ನು ಪ್ರೀತಿಸಿದ್ದಾನೆ. ಅವರ ಪ್ರೇಮ - ಪ್ರೀತಿ, ಸಂಬಂಧಗಳು ಮುಂದುವರೆದು ಮಗು ಪಡೆಯುವ ಸಂಬಂಧಕ್ಕೆ ಬೆಳೆದಿದೆ. ಅವರ ಪ್ರೇಮ ಸಂಬಂಧ ಈ ಕತೆಯಲ್ಲಿ ಫಲನೀಡಿದೆ. ತನ್ನ ಪ್ರೇಯಸಿ ಮೇಲ್ಜಾತಿಯ ಕಮಲಿಯೊಡನೆ ಪಟ್ಟಣದಲ್ಲಿ ತನ್ನ ಅಜ್ಜಿಯ ಜೊತೆಯಲ್ಲಿ ಸಂಸಾರ ಹೂಡಿದ್ದಾನೆ. ಮೇಲ್ಜಾತಿಯ ಕಮಲಿ ಕೀಳುಜಾತಿಯ ಅಜ್ಜಿಯ ಜೊತೆಯಲ್ಲಿ ಹನ್ನೆರಡು ವರ್ಷ ಯಾವುದೇ

ಕಿತ್ತಾಟವಿಲ್ಲದೆ, ಭೇದ ಭಾವವಿಲ್ಲದೆ ಹೊಂದಾಣಿಕೆ ಮಾಡಿಕೊಂಡು ಸಂಸಾರಸಾಗಿಸಿದ್ದು ಅದು ಅಂತರಜಾತಿಯ ವಿವಾಹದ ಉತ್ತಮ ಬೆಳವಣಿಗೆಯಾಗಿ ಕಂಡುಬರುತ್ತದೆ.

ದೊಡ್ಡಪ್ಪ ತನ್ನ ಮೊಮ್ಮಗಳನ್ನು ನಾಯಕನಿಗೆ ಕೊಡಬೇಕೆಂಬ ಹಠ ಹಿಡಿದಿದ್ದು, ಮದುವೆಗೆ ಮುಂಚೆ ಮೇಲ್ಜಾತಿಯ ಕಮಲಿಯು ನಾಯಕನಿಂದ ಗರ್ಭಿಣಿಯಾಗಿದ್ದನ್ನು ದೊಡ್ಡಪ್ಪ "ಈಗೇನು ಆಗಿಲ್ಲ ತಕ್ಕೊ ಅವರ ಜಾತಿಲೆ ಒಬ್ಬ ಕಾರಣ ಅಂತ ಒಪ್ಪಿಸಿ ಬಿಟ್ಟಿದಿನಿ. ಅವಳಿಗೆ ಹಣ ಕಟ್ಟಾಕ ಇನ್ನೂರು ರೂಪಾಯಿ ಕೊಟ್ರೆ ತೀರಿತು. ಈ ಕಾಟವೇ ಇಲ್ಲ! ಎನ್ನುವ ದೊಡ್ಡಪ್ಪನು ತಡೆದೂ, ತಡೆದೂ ಅಂದ ಹಾಗೆ ಖಾತಕ ಕೊಡಿ ಬಂದು ಹೆಂಗೂ ಎಲ್ರೂ ಒಪ್ಪವ್ರೆ ಲಗ್ನ ಕಟ್ಸಾಯ್ತು ನನ್ನ ಆಸ್ತಿ ಇನ್ನಾರಿಗೆ ಸೇರಬೇಕು ಹೇಳು. ನಮಗ್ಯಾವ ಗಂಡು ಮಕ್ಕಳಾ ಇದ್ದಾವು? ಏನೆ ಆಗ್ಲಿ ಕಾಡು ಮಾಡಕ್ಕೆ ಆಗೋಲ್ಲ ನೋಡು" ಎಂದು ಅವನ ಸ್ವಾರ್ಥದ ಆಲೋಚನೆಗಳನ್ನು ಹೊರಹಾಕುತ್ತಾನೆ. ತನ್ನ ಸ್ವಂತ ಮೊಮ್ಮಗಳ ಜೀವನಕ್ಕಾಗಿ ಇನ್ನೊಂದು ಹೆಣ್ಣಿನ ಜೊತೆ ಅದು ಮೇಲ್ಜಾತಿಯ ಹೆಣ್ಣಿನ ಜೊತೆಯಲ್ಲಿ ದೌರ್ಜನ್ಯ ಮಾಡುವುದನ್ನು ಕಂಡರೆ ಹೆಣ್ಣಿಗೆ ಎಲ್ಲಾ ಜಾತಿ - ಮತ - ಧರ್ಮ ಭೇದವಿಲ್ಲದೆ ಎಲ್ಲಾ ಕಡೆಯಲ್ಲಿಯೂ ಶೋಷಣೆಯಾಗುತ್ತಿರುವುದು ಪರೋಕ್ಷವಾಗಿ ಕಂಡುಬರುತ್ತದೆ. ಒಂದು ದೃಷ್ಟಿಯಲ್ಲಿ ಹೇಳುವುದಾದರೆ ದಲಿತ ಸ್ತ್ರೀಯರಿಗೆ ಇರುವಷ್ಟು ಸ್ವಾತಂತ್ರ್ಯ ಮೇಲುಜಾತಿಯ ಹೆಣ್ಣು ಮಕ್ಕಳಿಗೆ ಇಲ್ಲದಂತಾಗಿದೆ. ದಲಿತ ಸ್ತ್ರೀಯರು ಹೊಲ - ಮನೆ - ಜೀತ ಮನೆಗೆಲಸಕ್ಕಾಗಿ ಹೊರಗೆ ಹೋಗಿ ದುಡಿಯುತ್ತಾರೆ. ಆದರೆ ಇವರಿಗೆ ಶಿಕ್ಷಣದಲ್ಲಿ ಸ್ವಾತಂತ್ರ್ಯವಿಲ್ಲ ಇದಕ್ಕೆ ತದ್ವಿರುದ್ದವಾಗಿ ಮೇಲುಜಾತಿಯ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಸ್ವಾತಂತ್ರವಿದ್ದು, ಉಳಿದೆಲ್ಲಾ ಕ್ಷೇತ್ರದಲ್ಲಿ ಶೋಷಣೆ ಎಲ್ಲಾ ವರ್ಗದ - ಮತ - ಧರ್ಮದ ಹೆಣ್ಣು ಮಕ್ಕಳ ಮೇಲೆ ನೆಡೆಯುತ್ತದೆ. ಗಂಡಿನ ಗುಲಾಮರಾಗಿ ಹೆಣ್ಣು ದುಡಿಯುವುದು ಇವರ ಕತೆಗಳಲ್ಲಿ ಕಂಡುಬರುತ್ತದೆ. ಆದರೆ ಒಡಲಾಳ ಕಾದಂಬರಿಯಲ್ಲಿ ಸ್ವಲ್ಪ ವ್ಯತಿರಿಕ್ತವಾಗಿ ಕಂಡುಬರುತ್ತದೆ.

ಆದರೆ ಈ ಕತೆಯಲ್ಲಿ ನಾಯಕನಿಗೆ ಸಮಸ್ಯೆ ಉಂಟಾಗುವುದು ಸತ್ತ ಅಜ್ಜಿಯ ದೇಹವನ್ನು ಊರಿನಲ್ಲಿ ಮಣ್ಣು ಮಾಡಲು ತಂದಾಗ ನಾಯಕ ಮೇಲ್ಜಾತಿಯ ಕಮಲಿಯೊಡನೆ ಮದುವೆಯಾದ್ದರಿಂದ ತನ್ನ ಮನೆ ಸಂಬಂಧ - ಊರು ಎಲ್ಲವನ್ನು ದಿಕ್ಕರಿಸಿ, ಊರು ಬಿಟ್ಟು ನಗರದಲ್ಲಿ ಜೀವನ ಮಾಡುತ್ತಿರುವುದರಿಂದ ಅಜ್ಜಿಯ ಕೊನೆಯ ಆಸೆ ಊರಿನಲ್ಲಿ ಪ್ರಾಣ ಬಿಡುವ - ತನ್ನ ಅಂತ್ಯ ಸಂಸ್ಕಾರ ತನ್ನ ಸ್ವಂತ ಊರಿನಲ್ಲಿ ನೆಡೆಬೇಕೆಂಬ ಮನದಾಸೆಗೆ ಕಮಲಿಯ ಮಾತಿಗೆ ಒಡಂಪಟ್ಟು ಊರಿಗೆ ಬಂದಾಗ ಅಜ್ಜಿಯ ಹೆಣ ಮಣ್ಣು ಮಾಡಲು ಅವಕಾಶ ಕೊಡುವುದಿಲ್ಲ. ಹೀಗೆ ಈ ಸಮಸ್ಯೆ ಬಿಗಡಾಯಿಸಿಕೊಂಡಿದೆ. (ಇಂತಹ ಸಂದರ್ಭದಲ್ಲಿ ಯು. ಆರ್. ಅನಂತಮೂರ್ತಿಯವರ **"ಸಂಸ್ಕಾರ"** ಕೃತಿ ನೆನಪಿಗೆ ಬರುತ್ತದೆ).

ನಂತರ ಕುಲಸ್ತರೆಲ್ಲಾ ಸೇರಿ ಪಂಚಾಯ್ತಿಗೆ ಸೇರಿ ಚರ್ಚೆಯಲ್ಲಿ ತೊಡಗಿ, ಮೇಲ್ಜಾತಿಯವರು ಪಟ್ಟಿನ ಮೇಲೆ ಪಟ್ಟು ಹಾಕುತ್ತಿದ್ದಾರೆ. ಅಜ್ಜಿಯ ಹೆಣ ಪಕ್ಕದಲ್ಲಿಯೇ ಇಟ್ಟುಕೊಂಡು ಭಯ ನೋವು ದುಃಖ ಒಂದು ಕಡೆಯಾದರೆ ವ್ಯವಸ್ಥೆಯ ದೌರ್ಜನ್ಯ ಇವುಗಳ ಮಧ್ಯೆ ಅಜ್ಜಿಯ ದೇಹವನ್ನು ಮಣ್ಣು ಮಾಡಬೇಕಾದ ಜವಾಬ್ದಾರಿ ಮುಂತಾದ ಇಕ್ಕಟ್ಟುಗಳಲ್ಲಿ ನಾಯಕ ಸಿಕ್ಕಿಬಿದ್ದಿದ್ದಾನೆ. ಯಜಮಾನ ಸಿದ್ದಪ್ಪ ಒಂದು ಕೈ ಅಲ್ಲಾಡಿಸುತ್ತಾ "ನಾನೇನು ಬೇಕಾದಷ್ಟು ಯತ್ನ ಮಾಡ್ದೆ. ಸರಿಹೊಂದಿಲ್ಲ. ಊರ ಮಾನಾ ತೆಗೆದವ, ವಿಷದ ಹಾವಾ ಎಲ್ಲಾರೂ ಸೇರಿಸಿ ಕೊಳ್ಳುವುದು ಉಂಟಾ. ಅಂತಾನೆ ಪಟ್ಟ ಕುಂತು ಬಿಟ್ಟರು. ನಿಮ್ಮ ದೊಡ್ಡಪ್ಪನಂತು ಗುಂಡಿನ ಹಾಗೆ ಮುಗಿಯೋ ವರಗೂ ಸುಮ್ನೆ ಕುಂತಿದ್ದ.

ಏನೂ ಮಾತಾಡಕ್ಕಾಗಿಲ್ಲ'' ಎಂದಾಗ ದಿಕ್ಕು ದೋಚದಂತಾಗಿ ವ್ಯವಸ್ಥೆಯ ಆಕ್ರೋಶವನ್ನು ವ್ಯಕ್ತಪಡಿಸುತ್ತಾನೆ. ''ಮನುಷ್ಯರ ನೀವು? ತೊಲಗಿ ಇಲ್ಲಿಂದ ಎಂದು ಬೈದು'' ಬಿಡುತ್ತಾನೆ. ಸಿದ್ದಪ್ಪ ಕಣ್ಣು ದೊಡ್ಡದು ಮಾಡಿ ಮೇಲಿಂದ ಕೆಳಕ್ಕೆ ನೋಡಿ ''ತೊಲಗುವುದು ಯಾರ?'' ಅಂದು ಉರಿಗಣ್ಣಿನಲ್ಲಿ ನೋಡುತ್ತಾನೆ. ಆ ಮೇಲೆ ಉಸಿರುಬಿಟ್ಟು ಸಣ್ಣಕ್ಕೆ ನಕ್ಕು ಬರ ಬರ ಹೋಗಿ ಬಿಡುತ್ತಾನೆ. ತನ್ನ ಆಲೋಚನೆಯಲ್ಲಿ ಪಂಚಾಯ್ತಿಗೆ ಸೇರುವಾಗಲೇ ಪರ್ಯಾಯವಾಗಿ ಚಿಂತಿಸಿದಂತೆ ಮನೆಯ ಅಂಗಳದಲ್ಲಿ ಇದ್ದ ಬದ್ದ ಸೌದೆ, ಗಳುಗಳನ್ನು ತಂದು ಹಾಕಿ ಅಜ್ಜಿಯ ಹೆಣವನ್ನು ಸುಟ್ಟು ಹಾಕಿ ಕತ್ತಲಲ್ಲಿ ಓಡುತ್ತಾನೆ ನಾಯಕನು ಊರಿನ ವ್ಯವಸ್ಥೆಯ ಭಯದಿಂದ ಓಡಿದರೂ ಊರಿನ ವ್ಯವಸ್ಥೆಯ ಕಟ್ಟುಪಾಡು ಏನೇ ಇದ್ದರೂ ಭಯ ಆಂತಕಗಳ ನಡುವೆ ತಾನು ಮಾಡಬೇಕಾದ ಕೆಲಸವನ್ನು ಮಾಡಿಯೇ ಓಡಿ ಹೋಗುತ್ತಾನೆ. ಇಲ್ಲಿನ ಸಂಬಂಧಗಳು ಔಪಚಾರಿಕವಾಗಿಯೇ ಕತೆಯಲ್ಲಿ ಮುಂದುವರೆಯುತ್ತದೆ. ದೊಡ್ಡಪ್ಪನ ಸ್ವಾರ್ಥದ ಹಠ, ಊರಿನ ವ್ಯವಸ್ಥೆಯ ದೌರ್ಜನ್ಯಗಳು, ಅಜ್ಜಿಯ ಮನದಾಳದ ಆಸೆ ಕಮಲಿಯ ಹೊಂದಾಣಿಕೆ, ನಾಯಕನನ್ನು ಮಾನಸಿಕವಾಗಿ ದಹಿಸಿದರೆ, ಅಜ್ಜಿಯ ಶವ ಕತೆಯಲ್ಲಿ ದಹಿಕವಾಗಿ ಹೋರಾಟದ ಹಂತದಲ್ಲಿ ದಹಿಸುತ್ತದೆ.

''ದತ್ತ'' ಕತೆಯು ಸಹ ವಿದ್ಯಾವಂತ ನಾಯಕನ ಸಂಬಂಧಗಳ ಹುಡುಕಾಟದ ಮಾನಸಿಕ ದೂರವನ್ನು ಕತೆಗಾರ ತಿಳಿಸುತ್ತಾನೆ. ಹೊಂದಾಣಿಕೆಯ ಹೋರಾಟವಿಲ್ಲದೆ ನಾಯಕನ ತಳಮಳ, ಸಾಕಿದ ತಂದೆ - ತಾಯಿ, ಬೆಳೆಸಿದ ತಂದೆ - ತಾಯಿ, ತಂಗಿ, ತಮ್ಮಂದಿರು ಇವುಗಳ ಅರಿವೇ ಇಲ್ಲದೆ ಇದ್ದ ಜಗತ್ತಿಗೆ ರಕ್ತ ಸಂಬಂಧದ ಹೊಸ ಜನರ ಪರಿಚಯ ಒಟ್ಟಾರೆಯಾಗಿ ಆದಿಯಿಂದ ಅಂತ್ಯದವರೆಗೆ ನಾಯಕ ''ದತ್ತ'' ನಾಗಿ ಅಲ್ಲೂ ಸಲ್ಲದೆ ಇಲ್ಲೂ ಸಲ್ಲದೆ ಕೊನೆಯವರೆಗೂ ಅವನು ದತ್ತುವಾಗಿಯೇ ಉಳಿಯುತ್ತಾನೆ.

''ಮಾರಿಕೊಂಡವರು ಕತೆಯಲ್ಲಿ ದಲಿತರ ಮಾರಿಕೊಂಡ ಸ್ಥಿತಿ ಒಂದು ರೀತಿಯಲ್ಲಿ ನಡೆದರೆ ಇಲ್ಲಿ ಮಗನನ್ನು ಮಾರಿಕೊಳ್ಳುವ ಸ್ಥಿತಿ ಇನ್ನೊಂದು ರೀತಿಯದಾಗುತ್ತದೆ. ಇಲ್ಲಿ ಬದುಕಿನ ಸ್ವಾರ್ಥ ಮುಖ್ಯವಾದರೆ ಅಲ್ಲಿ ಬದುಕಿನ ಅನಿವಾರ್ಯತೆ ಹಾಗೆ ಮಾಡುತ್ತದೆ'' (3. ಕನ್ನಡ ದಲಿತ ಸಣ್ಣ ಕತೆಗಳಲ್ಲಿ ದಲಿತ ಸಂಸ್ಕೃತಿ ಡಾ. ಸಿ.ಟಿ. ಹೊನ್ನಯ್ಯ ಪುಟ - 222) ದತ್ತು ಕೊಟ್ಟ ವಿದ್ಯಾವಂತನ ಡೋಲಾಯಮಾನ ಸ್ಥಿತಿ, ಬದುಕಿನ ಸಂದಿಗ್ಧ ಪರಿಸ್ಥಿತಿಯ ಪರಿಣಾಮ ಚಿತ್ರಣ ಕತೆಯಲ್ಲಿದೆ. ಇದು ಒಂದು ರೀತಿಯಲ್ಲಿ ಈ ಕತಾನಾಯಕನ ಬದುಕಿನ ಅತಂತ್ರ ಸ್ಥಿತಿಯ ಅನಾವರಣವಾಗಿದೆ. ಸಾಕಿದ ತಾಯಿ ಕರೆದು ಬೈದು ಬುದ್ದಿ ಹೇಳಿದರೂ ಅದನ್ನು ಆತ ಲೆಕ್ಕಕ್ಕೆ ತೆಗೆದುಕೊಳ್ಳದೆ ಸಾಕಿದ ಸತ್ತ ತಂದೆಗೆ ತಿಥಿಯನ್ನು ಮಾಡದೆ ಸರಿಯಾಗಿ ಮನೆಗೂ ಬಾರದೆ, ಕುಡಿತ ಇನ್ನೂ ಹಲವಾರು ಕೆಟ್ಟ ಚಟಗಳಿಗೆ ಬಲಿಯಾಗಿ ಓದು ಬಿಟ್ಟು ಬದುಕನ್ನು ಅತಂತ್ರ ಮಾಡಿಕೊಂಡು ಸಾಕಿದ ತಾಯಿಯು ಸಹ ಇವನ ಕೊರಗಿನಲ್ಲಿ ದಿನದ ಹಾಗೆ ಮಲಗಿದ್ದವಳು ಮುತ್ತೆ ಏಳಲೇ ಇಲ್ಲ. ಇಲ್ಲಿ ಸಾಕಿದ ತಂದೆ - ತಾಯಿ ಇಲ್ಲದಂತೆ ಅನಾಥನಾಗಿರಬೇಕಾದರೆ ಊರಿನಿಂದ ಬಂದ ಪತ್ರ ''ಹೊಸದಾಗಿ ಹುಟ್ಟಿದೆ ಅಂತ ತಿಳಿದುಕೊಂಡಾದರೂ ಊರಿಗೆ ಬಾ'' ಎಂಬುದು ಹೆತ್ತ ಸಂಬಂಧ ಅನ್ನುವುದಕ್ಕೆ ಅರ್ಥವೆ ಇಲ್ಲವೆ ಎಂದು ಮತ್ತು ಯೋಚನೆಗೆ ಬಂತು.

ದತ್ತು ಕೊಡುವಾಗ ಏಳು ವರ್ಷದ ಹುಡಗ ಊರನ್ನು ಹೆತ್ತ ಹಾಗೂ ಒಡಹುಟ್ಟಿದ ಸಂಬಂಧಗಳನ್ನು ಕಲ್ಪಿಸಿಕೊಳ್ಳಲು ಅಸಾಧ್ಯವಾಗಿರುವಾಗ ಹೆತ್ತ ಅಪ್ಪನ ಪತ್ರವೂ ಎಲ್ಲರನ್ನೂ ಮೂಡಿಸಲು ಪ್ರಯತ್ನಿಸುತ್ತಿತ್ತು. ಅವ್ವ ಮಗ, ಮಗ ಎಂದು ಹಲುಬುತ್ತಿದ್ದಾಳೆ. ತಮ್ಮನ ಹೆಂಡತಿ ಹೆರಿಗೆಗೆ ತವರಿಗೆ ಹೋಗಿದ್ದಾಳೆ. ತಂಗಿ ಮೈನೆರೆದು ಮದುವೆಗೆ

ಬಂದಿದಾದಳೆ. ನಾಲ್ಕನೇ ಕ್ಲಾಸು ಓದುವ ತಮ್ಮ ಚೂಟಿ, ಚೂಟಿ. ಅಪ್ಪನಿಗೆ ಸಾಲ ಸೋಲ. ಇಂತಹ ಪರಿಸ್ಥಿತಿಯಲ್ಲಿ ಊರಿನಲ್ಲಿಯೇ ಇರಬೇಕೆಂದು ಅವರ ಕರೆಯ ಮೇರೆಗೆ ಊರಿಗೆ ಬರುವಾಗ ತನ್ನದೇ ಆದ ಆಲೋಚನೆಯಲ್ಲಿ ಬಂದು ಊರಿನ ಹಾಗೂ ತನ್ನ ಅಸ್ತಿತ್ವವನ್ನು ಕಲ್ಪಿಸಿಕೊಂಡನು.

ಆದರೆ ಅಲ್ಲಿ ನಡೆದ ವಿಚಾರಗಳೇ ಬೇರೆಯಾಗಿ ನಿಲ್ಲುತ್ತದೆ. ಇವರು ಕರೆಸಿದ್ದು ತನ್ನ ಮಗನನ್ನಾಗಿ ಮನೆಯಲ್ಲಿಟ್ಟುಕೊಳ್ಳಲು ಅಲ್ಲ ಎಂಬುದು ಆತನಿಗೆ ಗೊತ್ತಾಗಿದೆ. ತಂದೆ ಕಾಗದ ಬರೆದು ಬರಲು ಒತ್ತಾಯ ಮಾಡುತ್ತಿದ್ದುದರ ಹಿಂದಿನ ಅನುಮಾನ ನಾಯಕನನ್ನು ಕಾಡುತ್ತಿದೆ. ಆತನ ಮನಸ್ಥಿತಿ ಡೋಲಾಯಮಾನವಾಗಿ ತಿರುಗುತ್ತಿದೆ. ಆನಂದವಿಗೆ ತನ್ನ ತಂದೆ ಬೇರೆ ಮನೆಗೆ ತನ್ನನ್ನು ಮತ್ತೆ ದತ್ತು ಕೊಡುವ ವಿಚಾರ ತೆಗೆದಾಗ ಆತನ ಗೊಂದಲಕ್ಕೆ ಕಾರಣವಾಗಿ ಸಿಡಿಮಿಡಿಗೊಳ್ಳುತ್ತಾನೆ. ಎಲ್ಲಾ ಮರೆತು ಇಲ್ಲಿ ಇರುವ ತಾನು ಇವರಂತೆ ಆಗುವ ಎಂದು ಯೋಚನೆ ಹೊತ್ತು ಬಂದಿದ್ದಕ್ಕೆ ಕಲ್ಲು ಬೀಳುತ್ತದೆ. "ದೇವ್ರದಯ ನಾ ಅಂದ್ಕೊಂಡಂಗೆ ಆಯ್ತು. ಈ ಕಾಡ್ಗೇ ಗಟ್ಟಿಕುಳ ಅವ್ರು ಹೊಲಮನೆ ಅಂತ ವಿಪರೀತ, ಚಿನ್ನದಂಥ ಒಬ್ಳೇ ಮಗ್ಳು, ಏನೋ ದೊಡ್ಡ ಮನಸ್ಸು ಮಾಡಿ ನಿನ್ನ ದತ್ತು ತಂದ್ಕೊಳ್ಳಕ್ಕೆ ಒಪ್ಪಿ ಕಂಡ್ರು" ಆನಂದುವಿಗೆ ಗೊಂದಲಿಸಿಕೊಂಡು ಮೈತುಂಬ ಸಿಡಿಮಿಡಿಎದ್ದಿತು.

ತೆಂಗಿಯ ಜೊತೆಯಲ್ಲಿ ತಂಗಿ ಎಂದು ಕೊಂಡು ಒಪ್ಪದ ಮನಸ್ಸಿನಿಂದ ಒಪ್ಪಿ ಹಿತ್ತದಲ್ಲಿ ಗಿಡಗಳಿಗೆ ನೀರು ಹಾಕುತ್ತಿದ್ದ ತಂಗಿಯನ್ನು ಕಂಡು ನಗಲು ನೋಡಿದೆ. ಆದರೆ ತಂಗಿ ಥರ ಅಕ್ಕ ತುಳುಕಿಸಿ ನಗಲು ಬರುವುದಿಲ್ಲ. ತಮ್ಮನ ಥರ ಈ ಮಣ್ಣಲ್ಲೇ ಮೂಡಿಸಿದಂತೆನಿಸುವುದಿಲ್ಲ. ಅಪ್ಪನ ವ್ಯವಾರ, ಗಪ್ಪಗಿರುವ ತಮ್ಮ ಅವ್ವನ ಹದ್ದು ಬಸ್ತು ಇವರ ಯಾರು ಏನು ಅನ್ನಿಸುವುದಿಲ್ಲ. ಅದರಲ್ಲಿಯೂ ತಂಗಿ ಜೋರು ಕೀಟಲೆ ಧ್ವನಿಯಲ್ಲಿ "ಇವ್ಳೇ, ಇವ್ಳೇ ಎಂದು ಚಂದವಾಗಿ ತಲೆ ಬಾಚಿದ್ದು ನೀರು ಸೇದುತಿದ್ದ ಹುಡುಗಿಯನ್ನು ತೋರಿಸಿ "ಇವ್ಳೇನೆ ನಿಂಗೆ- ಚೆಂದಾಗಿಲ್ವ" ಎಂದಾಗ ಅವಳು ಗಕ್ಕೆ ನೋಡಿ ಬೆದರಿ ತಲೆತಗ್ಗಿಸಿನಕ್ಕು ಸರ ಸರ ಹೋಗಿ ಬಿಟ್ಟಳು.

ತಂಗಿಗೆ 'ಚೆಂದಾಗವಳೆ' ತುಟಿಕಚ್ಚಿ ನಕ್ಕು ಮತ್ತೆ ಮದ್ವೆ ಆಗೋಲ್ಲ ಅಂತ ಮೂಲೆ ಹಿಡ್ದು ಕುಂತಿದ್ದಿ ಅಂದಳು. "ಮದ್ವೆ ಆಗೋಲ್ಲ" ಎಂದು ಯಥಾಥರ ಮೌನವಾಗಿ ಕುಳಿತು, ತಂಗಿಯನ್ನು ಕರೆದು "ನಾ ನಿಂಗ ಅಣ್ಣಾ ಅಂತ ಅನ್ನಿಸ್ತಾದ" ಹೇಳು ಎಂದು ಕೇಳುವಾಗ ಆನಂದಿನ ಮನಸ್ಸು ಎಷ್ಟರ ಮಟ್ಟಿಗೆ ಡೋಲಾಯಮಾನವಾಗಿದೆ ಎಂಬುದು ಅರ್ಥವಾಗುತ್ತದೆ. ಹಾಸಿಗೆಯ ಮೇಲಿನ ಪತ್ರ ನೋಡಿ ಓದಿದಾಗ "ನಿಮ್ಮ ಮಗ ನಿಮ್ಮ ಪಾಲಿಗೆ ಇಲ್ಲ" ಎಂದಾಗ ಅವ್ವ ಸರಕ್ಕೆಂದು ನಡುಮನೆಗೆ ಓಡಿ ಒಂದು ಪೆಟ್ಟಿಗೆ ಬೀಗ ತೆಗೆದು ನೋಡಿ "ಹಣ ಮುಟ್ಟಿಲ್ಲ" ಎಂದು ಜೋರು ಕೂಗಿದಾಗ ಅವರ ನಿಜವಾದ ಪ್ರೀತಿ ಮೌಲ್ಯ ಎಂಥದ್ದು ಎಂದು ತಿಳಿದು ಬರುತ್ತದೆ.

ಹುಟ್ಟಿಸಿದ ತಂದೆ ತಾಯಿಗಳಿಗೆ ಹೆತ್ತಮಗನ್ನೆನ್ನುವ ಕರುಳ ಬಳ್ಳಿಯ ಸಂಬಂಧ ಅಕ್ಕರೆ ಪ್ರೀತಿಯ ಜೊತೆಗೆ ಆರ್ಥಿಕವಾಗಿ ದುರ್ಬಲತೆ ಇದೆ ಆದ್ದರಿಂದ ಮಗನ್ನನ್ನು ಇನ್ನೊಂದು ಸಾರಿ ಅನುಕೂಲಸ್ಥರ ಮನಗೆ ದತ್ತು ಕೊಡುವ ಪ್ರಯತ್ನ ಇಲ್ಲಿ ಮುಖ್ಯವಾಗಿದೆ ಎಂದು ಅನ್ನಿಸುತ್ತದೆ. ಒಂದು ದಹನದ ಕತೆಯಲ್ಲಿ ವಿದ್ಯಾವಂತ ನಾಯಕನ ದೊಡ್ಡಪ್ಪನ ಸ್ವಾರ್ಥವನ್ನು ಒಂದು ರೀತಿಯಲ್ಲಿ ಎದುರಿಸಿದರೆ ಈ ಕತೆಯಲ್ಲಿ ಹುಟ್ಟಿಸಿದ ತಂದೆ ತಾಯಿಗಳ ಸ್ವಾರ್ಥ ಬದುಕನ್ನು ಎದುರಿಸಬೇಕಾಗುತ್ತದೆ ಅದು ನಾಯಕನ ಬದುಕಾಗಿದೆ. ಎರಡೂ ಕಡೆ ಸಲ್ಲಿದ ಆನಂದವಿನ ಬದುಕು ಡೋಲಾಯಮಾನ ಸ್ಥಿತಿಯಾಗಿದೆ.

ಮಹಾದೇವ ಅವರ ಕತೆಗಳಲ್ಲಿ ಬೌದ್ಧಿಕತೆ ಗುಪ್ತವಾಗಿ ಕೆಲಸ ಮಾಡುತ್ತದೆ. "ಡಾಂಬರು ಬಂದುದು" "ಒಡಲಾಳ" ಕತೆಗಳಲ್ಲಿ ಯಾರು ನಾಯಕರಲ್ಲಿ ಆದರೆ "ಮೂಡಲಸೀಮೆಲಿ ಕೊಲೆಗಿಲೆ" ಮುಂತಾಗಿ "ಅಮಾಸ" ಇವು ವ್ಯಕ್ತಿ ಪ್ರಧಾನವಾಗಿ ಕಂಡುಬಂದರೂ ರಂಗಪ್ಪ ಮತ್ತು ಅಮಾಸರು ದಲಿತ ಪ್ರತಿಮೆಗಳಂತೆಯೇ ಚಿತ್ರಸಲ್ಪಟ್ಟಿರುವುದರಿಂದ ವೈಯಕ್ತಿಕ ಅನುಭವಗಳು ದಲಿತ ಸಮಾಜದ ಒಟ್ಟು ಅನುಭವವನ್ನೇ ಹೇಳುತ್ತದೆ. ದೇವನೂರು ಕತೆಗಳಲ್ಲಿ ಹಿಂಸೆ ಹೆಚ್ಚಾಗಿ ಮಾನಸಿಕ ಸ್ವರೂಪದ್ದಾಗಿರುವುದರಿಂದ ಗುಪ್ತವಾಗಿ ಆದರೆ ಗಾಢವಾಗಿ ನಮ್ಮನ್ನು ತಟ್ಟಿಬಿಡುತ್ತದೆ. ಈ ಮೂಕ ಹಿಂಸೆ ಕ್ರೌರ್ಯದ ಬೇರೆ ಸಾಧ್ಯತೆಗಳನ್ನು ಚಿತ್ರಿಸುವುದರ ಜೊತೆಗೆ ಸಹೃದಯರನ್ನು ಅನುಭವದಲ್ಲಿ ಒಳಗು ಮಾಡಿಕೊಳ್ಳುವುದರಿಂದ ತುಂಬು ಪರಿಣಾಮಕಾರಿಯಾಗಿ ಮೂಡಿ ಬರುತ್ತದೆ. ಆದ್ದರಿಂದಲೇ ಒಡಲಾಳದ ಮೇಲು ನೋಟಕ್ಕೆ ಕಾಣುವಂಥ ವೈನೋದಿಕ ಪ್ರಪಂಚ, ಅಮಾಸನ ಹುರುಪು, ಡಾಂಬರಿನ ಆರ್ಭಟಗಳನ್ನು ಅನುಭವಿಸುವಾಗಲೂ ಅವುಗಳ ಹಿಂದಿನ ವಿಚಾರ ನಮ್ಮನ್ನು ಆಕ್ರಮಿಸುವ ರೀತಿಯ ಅನನ್ಯವಾದದ್ದು. ಮೂಡಲ ಸೀಮೆಲಿ ಕೊಲೆಗಿಲೆ ಮುಂತಾಗಿ ಕತೆಯ ಶೀರ್ಷಿಕೆಯೇ ಧ್ವನಿ ಪೂರ್ಣವಾಗಿದೆ. ಕತೆಯ ಸಂದರ್ಭದಲ್ಲಿ ಯಾವ ಕೊಲೆಯೂ ಅಲ್ಲಿ ನಡೆಯುವುದಿಲ್ಲ. ಆದರೆ ಪ್ರತಿನಿತ್ಯವೂ ಬೇರೊಂದು ರೀತಿಯಲ್ಲಿ ರಂಗಪ್ಪನ ಕೊಲೆಯಾಗುತ್ತಿರುತ್ತದೆ. ಪ್ರತಿನಿತ್ಯವೂ ಸಾಯುವ ಅವನ ನೋವು ಒಮ್ಮೆಗೇ ಕೊಲೆಯಾಗಿ ಸಾಯುವವನ ನೋವಿಗಿಂತ ಹೆಚ್ಚಿನದು ಎಂದು ಒತ್ತಿ ಹೇಳಬೇಕಾಗಿಲ್ಲ. ಇಲ್ಲಿ ರಂಗಪ್ಪನ ಜೀವನದ ಅಲೆದಾಟವೇ ಕೇಂದ್ರ ತನ್ನ ಹೆಂಡತಿ ತನ್ನ ಮಗ ಮತ್ತು ಜೋಪಡಿ ಇಷ್ಟೇ ರಂಗಪ್ಪನ ಆಸ್ತಿ.

ದಲಿತರ ಹಸಿವಿನ ಬರ್ಬರತೆ ರಂಗಪ್ಪನ ಮೂಲಕ ಕಟ್ಟಿಕೊಡುವ ಕತೆ ತುಂಬಾ ಕಲಾತ್ಮಕವಾದುದು. ಪಾರೋತಿ - ರಾಜ - ರಂಗಪ್ಪ ಇವರ ಸಂಬಂಧಗಳ ಕುರಿತು ಒಂದು ಸೂಕ್ಷ್ಮ ಚಿತ್ರಣವನ್ನು ದೇವನೂರು ಈ ರೀತಿಯಾಗಿ ನೀಡಿದ್ದಾರೆ. "ಅಲ್ಲಿ ರಂಗಪ್ಪ ತನ್ನ ಜೋಬು ಅತ್ತಗ ಇತ್ತಗ ತಡೆಕುವುದರಿಂದ ಒಂಥರ ಚಲನೆ ಆರಂಭವಾಯ್ತು. ಹೆಂಡತಿ ಗಂಡನ ತಡಬಡವ ತಿಳಿದುಕೊಂಡು ಅಂಟುಕೊಂಡಿದ್ದ ಮಗನನ್ನು ಮೆಲ್ಲಕ್ಕೆ ನೆಲೆದ ಮೇಲೆ ಮಲಗಿಸಿ ಬೀಡಿಗಿ ಬೆಂಕಿ ತರುವ ಅಂತ ಮೇಲೆದ್ದಳು. ಮಗನ ಕತ್ತು ಹಿಂದಕ್ಕೂ ಮುಂದಕ್ಕೂ ಬತ್ತಾ ಹೋಗ್ತಾ ವಾಲಾಡ್ತ ಇದ್ದುದು ಆಗ ನಿಂತು ಕೊಕ್ಕರಿಸಿಕೊಂಡು ತೆಪ್ಪಗೆ ಮಲಿಕತ್ತು. ರಂಗಪ್ಪ ಮಗನಿಗೆ ಕಣ್ಣು ಸಿಕ್ಕಿಸಿ "ಎಂಥದಮ್ಮಿ ನಿನ್ನ ಮಗಂಗೆ ಮುಸ್ಸಂಜಲೆ ನಿದ್ದೆ ಹಿಡಿಕೊಂಡಿದೆ" ಅಂದನು. ಅದಕ್ಕವಳು "ಒಂದು ಚಡ್ಡಿ ಬೇಕು ಅಂತ ಚಂಡಿ ಹಿಡ್ದಿತ್ತು, ಅಳ್ತ ಮಲಿಕತ್ತು" ಎಂದು ವಸಿ ನಿಂತಿದ್ದು ಹೋಗಿ ಒಂದು ಬೆಂಕಿ ಚಾಚಿ ಹಿಡಿದು ಮುಂದ್ನವಾರ ಸಂತೆಗಿಂತೆಗ ಹೋದ್ರ ತನ್ನಿ ಒಂದ ಅಂದಳು. ಅದಕ್ಕವ ಆ್ಹ ಅನ್ನಲು ಇಲ್ಲ ಉ್ಹು ಅನ್ನಲು ಇಲ್ಲ ಆವಾಗಲು ಎಷ್ಟು ಹುಡುಕಿದರೂ ಬೀಡಿ ಸಿಗದೆ ಅಂದರೆ ಇಲ್ಲದೆ. ಥುತ್ತೇರಿ ಅನ್ನಿಸಿತು. ಇಲ್ಲಿಕಣ ಬಂಕಿ ಇಟ್ಬುಡು ಅಂದನು. ಅವಳು ಗಂಟಲೊಳಗೆ ಗೊಣಗಿ ಕೊಂಡು ಬೆಂಕಿ ಇಟ್ಟು ಬಂದು ಮೊದಲಂಗೆ ಕುಂತಳು. ಮಗನ ಕಡೆ ನೋಡುತ್ತಿದ್ದವ ನೋಡುತ್ತಲೆ ಏನಾರು ಉಣ್ತಾ ಅಂತಲೆ, ಮಧ್ಯಾಹ್ನದ ತಂಗಳು ಅಂದಳು. ಮಾಡಕೆ ತಾನೆ ಏನು ಇದ್ದುದು ಅಂತ ಮುಖ ಸಿಂಡರಿಸಿಕೊಂಡು ಹೇಳಬೇಕಾಗಿರಲಿಲ್ಲ. ಅವ ಬಾಗಲ ಕಡದು ಇರುವ ಆಚಲ ನೋಡತೊಡಗಿದನು. ಮತ್ತೆ ತಿರುಗಿದಾಗ ತನ್ನ ಕಡೆಗೆ ನೋಡುತ್ತಿದ್ದ ಹೆಂಡತಿ, ತಾನು ಅವಳತ್ತ ನೋಡುತ್ತಲೆ ಎತ್ತಲೋ ಕಣ್ಣು ಕತ್ತು ತಿರುಗಿಸಿದಳು. ಅವ ವಸಿ ಗೌಡರ್‍ನಾರು ನೋಡ್ಕಂಡು ಬತ್ತೀನಿ ಎಂದು ಎದ್ದನು (4. ದ್ಯಾವನೂರು ಪುಟ 47 - 48).

ಈ ಕತೆಯಲ್ಲಿ ದೇವನೂರು ಊರ ಜೀವನದ ಹಲವು ಮಾದರಿಗಳನ್ನು ತೋರಿಸುವುದರಿಂದ ಆ ಮಾದರಿಗಳೂ ರಂಗಪ್ಪನ ಜೀವನದ ಮಾದರಿಯನ್ನು ಒಂದಕ್ಕೊಂದು ಹಿಡಿದ ಕನ್ನಡಿಗಳೂ ಆಗುತ್ತದೆ. ಏನೂ ವೈಭವೀಕರಿಸಲ್ಪಡದ ಅದರ ಬರಹ ಕೇವಲ ಛಾಯಚಿತ್ರವಾಗದಂತೆ ಮೂಡಿ ಬಂದಿರುವುದು ದೇವನೂರರ ಪ್ರಬುದ್ಧತೆಗೆ ಸಾಕ್ಷಿಯಾಗಿದೆ. ದಲಿತರ ಬದುಕನ್ನು ಪ್ರವೇಶಿಸುವ ಹೊಸ ಮೌಲ್ಯಗಳ ಬಗೆ ಮಹಾದೇವ ತುಂಬ ಜಾಗರೂಕರಾಗಿದ್ದಾರೆ. ದಲಿತರ ಬದುಕನ್ನುಅದರ ಜೀವಂತಗಳಲ್ಲಿ ಹಿಡಿಯುವ ಮಹದೇವ ಅವರು ವಸ್ತು ನಿಷ್ಠತೆ ಕಾಯ್ದುಕೊಳ್ಳುವುದು ಅವರ ವಿಶಿಷ್ಟವಾಗಿದೆ. ಮನೆಯ ಜೋಪಡಿ ಹುಲ್ಲು ಅತ್ತಗು - ಇತ್ತಗು ಸರಕೊಂಡು ನಾಕ ಕಡೆ ಕಂಡಿ ಬುಟ್ಟಿಕೊಂಡು ಬಾನ ಕಾಣಿಸುತ್ತಿದ್ದಿತಷ್ಟೆ. ಆ ದಿಕ್ಕಿನಿಂದ ಒಳಗಿಣುಕುವ ಬೆಳಕು ಅಲ್ಲಿ ಇಲ್ಲಿ ಅಲ್ಲೆ ಬಿದ್ದು ಓಡಾಡುತ್ತಿತ್ತು. ಹೆಂಡತಿ ಬರೋದುಮಳಗಾಲ, ಮಳಿಕಳಾಕ ಒಂದು ತಾವು ಅಂತಾರು ಇರ್ಲಿ. ಹುಲ್ಲು ತಂದು ಚಾವಣಿಗೆ ಹಾಕಿ ಅಂತ ಗಂಡನಿಗೆ ಹೇಳಿ ಹೇಳಿ ಗಂಡನ ಊ್ಞ ಊ್ಞ ಕೇಳಿ ಕೇಳಿ ಅವಳಿಗೂ ರೋಸಿ ಈ ಗಂತು ಸುಮ್ನಾಗಿ ಬಿಟ್ಟಿದ್ದಳು.

ಇಲ್ಲಿ ರಂಗಪ್ಪ ಪಾರ್ವತಿಯ ಸಂಬಂಧ ಅವರ ಜೀವನದ ಸಮಗ್ರ ಚಿತ್ರಣ ಸಿಗುತ್ತದೆ. ಗೌಡರು ಕಣ್ಣು ಬಿಟ್ಟರೆ ತನ್ನ ಹೊಟ್ಟೆಯೊಳಗೆ ಜೀವ ಆಡುತ್ತೆ ಅನ್ನುವ ರಂಗಪ್ಪ ಹುಟ್ಟಿದಾಗಿನಿಂದ ದಿಕ್ಕುದೆಸೆ ಗೊತ್ತಿಲ್ಲದ ಪರದೇಶಿಯಾಗಿ ಗೌಡರ ದೊಡ್ಡ ಹಟ್ಟಿಯ ಹೊಲದಲ್ಲಿ ಹಗಲು ಮಾಡುತ್ತಾ ಬಂದನು. ಊರಿನ ಜನ ರಂಗಪ್ಪನು ಮಾಡುವ ಉಳುಮೆಗೆ ಗೌಡರ ಹಟ್ಟಿ ಕಂಬ ನಿಂತಿದೆ ಎಂದು ಹೇಳುವುದು. ಗೌಡರ ಹಟ್ಟಿ ಕಂಬವೇನೋ ನಿಂತಿದೆ. ಆದರೆ ರಂಗಪ್ಪನ ರಟ್ಟೆಯ ಬಲದ ಮೇಲೆಯೇ ಆತನ ಬದುಕಿನ ಜೋಪಡಿ ಹೆಂಡತಿ, ಮಗ ನಿಂತಿರುವುದು. ಇಲ್ಲಿ ಹೆಂಡತಿ ಪಾರೋತಿ ರಂಗಪ್ಪನಿಗೆ ಅರ್ಥವಾಗಿದ್ದಾಳೆ. ಹಾಗೆಯೇ ಪಾರೋತಿಗೆ ಗಂಡ - ರಂಗಪ್ಪ ಅರ್ಥವಾಗಿದ್ದಾನೆ.

''ದೇವನೂರ ದಲಿತ ಬದುಕಿನ ವಾಸ್ತವ ಶಬ್ದದ ತಿಳುವಳಿಕೆ ಅಸಾಧಾರಣ ದಲಿತರ ಬದುಕಿನ ಭೀಕರತೆಯನ್ನು ಇಷ್ಟೊಂದು ಕಲಾತ್ಮಕತೆಯಿಂದ ವಿವರಿಸಿ ತೆರೆದಿಟ್ಟ ಕಥೆಗಾರರು ಕನ್ನಡ ಸಾಹಿತ್ಯದಲ್ಲಿ ಅಪರೂಪ ಈ ನಿಟ್ಟಿನಲ್ಲಿ ನವೋದಯ ಪ್ರಬಂಧ ಕತೆಗಾರ ಕೊರಡ್ಕಲ್ ಶ್ರೀನಿವಾಸರಾಯರ ''ಧನಿಯರ ಸತ್ಯನಾರಾಯಣ'' ಕಥೆ ದಲಿತರ ಹಸಿವಿನ ಭೀಕರತೆಯನ್ನು ಮನ ಮುಟ್ಟುವಂತೆ ಕಟ್ಟಿಕೊಡುತ್ತಾರೆ.

ರಂಗಪ್ಪ ತನ್ನ ಗುಡಿಸಲಿನಿಂದ ಗೌಡರ ಹತ್ತಿರ ಅನ್ನತರಲು ಹೊರಟಾಗಿನಿಂದ ಗೌಡರ ಹಟ್ಟಿ ಮುಟ್ಟುವವರೆಗಿನ ಇತರ ಜಾತಿ ಜನಗಳ ಬದುಕು ಪ್ರಗತಿಯಾಗುತ್ತಿರುವುದು ಆತನ ಕಣ್ಣಿಗೆ ಕಟ್ಟುತ್ತದೆ. ಏನೂ ಕೆಲಸವಿಲ್ಲದೆ ಮೂನ್ನೂರು ರೂಪಾಯಿ ಸಂಬಳ ತೆಗೆದುಕೊಳ್ಳುವ ನರಸಮ್ಮ, ನನ್ನೆ ಮೊನ್ನೆ ಊರಿಗೆ ಬಂದ ಶಾಸ್ತ್ರಿ ಮೇಷ್ಟ್ರು ಮನೆ, ಬಾವಿ, ತೋಟ, ಅಂತ ಬೆಳೆದಿದ್ದಾನೆ. ಹಾಗೆ ತಮ್ಮ ಜಾತಿಯ ಮೇಷ್ಟ್ರು ಮಡಿ - ಮೈಲಿಗೆ ಅನ್ನದೆ ಶಾಸ್ತ್ರಿಮನೆಯ ಲೋಟದಲ್ಲಿ ಕಾಫಿ ಕುಡಿಯುತ್ತಾ ಅವರ ಪಡಸಾಲೆಯ ಮೇಲೆ ಕುಳಿತಿದ್ದಾನೆ. ಹೀಗೆ ಎಲ್ಲರೂ ಊರಿನಲ್ಲಿ ಸಮೃದ್ಧವಾಗಿ ಬೆಳೆದಿದ್ದಾರೆ. ಆದರೆ ರಂಗಪ್ಪ ಜೀವನ ಪೂರ್ತಿ ಗೌಡರ ಹಟ್ಟಿಯಲ್ಲಿ ದುಡಿದರೂ ಆತನ ಉದ್ಧಾರ ಎಲ್ಲಿಯೂ ಕಂಡು ಬರುವುದಿಲ್ಲ. ರಂಗಪ್ಪನಿಗೆ ನಾಲ್ಕು ಸೇರು ಜೋಳ ಕೊಟ್ಟು ಗೌಡರ ಹೆಂಡತಿ ಮುಖ ತಿರುಗಿಸಿಕೊಂಡು ಒಳಗೆ ಹೋದ ಮೇಲೆ, ಗೌಡರು ಕಂಡೀಷನ್ ಆಗಿ ಇನ್ನು ಪಸಲು ಬರಗಂಟ ಕೇಳಬೇಡ ಇವ್ನೆ ಎಂದು ಹೇಳುವುದು ಊಳಿಗಮಾನ್ಯ ವ್ಯವಸ್ಥೆಯ ಶೋಷಣೆಗೆ ಸಾಕ್ಷಿಯಾಗಿದೆ. ರಂಗಪ್ಪನ ನಿಯತ್ತಿನ ದುಡಿಮೆಗೆ ಗೌಡರು ತೋರುವ ಪ್ರತಿಫಲ ಇಷ್ಟೇಯೇ. ಊರಿನಲ್ಲಿ

ರಂಗಪ್ಪ ಗೌಡರ ಮನೆಯಿಂದ ಬರುತ್ತಿರಬೇಕಾದರೆ ಮೇಷ್ಟ್ರು ಹಟ್ಟಿ ಮುಂದೆಯೇ ಬಂದು ಕುಡಿಯುವ ನೀರು ಕೇಳುತ್ತಾನೆ. ಅಲ್ಲಿ ಮೇಷ್ಟ್ರ ಮಗಳು ಶಾರದ ಇವನು ಬಾಯಿಗ ಇಟ್ಟ ಎರಡು ಬೊಗಸೆಗಳಿಗೂ ನೀರು ಸುರಿಯುತ್ತಾಳೆ. ಅದೇ ವೇಳೆಯಲ್ಲಿ ಇವರ ಜಾತಿಯವನೇ ಆದ ಮೇಷ್ಟ್ರು ಅವರದೇ ಗ್ಲಾಸಿನಲ್ಲಿ ಕಾಫಿ ಕುಡಿಯುತ್ತಿರುತ್ತಾನೆ. ಒಂದೇ ಜಾತಿಯ ಇಬ್ಬರಿಗೆ ಆಚರಿಸಲ್ಪಡುವ ಅಸ್ಪೃಶ್ಯತೆಯ ಚಿತ್ರವನ್ನು ಏಕಕಾಲದಲ್ಲಿ ಕಣ್ಣಿಗೆ ಕಟ್ಟುವ ಕತೆಗಾರ ಎಲ್ಲಿಯೂ ಮಾತುಗಳಲ್ಲಿ ಕಾರಣಗಳನ್ನು ಸೂಚಿಸದೆಯೇ ಸಮಸ್ಯೆಗೆ ಪರಿಹಾರ ಹೇಳುತ್ತಿರುತ್ತಾನೆ. ವಿದ್ಯಾವಂತ ಆರ್ಥಿಕವಾಗಿ ಭದ್ರವಾಗಿರುವ ದಲಿತನ ಸ್ಥಾನಮಾನಗಳು ಅನಕ್ಷರಸ್ಥ ಬಡವನ ಸ್ಥಾನಮಾನ ಬೇರೆಯದೇ ಆಗಿರುತ್ತದೆ ಎಂಬ ಚರಿತ್ರೆಯ ದಾಖಲು ಕಾಣುತ್ತದೆ. ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಅಭಿವೃದ್ಧಿಯಾಗುವ ಮೂಲಕ ಸುಧಾರಣೆ ತರಬಹುದೆಂಬ ಪೂರ್ಣ ವಿಶ್ವಾಸ ಪ್ರಕಟಿಸುವ ಮಹಾದೇವ ಅವರು ಎಲ್ಲಿಯೂ ಘರ್ಷಣೆಯ ಸಮಾಜವನ್ನು ಚಿತ್ರಿಸಿಲಾರರು. (5. ಕಥಾ ಕಥನ, ಪುಟ 70-71 ಎಲ್. ಹನುಮಂತಯ್ಯ)

ರಂಗಪ್ಪನಿಗೆ ಅಂದಿನ ಊಟಕ್ಕೆ ಏನೂ ಇಲ್ಲ. ಊರಿಗೆ ಊರೇ ಲೈಟು ಬರೋ ಸಂಭ್ರಮದಲ್ಲಿದ್ದರೆ ರಂಗಪ್ಪನ ಬದುಕಿಗೆ ಕತ್ತಲು ಅವುಚಿಕೊಂಡಿದೆ. ಕಳೆದ ಸಲವೇ ನಾಕು ಸೇರು ಜೋಳ ತಂದು ಇಟ್ಟು ಗೌಡತಿ ಮುಖ ತಿರುವಿಕೊಂಡು ಒಳಹೋದರೆ ಇನ್ನು ಫಸಲು ಬರಗಂಟ ಕೇಳಬೇಡ ಇವ್ನೆ ಎಂದು ಗೌಡರೂ ಸರ್ರನೆ ನೆಡೆದು ಹೋದದ್ದು ರಂಗಪ್ಪನ ಕಣ್ಣ ಮುಂದೆ ಇದೆ. ಯಾವ ಮುಕ ಹೊತ್ತು ಕೇಳಲಿ ಎಂಬ ಅಳುಕೂ ಇವನ ಒಳಗೆ ಮನೆ ಮಾಡಿದೆ. ಆದರೆ ಹಸಿದು ಮಲಗಿರೋ ಮಗ, ಹಂಡತಿ ತಲೆಗೆ ಒಂದು ಗೌಡನ ಹಟ್ಟಿಗೆ ಬರುತ್ತಾನೆ. ಗೌಡರು ಅವರೋ ಇಲ್ಲವೋ ಎಂಬ ಅನುಮಾನದಿಂದ ಬಂದರೆ ಗೌಡತಿ ಕಾಣುತ್ತಾಳೆ. ಆಕೆಯ ಹೊಸ ಸೀರೆ ಶಬ್ದ ಕೈಯ ಬಳೆಯ ಶಬ್ದ ಅವಳು ನಡೆದಂತೆ ಧ್ವನಿಸುತ್ತಿದೆ. ಗೌಡರು ಇದ್ದಾರೇನವ್ವ ಎಂದು ಕೇಳುತ್ತಲೇ ಏನಕ್ಕೆಂದು ಕೇಳಿ, ನಾವೆ ಬದುಕೋದು ಕಷ್ಟ ನಿನಗೆಲ್ಲಿಂದ ತಂದುಕೊಡನಾ ಜೋಳಾವ ಎಂದು ಹೇಳಿಬಿಡುತ್ತಾಳೆ. ರಂಗಪ್ಪನ ದುಡಿಮೆಯಿಂದಲೇ ನಿಂತಿರುವ ಗೌಡರ ಮನೆಯಲ್ಲಿ ಸಾಯುತ್ತಾ ಬಿದ್ದಿರುವ ಇವನ ಕುಟುಂಬಕ್ಕೆ ಯಾವುದೇ ರೀತಿಯ ಜೋಳದ ಕಾಳೂ ಕೊಡ ಸಿಗುವುದಿಲ್ಲ. ಬೆಳೆದವನ ಹೊಟ್ಟೆ ಬರಿದಾಗಿರುತ್ತದೆ ಎಂಬ ವ್ಯವಸ್ಥೆಯ ವ್ಯಂಗ್ಯವನ್ನು ಕತೆ ಹೇಳುತ್ತಾ ಹೋಗುತ್ತದೆ.

"ಅಮಾಸ" ಕತೆಯಲ್ಲಿ ಬರುವ ನಾಯಕ "ಅಮಾಸ" ತಬ್ಬಲಿ ಹುಡುಗ ಮಾರಿಗುಡಿಯಲ್ಲಿ ಕುರಿಯಯ್ಯನ ಜೊತೆವಾಸ ಕುರಿಯಯ್ಯ ಬುದ್ದಿಬಲ್ಲವನಾದಗಲಿಂದ ಹಿಡಿದು ಅವನ ತೊಡೆಗಳು ನೆಡೆದಾಡೊದ ಕಳೆದುಕೊಳ್ಳುವವರೆಗೆ ಊರ ಗೌಡರ ಹಟ್ಟಿ ಕುರಿಗಳ ಕಾಯ್ದುಕೊಂಡು ಬಂದುದು. ಈಗಲು ಮೇಲಿನ ರೀತಿಯಲ್ಲಿ ಅರೆಗಣ್ಣು ಮುಚ್ಚಿಕೊಂಡು ಬೆರಳನ್ನು ಒಂದೊಂದು ಕುರಿಮಾಡಿ ಕೊಂಡೇನೋ ತಂತಾನು ಎಣಿಸುತ್ತಾ ಹೋಗುವನು. ದಿನ ಆರೇಳು ಸಲ ಹೀಗೆ ಇದು ತಪ್ಪಿದಲ್ಲ. ಹೀಗೆ ಅವನು ಕಪ್ಪಗಿದ್ದುದಕ್ಕೂ ಅಮಾವಸೆ ದಿನ ಹುಟ್ಟಿದ್ದಕ್ಕೊ ಅವನಿಗೆ ಅಮಾಸ ಎಂಬ ಹೆಸರಿದೆ. ಅಮಾಸ ಕುರಿಯಯ್ನ ಕಣ್ಣು ವಟಾರದಲ್ಲಿ ಬೆಳೆದವನು. ಕುರಿಯಯ್ಯನು ಅಮಾಸ ಅಂದಾಗ ಅ್ಞ ಅಂತ ದನಿ ಕೊಡೋದು ಅಮಾಸನ ಹಗಲು ಕೆಲಸ ಅನ್ನಬಹುದು.

ಊರಿಗೆ ಕತ್ತಲು ಇಳಿಯಲು ಅಮಾಸ ಕುರಿಯಯ್ಯ ಮಠದ ಬೆಲ್ಲು ಆಗುವುದನ್ನೆ ನೆಟ್ಟಗೆ ಕಾಯುವರು. ಮಠದ ಬೆಲ್ಲು ಹೊಡೆದ ತಡವೆ ತಟ್ಟೆ ಗ್ಲಾಸು ತೆಗೆದುಕೊಂಡು ಕಪ್ಪಾಗಿದ್ದ ಅಮಾಸ ಕತ್ತಲು ಸೀಳುಕೊಂಡು ಹೋಗಿ ಬಂದು ಅಯ್ಯ ಎಂದು ಕೂಗಿದಾಗ ಮಾತ್ರ ಅಸಮಾನ ರಾತ್ರಿಯಲ್ಲಿ ಇರುವುದು ತಿಳಿಯವುದು. ಮಠದ ಹಿಟ್ಟು ಸಾರುಂಡು ಆಮೇಲೆ

ಜೋಳದ ಕಾಳೂ ಕೊಡ ಸಿಗುವುದಿಲ್ಲ. ಬೆಳೆದವನ ಹೊಟ್ಟೆ ಬರಿದಾಗಿರುತ್ತದೆ ಎಂಬ ವ್ಯವಸ್ಥೆಯ ವ್ಯಂಗ್ಯವನ್ನು ಕತೆ ಹೇಳುತ್ತಾ ಹೋಗುತ್ತದೆ.

''ಅಮಾಸ'' ಕತೆಯಲ್ಲಿ ಬರುವ ನಾಯಕ ''ಅಮಾಸ'' ತಬ್ಬಲಿ ಹುಡುಗ ಮಾರಿಗುಡಿಯಲ್ಲಿ ಕುರಿಯಯ್ಯನ ಜೊತೆವಾಸ ಕುರಿಯಯ್ಯ ಬುದ್ದಿಬಲ್ಲವನಾದಗಲಿಂದ ಹಿಡಿದು ಅವನ ತೊಡೆಗಳು ನೆಡೆದಾಡೊದ ಕಳೆದುಕೊಳ್ಳುವವರೆಗೆ ಊರ ಗೌಡರ ಹಟ್ಟಿ ಕುರಿಗಳ ಕಾಯ್ದುಕೊಂಡು ಬಂದುದು. ಈಗಲು ಮೇಲಿನ ರೀತಿಯಲ್ಲಿ ಅರೆಗಣ್ಣು ಮುಚ್ಚಿಕೊಂಡು ಬೆರಳನ್ನು ಒಂದೊಂದು ಕುರಿಮಾಡಿ ಕೊಂಡೇನೋ ತಂತಾನು ಎಣಿಸುತ್ತಾ ಹೋಗುವನು. ದಿನ ಆರೇಳು ಸಲ ಹೀಗೆ ಇದು ತಪ್ಪಿದಲ್ಲ. ಹೀಗೆ ಅವನು ಕಪ್ಪಗಿದ್ದುದಕ್ಕೊ ಅಮಾವಸೆ ದಿನ ಹುಟ್ಟಿದ್ದಕ್ಕೊ ಅವನಿಗೆ ಅಮಾಸ ಎಂಬ ಹೆಸರಿದೆ. ಅಮಾಸ ಕುರಿಯಯ್ಯ ಕಣ್ಣು ವಟಾರದಲ್ಲಿ ಬೆಳೆದವನು. ಕುರಿಯಯ್ಯನು ಅಮಾಸ ಅಂದಾಗ ಆ ಅಂತ ದನಿ ಕೊಡೋದು ಅಮಾಸನ ಹಗಲು ಕೆಲಸ ಅನ್ನಬಹುದು.

ಊರಿಗೆ ಕತ್ತಲು ಇಳಿಯಲು ಅಮಾಸ ಕುರಿಯಯ್ಯ ಮಠದ ಬೆಲ್ಲು ಆಗುವುದನ್ನೆ ನೆಟ್ಟಗೆ ಕಾಯುವರು. ಮಠದ ಬೆಲ್ಲು ಹೊಡೆದ ತಡವೆ ತಟ್ಟೆ ಗ್ಲಾಸು ತೆಗೆದುಕೊಂಡು ಕಪ್ಪಾಗಿದ್ದ ಅಮಾಸ ಕತ್ತಲು ಸೀಳುಕೊಂಡು ಹೋಗಿ ಬಂದು ಅಯ್ಯ ಎಂದು ಕೂಗಿದಾಗ ಮಾತ್ರ ಅಸಮಾನ ರಾತ್ರಿಯಲ್ಲಿ ಇರುವುದು ತಿಳಿಯವುದು. ಮಠದ ಹಿಟ್ಟು ಸಾರುಂಡು ಆಮೇಲೆ ಇಬ್ಬರೂ ಮಲಗಿ ಬಿಡುವರು. ಇದು ಅವರಿಬ್ಬರ ಸಂಬಂಧದ ಪ್ರತಿದಿನದ ದಿನಚರಿಯಾಗಿದೆ. ಕುರಿಯಯ್ಯನಿಗೆ ಅಮಾಸ ಅಮಾಸನಿಗೆ ಕುರಿಯಯ್ಯ ಸಂಬಂಧಿಗಳಾಗಿದ್ದಾರೆ.

ಈ ಅಮಾಸ ಹಾಕಿದ ಹುಲಿ ವೇಷವನ್ನು ನೋಡಿದ ಗೌಡರಿಗೆ ಕಾಡಬೇಕೇಕೆ? ಅಮಾಸನ ಪಾತ್ರವೇ ಒಂದು ಹೊಸ ಬೆಳಕಿನ ಸಂಕೇತ. ಅವನ ಕುಣಿತದಿಂದ ನಿದ್ದೆಗೆಡುವ ಗೌಡನಿಗೆ ತನ್ನ ಕಣ್ಣಮುಂದೆಯೆ ಆಗುತ್ತಿರುವ ಬದಲಾವಣೆಗೆ ದಿಕ್ಕುಗೆಟ್ಟಂತಾಗುತ್ತಾನೆ. "ಎಲಾ ಅವ್ನ ಅಗಲೆ ಅಷ್ಟು ಬೆಳೆದು ಬುಟ್ಟವ್ನೆ'' ಎನ್ನುವ ಮಾತು ಗೌಡರ ಕಣ್ಣಲ್ಲಿ ಬಗೆ ಬಗೆಯ ಹುಲಿಯಾಸ ಹಾಕಿ ಕುಣಿವ ಚಿತ್ರ ಮತ್ತೆ ಮತ್ತೆ ಬರುವುದು. ಇದು ಮಹಾದೇವ ಅವರು ತಮ್ಮ ಕತೆ ಮೂಲಕ ಸಮಾಜಕ್ಕೆ ತೋರುವ ಪ್ರತಿಭಟನೆಯಾಗಿದೆ. ಇಲ್ಲಿ ಒಬ್ಬ ಅನಾಥ ಅಸಾಯಕ ಹುಡುಗನ ಹಾಗೂ ಊಳಿಗಮಾನ್ಯ ಮನಸ್ಸಿನ ಗೌಡರ ಏಣಿ ಶ್ರೇಣಿ ಸಂಬಂಧದ ಸೌಹಾರ್ದತೆ ಮೌನವಾಗಿ ಕಾಣುತ್ತದೆ. ಅಮಾಸನ ಚಿತ್ರಣ ಎಷ್ಟೊಂದು ಕಲಾತ್ಮಕವಾಗಿ ಬಂದಿದೆಯೆಂದರೆ ಬೀರ, ರಂಗಪ್ಪನ ಅಸಹಾಯಕತೆಗೆ ಅಮಾಸ ಉತ್ತರವಾಗುತ್ತಾನೆ. ಅವನ ಹುಲಿ ವೇಷ ವ್ಯವಸ್ಥೆಯ ಬದಲಾವಣೆಯ ದಿಕ್ಕನ್ನು ಕೇವಲ ಒಂದು ಹೊಸ ಕಿರಣ ಎಂಬಂತೆ ಬಿತ್ತುತ್ತಾನೆ.

ಕುರಿಯಯ್ಯ ಅಮಾಸನ ವಯಸ್ಸಿನವನಿದ್ದಾಗ ಮಾರಿಹಬ್ಬದಲ್ಲಿ ಹುಲಿವೇಷ ಹಾಕಿ ಕುಣಿದು ಘರ್ಷಿಸಿ ಮೆರೆದು ತನ್ನ ಪ್ರತಿಭೆ ತೋರಿಸಿದ್ದ ಅವರ ಪ್ರತಿಫಲವಾಗಿ ಊರಿನಗೌಡರು ಹುಲಿವೇಷಕ್ಕೆ ತಲೆದೂಗಿ ಇನಾಮು ಕೊಡುತ್ತಾರೆ. ಗೌಡರು ಕೊಡುವ ಇನಾಮು ಅಂಗಿ ಬಟ್ಟೆ ಮಾತ್ರ. ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ ಗೌಡರು ಕುರಿಯಯ್ಯನನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸಲಿಲ್ಲ. ಹಣ ಕೊಡಲಿಲ್ಲ. ''ನೀ ಇರೋಷ್ಟುಕಾಲ ನಮ್ಮ ಹಟ್ಟೀಲೆ ಇರು, ನೀನು ಉಂಡ ಊಟ ಹಾಕಿಕೊಂಡ ಬಟ್ಟೆ ಒಂದಿಷ್ಟು ಕುರಿ ನೋಡ್ಕ ಅಷ್ಟೇನೆ'' ಎಂದು ಬಹುಮಾನ ನೀಡುತ್ತಾನೆ. ಈತನ ಕಲಾ ಪ್ರತಿಭೆ ಶೋಷಣೆಗೆ ಒಳಗಾಗುತ್ತದೆ. ಕುರಿಯಯ್ಯ ಗೌಡರ ಸ್ವತ್ತಾಗುತ್ತಾನೆ. ಮುಂದಿನ ದಿನಗಳಲ್ಲಿ ಕುರಿಯಯ್ಯ ಹುಲಿಯಾಗಿ ಮಾಡಬಹುದಾದ ಪ್ರತಿಭಟಿಸಬಹುದಾದ ಪ್ರಜ್ಞೆಯನ್ನು ಗೌಡರು ಕಿತ್ತು ಕೊಂಡಿರುವುದು

ಅವರ ಸಂಚಿನ ಫಲವಾಗಿದೆ. ಈ ಹಿನ್ನೆಲೆಯಲ್ಲಿ ಕುರಿಯಯ್ಯ ಸ್ಥಿರತೆಯ ಸಂಕೇತವಾಗಿ ಕಂಡುಬರುತ್ತಾನೆ. ಕುರಿಯಯ್ಯನ ಗರಡಿಯಲ್ಲಿ ಬೆಳೆದ ಹೊಸ ಪೀಳಿಗೆಯ ಅಮಾಸ ಊರಿನ ಮಾರಿಹಬ್ಬದಲ್ಲಿ ಹುಲಿ ವೇಶದಲ್ಲಿ ಏಕೆ ಎಲ್ಲರಿಗಿಂತಲೂ ವೈನಾಗಿ ಕುಣಿದು ಘರ್ಜಿಸಿ ಬಂಗಾರಿ ಯಂಥವಳಿಗೆ ನಿದ್ದೆ ಕೆಡಿಸಿ ಆಕೆಯ ಕನಸಿನ ಕಂದನಾಗುತ್ತಾನೆ. ಇಲ್ಲಿ ಬೀಜ - ವೃಕ್ಷ - ಬೀಜ ವೃಕ್ಷದ ಚಕ್ರದಂತೆ ನೆನ್ನೆಯ ಅಮಾಸ ಇಂದಿನ ಕುರಿಯಯ್ಯ ಇಂದಿನ ಅಮಾಸ ನಾಳಿನ ಕುರಿಯಯ್ಯನಾಗಿ ಗೌಡರ ಶೋಷಣೆಗೆ ನಿರಂತರ ಒಳಗಾಗುವ ಚಿತ್ರಣ ನೀಡಿದ್ದಾರೆ. (ಡಾ. ಚಂದ್ರಶೇಖರ್ ನಂಗಲಿ)

ಈ ಕತೆಯಲ್ಲಿ ಬರುವ ಸಿದ್ದಪ್ಪನ ಮಾತುಗಳು ಮತ್ತೆ ಮಾರಿಕೊಂಡವರು ಕತೆಯ ಬೀರನನ್ನು ನೆನೆಸುತ್ತದೆ. ಕುಡಿದ ಅಮಲಿನಲ್ಲಿ ಲೈನ್‌ಮ್ಯಾನ್ ಸಿದ್ದಪ್ಪ ಉರಿಯೋ ಲೈಟ್ ಕಂಬಕ್ಕೆ ಝಾಡಿಸಿ ಒದ್ದು ಬಿದ್ದು ಕೋಲಲ್ಲಿ ಜೋರಾಗಿ ಬಡಿದು ತಾನು ವಾಸ್ತವವಾಗಿ ಬಯ್ಯಲಾರದ ಕಂಟ್ರಾಕ್ಟರ್, ರಾಜಕಾರಣ ತನ್ನ ಬಾಸ್ ಬಡ್ಡಿ ಮಾದವ್ರ ಎಲ್ಲರಿಗೂ ಅನ್ವಯಿಸುವಂತೆ ಬಯ್ಯುತ್ತಾನೆ. "ಕಮುನಿಸಮು ಬರ್ಬೇಕು ಆಗ ನೀ ನಗೋದು ಹೋಗ್ಬೇಕು ಅಲ್ಲಿ ಗಂಟಾನು ನೀ ನನ್ನಿ ನಗಪೊ... ನಗು....." (6. ದ್ಯಾವನೂರು ಮಹಾದೇವ ಸಮಗ್ರ ಕೃತಿ ಪುಟ - 50) ಸಿದ್ದಪ್ಪನ ತಿಳುವಳಿಕೆಗೆ ಬಂದಿರುವ ಕಮುನಿಸಮು ಬಂದ್ರೆ ಶ್ರೀಮಂತರು ಹಾಳಾಗಿ ಬಡವರು ನಗಬಹದಾದ ಸ್ಥಿತಿ ಬರುತ್ತದೆಂಬ ನಂಬಿಕೆಯೇ ಕತೆಯ ಆಶಾಕಿರಣವಾಗಿದೆ. ಸಿದ್ದಪ್ಪನ ಮೂಲಕ ಕತೆಗಾರ ಸಮಾಜಕ್ಕೆ ಆಗಬೇಕಾದ ಚಿಕಿತ್ಸೆಯನ್ನು ಮಾರ್ಕ್ಸ್‌ನಲ್ಲಿರುವ ಮದ್ದನ್ನು ಸೂಚಿಸುತ್ತಾರೆ. ಈ ಕತೆಯ ಸಿದ್ದಪ್ಪ ಅಮಾಸ ಒಂದು ಕಡೆ ನಿಂತರೆ ಊರ ಗೌಡನಷ್ಟೇ ಅಲ್ಲ ಜಮೀನ್ದಾರರ ವ್ಯವಸ್ಥೆ ಇನ್ನೊಂದು ಕಡೆ ನಿಲ್ಲುತ್ತದೆ. ಮಹಾದೇವ ಅವರಲ್ಲಿ ಬರುವ ಸೂಕ್ಷ್ಮ ಪ್ರತಿಕ್ರಯೆ ಮಾಡುವ ಪಾತ್ರಗಳ ಸಂಕೇತ ಅಮಾಸ. ಇವನು ಬೀರನಂತಿರದೆ ರಂಗಪ್ಪ ನಂತಲ್ಲವೆ. ತನ್ನ ಅಸ್ತಿತ್ವವನ್ನು ಪರಿಣಾಮಕಾರಿಯಾಗಿ ದಾಖಲು ಮಾಡುತ್ತಾನೆ. ಮಹಾದೇವ ಸಾಂಸ್ಕೃತಿಕ ವಿವರಗಳಿಂದ ಉತ್ತಮ ಜನ ಮಾಧ್ಯಮ ಆದ್ದರಿಂದ ಮನಸ್ಸಿನಲ್ಲಿ ಅಮಾಸ ಉಳಿಯುತ್ತಾನೆ.

'ಗ್ರಸ್ತರು' ಒಂದು ದಹನದ ಕತೆ ಮತ್ತು 'ದತ್ತ' ಕತೆಗಳಲ್ಲಿ ವೈಚಾರಿಕತೆ, ಸಮಾಜದ ಕಟ್ಟುಪಾಡುಗಳು ಕಂಡುಬಂದರೆ ಮಾರಿಕೊಂಡವರು. ಅಮಾಸ, ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ ಕತೆಗಳಲ್ಲಿ ದೀನದಲಿತ ಸಮಾಜದ ಶೋಷಣೆ ಒಳಗಾದವರ ಚಿತ್ರಣವಿದೆ. ಯಾವುದೇ ಆಕ್ರೋಶಕ್ಕೆ ಒಳಗಾಗದೆ ಈ ವರ್ಗದ ಚಿತ್ರಣ ಕೊಟ್ಟಿದ್ದಾರೆ. ತಮ್ಮದೇ ಆದ ಶೈಲಿ ನಿರೂಪಣಾ ವಿಧಾನ ಆಡುಮಾತಿನ ವೈಶಿಷ್ಟದಿಂದ ಎಲ್ಲರ ಗಮನ ಸಳೆದಿದ್ದಾರೆ.

ದೇವನೂರರ 'ಒಡಲಾಳ' ದಲಿತ ಕುಟುಂಬದವೊಂದರ ಸ್ಥಿತಿಗತಿಗಳನ್ನು ದಾಖಲಿಸುವುದರೊಂದಿಗೆ ಈ ಕುಟುಂಬ ಪ್ರತಿನಿಧಿಸುವ ಸಂಸ್ಕೃತಿಯನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿದೆ. ಈ ಸಂಸ್ಕೃತಿಯ ಸ್ವರೂಪ ಒಮ್ಮುಖವಾದದ್ದಲ್ಲ. ಬಡತನದಲ್ಲೂ ಬತ್ತದ ಪ್ರೀತಿಯಸೆಲೆ, ದಾರಿದ್ರ್ಯದಲ್ಲೂ ಅರಳುವ ಕಲೆ, ರೋಗಗ್ರಸ್ಥ ಜಡತೆಯಲ್ಲಿಯೂ ಕಾಣುವ ಚಲನೆ ಈ ಸಂಸ್ಕೃತಿಯ ಕಕ್ಷೆಯಲ್ಲಿ ಬರುತ್ತದೆ. ಸಾಕವ್ವನ ಕುಟುಂಬದ ಬದುಕಿನ ವಿವರಗಳು ಮತ್ತು ಬದುಕಿನ ಅವಿಭಾಜ್ಯ ಅಂಗಗಳಾದ ವಸ್ತು ವಿಷಯಗಳು ಒಟ್ಟಿಗೆ ಈ ಕಾದಂಬರಿಯಲ್ಲಿ ವರ್ಣಿತವಾಗಿದೆ. ಇಲ್ಲಿ ಚಿತ್ರಣಗೊಂಡಿರುವ ವಸ್ತು ವಿಷಯಗಳು ದಲಿತರ ಭೌತಿಕ ಸಂಸ್ಕೃತಿಯನ್ನು ಪ್ರತಿನಿಧಿಸಿದರೆ ಪಾತ್ರಗಳ ಮುಖಾಂತರ ಕಂಡರಿಸಿರುವ ಜೀವನ ಅಂತ ಕುಟುಂಬಗಳು ಹೊಂದಿರುವ ಪಾರಂಪರಿಕ, ನಂಬುಗೆಗಳು, ಸಂಪ್ರದಾಯಗಳು ಮತ್ತು ಆಚರಣೆಗಳಲ್ಲಿ ಹುದುಗಿರುವ ಅಭೌತಿಕ ಸಂಸ್ಕೃತಿಯನ್ನು ಧ್ವನಿಸುತ್ತದೆ. ಇದರಿಂದ

ಇಡೀಯಾಗಿ ದಲಿತರ ಪರಿಸರ ಮತ್ತು ಜೀವನನ್ನು ಭೈಷೆಯಲ್ಲಿ ಕಟ್ಟಿಕೊಡುವುದು ದೇವನೂರರಿಗೆ ಸಾಧ್ಯವಾಗಿದೆ. ಈ ಚಿತ್ರಣಕ್ಕೆ ದೇವನೂರು ದಲಿತರ ಆಡುಭಾಷೆಯನ್ನೇ ಬಳಸಿಕೊಂಡಿರುವುದರಿಂದ ಆ ಪರಿಸರದ ಜೀವಂತ ಚಿತ್ರಣ ಸಾಧ್ಯವಾಗಿದೆ. ಜನಪದ ನೆಲೆಯ ನುಡಿಗಟ್ಟುಗಳು, ಗಾದೆ ಧ್ವನಿ ಮುಖಾಂತರ ಆವರ್ತನೆಗೊಳ್ಳುವಲಯ ಎಲ್ಲವೂ ಸಮ್ಮಿಳಿತಗೊಂಡು ಇಲ್ಲಿನ ಭಾಷೆ ರೂಪುಗೊಂಡಿದ್ದು ಸಹಜ ಸ್ಥಿತಿಯಲ್ಲಿಯೇ ಕಲಾತ್ಮಕವಾಗಿದೆ. ಈ ಕಾದಂಬರಿ ಪ್ರತಿನಿಧಿಸುವ ದಲಿತ ಸಂಸ್ಕೃತಿಯ ಕೆಲವೊಂದು ಮುಖಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಮಾನವ ಬದುಕಿನ ಜೊತೆ ಜೊತೆಗೆ ರೂಪುಗೊಂಡ ವಸ್ತುಗಳು ಮಾನವ ಸಂಸ್ಕೃತಿಯ ಅಧ್ಯಯನಕ್ಕೆ ಆಕರ ಸಾಮಗ್ರಿಗಳು ಆಗಿವೆ. ಒಂದು ಸಮುದಾಯದ ಸೃಷ್ಟಿಗಳೆನಿಸಿಕೊಳ್ಳು ದೇವಾಲಯಗಳು ಅಲ್ಲಿನ ವಾಸ್ತುಶಿಲ್ಪ, ಮೂರ್ತಿ ಶಿಲ್ಪಗಳು, ರಾಜರ ಮನೆಗಳು ಮತ್ತು ಅವರ ಸ್ನಾನದ ಗೃಹಗಳು, ಯುದ್ಧೋಪಕರಣಗಳು ಈಗಾಗಲೇ ಸಂಸ್ಕೃತಿಯ ವಸ್ತುಗಳಾಗಿ ಗುರುತಿಸಲ್ಪಟ್ಟಿದೆ. ಇವೆಲ್ಲವೂ ಕೆಲವೇ ಪ್ರತಿಷ್ಠಿತ ಜನರ ವಸ್ತು ವಿಷಯಗಳು ಮಾತ್ರ. ಒಡಲಾಳ ಕಾದಾಂಬರಿಯಲ್ಲಿ ಬರುವ ವಸ್ತು ವಿಷಯಗಳು ಸಾಮಾನ್ಯ ಕುಟುಂಬವೊಂದರ ಮನೆ, ಆ ಕುಟುಂಬದ ಅಡುಗೆಯ ಸಾಮಾನುಗಳು ಬೇಸಾಯದ ಉಪಕರಣಗಳು, ಕುಲದೇವತಾ ಚಿತ್ರ ಮತ್ತು ಹರಕೆಯ ವಸ್ತುಗಳು ಹೀಗೆ ಇಡೀಯಾಗಿ ಒಂದು ಕುಟುಂಬದ ಒಟ್ಟು ಬದುಕಿನಲ್ಲಿ ಪಾಲು ಪಡೆದ ವಸ್ತುಗಳು ಕಥೆಯ ವಸ್ತುವಿಗೆ ಅನುಸರಿಸಿ ವರ್ಣಿತವಾಗಿವೆ. ಒಂದು ಕಾಲಕ್ಕೆ ತುಂಬಿದ ಮನೆಯಾಗಿ ಸಮೃದ್ಧಿಯಾಗಿದ್ದ, ಸಾಕವ್ವನ ಹಟ್ಟಿ ಈಗ ಬರಿದೋ ಬರಿದು. ಸಾಕವ್ವ ತಲುಪಿರುವ ಮುಪ್ಪಿನ ಅವಸ್ಥೆಗೂ, ಆಕೆಯ ಪಟ್ಟಿಯ ಜೀರ್ಣಾ ಅವಸ್ಥೆಗೂ ಇಳಿದಿರುವುದಕ್ಕೆ ಪರಸ್ಪರ ಸಂಬಂಧವಿದೆ. ಕೃತಿಯ ಪ್ರಾರಂಭದ ಸಾಲುಗಳು ಇವು. ಸಾಕವ್ವನ ನಾಲ್ಕು ಕಂಬದ ತೊಟ್ಟಿ ಹಟ್ಟಿ ಅನ್ನೋದು ದೇಹದ ಭೂಮಿಗೆ ಇಳಿಬಿಟ್ಟು ಹಂಚು ಹುಲ್ಲು ತೆಂಗಿನ ಗರಿಯ ಆರರೆ ಮುಸುಡಿ ಮಾಡಿಕೊಂಡು ನಿಂತಿತ್ತು. ಸಾಕವ್ವನ ದೇಹ ತಲುಪಿರುವ ಸ್ಥಿತಿಯನ್ನು ದೇವನೂರರು ಹೀಗೆ ವರ್ಣಿಸುತ್ತಾರೆ. ಅವಳು ಕುಳಿತಿದ್ದರೂ ಸಪೋರ್ಟಿಗಾಗಿ ತನ್ನ ಚಿಳಕದ ಕೈಯನ್ನು ನೆಲಕ್ಕೆ ಚೆಲ್ಲಿದಳು. ಸಾಕವ್ವನ ಚರುಮಕ್ಕೂ ಮೂಳೆಗೂ ಹೊಂದಾಣಿಕೆ ತಪ್ಪಿತ್ತಾದ್ದರಿಂದಮಯ್ಯ ಚರಮಗಳು ಸ್ವತಂತ್ರವಾಗಿ ಅಲ್ಲಾಡುತ್ತಾ ತಮ್ಮಷ್ಟಕ್ಕೆ ತಾವಿದ್ದುವು. ಅವಳ ನಡುವಾಗಿದ್ದ ಆಸರಗೋಲು ತಬ್ಬಲಿಯಾಗಿ ಮುಂದೆ ಬಿದ್ದಿತ್ತು. ಆ ಕೋಲಿಗೆ ನೊಣಗಳು ಸಾಕವ್ವನನ್ನು ಕೇರು ಮಾಡದೆ ಗುಂಪು ಕಟ್ಟಿದಾಳಿಮಾಡುತ್ತಿದ್ದವು.

ಮೇಲಿನ ಎರಡೂ ಚಿತ್ರಗಳು ಒಂದನ್ನೊಂದು ಆಶ್ರಯಿಸಿವೆ. ಆ ಎರಡೂ ಒಂದೇ ಜೀರ್ಣಾವಸ್ಥೆಗೆ ತಲುಪಿ ಆಶ್ರಯಿವೆ. ಆ ಎರಡೂ ಒಂದೇ ಜೀರ್ಣಾವಸ್ಥೆಗೆ ತಲುಪಿ ವಿಕಾರಗೊಂಡಿವೆ. ಇದನ್ನು ವರ್ಣಿಸುವ ಭಾಷೆ ಮತ್ತು ಕಥಾ ವಸ್ತುವನ್ನು ದೋವನೂರರು ಒಳಗಿನಿಂದ ನೋಡಲು ಆ ಮೂಲಕ ಸಾಧ್ಯವಾಗಿದೆ. ಅದನ್ನು ಕೇವಲ ದಾಖಲಿಸುತ್ತಿಲ್ಲ. ಅದನ್ನು ವರ್ಣಿಸುವ ರೀತಿಯಲ್ಲಿಯೇ ತಮ್ಮ ದೃಷ್ಟಿಯನ್ನು ಚೆಲ್ಲುತ್ತಾರೆ. ಇಡೀ ಕೃತಿಯ ತುಂಬ ಸಾಕವ್ವನ ಬದುಕಿಗೆ ನಿರ್ಜೀವ ವಸ್ತುವಾದ ಹಟ್ಟಿ ಪ್ರತಿಕ್ರಿಯಿಸುವ ಸೂಚನೆಗಳಿವೆ. ಒಂದು ಕಾಲದಲ್ಲಿ ಪೂರ್ತವೇ ಹಂಚು ಹೊದ್ದು ಮೆಡುಗಾರಿಕೆ ಮಾಡಿದ್ದ ಈ ಹಟ್ಟಿಯ ಸ್ಥಿತಿ ಈಗ ಯಾವ ಸ್ಥಿತಿಗೆ ಬಂದಿದೆಯೆಂದರೆ ಹಟ್ಟಿಯ ಹೊತ್ತು ನಿಂತಿದ್ದ ಕಂಬ, ಕಮಾನು, ತೊಲೆಗಳು ಕುಗ್ಗಿ ಬಗ್ಗಿ ತಮ್ಮ ನೆರಳಡಿ ಉಸಿರಾಡುತ್ತಿದ್ದ ಜೀವಿಗಳ ಬಗ್ಗೆ ದಯ ತೋರುತ್ತ ನಿಂತಿದ್ದವು. ಇಂಥ ಸ್ಥಿತಿ ತಲುಪಿದ ಹಟ್ಟಿಯನ್ನು ತುಂಬಿಕೊಂಡಿರುವುದು ಗವ್ವೆನ್ನುವ ಕತ್ತಲು, ಶಿವು ಪುಸ್ತಕಕ್ಕೆ ಕಣ್ಣಾಕಲು. ಕಣ್ಣಾಕಿದರೆ ಆಗಲೇ ಕತ್ತಲು ಎನ್ನುವುದು. ಇದ್ದ ಬಿದ್ದ ಬೆಳಕನೆಲ್ಲ ನೆಲಕ್ಕೆ ತುಳಿದು ಬುಟ್ಟಿತ್ತು ಕಿರು ಮನೇಲಿ ಮಾತ್ರ ಆಗ ಹಚ್ಚಿದ್ದ ದೀಪದ ಬೆಳಕು ಕೊಣೆ ಮಿಣೆ ಎಂತ ಕಿರುಮನೆ ವಸ್ತುಲ ಕಡದು ಹೊರಕ್ಕೆ ಮೊಖ ಹಾಕಿ ಒಳಕ್ಕೋಗದ ಮಾಡಿತ್ತು ಸಾಯುತ್ತ

ಬದುಕುತ್ತ ಉರಿಯುವ ಈ ದೀಪದ ಸ್ಥಿತಿ. ಆ ಹಟ್ಟಿಯಲ್ಲಿ ಬದುಕುವ ಜೀವಿಗಳ ಸ್ಥಿತಿ ಒಂದೇ ಆಗಿದೆ. ಎತ್ತಪ್ಪನ ಮಿಲ್‌ನಿಂದ ಕಡಲೆಕಾಯಿ ಕದ್ದು ತಂದ ಕಾಳಣ್ಣ ಮನೆಗೆ ಬಂದ ಮೇಲೆ ಹಂಡ್ತಿಗೆ ಬೆಳಕು ಮಾಡಲು ಸೂಚಿಸುತ್ತಾನೆ. ಆಗ ಅವಳು ಕಿರುಮನೇಲಿ ಜೀವ ಇಟ್ಟುಕೊಂಡು ಉರಿಯುತ್ತಿದ್ದ ಸೊಳ್ಳಿಯಿಂದ ಉರಿ ಮಾಡಿಕೊಂಡು ತಂದು ಉರಿಗೆ ಕಸಕಡ್ಡಿ ತರಗು ತುಂಬಲು ಅಲ್ಲಿ ಹೊಗೆಯೊಡನೆ ಬೆಳಕೆದ್ದಿತು. ಆ ಬೆಳಕಿನಿಂದ ಹಟ್ಟಿ ಹಟ್ಟಿ, ಒಳಗಲ ಜನ ಒಂದೇ ಸಲಕ್ಕೆ ಕಾಣುವಂತಾಯ್ತು. ಜೀವಹಿಡಿದು ಉರಿಯುತ್ತಿದ್ದ ಸೊಳ್ಳಿಂದ ಮಾಡಿದ ಉರಿ ಬೆಂಕಿಯಾಗಿ ಆ ಬಂಕಿ ಉರಿ ಭೂಮತಾಯ ನಾಲುಗೆಯಂತೆ ಹೊಗೆ ಕಕ್ಕುತ್ತ, ಸೊಳ್ಳೆ ಕ್ರಿಮಿಕೀಟಾದಿಗಳ ಉಸಿರು ಕಟ್ಟಿಸುತ್ತಾ ಅಲ್ಲಿಂದ ಎದ್ದು ಹಟ್ಟಿಯ ನಾಕಾ ಮೂಲಕೂಚಾಚುತಿತ್ತು. ಸಣ್ಣ ಉರಿಯೊಂದು ಹೀಗೆ ಏನೆಲ್ಲವನ್ನು ತಿಂದು ಅರಗಿಸಿಕೊಳ್ಳುವ ಬೆಂಕಿಯಾದದ್ದು, ಆ ಮೂಲಕ ಸಾಕವ್ವನ ಹಟ್ಟಿಗೆ ಬೆಳಕದಾದ್ದು ಸಾಕವ್ವನ ಕುಟುಂಬದ ಹಸಿವಿನ ಬಡಬಾಗ್ನಿ ಎಷ್ಟೊಂದು ಭೀಕರ ಸ್ವರೂಪದ್ದು ಎಂಬುದನ್ನು ಧ್ವನಿಸುತ್ತದೆ.

ಸಾಕವ್ವನ ಕುಟುಂಬ ಪ್ರತಿನಿಧಿಸುವ ಬದಕು ಸಹಬಾಳ್ವೆಯಿಂದ ನಿಯೋಜಿತವಾಗಿದೆ. ಸಾಕವ್ವನಿಗೆ ತಾನು ಕಳೆದುಕೊಂಡು ಹುಂಜದ ಬಗೆಗೆ ಯಂತೂ ಅಷ್ಟಾಗಿ ಹಚ್ಚಿಕೊಳ್ಳದಿರುವುದು ಅವಳಿಗೆ ಎಲ್ಲಿಲ್ಲದ ಕೋಪ ತರಿಸುತ್ತದೆ. ಮಕ್ಕಳ ಮೇಲೆ ಸೊಸೆಯರ ಮೇಲೆ ಕಿಡಿ ಕಾರುತ್ತಾಳೆ. ಇಲ್ಲೆಲ್ಲ ತನ್ನ ಬದುಕು ಹರಿದು ಹಂಚಿ ಮೂರಾಬಟ್ಟೆಯಾದದ್ದರ ಬಗೆಗೆ ನೋವು, ತಿರಸ್ಕಾರ, ವ್ಯಂಗಗಳು ಒಟ್ಟಿಗೆ ಆಕೆಯ ಮಾತುಗಳಲ್ಲಿ ಧ್ವನಿತವಾಗುತ್ತವೆ. ಕಾಳಣ್ಣನಿಗೆ ಕೇಳುವ ಮಾತಿದು 'ಏನಂದೆ ಕಂದಾ! ಹೊತ್ತು ಮೂಡ್ಲಿ ಅಂದ್ಯಾ ಹೊತ್ಮೂಡಿ ಏಡು ಮಾರು ಬಂದ್ರೂನೂ ನೀನು ಏಳ್ದಿದ್ದಕ್ಕಲ್ವ ನನ್ನ ಹಟ್ಟಿ ಮೂರು ಪಾಲಾದ್ದು ಎನ್ನುತ್ತಾಳೆ. ಸೊಸೆ ಚೆಲುವಮ್ಮನ ಜೊತೆ ವಾಗ್ವಾದಕ್ಕೆ ಇಳಿಯುವುದು ಮಗನನ್ನು ಕೈಯಲ್ಲಿಟ್ಟುಕೊಂಡು ಆಟ ಆಡಿಸುತ್ತಾಳೆ ಎಂಬುದು ಕಾರಣವಾಗಿರಬಹುದು. ಹೆಣ್ಣು ಹೆಣ್ಣಿನ ಮೇಲೆ ಅಧಿಕಾರ ಚಲಾಯಿಸುವ ಪರಿಯನ್ನು ದೇವನೂರು ಈ ಮೂಲಕ ಸೂಚಿಸುತ್ತಿರಬಹುದು. ಸೊಸೆಯ ಜೊತೆಯಲ್ಲಿ ಹೀಗೆ ಕದನದಲ್ಲಿ ತೊಡಗಿರುವಾಗ ಚೆಲುವಮ್ಮಳ ಕೂಸು ಅಜ್ಜಿಯ ಜೊತೆ ಸೂಕ್ತ ಆಡುತ್ತಿತ್ತು. ಸೊಸೆಯ ಮೇಲಿನ ಸಿಟ್ಟನ್ನು ಸಾಕವ್ವ ಕೂಸಿನ ಮೇಲೆ ಹಾಕಲಾರಳು. ಏಕೆಂದರೆ ಆಕೆ ಸಾಕುವ ಅವ್ವ, ಎಂತಹ ಜಗಳ ಗುದ್ದಾಟಗಳು ನಡೆದರೂ ಕೂಡಿ ಬದುಕುವ ಬಗೆ ದಲಿತರದ್ದು, ಚೆಲುವಮ್ಮ ಅತ್ತೆಯ ಕೂಡ ಜಗಳವಾಗಿ ಊರಿಗೆ ಹೊರಟು ನಿಂತಾಗ ಕಾಳಣ್ಣ ಬಂದು 'ನೀ ಮೊದ್ಲು ಹೋಗು ಇವ್ವ' ಎಂಬುದಕ್ಕೆ ಅಳಲು ತೋಡಿಕೊಳ್ಳುತ್ತ ಒಳಗೆ ಬಂದ ಚೆಲುವಮ್ಮ ಕಾಳಣ್ಣ ಹೆಂಡ್ತಿಯ ಜೊತೆಗೆ ಸೌದೆಗೆ ಹೊರಡುತ್ತಾಳೆ. ಭಿನ್ನಾಭಿಪ್ರಾಯ ಜಗಳ ಎಲ್ಲವೂ ಆ ಕ್ಷಣಕ್ಕೆ ಅನಂತರ ಅವೆಲ್ಲವನ್ನು ಮರೆತು ಕೂಡಿ ಬಾಳುವ ಕಡೆಗೆ ಪಾತ್ರಗಳು ಮುಖ ಮಾಡುವುದು ದಲಿತರು ಪಾರಂಪರಿಕವಾಗಿ ಉಳಿಸಿಕೊಂಡು ಬಂದ ಸಹಬಾಳ್ವೆ ಬದುಕನ್ನು ಪ್ರತಿನಿಧಿಸುತ್ತದೆ. ಹೊರಗಿನಿಂದ ಏನೇ ತಿಂಡಿ, ತಿನಿಸು ತರಲಿ, ಮನೆಯಲ್ಲಿ ವಿಶೇಷವಾದದನ್ನು ಮಾಡಿಕೊಳ್ಳಲಿ ಆ ಕುಟುಂಬದ ಸದಸ್ಯರು ಕೂಡಿ ಉಣ್ಣುವ ತಿನ್ನುವ ಪರಿಪಾಠ ಸಾಂಪ್ರದಾಯಕವಾದದ್ದು ಕಾಳಣ್ಣನ ಹೆಂಡ್ತಿ ಸಾಕವ್ವನಿಗೆ ತಂದುಕೊಟ್ಟು ನಾಲ್ಕು ಹಿಡಿ ಪುರಿ ಅವಳೊಬ್ಬಳೇ ತಿನ್ನದೆ ಗೌರಿಗೆ ಆಕೆಯ ರೋಗಗ್ರಸ್ಥ ಮಗನಿಗೆ ಹಂಚುವುದು ಸಾಕುವ ಅವ್ವ ಆಗಿರುವುದನ್ನು ಧ್ವನಿಸುತ್ತದೆ.

ಸಾಕವ್ವನ ಹಟ್ಟಿಯ ಹೆಣ್ಣು ಗಂಡುಗಳೆಲ್ಲ ಮನೆಯಂಗಳದಲ್ಲಿ ಗುಡ್ಡೆ ಹಾಕಿಕೊಂಡಿರುವುದರಿಂದ 'ದುಡಿಮೆ' ಎಂಬ ಕ್ರಿಯೆಯೇ ಇಲ್ಲಿ ಇಲ್ಲವಾಗುತ್ತದೆ ಎಂದು ಅಭಿಪ್ರಾಯ ಪಡುವ ಮನುಜ ಅವರು ಕೃತಿಯನ್ನು ಇಡೀಯಾಗಿ ಗಮನಿಸುವುದಿಲ್ಲ. ಕಾಳಣ್ಣ "ಅಲಾಕಣ್ರಾಮ್ಮ ಹಟ್ಟೀಯಮ್ಮಕ್ಳೆಲ್ಲ ಎತ್ತಾಗು ಹೋಗ್ದನೆ ಗುಡ್ಡಾಕ್ಕಂಡಿದ್ದೀರಲ್ಲ.... ನಿಮ್ಮೆ

ಉಣ್ಣಾಕ ಬಾನಿಂದ ಇಳು ಬಂದದಾ...... ಅಂದುದಕ್ಕೆ ಗೌರಮ್ಮ ಕೆಲ್ಸಕ ಕರದ್ರಲ್ಲಣ್ಣಾ ವೋಗುದು ನಾವೂನು ಮೇಲ್ಬಿದ್ದು ಮೇಗಲ ಕೇರಿನಲ್ಲ ತಿರಿಕಂಡು ಬಂದ್ವು, ನೀಯಾರ ಅನ್ನೋರಿಲ್ಲ ಎಂಬ ಮಾತುಗಳು ಮುಂದೆ ಪುಟಗೌರಿ ನವುಲು ಬರೆಯುತ್ತ ಕುಳಿತಿರೋದು ಕಂಡ ಸಾಕವ್ವ 'ತಗಾ ಅದ್ಯಾರೋ ಒಬ್ಬಳು ಕುಟ್ಟೋ ಬತ್ತ ಬಿಟ್ಟು ಹುಟ್ಟೋ ಸ್ಯಾಟ ನೋಡ್ಕತಿದ್ಲಂತೆ' ಅಂದಾಗ ಪುಟಗೌರಿ ವ್ಲಾ ಕವೊ ಇಲ್ಲಿ ಬತ್ತ ಕುಟ್ಟಾಕ ಗುಡ್ಡಾಗಿ ಮಡ್ಗದ ಎನ್ನುವ ಮಾತುಗಳು ಸಾಕವ್ವನ ಮಕ್ಕಳು ಹುಟ್ಟಾ ಸೋಮಾರಿಗಳಲ್ಲ, ಕಳ್ಳರೂ ಅಲ್ಲ. ಪರಿಸ್ಥಿತಿ ಸಂದರ್ಭಗಳು ಹಾಗೆ ಸೋಮಾರಿಗಳನ್ನಾಗಿಸಿವೆ ಎಂಬುದಕ್ಕೆ ಸಾಕ್ಷಿಗಳಿವೆ. ಮನೆ ತುಂಬ ದುಡಿಯುವ ಮಂದಿಯಿದ್ದರೂ ಅವರಿಗೆ ಕೆಲಸವಿಲ್ಲ. ದುಡಿಯದೆ ಹೊಟ್ಟೆ ತುಂಬುವ ಪವಾಡವೂ ಇಲ್ಲಿ ನಡೆಯುವುದಿಲ್ಲ. ಹೊಟ್ಟೆಗೆ ಹಿಟ್ಟು ಕಾಣದ ಈ ಪರಿಸ್ಥಿತಿ ಎತ್ತಪ್ಪನ ಮಿಲ್ಲಿನ ಕಡಲೆಕಾಯಿ ಕದಿಯಲು ಪ್ರೇರೇಪಿಸುತ್ತದೆ.

ಸಾಕವ್ವನ ಮನೆ ಜಪ್ತಿ ನಡೆದಾಗ ಬಡತನ ಕಿತ್ತು ತಿನ್ನುತ್ತಿದ್ದರೂ ಮುಂದಿನ ದಿನಗಳಿಗಾಗಿ ಬೂದಿ ಬೆರೆಸಿಟ್ಟಿದ್ದ ಬಿತ್ತನೆ ಜೋಳ ಜೋಪಾನವಾಗಿರಿಸಿರುವುದು ಕಂಡುಬರುತ್ತದೆ. ಹೊಟ್ಟೆಗೆ ಬಟ್ಟೆ ಕಟ್ಟಿಕೊಂಡು ಬಿತ್ತನೆ ಜೋಳ ಕಾಪಾಡುವುದು. 'ದುಡಿಮೆ' ಯನ್ನು ನಂಬಿ ಬದುಕುವ ದುಡಿಮೆಗಾರರಲ್ಲಿ ಮಾತ್ರ ಕಾಣಬಹುದಾದ ನಡಾವಳಿಯಾಗಿದೆ. ಸೋಮಾರಿತನ ಎನ್ನುವುದು ಸಾಕವ್ವನ ಮಕ್ಕಳ ಸ್ವಭಾವದಲ್ಲಿಲ್ಲ. ದೋಷವು ಅವರನ್ನು ಈ ರೀತಿ ಆಗಲು ಒತ್ತಾಯಿಸುವ ವ್ಯವಸ್ಥೆಯಲ್ಲಿದೆ.

ಎತ್ತಪ್ಪನ ಮಿಲ್ಲಿನಿಂದ ತಂದ ಕಡಲೆಕಾಯಿಯನ್ನು ಅದು ಕಳ್ಳಮಾಲಾದರೂ ಹಂಚಿ ತಿನ್ನುವ ಪ್ರಸಂಗ ಕೆಳಜಾತಿಗಳು ಇದುವರೆಗೂ ಉಳಿಸಿಕೊಂಡು ಬಂದಿರುವ ಸಹ ಪಂಕ್ತಿ ಭೋಜನವನ್ನು ನೆನಪಿಗೆ ತರುತ್ತದೆ. ಪಕ್ಕದ ಮನೆಯವಳು ಇದೇ ಪರಿಸ್ಥಿತಿಯಲ್ಲಿ ಹೊಟ್ಟೆಗೆ ಏನನ್ನಾದರೂ ಕೇಳಲು ಬಂದಾಗ ಅವಳಿಗೂ ಅದರಲ್ಲೇ ತುಸು ಹಂಚುವುದು ಇಲ್ಲಿ ಗಮನಾರ್ಹ. ಹೆಚ್ಚು ಕಡಲೆಕಾಯಿ ಕೊಡಲು ಹೋದ ಸೊಸೆಯನ್ನು ತಡೆದು ಸಾಕವ್ವ ಅದರಲ್ಲಿ ಸ್ವಲ್ಪ ಕಡಿಮೆ ಮಾಡಿ ಕಳುಹಿಸುವುದೂ ಇಲ್ಲಿ ಚಿತ್ರಣಗೊಂಡಿದೆ. ದ್ಯಾವನೂರರು ಪಾತ್ರಗಳನ್ನು ಸರಳೀಕರಿಸಿದರೆ ಉದಾರತ್ವದ ಜೊತೆಯಲ್ಲಿಯೇ ಸಣ್ಣತನವಿರುವ ದ್ವಂದ್ವವನ್ನು ಹೇಳುವುದರಿಂದ ಪಾತ್ರಗಳು ಜೀವಂತವಾಗಿ ಓಡಾಡಲು ಸಾಧ್ಯವಾಗಿದೆ.

ಸಾಕವ್ವನ ಕುಟುಂಬ ಕಡಲೆಕಾಯಿ ಬೀಜ ತಿನ್ನುತ್ತ ಸಿಪ್ಪೆಯನ್ನು ಬೆಂಕಿಗೆ ಎಸೆಯುವ ಈ ಸಂದರ್ಭವನ್ನು ಅನಂತಮೂರ್ತಿಯವರು ಯಜ್ಞ ಕ್ರಿಯೆಗೆ ಹೋಲಿಸುತ್ತ ಉಣ್ಣುವಂಥ ನಿತ್ಯದ ಒಂದು ಸಾಮಾನ್ಯರಲ್ಲಿ ಆಚರಣೆಯಲ್ಲಿದ್ದ ಇಂಥ ಕ್ರಿಯೆಗಳಿಂದ ಉಪನಿಷತ್ತಿನ ಆದರ್ಶಗಳು ರೂಪುಗೊಂಡವು ಎಂದು ತಿಳಿಯುವುದು. ಇದೇ ಸಂದರ್ಭದಲ್ಲಿ ಸಾಕವ್ವ ಹೇಳುವ ಮಾತುಗಳು ದಲಿತರ ಸಮಷ್ಟಿ ಪ್ರಜ್ಞೆಗೆ ಸಾಕ್ಷಿಯಾಗಿದೆ. ಎತ್ತಪ್ಪ ಸಾಹುಕಾರನ ದನದ ಹಟ್ಟಿಯಲ್ಲಿರುವ ಎಮ್ಮೆಗಳನ್ನು ನೆನೆಸಿಕೊಂಡು ಅಂಥ ಒಂದು ಎಮ್ಮೆ ಸತ್ರೀಗಪ್ಪ ನಮ್ಮ ಕೇರಿ ದರಿದ್ರನಾರೂ ಒಂಚಿನ ಹಂಗ್ತದ ಎನ್ನುತ್ತಾಳೆ. ಈ ಮಾತುಗಳನ್ನು ಡಾ. ಬಸವರಾಜ ಸಬರದ ಅವರು ಅರ್ಥೈಸೋದು ಹೀಗೆ.

'ಸಾಕವ್ವನ ಮಾತಿನಲ್ಲಿ ಶತಮಾನಗಳ ಕ್ರೌರ್ಯದ ಹಸಿವಿದೆ. ಎತ್ತಪ್ಪ ಸಾಹುಕಾರ ಎಮ್ಮೆ ಸತ್ತಾಗ ಮಾತ್ರ ಈ ಜನರ ಒಂದು ದಿನದ ಹಸಿವಾದರೂ ಹಿಂಗುತ್ತದೆ. ಒಬ್ಬರ ಸಾವು ಮತ್ತೊಬ್ಬರ ಬದುಕುಕಾಣುವ ಕ್ರೂರ ವ್ಯವಸ್ಥೆಯಲ್ಲಿರುವ ಅಸಮಾನತೆಯನ್ನು ಕಾದಂಬರಿ ತುಂಬಾ ಅರ್ಥಪೂರ್ಣವಾಗಿ ಧ್ವನಿಸುತ್ತದೆ. ಎಂದು ಅಭಿಪ್ರಾಯ

ಪಡುತ್ತಾರೆ. (7. ಪುಟ 101 - 102 ''ಅನುಸಂಧಾನದ ಹೊಸ ಹಾದಿ. ಡಾ. ಕೆ. ಆರ್. ದುರ್ಗಾದಾಸ್). ಸಾಕವ್ವನಂತಹ ಕುಟುಂಬಗಳಿಗೆ ಅಗತ್ಯವಿರುವುದು ಎತ್ತಪ್ಪನ ಆಸ್ತಿಗಳಿಂದ ಕಡಲೆಕಾಯಿ ಮತ್ತು ಎಮ್ಮೆ ಎರಡೂ ಹಸಿವನ್ನು ಹಿಂಗಿಸುವ ಆಹಾರ ಸಾಮಗ್ರಿಗಳು, ವಿನಹ ಎತ್ತಪ್ಪನ ಸಾವಲ್ಲ. ಸಾಕವ್ವನ ಮಾತುಗಳು ಅವಳ ಕುಟುಂಬವನ್ನಷ್ಟೇ ಅಲ್ಲ ಇಡೀ ಕೇರಿಯ ಹಸಿವಿನ ದಾರಿದ್ರ್ಯವನ್ನು ಲಕ್ಷಿಸಿವೆ ಎಂಬುದನ್ನು ಗಮನಿಸಿಬೇಕು. ಇದು ದ್ಯಾವನೂರರ ಸಮಷ್ಟೀ ಪಟ್ಟಿಗೂ ಸಾಕ್ಷಿಯಾಗಿದೆ.

ವಿಚಾರ ಮುಖಿಯಾದರೂ ವಿಭಿನ್ನ ಆಲೋಚನೆಗೆ ಹೆಸರಾದ ಜನಸಾಮಾನ್ಯರ ಒಡನಾಡಿ ದೇವನೂರು ಮಹಾ ದೇವಾ. ತನ್ನ ಆಡು ಭಾಷೆಯನ್ನೇ ಕಾವ್ಯ ಭಾಷೆಯಾಗಿ ಕಟ್ಟಿ ಮತ್ತೆ ಮತ್ತೆ ಓದುವ ಹಂಬಲವನ್ನು ಹೆಚ್ಚಿಸುವುದರೊಂದಿಗೆ ಕಲ್ಪನೆಯನ್ನು ಮೀರಿ ಹೊಸ ಹೊಸ ಹೊಳಪುಗಳನ್ನು ದೊರಕಿಸಿಕೊಡುವುದರಲ್ಲಿ ಯಶಸ್ವಿಯದ ಕೃತಿ ಕುಸುಮ ಬಾಲೆ.

''ಕುಸುಮಬಾಲೆ'' ಎಂಬ ಹೆಸರೇ ಸುಪ್ತ ಮನಸ್ಸಿನ ಮುಗ್ಧ ಪ್ರೀತಿಯ ಜೊತೆಗೆ ಕೋಮಲವಾದ ಹೂವು ಅರಳ ಬಾಡುವ ರೀತಿ ಅಂತರ್ಜಾತಿಯ ಆಪ್ತತೆಯಲ್ಲೇ ಕೊರಗಿ ಸೊರಗಿ ಹೋಗುವ ಹೂವಿನಂತೆ ಕುಸುಮಳ ಪಾತ್ರ ಚಿತ್ರವಾಗಿದೆ.

ಕುಸುಮಬಾಲೆಯ ಉದ್ದಕ್ಕೊ ಗಂಡು ಹೆಣ್ಣಿನ ಸಂಬಂಧ ಜಾತಿಮತವನ್ನು ಮೀರಿ ಹೆಣೆದುಕೊಂಡಿದೆ. ಸಂಬಂಧಗಳ ಬಗೆಗೆ ಎಲ್ಲಿಯೂ ಯಾರಿಗೂ ಪಾಪ ಪ್ರಜ್ಞೆ ಕಾಡುವುದಿಲ್ಲ ಇದಕ್ಕೆ ಕಾರಣ ಭಾಷಾದೃಷ್ಟಿಯಿಂದ ಲೇಖಕ ಓದುಗನ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕದೆ ಸ್ವೇಚ್ಛೆಯಾಗಿ ಬಿಟ್ಟಿರುವುದಾಗಿದೆ.

ಕೃತಿಯ ಉದ್ದಕ್ಕೂ ಮೇಲು ಹಾಗೂ ಕೆಳಜಾತಿಗಳ ಸಮಾಜದ ನೈತಿಕ ಪರಸ್ಪರ ಲೈಂಗಿಕ ಸಂಬಂಧ ಸಮಾಜದ ನೈತಿಕ ಸಂಬಂಧದ ಕಟ್ಟು ಪಾಡುಗಳನ್ನು ಕಡಿದು ಕೊಡಿಕೊಳ್ಳುತ್ತಿದೆ. ಇಲ್ಲಿ ಕೃತಿ ನೀಡುವ ಸಹಜ ಸೂಚ್ಯತೆ ಪರಿಣಾಮಕಾರಿಯಾದದ್ದು. ಸಮಾಜ ಹುಟ್ಟಿನಿಂದ ಜಾತಿಯನ್ನು ನಿರ್ಧರಿಸುತ್ತದೆ. ಆದರೆ ಕೃತಿ ಹುಟ್ಟಿನ ಮೂಲ ಕ್ರಿಯೆಯತ್ತಾ ಬೆಟ್ಟು ಮಾಡಿ ಜೀವ ಸ್ವಭಾವವನ್ನು ಗೋಚರಿಸುತ್ತದೆ. ಜೀವಮೂಲ ದೃಷ್ಟಿಕೋನ ಸಮಾಜಿಕ ದೃಷ್ಟಿಕೋನವನ್ನು ಹೀಗೆ ಪೊಳ್ಳಾಗಿಸುತ್ತದೆ ಎಂಬುದನ್ನು ಸೂಚಿಸುತ್ತದೆ.

ದೇವನೂರ ಮಹಾದೇವರ **'ಕುಸುಮಬಾಲೆ'** ಹುಟ್ಟಿದಂದಿನಿಂದ (1984) ಇಲ್ಲಿಯವರೆಗೆ ಅದು ಈ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡಮಿಯ ಪ್ರಶಸ್ತಿ (1990) ಬಂದ ಮೇಲೆ 1991ರ ಪೂರ್ತಿ **"ಕುಸುಮಬಾಲೆ"** ವರ್ಷವೊ ಎಂಬಂತೆ. ಸಾಕಷ್ಟು ಚರ್ಚೆಗೆ, ವಾದ - ವಿವಾದಗಳಿಗೆ ಖಾಸಗೀ ಚರ್ಚೆಗೆ ಗ್ರಾಸವಾಗಿದೆಯಷ್ಟೆ. ಇದೆ ಮೊದಲೆಂಬಂತೆ, ಎಪ್ಪತ್ತೇಳು ಪುಟದ ಈ ಪುಟ್ಟ ಕಾದಂಬರಿಯೊಂದನ್ನು ಕುರಿತು ಕನ್ನಡ ವಿಮರ್ಶನ ಲೋಕದಲ್ಲಿ ಇಷ್ಟು ವಿಪುಲವಾದ ಚರ್ಚೆ ನಡೆಯುತ್ತಿರುವುದೇ ಸಾಕ್ಷಿ. ಇದರ ಮಹತ್ವವನ್ನು ಸಂಸ್ಥಾಪಿಸುವುದಕ್ಕೆ. ಇದನ್ನು ಕಾದಂಬರಿ ಎಂದು ಸಾಹಿತ್ಯ ಪ್ರಕಾರಕ್ಕೆ ವರ್ಗೀಕರಿಸಲು ಸಾಧ್ಯವಿಲ್ಲ. ಆದ್ದರಿಂದ ಸಾಹಿತ್ಯ ಪ್ರಕಾರದ ವರ್ಗೀಕರಣವನ್ನು ನಿರಾಕರಿಸಿದ ಕೃತಿ ಎಂದು ಹೇಳಿದರೆ ತಪ್ಪಾಗಲಾರದು.

ಕುಸುಮಬಾಲೆಯ ಬಗ್ಗೆ ಈವರೆಗೆ ಪ್ರಕಟವಾಗಿರುವ ವಿಮರ್ಶೆ ಮೂರು ತುದಿ ನೆಲೆಗಳಲ್ಲಿ ತುಯ್ದಾಡುತ್ತಿರುವಂತೆ ತೋರುತ್ತದೆ. ಕೆಲವರಿಗೆ ಕುಸುಮ ಬಾಲೆಯೊಂದು ಅದ್ಭುತ ಕಲಾಕೃತಿ. ಕೆಲವರಿಗೆ 'ಒಡಲಾಳ' ದಷ್ಟು ಉತ್ತಮ ಕೃತಿಯೇನಲ್ಲ; ಮತ್ತೆ ಕೆಲವರದು ತಟಸ್ಥ ಧೋರಣೆ. ಕಾಲಮಾನದ ದೃಷ್ಟಿಯಿಂದ ಚದುರಂಗ ಹಾಗೂ ಜಿ. ಎಚ್. ನಾಯಕರ ಬೆನ್ನುಡಿಯ ಮಾತುಗಳು ಮೆಚ್ಚಿಗೆಯನ್ನು ಸೂಸುವಂತಿದ್ದರೆ. 1991 ರಲ್ಲಿ 'ಸಂಕ್ರಮಣದ' ಮೂಲಕವಾಗಿ ತಿಳಿದುಬರುವಂತೆ. ಪೋಲಂಕಿಯವರ ಕುಸುಮಬಾಲೆಯನ್ನು ಹೋಗಳಿ ಹೊನ್ನ ಶೂಲಕ್ಕೇರಿಸಿರುವಂತೆಯೂ ಪ್ರತಿಕ್ರಿಯೆಯನ್ನು ಸೂಚಿಸಿದ ಚಂಪಾ ಮುಂತಾದ ಇನ್ನು ಅನೇಕರು ಇದನ್ನು ತೆಗಳಿ ನೇಣು ಗಂಬಕ್ಕೇರಿಸಿರುವಂತೆಯೂ ತೋರಿಬರುತ್ತದೆ. ಸಾಹಿತ್ಯ ನೆಲೆಯಲ್ಲಿ ಶಿಷ್ಠ ಸಾಹಿತ್ಯದ ಅತೀ ವಾಸ್ತವತೆ ಅದರ ಅಡಿಗಲ್ಲಾದ ಸಂಭವನೀಯತೆ, ಅಧಿಕೃತ ಭಾಷೆ, ನಗರ ಸಂವೇದನೆ ಇವುಗಳಿಗೆ ಪ್ರತಿಯಾಗಿ ಇಂದೂ ಜೀವಂತ ಇರುವ ಜಾನಪದ, ಸಾಹಿತ್ಯದ ಗುಣಗಳನ್ನು ಅವಾಸ್ತವತೆ - ಮಾನುಷೀಕರಣದ ಗ್ರಾಮೀಣ ಸಂವೇದನೆ. ಆಡು ಭಾಷೆ ಇವೆ ಮೊದಲಾದ ಗುಣಗಳನ್ನು ಈ ಕೃತಿಗೆ ತರಲು ಲೇಖಕರು ಪ್ರಯತ್ನಿಸಿದ್ದಾರೆ. (8. ಪುಟ 77, "ಯಾರ ಜಟ್ಟಿಗೂ ಸಿಗದ ನವಿಗಳು. ಸಂಪಾದಕಿ ಪಿ. ಚಂದ್ರಿಕಾ)

ಇಲ್ಲಿ ಕಂಡು ಬರುವ ಕೆಲವು ತೊಡಕುಗಳನ್ನು ಮೊದಲು ಹೇಳಬೇಕು; ಯಾಡನು ಯಾಡೇಗೌಡನಾಗಿ ಬೆಳೆದು ಅದೇ ಫ್ಯೂಡಲ್ ಮೌಲ್ಯಗಳನ್ನು ಪ್ರತಿನಿಧಿಸುತ್ತಾನಲ್ಲ ಸರಿಯೇ? ಅಪಮಾರ್ಗದಲ್ಲಿಯೇ ಸುತ್ತುವ ಆರ್ಥಿಕ ಚಕ್ರವನ್ನು ಸಮರ್ಥಿಸುವುದು ಹೇಗೆ? ಇದರೊಂದಿಗೆ ಚೆನ್ನ - ಕುಸುಮರ ಸಂಬಂಧ ಏರ್ಪಟ್ಟ ಬಗೆ ಹೇಗೆ? ಹಾಗೂ ಚೆನ್ನ ಕೊಲೆಯ ಸುದ್ದಿಯನ್ನು ಅವನ ಬಳಗಕ್ಕೆ ತಿಳಿಯದಂತೆ ಅವರನ್ನೆಲ್ಲ ಅಜ್ಞಾನದಲ್ಲಿಟ್ಟಿರುವುದು ಏಕೆ? ಮತ್ತು 'ಕುಸುಮಬಾಲೆ' ಯಲ್ಲಿ ಕೇವಲ ಮೇಲು ಜಾತಿಯ ಹೆಣ್ಣುಗಳನ್ನು ಕೆಳಜಾತಿಯ ಗಂಡುಗಳೇ ಕೂಡುತ್ತವಲ್ಲ ಏಕೆ? ಇತ್ಯಾದಿ.

ಮೇಲಿನ ತೊಡಕುಗಳನ್ನು ಬಿಡಿಸುವ ಮುನ್ನ ಕುಸುಮಬಾಲೆಯ ಒಟ್ಟು ಆಶಯ ಏನಿರಬಹುದು ಎಂಬುದನ್ನು ಇತ್ಯರ್ಥ ಮಾಡಿಕೊಳ್ಳಬೇಕು. ಇಲ್ಲಿ ಮುಖ್ಯ ಮಾತೆಂದರೆ ಮೂವತ್ತು ಮೂರು ಕೋಟಿ ದೇವಾನುದೇವತೆಗಳಿಂದ ಅನುಗ್ರಹಿಸಲ್ಪಟ್ಟ ಪಾವಿತ್ರ್ಯವೆಂದು ಭಾವಿಸಲಾಗಿದ್ದ ಅವೈಚಾರಿಕವೂ ಅಮಾನವೀಯವೂ ಆದ ಯಜಮಾನ ಸಂಸ್ಕೃತಿಯೊಂದನ್ನು ಅಪವಿತ್ರಗೊಳಿಸುತ್ತಲೂ ಏಕಕಾಲದಲ್ಲಿಯೇ ಕಿರು ಸಂಸ್ಕೃತಿಯಲ್ಲಿರುವ ಮಿತಿಗಳನ್ನು ಮೀರಿ ಸುತ್ತಲೂ ಅತ್ಯಂತ ಮಾನವೀಯವೂ ವೈಚಾರಿಕವೂ ಆದ 'ಪ್ರತಿ ಸಂಸ್ಕೃತಿ'ಯ ನಿರ್ಮಾಣ ಮಾಡುವತ್ತ ಕುಸುಮಬಾಲೆ 'I want to be in my house' ಎಂದು ಮೆಲು ದನಿಯಲ್ಲಿ ಪಿಸುಗುಡುತ್ತಾ ಮುಂದೆ ಸಾಗುತ್ತಿದೆ. ಒಂದೇ ಷಾಟ್‌ನಲ್ಲಿ ಎರಡೂ ಸಂಸ್ಕೃತಿಗಳನ್ನು ಮುಖಾಮುಖಿ ಮಾಡಿ 'ಕುಸುಮಬಾಲೆ' ಹೊಸ ಹೊಸ ಧ್ವನಿ ತರಂಗಗಳನ್ನು ಹೊರಳಿಸುವುದು. ಅರಮನೆಯ ಅಂತಃ ಪುರವೊಂದರಿಂದ ಸೀಳಿ ಬಿಸುಟ ಶಿಶು ಖಂಡಗಳನ್ನು ಕೂಡಿಸಿ ಜೀವಕೊಟ್ಟ 'ಜರಾತಾಯಿ'ಯಂತೆ ಕುಸುಮಬಾಲೆ ಜೀವ ಪರವಾದ ಮೌಲ್ಯಗಳಿಗೆ ಪ್ರಾಣ ಪ್ರತಿಷ್ಠಾಪನೆ ಮಾಡುತ್ತಿರುವುದನ್ನು ನಾವು ನೋಡಬಹುದು.

ಮೊದಲಿಗೆ ಜಾತಿ ಸಮಸ್ಯೆ ಎಂಬುದು ಮೇಲು ನೆಲೆಯಲ್ಲಿ ಮಾತ್ರ ಎಂಬ ವಿಚಾರ : ಅಕ್ಕಮಹಾದೇವಮ್ಮ ಗಂಡ ಸತ್ತ 12 ತಿಂಗಳಿಗೆ ಜೀತಗಾರನಿಗೆ ಹುಟ್ಟಿದನೆಂಬ ಅಪವಾದ ಹೊತ್ತ ತನ್ನ ಕುಡಿ ಯಾಡನೊಡನೆ ತೌರಿನಿಂದ

ಗಂಡನ ಮನೆಗೆ ಬರುತ್ತಾಳಷ್ಟೆ. ಇಲ್ಲಿ ಆಸ್ತಿ ವಿಚಾರ ಮುಖ್ಯ, ಭಾವ ಬಸಪ್ಪಸೋಮಿ ಮತ್ತು ಮೈದನ ಸಿದ್ಧೂದರಿಗೆ ಅವಳ ಪಾಲಿನ ಆಸ್ತಿಯನ್ನು ಲಪಟಾಯಿಸಲು ಬಂದು ನೆಪಬೇಕಾಗಿತ್ತು. ಅದು ಸಿಕ್ಕಿತು. ಬಹುಶಃ ಅವಳಿಗೆ ಸಂತಾನ (ಗಂಡು ಮುಖ್ಯ) ಇಲ್ಲದದ್ದು ಇವರ ಮನೆಯಲ್ಲಿಯೇ ಗೊಡ್ಡು ದನದಂತೆ, ಜೀತ ಮಾಡುವಂತಿದ್ದರೆ ಖಂಡಿತ ಇವರು ಖುಷಿಯಿಂದಲೇ ಬರಮಾಡಿಕೊಳ್ಳುತ್ತಿದ್ದರೇನೋ. ಅಲ್ಲದೆ ಸಂತಾನ ಪ್ರಾಪ್ತಿ ಇಲ್ಲದ ಬಸಪ್ಪ ಸೋಮಿ ಮತ್ತು ಅವನ ಹೆಂಡತಿಗೆ ಅಕ್ಕಮಹಾದೇವಮ್ಮನ ಫಲವತ್ತತೆಯ ಬಗ್ಗೆ ಅತೃಪ್ತ ಕಾಮನೆಯ ಅಸಹನೆ ಇದ್ದಿರಲೂ ಬಹುದು ಮತ್ತು ಮಕ್ಕಳುಳ್ಳ ಸಿದ್ಧೂರ ದಂಪತಿಗಳಿಗೆ ಸ್ವಾರ್ಥವಂತೂ ಇದ್ದೆದ್ದೇ ಆದ್ದರಿಂದ ಪುರಾಣ ಬಿಚ್ಚಿದರು, ಅಕ್ಕಮಹಾದೇವಮ್ಮನ ಬಾಯಿ ಮುಚ್ಚಲು ನೋಡಿದರು.

ಇದಕ್ಕೂ ಹಿಂದಕ್ಕೆ ಯೋಚಿಸಿದರೆ ಅವಳ ತವರಿನವರು ಸಹ ಅವಳಿಗೆ ಸಂತಾನ ಆಗುವವರೆಗೆ ಸುಮ್ಮನಿದ್ದು ಆಮೇಲೆ 'ಗಂಡುಮಗನಿಗೆ ಆಸ್ತಿ ದೊರೆಯುತ್ತೆ' ಎಂಬ ಕಲ್ಪನೆಯಲ್ಲಿ ಇತ್ತ ಸಾಗಹಾಕಿದರು. ಇಲ್ಲವಾದರೆ ಅವಳ ಪುಕ್ಕಟ್ಟೆ ಜೀತವನ್ನು ಅವರೇಕೆ ಬಿಟ್ಟುಕೊಡುತ್ತಿದ್ದರು? ಎಂದರೆ ಒಟ್ಟಾರೆ ಫ್ಯೂಡಲ್ ಮೌಲ್ಯಗಳೇ ಅಕ್ಕಮಹಾದೇವಮ್ಮನನ್ನು ಅಲ್ಲಿಂದ ಮತ್ತು ಇಲ್ಲಿಂದ ಎಳೆದುಹಾಕಿದ್ದು ಕೋತಿ ಮರಿಯತೆ ತಾಯಿಗೆ ಅಂಟಿಕೊಂಡಿದ್ದ ಯಾಡ ಯಾಡ ಸಮೇತ ಅವಳನ್ನು ಹೊಲಮಾಳದಲ್ಲಿ ಎಳೆದು ಬೀಸಾಕಿದ ಸಿದ್ಧೂರ ಅವಳ ಲಿಂಗದ ಕಾಯನ್ನೇ ಕಿತ್ತುಕೊಂಡು ಬರುವುದೂ ಒಂದು ಸಂಕೇತವೆ. ಏಕೆಂದರೆ ಲಿಂಗ ಕಿತ್ತುಕೊಂಡಾಕ್ಷಣಕ್ಕೆ ಜಾತಿ ಕಿತ್ತು ಕೊಂಡಂತಾಯಿತೇ ಎಂಬ ವ್ಯಂಗ್ಯ ಒಂದಾದರೆ ಅದೇ ಲಿಂಗವನ್ನು ಮುಂದೆ ಯಾಡೇಗೌಡ ಧರಿಸಿ ಜಾತಿ ವಂತನಾಗಲಿಲ್ಲವೆ ಎಂಬುದು ಇನ್ನೊಂದು.

ಎಂದರೆ ಹಣವೊಂದಿದ್ದರೆ ಒಬ್ಬರ ಜಾತಿಯನ್ನು ಕಿತ್ತೊಗೆಯಬಹುದು ಮತ್ತು ಅದೇ ಹಣದಿಂದ ಮತ್ತೆ ಜಾತಿಯನ್ನು ಕೊಳ್ಳಬಹುದು ಎಂಬ ಹೀನ ಕಲ್ಪನೆಗಳನ್ನು ಕುಸುಮ ಬಾಲೆಯಲ್ಲಿ ವಿಡಂಬನಗೊಳಿಸಲಾಗಿದೆ. ಅಲ್ಲದೆ 'ಲಿಂಗಕ್ಕೆ ಹೊಲೆಯಿಲ್ಲ ಗಂಗೆಗೆ ಕುಲವಿಲ್ಲ' ಎಂಬ ಕಿರುಸಂಸ್ಕೃತಿಯ ಗಾದೆಯನ್ನು ಗೌರವಿಸಲಾಗಿದೆ. ಮತ್ತೆ ಈ ಯಾಡನೇ ಮುಂದೆ ಯಾಡೇಗೌಡನಾದ ಪ್ರತಿಷ್ಠೆಯನ್ನು ಉಪೇಕ್ಷೆಮಾಡಿ ಹುಟ್ಟು ಕೇವಲ ಆಕಸ್ಮಿಕ, ಅರ್ಜಿ ಹಾಕಿಕೊಂಡು ಯಾರೂ ಹುಟ್ಟಲು ಸಾಧ್ಯವಿಲ್ಲ ಎಂಬ ಸರಳ ಸತ್ಯವನ್ನು ಮನಗಾಣಿಸಲಾಗಿದೆ.

ಇದಕ್ಕೆ ಹಾರುವ ಜೋತಮ್ಮನ ಅನುಮೋದನೆ ಇದೆ. "ಐ ಎಲ್ರೂ ಮಾಡೋ ಯಾಥಾರ್ಥನೆ ಹೇಳ್ಬಳ, ಏನು ವಿಚಾರ್ವ ಅದು ಕೂಸು ಚಾಣ್ತೆ ಚೆನ್ನಾಗಿದ್ದರೆ?" ವಂಶವಾಹಿನಿಯಾಗಿ ಹರಿದು ಬಂದ ಪುಜ್ಞಾಪ್ರವಾಹ ಇದು. 'No Race is Pure' ಎಂಬ ಮಾನವಶಾಸ್ತ್ರದ ಮೊದಲ ಪಾಠ. ಹಾರುವರ ಜೊತಮ್ಮನಿಗೆ ಇದು ಚೆನ್ನಾಗಿಯೇ ಗೊತ್ತ. ಹಾಗೆಂದು ಹಾರುವ ಜೋತಮ್ಮನನ್ನು ನಾನಿಲ್ಲ ಕೀಳ್ಗಳೆಯುತ್ತಿಲ್ಲ; ಬದಲಾಗಿ ವಂಶಪ್ರಜ್ಞೆಯ ಪಾವಿತ್ರ್ಯದ ಬಗ್ಗೆ. ತಾನೆ ಹೆಣ್ಣಾಗಿಯೂ ಸಾಕ್ಷಿಯಾಗಿಯೂ ಸನಾತನ ಕಾಲದಿಂದ ಬಂದ ಇವಳ ಪ್ರತಿಕ್ರಿಯೆಯ ಬಗ್ಗೆ ಹೇಳುತ್ತಿರುವೆ. ಆದ್ದರಿಂದಲೇ ಗಂಡು ಹೆಣ್ಣಿನ ಸಂಬಂಧ ಫಲವತ್ತತೆಯ ಆಧಾರದ ಮೇಲೆ ನೆಲೆಗೊಳ್ಳುತ್ತದೆಯೇ ಹೊರತು ಜಾತಿಯಿಂದಲ್ಲ ಎಂದದ್ದು. ಕುಸುಮಬಾಲೆ ಹಾದರದ ಕತೆಯಲ್ಲ. ಇದು ಮಾನವನ ಘನತೆಯನ್ನು ಮೇಲೇರಿಸುವ ಒಂದು ಮೆಟ್ಟಿಲು. ಹಾಗಿದ್ದರೆ ಚೆನ್ನನಿಗೂ ಲಿಂಗಧಾರಣೆ ಮಾಡಿಸಿ ಕುಸುಮ - ಚೆನ್ನರ ಸಂಬಂಧವನ್ನು ಮಾನ್ಯ ಮಾಡಬಹುದಿತ್ತಲ್ಲ ಎಂಬ ಹೊಳಹನ್ನು ತಟ್ಟನೆ ನಮ್ಮಲ್ಲಿ ಹುಟ್ಟಿಸಿಬಿಡುತ್ತದೆ. ಆದರೂ ಲಿಂಗಧಾರಣೆಯಿಂದ ಬಂದ

ಭಾಗ್ಯವೇನು ಎಂಬುದನ್ನು ಯಾಡೇಗೌಡನ ನಿದರ್ಶನದಿಂದಲೇ ಒಡೆದು ಹಾಕಿಬಿಡುತ್ತದೆ. ಸೋಮಪ್ಪ ಗೌಡನ ಸಿರಿವಂತಿಕೆ ಇದನ್ನು ಆಗಗೊಡುವುದೆ? ಆದರೂ ಇದು ಸಾಧ್ಯವಿತ್ತು ಎಂಬ ಸೂಚನೆ ಇದ್ದೇ ಇದೆ. ಆ ಸಾಧ್ಯತೆಯನ್ನು ತಳ್ಳಿ ಹಾಕಿದುದೆ ಇಲ್ಲಿಯ ದುರಂತ.

ಹಾಗಾಗಿ ಚನ್ನನ ಕೊಲೆಯ ಮೂಲಕ ಕುಲದನೆಲೆ ತನ್ನ ಪಾವಿತ್ರ್ಯವನ್ನು ತಾನೇ ಕೊಲೆ ಗೈದುಕೊಂಡಿತು. ''ಮಗಳನ್ನು ಕಣ್ಣುಗ ತುಂಬಿಕೊಂಡ'' ಸೋಮಪ್ಪಗೌಡ ಆದರೂ ಚೆನ್ನನ ಕೊಲೆ ಮಾಡಿಸಿದ. ಅತ್ತ ಕೆಂಪಿಯ ಗಂಡ ಕಿಟ್ಟಯ್ಯ ಕೋಳಿ ಕೆದ್ಕಂಗಾವನ್ಗೆ ಮಕ್ಕಳು ಆಗುವುದುಂಟೆ; ಅವನೂ ಸಾಹುಕಾರ ರೀತಿಯೆ ಇದ್ದನಂತೆ. ಕೆಂಪಿಯ ಪರಿಸ್ಥಿತಿಯೇ ಕುಸುಮಾಳಿಗೂ ಇರಬೇಕು. ಆದರೆ ಅವಳು ಯಾರಲ್ಲಿ ಹೇಳುತ್ತಾಳೆ. ಯಾರಲ್ಲಿ ಕೇಳುತ್ತಾಳೆ. ಅವಳಮ್ಮ ತೂರಮ್ಮನಲ್ಲವಲ್ಲ. ಕೆಂಪಿಯು ಮಗು ಬೇಕೆಂದು ಯಾರ ಹಿಂದೆಯೂ ಓಡಿ ಹೋಗಲಿಲ್ಲ. ಅವಳ ಭಾಗ್ಯಕ್ಕೆ ಜೀವ ಫಲವಿತ್ತು. ಗಂಡು ಅಮುಖ್ಯ. ಆ ಗಂಡನಿಂದ ಹುಟ್ಟಿದ ಜೀವಕ್ಕೆ ಸಂಭ್ರಮಗೊಳ್ಳುವ ಈ ಗಂಡನ ಹೃಯವಂತಿಕೆ ಅವಳಿಗೆ ಮಿಗಿಲಾಗುತ್ತದೆ.

ಕುಸುಮಾಳ ದುರ್ದೈವ ನೋಡಿ! ಜೀವ ಫಲ ನೀಡಿದ ಈ ಚೆನ್ನನೂ ಇಲ್ಲ; ಅದರ ಪಾಲನೆ ಮಾಡಬೇಕಾದ ಈ ಗಂಡನ ಹೃದಯ ವಂತಿಕೆಯೂ ಇಲ್ಲ! ಮತ್ತು ಸೋಮಪ್ಪಗೌಡರ ಹೆಂಡತಿ ಸ್ವತಃ ಕುಸುಮಾಳ ತಾಯಿ ಮಲ್ಲಾಜಮ್ಮನದು ತಾನೆ ಯಾವ ಉತ್ತಮ ಜಾತಿ; ಆಸ್ಪತ್ರೆಯಲ್ಲಿ ಸಿಕ್ಕಿದ ಈ ಅನಾಥ ಶಿಶುವಿಗೆ ಲಿಂಗಧಾರಣೆ ಮಾಡಲಾಗಿತ್ತು ಆದ್ದರಿಂದ ಗುಣಗಳಿದ್ದರೆ ಸಾಲದೇ, ಮುಂದೆ ಹೇಳಬೇಕಾಗಿಲ್ಲ. 'ಕುರಿಯಯ್ಯನ ನನ್ನಿ' ಯಲ್ಲಿಯೂ ಜಾತಿ ಸಮಸ್ಯೆ ಎಂಬುದು ಕೇವಲ ಮೇಲು ನೆಲೆಯಲ್ಲಿಯೆ ಸರಿದಾಡುತ್ತದೆ. ಉತ್ತಮ ಜಾತಿ ಎಂಬ ಪಾವಿತ್ರ್ಯದ ಕಲ್ಪನೆಯನ್ನು ಬೀಳುಗಳೆಯುವುದೊ ಇತ್ತ ದಲಿತ ಸಂಘರ್ಷ ಸಮಿತಿಯವರ ಪ್ರತಿಷ್ಠೆಯನ್ನು ಚಿಟುಗು ಮುಳ್ಳಾಡಿಸಿ ತೆಗೆಯುವುದೂ ಒಟ್ಟಿಗೆ ನಡೆದಿದೆ. ಉತ್ತಮ ಜಾತಿಯವರು ಕೊಟ್ಟ ರಿಯಾಯಿತಿ? ಹೆಣ್ಣನ್ನು ಹೊತ್ತುಕೊಂಡು ಹೋಗಿ' ಭೋಗಿಸಿದ್ದರು ಎಂದು ಹೇಳುವಲ್ಲಿ ಇವರು ಕೂಡ ಯಜನಮಾನ ಸಂಸ್ಕೃತಿಯನ್ನು ಅನುಕರಣ ಮಾಡಿದಂತಾಗಲಿಲ್ಲವೆ ಎಂದು ಪ್ರಶ್ನಿಸುವ ಮೂಲಕ ಅವರ ಸಿಟ್ಟಿಗೆ ತಣ್ಣೀರು ಹಾಕಿ ಸಮಾಧಾನಗೊಳಿಸುವ ಹುನ್ನಾರವೆ ಇದು ಎಂದರೆ ಹೌದಲ್ಲವೆ ಎಂಬ ಹಳಹಳಿಕೆಯಿಂದ ಇವತ್ತಿನ ದಲಿತರು ಬೀಗಿದರೆ ಬಂದ ಭಾಗ್ಯವೇನು? ಅದೂ ಸಹ ವಿಚಾರವಲ್ಲ. ಮಾನವೀಯವಲ್ಲ ಎಂಬುದನ್ನೇ ಅವರ ಮುಖಕ್ಕೆ ಹಿಡಿದು ತೋರಿಸಲಾಗಿದೆ.

ಮೇಲುವರ್ಗ, ಜಾತಿಗಳ ಅನುಕರಣೆ ತಕ್ಕುದಲ್ಲ ಎಂಬುದೆ ಇಲ್ಲಿಯ ಗಟ್ಟಿ ಮಾತು. ಕುರಿಯಯ್ಯನ ನನ್ನಿಯ ಮೂಲಕ ಇದರಲ್ಲಿ ಇರುವ ಇರಬಹುದಾದ ಭ್ರಮೆಗಳನ್ನು ಒಡೆದು ಮನುಷ್ಯರನ್ನಾಗಿ ಮಾಡಲು ಯತ್ನಿಸಲಾಗಿದೆ. ಇದೆಲ್ಲದರ ಹಿನ್ನೆಲೆಯಲ್ಲಿ ನೋಡಿದರೆ **'ಕುಸುಮಬಾಲೆ'** ಯಲ್ಲಿ ಇರುವುದು ವರ್ಗ ಸಮಸ್ಯೆಯೇ ಹೊರತು ಜಾತಿ ಸಮಸ್ಯೆ ಅಲ್ಲ. ಇದರಲ್ಲಿ ಬಡವ - ಬಲ್ಲಿದನೆಂಬ ವರ್ಗ ಚಕ್ರ ಒಂದು ಸುತ್ತು ಹೊಡೆದು ಬಂದು ನಿಲ್ಲುವುದು. ಫ್ಯೂಡಲ್ ಚಕ್ರಾ ಪಂಕ್ತಿ ಸುತ್ತುವುದನ್ನು ಮಂಚ ಹೇಳುವ ಕಥೆಯಲ್ಲಿ ಚೆನ್ನಾಗಿ ಪ್ರತಿಮಿಸಲಾಗಿದೆ. ಕಾಲದಿಂದ ಕಾಲಕ್ಕೆ ಬದಲಾದ ಪ್ರಭುತ್ವಗಳ ಏಳುಬೀಳುಗಳನ್ನು ಮಂಚದ ಕತೆ ಸೋಗಸಾಗಿ ನಿರೂಪಿಸುತ್ತದೆ.

ಪ್ರಾಚೀನ ರಾಜಪ್ರಭುತ್ವದ ವ್ಯವಸ್ಥೆಯಿಂದ ಮೊದಲುಗೊಂಡ ಇದರ ಕತೆ ಮಧ್ಯಯುಗದ ಸಾಮಂತ ಪ್ರಭುತ್ವವನ್ನು ಹಾದು, ಅದನ್ನು ಹರಾಜು ಹಾಕಿ ಕಮ್ಯುನಿಸ್ಟ್ ಪ್ರಭುತ್ವದಲ್ಲಿ ತಲೆಯಣಿಕೆ ನೋಡಿ, ಬಂಡವಾಳ

ಶಾಹಿಯಲ್ಲಿ ನಿಲುಗಡೆಗೊಂಡಿರುವ ಇಂದಿನ ಪ್ರಜಾಪ್ರಭುತ್ವಕ್ಕೆ ಬಂದು ಮುಟ್ಟುತ್ತದೆ. ಕರ್ನಾಟಕದ ಯಾವುದೋ ಒಂದು ಅಜ್ಞಾತಹಳ್ಳಿಯೊಂದರ ಗೌಡನ ಮನೆಯ ಮೂಲೆಯೊಂದರಲ್ಲಿ ಬಿದ್ದಿರುವ ಈ ಮಂಚ ಜಾಗತೀಕ ಜಗತ್ತಿನ ವರ್ಗ ಹೋರಾಟದ ಇತಿಹಾಸವನ್ನೆಲ್ಲಾ ತನ್ನ ಮೇಲೆ ಮಲಗಿಸಿಕೊಂಡಿದೆಯೆಂದರೆ ಅದಕ್ಕೆ ಎಂಥ ರೋಮಾಂಚನವಾಗಬೇಕು! **"ಕುಸುಮಬಾಲೆ"**ಯ ಈ ಮಂಚವು ಕಾದಂಬರಿಯಲ್ಲಿ ಒಂದು ಪಾತ್ರವೂ ತಾನೇ ಸಾಕ್ಷಿ ನೇತ್ರವೂ ಆಗಿರುವುದೊಂದು ಸೋಜಿಗ! ಸಮಾಜೋ - ಆರ್ಥಿಕ ಬದಲಾವಣೆಯ ಇತಿಹಾಸವನ್ನು ತಾನೇ ಪಾತ್ರವಾಗಿ ಪುನರನುಭವಿಸಿ ಹೇಳುತ್ತದೆ.

ಹಿಂದೆ ರಾಜ ಮಹಾರಾಜರು ಇದರ ಮೇಲೆ ಆಮೋದ ಪ್ರಮೋದ ನಡೆಸಿದ್ದಾರೆ. ಮಧ್ಯ ಯುಗದ ಸಾಮಂತರು ಆವರ ರಾಣಿಯರು ಕಾಮಕೇಳಿಯಲ್ಲಿ ತೊಡಗಿ ಇದನ್ನು ಹೊಲಸು ಮಾಡಿದ್ದಾರೆ. ಗಾಂಧಿಯುಗದ ವ್ಯಂಗ್ಯವೊ ಎಂಬಂತೆ ಅದರಡಿಯಲ್ಲಿಯೇ ಈಗ ಕಪ್ಪು ಹಣದ ದಂಧೆ ಸರಾಗವಾಗಿ ಸಾಗಿದೆ. ಅಪಮಾರ್ಗದ ಶ್ರೀಮಂತಿಕೆಯನ್ನು ಕಂಡಿದೆ.

ಉತ್ತಮ ಕುಲ ವರ್ಗದವರ ಕೊಲೆ ಸುಲಿಗೆಗಳಿಗೆ ಮರುಗಿದೆ. ಅತ್ತ ಶ್ರೀಮಂತರ ಶೃಂಗಾರ ಕೊಳಕುಗೊಂಡು ಕೆಸರಾದುದನ್ನು ಹೇಳಿದರೆ, ಇತ್ತ ದೀನದಲಿತರ ಕರ ಕೌಶಲ ಹೇಗಿತ್ತೆಂಬುದನ್ನು ತನ್ನ ಕನ್ನಡಿಯಲ್ಲಿ ಪ್ರತಿಬಿಂಬಿಸುತ್ತದೆ. ಏಕಕಾಲದಲ್ಲಿ ಕೆಳವರ್ಗದವರ ಕಸುಬುದಾರಿಕೆ, ಮೇಲುವರ್ಗದವರ ಶೋಷಣೆಗಳು ಇವೆಲ್ಲವನ್ನು ಬಿಚ್ಚಿಡುತ್ತದೆ. ಹಿಂದಿನ 'ಮರುಮಗ' ಪಿಶಾಚಿಥರ ದೇಶ ಸುತ್ತುತ್ತಿದ್ದರೆ. ಇತ್ತ ಅವನ ಮಕ್ಕಳಿಲ್ಲದ ರಾಣಿ ಕಾಮ ವಿಕಾರಕ್ಕೊಳಗಾಗಿ ''ದಿನಕ್ಕೊಬ್ಬನ ಕೈಲಿ ಕುಟಿಸ್ಕಂಡು'' ಕಾಮದ ಕೆಸರಿನಲ್ಲಿ ಹೊರಳುತ್ತಿದ್ದಾಳೆ.

ಹೀಗೆ ಭೋಗ ಸಂಸ್ಕೃತಿಯ ಮಾನಮರ್ಯಾದೆಯನ್ನು ಅಪ ಮೌಲ್ಯಗೊಳಿಸಿದ ಮಂಚ ತನ್ನ ಸಮೇತ ಅದನ್ನು ಬೀದಿಯಲ್ಲಿ ಹರಾಜು ಹಾಕುತ್ತದೆ, ಮಹಾದೇವ ಅವರು ಮಂಚದ ಇಂಚು ಇಂಚಿನಿಂದಲೂ ಬಿಡದೆ ದುಡಿಸಿಕೊಂಡು ಅಭಿಜಾತಕಲೆಗೆ ಸೊಗಡು ತುಂಬಿದ್ದಾರೆ. ಇತಿಹಾಸವನ್ನು ಅವರು ನೋಡುವ, ನೋಡಿ ಬೆಲೆಕಟ್ಟುವ, ಹೊಸದನ್ನು ಅದರ ಗರ್ಭದಿಂದಲೆ ಹೆಕ್ಕಿ ತೆಗೆಯುವ ಒಳನೋಟಗಳಿಗೆ ಮಂಚದ ಪ್ರತಿಮೆಯೊಂದು ಒಳ್ಳೆಯ ನಿದರ್ಶನ. ಸೃಷ್ಟಿಯಲ್ಲಿ ಇರುವುದನ್ನು ಎಲ್ಲರೂ ಸಮಾನವಾಗಿ ಹಂಚಿಕೊಂಡು ಊಟಮಾಡಿ ಎಂದು ವೇದ ಋಷಿಯೇ ಮಂತ್ರಘೋಷ ಮಾಡಿರಬೇಕಾದರೆ ಇಂಡಿಯಾದ ಬಂಡವಾಳ ಶಾಹಿ ಈ ''ಹೆಗ್ಗಣ ಸಂಸ್ಕೃತಿ'' ಇಂದು ನೆನ್ನೆಯದಲ್ಲ ಎಂಬ ಮನವರಿಕೆ ತನಗೆ ತಾನೆ ಆಗುತ್ತದೆ. .

ವರ್ಗ ಹೋರಾಟ ಜಗತ್ತಿನಲ್ಲಿ ಯಾವತ್ತೊ ಇದ್ದದ್ದೇ. ದೇವನೂರು ಮಹಾದೇವ ಅವರು ಇದನ್ನು ಮಂಚದ ಕತೆಯ ಮೂಲಕ ಕಾಣಿಸುತ್ತಾರೆ. ಈಗ ನೋಡಿ ಏನಾಯ್ತು ಯಾಡಕಂದ ಯಾಡೇಗೌಡನಾಗಿ ಬೆಳೆದು ಫ್ಯೂಡೆಲ್ 'ಧಣಿ' ಯಾಗಿ ಮೇಲೆರಿದ್ದು ಏನು ಸಾಮಾನ್ಯ ಸಂಗತಿಯೇ? ಬಸಪ್ಪ ಸೋಮಿ - ಸಿದ್ಧೂರರ ಹಟ್ಟಿಯೇ ಇವನ ಧನದ ಕೊಟ್ಟಿಗೆಯಾಗಿ ಹೋಯಿತಲ್ಲ! ಆದ್ದರಿಂದಲೇ ಹೇಳಿದ್ದು. ಕುಸುಮ ಬಾಲೆಯ ಸಮಸ್ಯೆ ಟಿ. ಪಿ. ಅಶೋಕ ಅವರು ಹೇಳುವಂತೆ ಬರೀ ಜಾತಿ ಸಮಸ್ಯೆ ಅಲ್ಲ; ಇಲ್ಲಿರುವುದು ವರ್ಗ ಸಮಸ್ಯೆ. ಕೆಲವೊಮ್ಮೆ ಎರಡೂ ಒಂದಕ್ಕೊಂದು ತೆಕ್ಕೆ ಬಿದ್ದಿರುವುದುಂಟು. (9. ಸಾಹಿತ್ಯ ವಿಮರ್ಶೆ 1988 ಕ.ಸಾ.ಅ.)

'ಕುಸುಮಬಾಲೆ' ಯಲ್ಲಿ ವರ್ಗ ಹೋರಾಟದ ಚಕ್ರ ಒಂದು ಆವರ್ತನಗೊಳ್ಳುವುದಾದರೂ ಇಲ್ಲಿಂದ ಮುಂದೆ ಈ ಚಕ್ರರತ್ನ ಎತ್ತ ಉರುಳುವುದು ಎಂಬುದೇ ಕುತೂಹಲ. ಮನುಷ್ಯ ಯಾವತ್ತೂ ಅಪಮಾರ್ಗದಲ್ಲಲ್ಲದೆ, ಭ್ರಷ್ಟನಾದಲ್ಲದೆ ಕೇವಲ ಋಜುಮಾರ್ಗ ಮಂತ್ರದಿಂದಲೇ ಐಶ್ವರ್ಯ ಗಲಿಸಲಾರನೆಂಬ ಸತ್ಯವನ್ನು ಯಾಡನು ಯಾಡೇಗೌಡನಾಗಿ ಮೇಲೇರಿದ ವಿಧಾನಗಳೇ ಸಾದರ ಪಡಿಸುತ್ತವೆ.

ಯಾಡನು ಶ್ರೀಮಂತನಾಗಿ ಬೆಳದದ್ದು 'ಮಿತ್' ದಂತಕತೆಯ ಮಾದರಿಯಲ್ಲಿ ಚಿತ್ರಿತವಾಗಿದ್ದರೂ ಇದೇನು ಪವಾಡವಲ್ಲ ವರ್ತಮಾನದಲ್ಲಿ ಘಟಿಸುವುದೇ ಆಗಿದೆ. ಬಸಪ್ಪ ಸೋಮಿ ಮತ್ತು ಸಿಧ್ದೂರ ಮೇಲೆ ಯಾಡ ಮತ್ತು ಅಕ್ಕ ಮಹಾದೇವಮ್ಮ ಇವರು ತೆಗೆದುಕೊಂಡ 'ರಿವೇಂಜ್' ಅತೀ ವಾಸ್ತವ, ಅರ್ಥಪೂರ್ಣ ಎನಿಸಿದರೂ ಇವರು ಮೇಲೇರಲು ಹಿಡಿದ ಮಾರ್ಗ ಸರಿಯೇ ಎಂಬುದೇ ಇಲ್ಲಿ ಮುಖ್ಯ ಪ್ರಶ್ನೆ. ಕೆಲವರು ಇದನ್ನು ದಲಿತ ಕನಸು, ಇಲ್ಲಿ ನೈತಿಕ ದೃಷ್ಟಿ ಬೇಡ ಎಂಬ ಅಭಿಪ್ರಾಯಗಳನ್ನು ವ್ಯಕ್ತ ಪಡಿಸುತ್ತಾರಷ್ಟೆ. ಕೃತಿಕಾರರು ಇದನ್ನೇ ಒಪ್ಪಿರುವುದಾದರೆ, ಆಗ ಒಟ್ಟು ಕೃತಿಯ ಆಶಯವೇ ಕೈ ತಪ್ಪಿ ಹೋಗುತ್ತದೆಯಲ್ಲವೆ? ಯಾಡನು ಮೇಲೇರುವ ಕಾಲಕ್ಕೆ ಕದ್ದದ್ದೆಷ್ಟು, ಸುಳ್ಳಿದ್ದೆಷ್ಟು, ಮಾರಿದ್ದೆಷ್ಟು, ಕೊಂಡದ್ದೆಷು, ನಟಿಸಿದ್ದೆಷ್ಟು ಹಾಗೂ ಲಪಟಾಯಿಸಿದ್ದೆಷ್ಟು ಮುಂತಾಗಿ ಹೇಳುತ್ತಾ ಹೋದರೆ ಇಲ್ಲಿ ಮೂರು ನಾಲ್ಕು ಘಟನೆಗಳ ಹೇಳುತ್ತಾ ಹೋದರೆ ಇಲ್ಲಿ ಮೂರು ನಾಲ್ಕು ಘಟನೆಗಳನ್ನು ಉಲ್ಲೇಖಿಸಿ ಒರೆ ಹಚ್ಚಿ ನೋಡಬೇಕು. ತನ್ಮೂಲಕ ಲೇಖಕರು ಆಶಯ ಏನು ಎಂಬ ನಿರ್ಣಯಕ್ಕೆ ಬರಬುಹುದು.

1) ದನಕುರಿ ಆಡುಗಳನ್ನು ಸಂತೆಗೆ ಹೊಡೆದು ಮಾರಿದ್ದು.

2) ವಿದೂಷಕನಂತೆ ಆಟದಲ್ಲಿ ಮಂಚವನ್ನು ಹರಾಜಿಲ್ಲಿ ಕೊಂಡದ್ದು.

3) ಖೋಟ ನೋಟಿನ ವ್ಯವಹಾರದಲ್ಲಿ ತೊಡಗಿ ತನ್ನ ಸಂಗಾತಿಗಳಿಗೇ ವಂಚಿಸಿದ್ದು.

4) ಶ್ರೀಮಂತರ ಮನೆಯ ಮಗಳಾದ ಅಮ್ಮಾಜಮ್ಮನನ್ನು ಸೊಸೆಯಾಗಿ ತಂದುಕೊಂಡದ್ದು ಇತ್ಯಾದಿ.

ಆ) ಜೀವಪರ ಹಾಗೂ ಜೀವವಿರೋಧಿಯಾದ ಎರಡು ಶಕ್ತಿಗಳ ಮುಖಾ ಮುಖಿ :

ಇಲ್ಲಿ ಮುಖ್ಯ ಸಂಗತಿಗಳನ್ನು ಹೀಗೆ ಲಕ್ಷಿಸಲಾಗಿದೆ ಅಕ್ಕಮಹಾದೇವಮ್ಮ ಯಾಡ ಕಂದನನ್ನು ಉಳಿಸಿ ಬೆಳೆಸಿದ್ದು.

1) ಅನಾಥ ಶಿಶುವನ್ನು ಆಸ್ಪತ್ರೆಯಿಂದ ತಂದು ಸಾಕಿದ್ದು.

2) ಈರಿಯು ಮಾಡುವ ಕುಕ್ಕುಟ ಯಜ್ಞ

3) ತೊರಮ್ಮ ಮಾಡುವ ಕಾವಲು ಯಜ್ಞ

4) ಕುಸುಮಾಳ ಧ್ಯಾನಯಜ್ಞ

5) ಸೋಮಪ್ಪಗೌಡ ಮಾಡಿರುವ ಚೆನ್ನ ಬಲಿ ಮೊದಲಿನ ಐದು ಸಂಗತಿಗಳಲ್ಲಿ ಜೀವೋತ್ಪತ್ತಿಗೆ ಕಾರಣವಾದ ಗಂಡು ಅಮುಖ್ಯವಾಗಿ ಅದನ್ನು ಹೊತ್ತು ಹೆತ್ತು ಬೆಳೆಸುವ ಪಾಲನೆ - ಪೋಷಣೆಯ ಪೂರ್ಣಜವಾಬ್ದಾರಿಯನ್ನು ಹೆಣ್ಣಾದವಳು ತಾಯಾದವಾಳು ಭರಿಸುತ್ತಾಳೆ.

ಅವಳು ಪ್ರಾಣವನ್ನು ಪಣವಾಗಿಟ್ಟು ಸಂತಾನ ರಕ್ಷಣೆಗೆ ತೊಡಗುವಳು. ಆದರೆ ಕೊನೆಯ ಸಂಗತಿಯಲ್ಲಿ ಗಂಡು ಗಂಢನ ಜೀವ ಬಲಿಯಲ್ಲಿ ತೊಡಗಿದ್ದಾನೆ. ಇದನ್ನೆಲ್ಲ ಇನ್ನೂ ಸ್ವಲ್ಪ ವಿವರಿಸಬಹುದು.

ಯಾಡ ಕಂಡನು "ಸಾಕ್ಷಾತ್ ಕೋತಿಮರಿಯಂತೆ ತಾಯ ಸೊಂಟ ಬಿಕ್ಕಂಡಿದ್ದನ್ನು" ಅಕ್ಕಮಹಾದೇವಮ್ಮ ಮತ್ತು ಯಾಡನ ಸಂಬಂಧವನ್ನು ಕೋತಿ ಮರಿಯಂತೆ ಎಂಬ ಉಪಮೆಯಲ್ಲಿ ಹಿಡಿದಿಡಲಾಗಿದೆ. ಕೋತಿ ತನ್ನ ಮರಿಯನ್ನು ಸತ್ತಿದ್ದರೂ ಅದು ತಾನೇ ತಾನೇ ಕೊಳೆತು ಉದುರಿ ಹೋದರೂ ಎತ್ತಿಕೊಂಡು ತಿರುಗುತ್ತದೆಯಂತೆ! ಇದು ಪಶು ಪ್ರವೃತ್ತಿರೂಪವಾದ ಪ್ರೀತಿ ಎಂಬ ತಿಳಿವೂ ಇದರಿಂದ ವ್ಯಕ್ತವಾಗುತ್ತದೆ. ಹಿಂದೆ ಸೋಮಪ್ಪ ಗೌಡರ ಹೆಂಡತಿ ಅಮ್ಮಾಜಮ್ಮನನ್ನು ಶ್ರೀಮಂತ ಕುಟುಂಬದವರು ಆಸ್ಪತ್ರೆಯಿಂದ ತಂದು ಸಾಕಿಕೊಂಡಿದ್ದರಂತೆ. ಮುಕ್ತ ಪ್ರೀತಿಗೆ ಸ್ವರಕ್ತ ಪರರಕ್ತ ಎಂಬ ಭಿನ್ನ ಭೇದದ ಸೋಂಕೇ ಇರುವುದಿಲ್ಲ. ಇದು ಮೇಲ್ಮಟ್ಟದ ಪವಿತ್ರ ಪ್ರೀತಿ.

ಈರಿಯು ಕುಕ್ಕಟಯಜ್ಞ ಯಾವ ರಾಜ ಮಹಾರಾಜರ ಪುತ್ರಕಾಮೇಷ್ಠಿ ಯಾಗಕ್ಕೂ ಕಡಿಮೆಯೇನಲ್ಲ ಅವಳು ತನ್ನ ಸವೆಯುತ್ತಿದ್ದ ಕಂದನನ್ನುಉಳಿಸಿಕೊಳ್ಳಲು ವಿಫಲಯತ್ನ ನಡೆಸುವ ಬಗೆ ಅಸಾಧಾರಣವಾದುದು. ದ್ಯಾವರಿಗೆ ಹುಂಜವೊಂದನ್ನು ವಿಧಿವತ್ತಾದ ಆಚರಣೆಗಳಿಂದ ಕುಯ್ದು, ಅದರ ಬಾಡಿನಿಂದ ಮೀಸಲು ಎಡೆಯನ್ನು ಮಾಡುವುದು ಯಾವ ಅಶ್ವಮೇಧ ಯಾಗ ಮಾಡುವ ವಿಧಿ ವಿಧಾನಕ್ಕೆ ಏನೇನು ಕಡಿಮೆಯೋನಲ್ಲ. ಕಿರು ಸಂಸ್ಕೃತಿಯ ಈ ಕುಕ್ಕುಟ ಯಜ್ಞ ಈರಿಯ ಕಂದನನ್ನು ಕೊನೆಗೂ ಕಾಪಾಡಲಿಲ್ಲ. ಒಂದಕ್ಕೆ ಎರಡು ಜೀವವೂ ಎಂಬಂತೆ ಯಾಗಾಂತ್ಯದಲ್ಲಿ ಮಗುವೂ ತೀರಿಕೊಂಡಿತು.ಹಿಂಸೆಗೆ ಹಿಂಸೆ ಬಲಿ ಹಾಕಿತೊ! ಅಂತೂ ಈರಿಯ ಈ ಪೂಜೆ ನಿಷ್ಫಲವಾಗಿ ಅವಳ ಬಾಳು ಕೊನೆಗೂ ಬರಡಾಯಿತು. ವಾಜಸ್ರವಶನು ವಿಶ್ವಜಿತ್ ಯಾಗವನ್ನು ಮಾಡಿ ಕೊನೆಗೆ ತನ್ನ ಮಗ ನಚಿಕೇತನನ್ನೇ ಕಳೆದುಕೊಂಡು ಯಜ್ಞ ಕುಂಡದ ಬಳಿ ಕುಳಿತಂತೆ. ಈರಿಯು ತನ್ನ ಗುಡಿಸಲಿನಲ್ಲಿಯೇ ಕುಳಿತ್ತಿದ್ದಾಳೆ. ಅವಳಿಗೆ ಬೆಳಕು ತರುವ ಬಾಲಕ ಎಂದು ಬರುತ್ತಾನೊ! (10. "ಸಾಹಿತ್ಯ ಪರಿಸರ" ಪುಟ 142, ಶಿವರಾಮಯ್ಯ)

ಕೆಂಪಿಗೆ ಹುಟ್ಟಿದ ಕೂಸನ್ನು ಉಳಿಸಿಕೊಳ್ಳುವಲ್ಲಿ ಅವಳ ತಾಯಿ ತೂರಮ್ಮ ಕಾವಲು ಯಜ್ಞ ನಡೆಸುವಳು. ಹಾತೆ ಹುಳವೊಂದನ್ನು ಅದುಮಿ ಸಾಯಿಸಿ, "ಈ ಜಿವ್ವೇ ಆ ಜೀವಕ ನಡೀ" ಎಂದು ಮಂತ್ರೋಚ್ಚಾರಣೆ ಮಾಡಿ ಆಜ್ಞಾಪಿಸುತ್ತ, ಪೀಡೆ ಪಿಶಾಚಿ ಮುಂತಾದ ಗಾಳಿ ಸವರಿ ಮಂತ್ರಿಸುತ್ತ, ಚಿಂತೆಯ ಭಾರವನ್ನು ಹೊತ್ತ ಆ ಮುಪ್ಪಿನ ದೇಹ ಇಡೀ ರಾತ್ರಿ ಜೋಪಡಿಯ ಸುತ್ತ ಈಕೆ ಕಾವಲು ಕಾಯುವುದು ತಾಯಿ ದೇವತೆಯ ಅಪರಾವತಾರವೇ ಆಗಿದೆ. ಅಂಗೈಯಲ್ಲಿ ಲಿಂಗವನ್ನು ಧರಿಸಿದ ಅಕ್ಕಮಹೇದೇವಿಯು ಚನ್ನ ಮಲ್ಲಿಕಾರ್ಜುನನ ನಿರೀಕ್ಷೆಯಲ್ಲಿ ಕುಳಿತಿರುವಂತೆ, ತನ್ನ ಕಂದನನ್ನು ಅಂಗೈಯಲ್ಲಟ್ಟು ಧ್ಯಾನಿಸುತ್ತಿರುವ ಕುಸುಮಾಳ ಚಿತ್ರ, ಬರೆದದ್ದಲ್ಲಿ, ಕರುಣೆಯಲ್ಲಿ ಕೊರೆದದ್ದು. ಲೋಕದೇವತೆಗಳು ಇದ್ದರೆ ಕುಸುಮಾಳಿಗೆ ಕರುಣಿಸಲೇ ಬೇಕು! ಸನ್ನಿ ಹಿಡಿದ ಬಾಣಂತಿ ಯಜಮಾನ ಸಂಸ್ಕೃತಿಯ ಕ್ರೌರ್ಯಕ್ಕೆ ಸಿಕ್ಕಿ ನಲುಗಿಹೋಗುತ್ತಾಳೆ, ಮಾಟ - ಮಂತ್ರ - ಯಂತ್ರಗಳಿಂದ ಅವಳ ಗಾಳಿ ಬಿಡಿಸಲು ಹೊರಟ ಮಾಂತ್ರಿಕರು ತಲೆಗೂದಲನ್ನು ಕತ್ತರಿಸುವುದು ಆ ಸಂಸ್ಕೃತಿಗೆ ಸ್ಮಾರಕ ನಿಲ್ಲಿಸಿದಂತಾಗುತ್ತದೆ. ಇಷ್ಟಾದರೂ ಲೋಕ ಸಂಕಟವನ್ನೆಲ್ಲ ಸಹಿಸಿಕೊಂಡ ಕುಸುಮಾಳು ಮೆಲ್ಲಗೆ 'I want to be in my house' ಎಂದು ಹೇಳುವುದು ಜೀವ ಶಕ್ತಿಯ ನೆಲೆಯಾಗಿದೆ.

ಜೀವರಕ್ಷಣೇ ದೇವತೆಗಳಾದ ಹೆಣ್ಣುಗಳು ಹೀಗೆ ತಮ್ಮ ಕಂದಮ್ಮಗಳ ರಕ್ಷಣೆಯ ಹೋರಾಟದಲ್ಲಿ ತೊಡಗಿರುವ ಕಾಲಕ್ಕೆ ಅತ್ತು ನಡೆಯುತ್ತಿಗದ್ದುದೇನು? ಸೋಮಪ್ಪಗೌಡ ಇದೇ ಹೊತ್ತಿನಲ್ಲಿ ಸಿಂಗಾರಮ್ಮನ ಜೋಪಡಿಯಲ್ಲಿ ಚೆನ್ನನನ್ನು ಬಲಿ ತೆಗೆಸಿದ. ಇಲ್ಲಿ ಹೆಣ್ಣು ಪಾಲನೆ ಪೋಷಣೆಯಲ್ಲಿ ನಿರತಳಾಗಿದ್ದರೆ ಅಲ್ಲಿ ಗಂಡು ಕೊಲೆಗಲಸದಲ್ಲಿ ನಿರತನಾಗಿದ್ದಾನೆ. ಚೆನ್ನನ್ನು ಹೀಗೆಯೇ ರಕ್ಷಿಸಲಾಗಿತ್ತಷ್ಟೆ. ಏಕೆ? ಸೋಮಪ್ಪಗೌಡನನ್ನು ಸಹ ಇತ್ತ ಕಿರು ಸಂಸ್ಕೃತಿಯ ಜೀವ ಕಾರುಣ್ಯ ಅತ್ತ ಯಜಮಾನ ಸಂಸ್ಕೃತಿಯ ಬರ್ಬರ ಕ್ರೌರ್ಯ! ಹೀಗೆ ಜೀವಪರ ಹಾಗೂ ವಿರೋಧವಾದ ಎರಡು ಸಂಸ್ಕೃತಿಗಳ ಮುಕಾಮುಖಿ ಮಾಡುವುದರ ಮೂಲಕ ನಮ್ಮ ಆಯ್ಕೆಯ ಸ್ವಾಂತಂತ್ರ್ಯವನ್ನು ವಿಸ್ತೃತಗೊಳಿಸಲಾಗಿದೆ.

ರಾಮಾಯಣದಂತಲ್ಲದೆ ವ್ಯಾಸ ತಾನೇ ಕುರು - ಪಾಂಡವರ ಹುಟ್ಟಿಗೆ ಕಾರಣ ಬೀಜನೆಂದು ಮುಚ್ಚುಮರೆ ಇಲ್ಲದೆ ನಿಚ್ಚಳವಾಗಿ ಹೇಳಿಕೊಂಡ. ಪ್ರಭು ಸಂಸ್ಕೃತಿಗೆ ಸಮಾನಾಂತರವಾಗಿ ಗಣ ಸಂಸ್ಕೃತಿಯೊಂದು ಜೀವಪರವಾಗಿ ಬೆಳೆಯುತ್ತಿತ್ತು. ಆದರೆ ಕಾಲಕ್ರಮದಲ್ಲಿ ಅದು ಇದನ್ನು ಮೆಟ್ಟಿ ನಿಂತಿತು. ಇದು ಅದನ್ನು ಅನುಕರಿಸಹತ್ತಿತ್ತು. ತಾತ್ಪರ್ಯದಲ್ಲಿ ಶಿಷ್ಟಕ್ಕಿಂತ ಪರಿಶಿಷ್ಟವೇ ಹೆಚ್ಚು. ಮಾನವೀಯವಾದ ವೈಚಾರಿಕವಾದ ಮೌಲ್ಯಗಳನ್ನೊಳಗೊಂಡಿದೆ ಎಂಬುದನ್ನು ವಿಶದಪಡಿಸುವುದೇ **'ಕುಸುಮಬಾಲೆ'**ಯ ಮುಖ್ಯ ಆಶಯ. ಆದ್ದರಿಂದಲೇ ಶಿಷ್ಟದ ಕರ್ಣಕುಂಡಲ ಕವಚಗಳನ್ನು ಸೀಳುತ್ತ ಬೆತ್ತಲೆಗೊಳಿಸಿ ಇನ್ನೊಂದು ಕಡೆಯಿಂದ ಪರಿಶಿಷ್ಟದ ಅಜ್ಞಾನಾಂಧಕರಗಳನ್ನು ಜಾಲಾಡಿಸುತ್ತಾ ಹೊಸ ತಳಿಯ ಸಸ್ಯಗಳನ್ನು ನಾಟಿಸುತ್ತ ಪ್ರತಿ ಸಂಸ್ಕೃತಿಯ ನಿರ್ಮಾಣ ಕಾರ್ಯ ಕುಸುಮಬಾಲೆಯಲ್ಲಿ ಸದ್ದಿಲ್ಲದೆ ಸಾಗಿದೆ. ಲೇಖಕರ ವೈಚಾರಿಕ ಪ್ರಜ್ಞೆಗೆ ಹಿಡಿದ ಪುಟ್ಟ ಕನ್ನಡಿ ಈ ಕಾದಂಬರಿ. ಅದು ಹೇಗೆ ನಿರ್ಮಾಣಗೊಳ್ಳುತ್ತಿದೆ ಎಂಬುದನ್ನು ನೋಡಲು ಕೆಳಗಿನ ಈ ಕೆಲವು ಪ್ರಸಂಗಗಳನ್ನು ಉಲ್ಲೇಖಿಸಬಹುದು.

1) ಜೋತಮ್ಮಗಳ ಮಾತುಕತೆ

2) ಮಧ್ವಾಚಾರ್ಯರ ಪ್ರಸಂಗ

3) ಕುರಿಯಯ್ನ ನನ್ನಿಯ ಪ್ರಸಂಗ

4) ಗಾರೆ ಸಿದ್ಧಾವನ ಅಂಬೇಡ್ಕರ್ ಭಕ್ತಿ

5) ಶುದ್ಧ ವಿಜ್ಞಾನದ ಅರಿವು.

"ಆ ಭಗವಂತ ಯಾಕಾರು ನಮ್ ಹುಟ್ಟಸ್ದಾ? ನಮ್ಗ ಸಾವ್ನಾರೂ ಕೊಡಬಾರ್ದ?'' ಎಲ್ಲ ಕಾಲದ ಎಲ್ಲ ದೇಶದ ಎಲ್ಲ ಹೆಣ್ಣುಗಳ ಪ್ರತೀಕಗಳು ಈ ಜೋತಮ್ಮಗಳು. ಕಡೆಗೆ ಕರುಣಾಳು ರಾಘವನಲ್ಲಿ ತಪ್ಪಿಲ್ಲ; ಹೆಣ್ಣಾಗಿ ಹುಟ್ಟಿದ ನನ್ನಲ್ಲಿಯೇ ದೋಷವುಂಟು ಎಂದ ಸೀತೆ ಎಲ್ಲ ನೋವಿಗೆ ತಾನೇ ಜವಾಬ್ದಾರಳಾಗಿ ನಿಲ್ಲುತ್ತಾಳೆ. ಆಕೆ ಪುರುಷಪ್ರಧಾನವಾದ ಸಂಸ್ಕೃತಿ ನಿರ್ದೇಶಿಸಿದಂತೆ ನಡಿಯುತ್ತಾಳಷ್ಟೆ. ಜೋತಮ್ಮಗಳು ಇದೇ ಪರಂಪರೆಗೆ ಸೇರಿ ಹೋಗಿದ್ದಾರೆ. ಆದರೆ ಈ ಮಹಿಳೆಯರಿಗೆ ಯಾವತ್ತೂ ಈ ಹೆಣಭಾರದ ಹೊರೆಯಿಂದ ಬಿಡುಗಡೆ ಇಲ್ಲವೇ ಎಂಬುದು ಪ್ರಶ್ನೆ. ಸನಾತನ ಸಂಸ್ಕೃತಿಯ ಕಲ್ಲು ಚಪ್ಪಡಿಯ ಅಡಿಯಿಂದ ಇವರು ಎಂದಾದರೂ ಚಿಗುರಿ ಹೊರಕಾಣಿಸುತ್ತಾರೆಯೆ? ಸಾಕವ್ವ, ತೂರಮ್ಮ, ಸಿಂಗಾರಮ್ಮ ಮುಂತಾದ ಹೆಣ್ಣು ಜೀವಿಗಳು ಚಿಗುರುತ್ತಿದ್ದಾರೆ. ಕುಸುಮಬಾಲೆಯಲ್ಲಿ ಸಿಂಗಾರಮ್ಮನನ್ನು ಕೊಲೆಯ ಸಾಕ್ಷಿ ಅಳಿಸಲೆಂಬಂತೆ ಒರಸಿ ಹಾಕಲಾಯಿತು.

ಆದರೆ ಅವಳು ಅಲ್ಲಿ ದೇವೇಂದ್ರರಾಯನ ಪಟ್ಟಣದಲ್ಲಿ ಕಂಡದ್ದಾದರೂ ಏನು? "ಆ ಜೆಡಗೀರು ಇಟ್ಗಳೂ (ರಕ್ತದ) ಒಂದಿಂಕ್ರ ಆ ಹಣೆಬಟ್ಟೂ", ಹಿಂಸೆಯ ಪ್ರತೀಕ! ಆದರೆ ಒಬ್ಬ ಸಿಂಗಾರವ್ವನನ್ನು ಕೊಂದು ಆ ಸಾಕ್ಷಿ ಅಳಿಸಲು ಸಾಧ್ಯವೇ? ಸಾಕ್ಷಿಯಾಗಿ ಅಂಥ ಎಷ್ಟೋ ಜನ ಜೊತಮ್ಮಗಳು ಬದುಕಿಯೇ ಉಳಿದಿದ್ದಾರೆ. ಚೆನ್ನ ಮತ್ತು ಮಧ್ವಾಚಾರ್ಯರನ್ನು ಬಸ್‌ಸ್ಟಾಪಿನಲ್ಲಿ ಭೇಟಿಮಾಡಿಸುವ ಮೂಲಕವಾಗಿ ಎರಡು ಸಂಸ್ಕೃತಿಗಳನ್ನು ಪರಸ್ಪರ ಮುಕಾಮುಖಿ ಮಾಡಿ ನೋಡುತ್ತಾರೆ. ಒಂದು ಹಳತಾಗಿ ಈಗಾಗಲೇ ಮ್ಯೂಜಿಯಂಗೆ ಸೇರಿಹೋಗುವ ಸ್ಥಿತಿಯಲ್ಲಿದ್ದರೆ, ಇನ್ನೊಂದು ಮೀಸೆ ಬರುವಾಗ ದೇಶಕಾಣದ ಉಡಾಫೆಯ ಸ್ಥಿತಿಯಲ್ಲಿದೆ; ಒಂದು ತನ್ನ ಹಳಹಳಿಕೆಯಲ್ಲಿ ತಾನೇ ಮುಳುಗಿಹೋಗಿದ್ದರೆ; ಇನ್ನೊಂದರ ನಾಲಗೆಯ ಮೇಲೆ ಸಂಸ್ಕೃತ ನಾಯಕ ಸಾನಿಯ ಎಂಜಲುಗಳಾದ 'ಶಷ' ಗಳಾಗಲಿ ಇಂಗ್ಲೀಷ್‌ನಾಯಕ ಸಾನಿಯ ಎಂಜಲುಗಳಾದ 'Yes Sir' ಗಳಾಗಲಿ ನುಡಿಯಲು ಬರುವಂತಿಲ್ಲ.

'ಕ್ಷೇಮಸಾ' ಎಂದು ಹೇಳಿ ಹೋಗುತ್ತಿರುವ ಚೆನ್ನನ ಕ್ಷೇಮದ ಬಗ್ಗೆ ನಮಗೇ ಆತಂಕ ಹುಟ್ಟುತ್ತದೆ. ಇತ್ತ ಆ ಹಿಂದೂ ಧರ್ಮ ಸ್ವರೂಪಿಣಿಯಾದ ಭಗವತಿಯ ಬಗ್ಗೆ ಹೆಚ್ಚು ಹೇಳಬೇಕಾಗಿಲ್ಲ. "ಭಾವಗಳು ರಾಗಗಳು ಬಗೆ ಬಗೆಯ ಭೋಗಗಳು ಆ ಮಾವು ಅಲೆಯುವುವು ಮನುಜ ನಡೆಯ" ಭಗವತಿಯ ಸ್ಥಿತಿಯ ಕನಕಾಂಗಿಯದಾಗಿದೆ.

ಅವಳನ್ನು ಹಿಂದೂ ಧರ್ಮ ಸ್ವರೂಪಿಣಿ ಎಂದು ಲೇವಡಿ ಮಾಡುವ ಮೂಲಕವಾಗಿಯೇ ಹೆಣ್ಣಾದ ಭಗವತಿಯ ಸ್ಥಿತಿಯ ಬಗ್ಗೆ ಅಪಾರ ಕರುಣೆಯ ಹೊನಲನ್ನು ಹರಿಯಿಸಲಾಗಿದೆ. ಅಮಾನವೀಯವಾದ, ಅವೈಚಾರಿಕವಾದ ಹಿಂದೂ ಧರ್ಮವನ್ನು ನಸುಮುನಿಸಿದ ಹಾಸ್ಯ ವಿಡಂಬನೆಯಿಂದ ಛೇಡಿಸಿದರೂ ಕಿರು ಸಂಸ್ಕೃತಿಯ ಮಿತಿಗಳನ್ನು ವೈಭವೀಕರಿಸದೆ ಅತ್ಯಂತ ಸಂಯಮದಿಂದ ಒಂದೇ ದೂರಾಂತರದಲ್ಲಿ ನಿಂತು ನಿರ್ಲಿಪ್ತತೆಯಿಂದ ಕೊಡಿದ ಪ್ರಬುದ್ಧ ವೈಚಾರಿಕತೆಯು ಇಲ್ಲಿ ಬಿಡುವಿಲ್ಲದೆ ದುಡಿದಿದೆ.

ಬಾಣಂತಿ ಕೆಂಪಿಯನ್ನು ನೋಡಿ ಕೆಲವು ಸದಸ್ಯರ 'ದುಡ ಕೆಟ್ಟೋಯ್ತು' ಶೀಲದ ಪ್ರಶ್ನೆ ಬಂದಾಗ ಕಾದಂಬರಿಕಾರರು ಯಾರನ್ನು ಮಾಡುವುದಿಲ್ಲ. ಜೀತಕ್ಕೆ ಸೇರಲು ಹೋಗದಿದ್ದರೆ ಆಯಿತು, ಜೀತ ವಿಮೋಚನೆ ಎಂಬ ಯಾಂತ್ರಿಕ ಮೆರವಣಿಗೆಗಳು ಯಾಕೆ ಬೇಕು; ಪಲ್ಲಕ್ಕಿಯನ್ನು ಹೊರುವ ಗುಲಾಮರು ಇರುವವರೆಗೆ ಜಗದ್ಗುರುಗಳು ಹೊರಸಿಕೊಳ್ಳುತ್ತಾರೆ. ಯಾರೂ ಪಲ್ಲಕ್ಕಿ ಹೊರದಿದ್ದರೆ ಎಲ್ಲರಂತೆ ತಾವೂ ನಡೆಯುತ್ತಾರಷ್ಟೆ! ಅರಿವನ್ನು ಮೂಡಿಸಬೇಕು; ತಿಳಿವನ್ನು ತುಂಬ ಬೇಕು. ಇಲ್ಲವಾದರೆ ಸರ್ಕಾರದ ಕಾನೂನುಗಳು ಎಷ್ಟು ನಿರರ್ಥಕವೊ ಇಂಥ ಮೆರವಣಿಗೆಯು ಅಷ್ಟೇ ನಿರರ್ಥಕ ಎಂಬ ಒಳನೋಟ ಇಲ್ಲದೆ, ಅಲ್ಲದೆ ಕುರಿಯಯ್ಯ ಹೇಳುವ 'ನನ್ನಿ' ಎಂಬುದು ಪೂರ್ಣ ಅವೈಜ್ಞಾನಿಕವಾದರೂ ಇದನ್ನುಕೇಳುತ್ತಾ ದಲಿತ ಸಂಘರ್ಷ ಸಮಿತಿಯವರು ಒಳಗೊಳಗೆ ಖುಷಿಗೊಂಡು ಸುಮ್ಮನಿದ್ದಿರಬಹುದು.

ಇಲ್ಲವಾದರೆ ಅವರ ನಿಷ್ಕ್ರಿಯತೆಗೆ ಕಾರಣವೇನು ಎಂಬ ತರ್ಕ ಹುಟ್ಟುತ್ತದೆ. 'ಮೇಲ್ಜಾತಿಯ ಹೆಂಗಸನ್ನು ಹೋತ್ತುಕೊಂಡು ಹೋಗಿ ಭೋಗಿಸಿದರು' ಎಂಬ ಕಲ್ಪನೆಯಲ್ಲಿರುವ ಹಿಂಸಾತ್ಮಪ್ರತರತಿಯನ್ನು ಅಲ್ಲಗಳೆದು ಇಲ್ಲಿರುವ ಸಣ್ಣತನವನ್ನು ಶೋಧಿಸಿ ತೆಗೆಯಲು ಈ ಪ್ರಸಂಗದ ಬಳಕೆಯಾಗಿದೆ. ಅವರಿವರ ಮಾತಂತಿರಲಿ, ಲೇಖಕರು ತನ್ನದೇ ಇಲ್ಲಿ ಸ್ವವಿಮರ್ಶೆಗೆ ಗುರಿಪಡಿಸುವುದು ಇಲ್ಲಿ ಸೋಜಿಗದ ಸಂಗತಿ. 'ಕುಸುಮಬಾಲೆಯ' ಈ ಕುಮಾರವ್ಯಾಸ ಇಲ್ಲಿ ತಾನೇ ಪಾತ್ರವೂ ಸಾಕ್ಷಿನೇತ್ರವೂ ಆಗಿ ಚಿತ್ರಿಸುತ್ತಿದ್ದಾನೆ.

ಮಾರಿಗುಡಿಯ ಮೂಲೆಯೊಂದರಲ್ಲಿ ಮುದುರಿಕೊಂಡು ಕುಳಿತು, ಕುರುಚಲು ಗಡ್ಡವನ್ನು ತುರಿಸಿಕೊಳ್ಳುತ್ತ, ಬೀಡಿ ತುಂಡೊಂದನ್ನು ಕಚ್ಚಿಕೊಂಡು 'ಕುಸುಮಬಾಲೆಯ' ಮೂಲಕ ಮರು ಸಂಸ್ಕೃತಿಯೊಂದರ ಹುಟ್ಟಿನ ಸೀಲಿ ನಕ್ಷೆಯನ್ನು ಬಿಡಿಸುತ್ತಿರುವಂತೆ ಕಾಣುತ್ತಾರೆ. ಹಿಂದಿನ ಪುರೋಹಿತಶಾಹಿ ಇವತ್ತಿನ ವಸಾಹತುಶಾಹಿ ಇವೆರಡು ಪ್ರಭಾವಕ್ಕೆ ಸಿಕ್ಕಿ ನಲುಗಿ ಹೋಗುತ್ತಿರುವ ಕೆಳ ಸಂಸ್ಕೃತಿಯ ಮೌಲ್ಯಗಳನ್ನು ಉಳಿಸಿ ಬೆಳೆಸಿಕೊಳ್ಳಲು ಅವರು ಪಡುವ ಪಾಡು ಸಾಮಾನ್ಯವೇನಲ್ಲ! ಹೀಗೆ ಕುರಿಯಯ್ಯನ ಮಿತ ಎಂಬ ಬಲೂನಿಗೆ ವೈಚಾರಿಕತೆ ಪಿನ್ನನ್ನು ಚುಚ್ಚಿ 'ಟುಸ್' ಎನ್ನಿಸಿ ಬಿಡಲಾಗಿದೆ.

ಈ ರಾಷ್ಟ್ರದಲ್ಲಿ ಯಾರು ಯಾರನ್ನು ಯಾವಾಗ ಬೇಕಾದರೂ ದೇವರನ್ನಾಗಿ ಮಾಡಿ ಕಲ್ಲುಗುಡಿ ಕಟ್ಟಿ ಕೊಡಿಹಾಕಬಹುದು. ಗಾಂಧೀಜಿಗೆ ಈಗಾಗಲೇ ಗುಡಿ - ಗುಂಚಾರಗಳನ್ನು ನಿರ್ಮಿಸಲಾಗಿದೆ. ಅದರ ಪ್ರಕಾರ ವೈಚಾರಿಕ ಪ್ರಜ್ಞೆಯಿಂದ ಬೆಳಗಿದ ಈ ದಲಿತ ಸೂರ್ಯ ಅಂಬೇಡ್ಕರರಿಗೂ ಈಗೀಗ ಗಾಂಧಿಯ ಗತಿಯೇ ಒದಗಿ ಬರುತ್ತಿದೆಯೆಂಬುದನ್ನು ಗಾರಸಿದ್ದಾವನು ಅಂಬೇಡ್ಕರರ ಪಟ್ಟಕ್ಕೆ ಕಾಯಿ ಒಡೆಯುವ ಸನ್ನಿವೇಶದಿಂದ ವಿಡಂಬಿಸಲಾಗಿದೆ.

ಪರಸಾದನ ಬುದ್ದಿ ಮಾಂದ್ಯತೆಗೆ ಅವನ ತಂದೆ ತಾಯಿಗಳು ವೈಜ್ಞಾನಿಕವಾದ ಪೂರ್ಣ ತಿಳುವಳಿಕೆ ಇಲ್ಲದೆ, ಕುಟುಂಬ ಯೋಜನಾ ಪರಿಕರಗಳನ್ನು ಉಪಯೋಗಿಸಿದುದೇ ಕಾರಣವೆಂದು ತಿಳಿದು ಬರುತ್ತದೆ. ಭಾರತದಂತಹ ಮೂರನೇ ಜಗತ್ತಿನಲ್ಲಿ ಹುಟ್ಟುವ ಲಕ್ಷಾಂತರ ಮಕ್ಕಳ ಬುದ್ದಿಮಾಂಧ್ಯತೆ ಹಾಗೂ ಅಂಗವಿಕಲತೆಗೆ ಇದೇ ಕಾರಣ ಎಂಬುದು ಸ್ಪಷ್ಟ. ಹಾಗೆಯೇ ಈರಿಯು ಹುಂಜವನ್ನು ಕುಯ್ದು ದ್ಯಾವರಿಗೆ ಎಡೆಮಾಡುವುದನ್ನಾಗಲೀ ತೂರಮ್ಮ ನಾಗಬೆತ್ತದಿಂದ ಮಂತ್ರಿಸಿ ಮಗುವನ್ನು ಉಳಿಸಿಕೊಳ್ಳುತ್ತೇನೆಂದು ಯತ್ನಿಸುವುದನ್ನಾಗಲೀ ವೈಜ್ಞಾನಿಕವೆನ್ನುವಂತಿಲ್ಲ. ಕ್ಷಯ ರೋಗಿಯಾದ ಮಗುವನ್ನು ಈರಿಯು ಆಸ್ಪತ್ರೆಗೆ ಕರೆದೊಯ್ಯಬೇಕು; ಹುಟ್ಟಿದ ಮಕ್ಕಳೆಲ್ಲ ಸಾಯುತ್ತಿರುವಾಗ ಕೆಂಪಿಯನ್ನು ಅವಳ ಗಂಡನನ್ನು ಡಾಕ್ಟರ್ ಬಳಿ ಪರೀಕ್ಷಿಸಬೇಕು; ಸನ್ನಿಗೊಳಗಾದ ಬಾಣಂತಿ, ಕುಸುಮಾಳನ್ನು ಔಷಧೋಪಚಾರಗಳಿಂದ ಉಪಚರಿಸುವುದು ಬಿಟ್ಟು ಮಾಟ - ಮಂತ್ರಗಳನ್ನು ಮಾಡಿಸಬಾರದು ಇತ್ಯಾದಿ ಕಳಕಳಿಯಿಂದ ಈ ಸನ್ನಿವೇಶಗಳ ವರ್ಣನೆ ಬಂದಿದೆ. ಇಂಥ ಮೂಢನಂಬಿಕೆಗಳನ್ನು ಅವುಗಳ ಪರಿಣಾಮವಾದ ಕ್ರೌರ್ಯವನ್ನು ತೀವ್ರವಾಗಿ ಅರಿವು ಅತ್ಯಗತ್ಯ ಇಲ್ಲವಾದರೆ ಎಂಥ ದುರಂತಕ್ಕೆ ದಾರಿಯಾಗುತ್ತದೆ ಎಂಬುದು ಇಲ್ಲಿ ಕಾಣುವ ವೈಚಾರಿಕತೆ.

ಮೊದಲಿಗೆ ಅಕ್ಕಮಹಾದೇವಮ್ಮ ತನ್ನ ಮಗ ಯಾಡನ ಎಲ್ಲ ಬಗೆಯ ಅಪಮಾರ್ಗಗಳಿಗೆ ಷಾಮೀಲಾಗುವುದು ಅವಮಾನಗೊಳಿಸಿದ ಸಮಾಜದೊಂದಿಗೆ ತಾನು ಸೇಡು ತೀರಿಸಿಕೊಂಡಾತಾಗಿದೆ ಎಂಬ ತರ್ಕ ಹುಟ್ಟುವುದಾದರೂ ಹೆಣ್ಣು ತನ್ನ ಮಕ್ಕಳನ್ನು ಹೀಗೆ ಬೆಳೆಸಿ ನಡೆಸಿಕೊಂಡರೆ ಗತಿ ಏನು ಎಂಬ ಭೀತಿ ಹುಟ್ಟುತ್ತದೆ. ಇಂಥ ದೌರ್ಬಲ್ಯಗಳನ್ನು ಶೋಧಿಸಿ ಹೀಗಾಗಬಾರದೆಂದು ಹೇಳುವುದೇ ಕೃತಿಯ ಆಶಯವಾಗಿ ಬಂದಿರುವುದು.

ಇದಕ್ಕೆ ಸಮಾನಾಂತರವಾಗಿ ಚೆನ್ನ ಬಳಗದವರ ಬದುಕಿನಲ್ಲಿ ನಮ್ಮ ಮುಂದಿಟ್ಟು ಆತ್ಮಗೌರವ (Self Respect) ಹಾಗೂ ಕಾಯಕ ಗೌರವ (Dignity of labour) ಎಂದರೇನು ಎಂಬುದನ್ನು ನಮ್ಮ ಹೋಲಿಕೆ ಹಾಗೂ ಆಯ್ಕೆಗೆ ಬಿಟ್ಟು ಬಿಡಲಾಗಿದೆ. ಅಪಮಾರ್ಗದಿಂದ ಬರುವ ಅರ್ಥ ಸಂಪಾದನೆಯನ್ನು ಅಲ್ಲಗಳೆದುದುಡಿವ

ವರ್ಗವು ಮರ್ಯಾದೆಯಿಂದ ಮಾನವ ಘನತೆಯಿಂದ ಶ್ರಮಿಕರಾಗಿ ಬದುಕಲು ಸಾಧ್ಯ ಎಂಬುದನ್ನು ಸೂಚಿಸಲಾಗಿದೆ. ಶ್ರಮಮೂಲವಾದ ಸುಭದ್ರ ಆರ್ಥಿಕ ನೀತಿಯನ್ನು ಮಹಾದೇವಾ ಅವರು ಒತ್ತಾಯಿಸುತ್ತಾರೆ.

'ಒಡಲಾಳ' ದಲ್ಲಿ ಒಡಲಿಗಿಲ್ಲದ ಬಡವರು ತಿನ್ನಲು ಮಾತ್ರ ಕದಿಯುತ್ತಾರೆ. ಗೌಡರ ಮನೆಯ ಒಂದು ಎಮ್ಮೆಯಾದರೂ 'ಸತ್ರಕಪ್ಪ' ಎಂದು ಹಂಬಲಿಸುತ್ತಾರೆ ನಿಜ. ಆದರೆ ಕುಸುಮ ಬಾಲೆಯಲ್ಲಿಯೂ ಅದೇ ಕಿತ್ತು ತಿನ್ನುವ ಬಡತನವಿದ್ದರೂ ಒಡಲಾಳಕ್ಕಿಂತ ಇಲ್ಲಿಯ ಪರಿಸ್ಥಿತಿ ಸ್ವಲ್ಪ ಸುಧಾರಿಸಿದಂತಿದೆ. ಇದಕ್ಕೆ ಕಾರಣ ದೇವರಾಜ ಅರಸರ ಭೂ ಸುಧಾರಣೆ, ಹಾವನೂರು ವರದಿ ಜಾರಿ, ಬೂಸ ಪ್ರಕರಣ, ಬರಹಗಾರ ಕಲಾವಿದರ ಒಕ್ಕೂಟ, ಪ್ರಗತಿ ಪಂಥದ ಸಮಾವೇಶಗಳು, ತುರ್ತು ಪರಸ್ಥಿತಿಯ ಹುಟ್ಟು ಹಾಕಿದ ಡೆಮಾಕ್ರಟಿಕ್ ಶಕ್ತಿಗಳು, ಬಂಡಾಯ ಹಾಗೂ ದಲಿತ ಸಂಘರ್ಷ ಸಮಿತಿ ಮುಂತಾದವುಗಳು.

ಇವುಗಳ ಒಟ್ಟು ಪರಿಣಾಮವೆಂದರೆ ಕೆಳ ವರ್ಗದಲ್ಲಿ ಮಾಡಿದ ಎಚ್ಚರ, ಅದನ್ನು ಕುಸುಮಬಾಲೆಯಲ್ಲಿ ಕಾಣಬಹುದಾಗಿದೆ. (11. ಪುಟ 49 ವಿಮರ್ಶೆ 1991 ಕರ್ನಾಟಕ ಸಾಹಿತ್ಯ ಅಕಾಡೆಮಿ) ದುಡಿದ ವರ್ಗ 'ಗೀಡು' ಹೊಟ್ಟೆ ತುಂಬ ಉಂಡು ಬಂದವರಿಗೂ ಇಡಬಲ್ಲ ಶಕ್ತಿಯನ್ನು ಪಡೆದಿದ್ದಾರೆ. ಹೀಗೆ ಯಾಡೇಗೌಡನ ಪ್ಯೂಡಲಿಸ್ಟಿಕ್ ಮೌಲ್ಯಗಳನ್ನು ದಿಕ್ಕರಿಸುತ್ತ, ದುಡಿದ ವರ್ಗದ ಗೌರವವನ್ನು ಕಾಯ್ದಿರಿಸಲಾಗಿದೆ. ಕಳ್ಳತನ, ಸಣ್ಣತನ, ನೀಚತನ ಮುಂತಾದ ಹೇಸಿಗೆ ತರುವ ಕಾರ್ಯಗಳನ್ನು ಅನಾವರಣ ಮಾಡಿ ಶ್ರಮಿಕ ವರ್ಗವೂ ಕೂಡ ಇದನ್ನು ಒಪ್ಪದೆ ಅಲ್ಲಗಳೆಯುವಂತೆ ಏರ್ಪಡಿಸಲಾಗಿದೆ. ಚೆನ್ನ ಕಲಿತವನಾದರೂ ತನ್ನ ತಮ್ಮಂದಿರ ಜೀತದ ಮೇಲೆ ಏಕೆ ಬದುಕಿದ್ದಾನೆ? ಅಮಾಸ ಮುಟ್ಟಿನ ಸೀರೆಗಳನ್ನು ಕದ್ದು ಮಾರಾಟ ಮಾಡಿ ಯಾಕೆ ಜೀವಿಸುತ್ತಾನೆ? ಗಾರಸಿದ್ದಾವ ಕದ್ದು ಎಳನೀರನ್ನು ಯಾಕೆ ಕುಡಿಯುತ್ತಾನೆ? ದಲಿತರ ಈ ಬಗೆಯ ಜೀವನವನ್ನು ಲೇಖಕರು ಮೆಚ್ಚರು. ಅಂದರೆ ಅವರ ಬದುಕಿನ ಓರೆ ಕೋರೆಗಳನ್ನು ತೆರೆದು ತೋರುವ ಮೂಲಕ ಅವರನ್ನು ತಿದ್ದಬೇಕೆಂಬ ಬಯಕೆ ಅವರದು.

ದುಡಿದ ಜನವರ್ಗದ ಕಾಯಕದ ಬಗ್ಗೆ ಪಾವಿತ್ರವನ್ನು ತುಂಬುವ ಮೂಲಕ ಹೊಸ ಸಂಸ್ಕೃತಿಯೊಂದರ ನಿರ್ಮಾಣದಲ್ಲಿ ಅವರು ಪಾಲುದಾರರಾಗಬೇಕೆಂಬ ಕಳಕಳಿ ಲೇಖಕರದು. ಕುಸುಮಬಾಲೆಯಲ್ಲಿ ಚಿತ್ರಿತವಾಗಿರುವ ದಲಿತರ ಆರ್ಥಿಕ ಸ್ಥಿತಿಯನ್ನು ಗಮನಿಸಿದರೆ ಅವರಲ್ಲಿ ಕೆಲವರು ತಮ್ಮ ಜೀವನೋಪಾಯಕ್ಕಾಗಿ ಹಲವು ಬಗೆಯ ಅಪಮಾರ್ಗವನ್ನು ಹಿಡಿದಿರುವುದು ಇದೆ. "ತಮ್ಮ ಅಸ್ತಿತ್ವಕ್ಕೆ ಮೇಲುವರ್ಗದ ಎಲ್ಲ ಕುತಂತ್ರಗಳನ್ನು ದಲಿತ ಸಂಘಟನೆ ಬಳಸುವುದರಿಂದ ಸಮಾನ ಶೋಷಿತರಲ್ಲಿ ಸಂಘಟನೆ ಸಾಧ್ಯವಿಲ್ಲ. ನಿಷ್ಕ್ರಿಯರಾಗುತ್ತಿದ್ದಾರೆ". (12. ಕೆ.ಜಿ. ನಾಗರಾಜಪ್ಪ : ಅನ್ವೇಷಣೆ, ಸಂಚಿಕೆ 52) ಎಂಬ ಆರೋಪಗಳು ಕೇಳಿಬರುತ್ತವೆ. ಇದರ ಅರಿವು ಕಾದಂಬರಿಕಾರರಿಗೆ ಇದೆ. ಅವರು ಒಡಲಾಳದಲ್ಲಿ ದಲಿತರ ಯಥಾಸ್ಥಿತಿಯನ್ನು ಹೇಳಿ ಅದರ ಪರಿಣಾಮಗಳನ್ನು ಹೊಳೆಯಿಸಿದ್ದರೆ, ಕುಸುಮಬಾಲೆಯಲ್ಲಿ ಅದರ ಸಾಧ್ಯತೆಗಳನ್ನು ಸೂಚಿಸಿದ್ದಾರೆ. ದಲಿತರು ಈ ಸಮಿತಿಗಳನ್ನು ಮೀರುವ ಮೂಲಕ ಅಪ್ಪಟ ಮನುಷ್ಯರಾಗ ಬೇಕೆಂದು ಅವರು ಇಚ್ಛಿಸುತ್ತಾರೆ.

ಹಾಗೂ ಅವರ ಬದುಕಿನ ಸಾಧ್ಯತೆಗಳನ್ನು ಅರಿವು ಮಾಡಿಕೊಟ್ಟು ಅವರಲ್ಲಿರುವ ಸೃಜನಶೀಲತೆಯನ್ನು ಮುಂಗಾಣಿಸುತ್ತಾರೆ. ಈ ದೃಷ್ಟಿಯಿಂದ ಕುಸುಮಬಾಲೆಯು 'ಒಡಲಾಳ' ದ ಮುಂದಿನ ಕೃತಿಯೇ ಹೊರತು ಎಸ್. ಕೆ. ಕೋದಂಡರಾಮ ಅವರು ಅಭಿಪ್ರಾಯಿಸುವಂತೆ ಅದರ ಮುಂದೆ ಇದು ಸಾಮಾನ್ಯ ಏನಲ್ಲ. ದೇವನೂರರ

ಬೆಳವಣಿಗೆಯ ಮುಂದಿನ ಮೆಟ್ಟಿಲನ್ನು ಇದು ಕಾಣಿಸುತ್ತದೆ. ಒಡಲಾಳದಲ್ಲಿ ಕಂಡುಬರುವ ಬಡವರ ಹಸಿವು ಇಲ್ಲಿ ಚಿತ್ರತವಾಗಿದ್ದರೂ ಅವರು ಬದುಕುವ ಚಾತುರ್ಯವನ್ನು ಇಲ್ಲಿ ಬಿಡದೆ ಕಾಣಿಸಲಾಗಿದೆ. ಇದೊಂದು ಐತಿಹಾಸಿಕ ಅನಿವಾರ್ಯ ಕೂಡ. ಅಲ್ಲಿ ಹಸಿದ ಜನ ಕೇವಲ ಕಡಲೆಕಾಯಿಯನ್ನು ಮಾತ್ರ ಕದ್ದು ತಂದು ತಿಂದರೆ, ಇಲ್ಲಿ ಕದ್ದು ಎಳನೀರು ಕಿತ್ತು, 'ಅದು ಕುಡಿಯಲಿಕ್ಕೆ ತಾನೆ ಇರುವುದು' ಎಂದು ವಾದಿಸುವುದೆ. ಕುಡಿಯುವ, ಸುಳ್ಳುವ ಆದರೂ ಅತ್ಯಂತ ಡೆಮಾಕ್ರೆಟಿಕ್ ಎಂಬಂತೆ ಫೋಸು ಕೊಡುವ ಜಟ್ಟಿಯಂತೆ ವರ್ತಿಸುವ ಮೂಲಕ ಅನೇಕ ದಲಿತರು ಮೇಲು ವರ್ಗದವರಿಗೆ ಸವಾಲಾಗಿದ್ದಾರೆ.

ನಿದರ್ಶನಕ್ಕಾಗಿ ಯಾಡನು ಅಭಿನಯಿಸುವ ಜಾಣ, ಪೆದ್ದತನ, ಗಾರಸಿದ್ದಾವನ ಮೊಂಡು ಚಾತುರ್ಯ, ಕುರಿಯಯ್ಯನ ಕುರುಡು ನನ್ನಿ, ಅಮಾಸನ ತಸ್ಕರ ಜೀವನ ಮಾರ್ಗ (ಲವಲವಿಕೆ ಅಪಾರ ಇದ್ದರೂ) ಇವೆಲ್ಲವನ್ನು ಪರಿಶೀಲಿಸಬಹುದು. ಇವರ ಬದುಕು ಮಾರ್ಗಗಳು ಒಪ್ಪಲರ್ಹವೇ ಎಂಬುದನ್ನು ಮನಗಣಿಸುವ ಮೂಲಕ ಏಕ ಕಾಲದಲ್ಲಿ ಶಿಷ್ಟ - ಪರಿಶಿಷ್ಟರ ಎಲ್ಲ ದೌರ್ಬಲ್ಯಗಳನ್ನು ಬೊಟ್ಟು ಮಾಡಿ ತೋರಿಸುತ್ತಾರಷ್ಟೇ ಅಲ್ಲ ಶೋಧನೆಗೆ ಗುರಿಪಡಿಸುತ್ತಾರೆ. ಹಾಗೆಯೇ ಋಜುಮಾರ್ಗದ ಸಾಧ್ಯತೆಗಳನ್ನು ಸೂಚಿಸುವ ಮೂಲಕ ಎಲ್ಲರಲ್ಲಿಯೂ ಬದುಕಿನ ಪ್ರೀತಿಯನ್ನು ಹುಟ್ಟಿಸಲಾಗುವುದು. ಹಾಗೆ ನೋಡಿದರೆ ಕುಸುಮಬಾಲೆಯ ಶೈಲಿ ಅತ್ತ ಗದ್ಯವೂ ಅಲ್ಲದ ಇತ್ತ ಪದ್ಯವೂ ಅಲ್ಲದ ಸುಂದರ ಶೈಲಿ. ಇಂಥ ಕೃತಿಗಳ ಅಭ್ಯಾಸಕ್ಕೆ ಪ್ರತ್ಯೇಕವಾದ ಅರ್ಥಕೋಶ, ವ್ಯಾಕರಣ ಶೈಲಿ ಶಾಸ್ತ್ರಗಳ ರಚನೆಯಾಗಬೇಕು. ಕುಸುಮಬಾಲೆಯಲ್ಲಿ ಈರಿ ಹಾಗೂ ತೂರಮ್ಮಗಳು ಮಾಡುವ ಕುಕ್ಕಟ ಹಾಗೂ ಕಾರುಣ್ಯ ಶೈಲಿ; ಯಾಡನ ವ್ಯವಹಾರಿಕ ಶೈಲಿ; ಮಂಚದ ಕತೆಯ ರಮ್ಯ ಶೈಲಿ; ಅಮಾಸನ ಬಗೆಗಿನ ಉತ್ಸಾಹ ಶೈಲಿ; ಕಡೆಗೆ ಪರಸಾದನು ಬಿಡುವ ಲಾರಿ ಡ್ರೈವಿಂಗ್ ಶೈಲಿ ಈ ಮುಂತಾದುವನ್ನು ಗಮನಿಸಿದರೆ ಸಾಕು ಗೊತ್ತಾಗುತ್ತದೆ. ವಸ್ತು ಮತ್ತು ರೂಪದ ಅಭಿನ್ನ ಸ್ವರೂಪ. ಕುಸುಮಬಾಲೆಯಲ್ಲಿ ಕರುಣ ರಸವು ಸ್ಥಾಯಿಯಾಗಿ ಹರಿಯುತ್ತದೆ. ಇಲ್ಲಿ ದಲಿತರ ಬದುಕು ನಿರಂತರ ಚಾಲನೆಯಲ್ಲಿದೆ. ಪ್ರತಿ ಸಂಸ್ಕೃತಿಯ ನಿರ್ಮಾಣದತ್ತ ಸಾಗುತ್ತಿರುವ ಕುಸುಮಬಾಲೆಯು ದಲಿತ ಜಗತ್ತನ್ನು ಅದರ ಶೈಲಿಯೇ ಕೈಹಿಡಿದು ನಡೆಸುತ್ತಿದೆ. ಇಲ್ಲಿ ಎಲ್ಲಿಯೂ ಮಾನವ ಮರ್ಯಾದೆಯನ್ನು ಮೀರದ ಗಾಂಭಿರಯ್ಯ ಇದೆ. ಸಂಸ್ಕೃತ ಹಾಗೂ ಇಂಗ್ಲೀಷಿನೊಂದಿಗಿರುವ ಗುಲಾಮತನವನ್ನು ವಿಮೋಚನೆಗೊಳಿಸಿ ಕನ್ನಡತನವನ್ನು ಗೌರವಿಸಲಾಗಿದೆ.

ಈ ಮೇಲಿನ ಎಲ್ಲಾ ಬಗೆಯ ಚರ್ಚೆ ವಿವರಣೆ ವಿಶ್ಲೇಷಣೆಗಳಿಂದ ನೋಡಿದರೆ ಕುಸುಮಬಾಲೆಯು ಡಾ. ರಹಮತ್ ತರೀಕೆರೆಯವರ ಪಾವಿತ್ರ್ಯ ಭಂಗವೂ ಪ್ರತಿ ಸಂಸ್ಕೃತಿ ನಿರ್ಮಾಣವೂ ಎಂಬ ಲೇಖನಕ್ಕೆ ಇದು ಲಕ್ಷ್ಯ - ಲಕ್ಷಣವಾಗಿದೆಯೊ ಎಂದೆನಿಸುತ್ತದೆ. ಹಿಂದೆ ನಿರ್ದಯನೂ ಅಮಾನವೀಯನೂ ಆದ ಒಬ್ಬ 'ಮನು' ಇದ್ದ ಕಾರಣ ಅವನಿಂದ ಇಲ್ಲಿಯವರೆಗೆ ಏನೆಲ್ಲ ಅನರ್ಥಗಳು ಸಂಭವಿಸಿದವಲ್ಲ! ಸದ್ಯ ಈಗೀಗ ಅಲ್ಲಿರುವ ಗೊಂದಲಗಳನ್ನು, ತೊಡಕುಗಳನ್ನು ಪರಿಹರಿಸಿಕೊಂಡು ಮನ್ನಡೆಯುವಷ್ಟೂ ವೀವೇಕವೂ, ವಿಚಾರವೂ ಅಕ್ಷರವಿದ್ಯೆಯೊಂದಿಗೆ ಎಲ್ಲರ ಸ್ವತ್ತಾಗಿ ಹರಿದು ಬರುತ್ತಿದೆ. ಈ ಎಲ್ಲ ಅರಿವಿನ ಪ್ರತ್ಯುತ್ಪನ್ನವೋ ಎಂಬಂತೆ ಇವತ್ತಿನ ಸಾಹಿತ್ಯವೂ ಸೃಷ್ಟಿಯಾಗುತ್ತಿದೆ.

ಆ ನಿಟ್ಟಿನ ಸೃಷ್ಟಿಯಲ್ಲಿ ಕುಸುಮಬಾಲೆ ಒಂದು ಮಹತ್ವದ ಕೃತಿ. ಮುಳ್ಳೂರು ನಾಗರಾಜ್ ಹೇಳುವಂತೆ ಇದು ದಲಿತರ 'ನೇಣುಗಂಬ'ವೇನಲ್ಲ; ಬದಲಿಗೆ ಪ್ರತಿ ಸಂಸ್ಕೃತಿಯನ್ನು ಸ್ವಾಗತಿಸಲು ಹೊರಟು 'ಹೊಸ ಬಾಸಿಂಗ'ವೇ ಸರಿ.

ಇಲ್ಲಿಯೇ ಇನ್ನೊಂದು ಮಾತು. ಫೆಮಿನಿಸಮ್ ಬಗ್ಗೆ ಗಂಟೆಗಟ್ಟಲೆ ಭಾಷಣ ಕುಟ್ಟುವ, ಪುಟಗಟ್ಟಲೆ ಬೂಸಾ

ಲೇಖನಗಳನ್ನು ಗೀಚಿ ಒಗೆಯುವ, ಸ್ತ್ರೀವಾದಿ ವಿಮರ್ಶಕರು ವಿಶ್ವವಿದ್ಯಾಲಯಗಳ ಪೀಠಾಧಿಪತಿಗಳು ಕನ್ನಡ ವಿಮರ್ಶನಾಲೋಕದ ಜಗದ್ಗುರುಗಳು ಇವರೆಲ್ಲ ಸಾಹಿತ್ಯದ ಅಸ್ಪೃಶ್ಯತೆಯನ್ನು ಆಚರಿಸದೆ ಕುಸುಮಬಾಲೆಯತ್ತ ಕಣ್ಣು ಹಾಯಿಸಿ ನೋಡುವುದಾದರೆ ಅಲ್ಲಿ ಹೆಣ್ಣಿಗೆ ಸಿಕ್ಕಿರುವ ಹಾಗೂ ದಕ್ಕಿರುವ ಆಯ್ಕೆಯ ಸ್ವಾತಂತ್ರ್ಯವನ್ನು ಕಂಡು ದಂಗು ಬಡಿದು ಹೋಗುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. (13. ಪುಟ 159, ''ಸಾಹಿತ್ಯ ಪರಿಸರ'' - ಶಿವರಾಮಯ್ಯ)

ಅಡಿ ಟಿಪ್ಪಣಿಗಳು

1. "ಹೆಣ್ಣಿನ - ಸ್ಥಾನಮಾನ" ವಿಚಾರಸಾಹಿತ್ಯ ಭಾಗ - 1 ಮತ್ತು ಭಾಗ - 2
   ಹೆಚ್ಚಿನ ವಿವರಗಳಿಗಾಗಿ ನೋಡುವುದು - ಶರಶ್ಚಂದ್ರ ಚಟ್ಟೋಪಧ್ಯಾಯ
2. ದೇವನೂರು ಮಹದೇವರರವರ ಸಮಗ್ರ ಕೃತಿ
3. ಕನ್ನಡ ದಲಿತ ಸಣ್ಣ ಕತೆಗಳಲ್ಲಿ ದಲಿತ ಸಂಸ್ಕೃತಿ ಡಾ. ಸಿ.ಟಿ. ಹೊನ್ನಯ್ಯ ಪುಟ - 222
4. ದ್ಯಾವನೂರು ಪುಟ 47 - 48
5. ಕಥಾ ಕಥನ, ಪುಟ 70- 71 ಎಲ್. ಹನುಮಂತಯ್ಯ
6. ದ್ಯಾವನೂರು ಮಹಾದೇವ ಸಮಗ್ರ ಕೃತಿ ಪುಟ - 50
7. ಪುಟ 101 - 102 "ಅನುಸಂಧಾನದ ಹೊಸ ಹಾದಿ. ಡಾ. ಕೆ. ಆರ್. ದುರ್ಗಾದಾಸ್
8. ಪುಟ 77, "ಯಾರ ಜಬ್ತಿಗೂ ಸಿಗದ ನವಿಗಳು. ಸಂಪಾದಕಿ ಪಿ. ಚಂದ್ರಿಕಾ
9. ಸಾಹಿತ್ಯ ವಿಮರ್ಶೆ 1988 ಕ.ಸಾ.ಅ.
10. "ಸಾಹಿತ್ಯ ಪರಿಸರ" ಪುಟ 142, ಶಿವರಾಮಯ್ಯ
11. ಪುಟ 49 ವಿಮರ್ಶೆ 1991 ಕರ್ನಾಟಕ ಸಾಹಿತ್ಯ ಅಕಾಡೆಮಿ
12. ಕೆ.ಜಿ. ನಾಗರಾಜಪ್ಪ : ಅನ್ವೇಷಣೆ, ಸಂಚಿಕೆ 52
13. ಪುಟ 159, "ಸಾಹಿತ್ಯ ಪರಿಸರ" - ಶಿವರಾಮಯ್ಯ

<u>ಅಧ್ಯಾಯ - 4</u>

" ಈ ಕಾಲಘಟ್ಟದ ಪ್ರಮುಖ ಸಾಹಿತಿಗಳ ಸಾಹಿತ್ಯದ ಸಮೀಕ್ಷೆ"

ಅ) ಕವಿ ಡಾ. ಸಿದ್ಧಲಿಂಗಯ್ಯನವರ ಸಾಹಿತ್ಯ

ಆ) ಅರವಿಂದ ಮಾಲಗತ್ತಿ ಅವರ ಸಾಹಿತ್ಯ

ಇ) ಬಿ. ಟಿ. ಲಲಿತನಾಯಕ್ ಅವರ ಸಾಹಿತ್ಯ

ಈ) ಪ್ರೊ. ಬರಗೂರು ರಾಮಚಂದ್ರಪ್ಪ ಅವರ ಸಾಹಿತ್ಯ

"ಕವಿ ಡಾ. ಸಿದ್ಧಲಿಂಗಯ್ಯನವರ ಸಾಹಿತ್ಯ"

"ಹೊಲೆ ಮಾದಿಗರ ಹಾಡು" ಖ್ಯಾತಿಯ ಕವಿ ಸಿದ್ಧಲಿಂಗಯ್ಯ ದಲಿತ ಲೋಕದ ವಿಶಿಷ್ಟ ಅನುಭವಗಳನ್ನು ಕನ್ನಡಕ್ಕೆ ನೀಡಿದ ಪ್ರಮುಖ ದಲಿತ ಸಾಹಿತ್ಯಗಳಲ್ಲಿ ಒಬ್ಬರು. ಇವರು ಜನಪದ ಹೋರಾಟ ಚಳುವಳಿಗಳಲ್ಲಿ ಸದಾ ತಮ್ಮನ್ನು ತಾವು ಅರ್ಥಪೂರ್ಣವಾದ ರೀತಿಯಲ್ಲಿ ತೊಡಗಿಸಿಕೊಂಡು ತಮ್ಮ ಬದುಕು-ಬರವಣಿಗೆಗೆ ಸತ್ವ ಚಾಲನೆಯನ್ನು ತಂದುಕೊಂಡವರು ; ಆ ಮೂಲಕ ಬೆಳೆಯುತ್ತ ಹೋದವರು.

ಕಾವ್ಯ, ನಾಟಕ, ವಿಚಾರ, ವಿಮರ್ಶೆ ಹೇಗೆ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಉತ್ತಮ ಕೆಲಸ ಮಾಡಿರುವ ಸಿದ್ಧಲಿಂಗಯ್ಯನವರು ಪ್ರಧಾನವಾಗಿ ಕವಿಯೆಂದೇ ಪ್ರಸಿದ್ಧಿ ಪಡೆದಿದ್ದಾರೆ. ಒಳ್ಳೆಯ ವಾಗ್ಮಿಯಾದ ಇವರು ತಮ್ಮ ವಿಶಿಷ್ಟ ಭಾಷಣ ಕಲೆಯಿಂದ ಎಂಥವರನ್ನೂ ಮಂತ್ರಮುಗ್ಧರನ್ನಾಗಿ ಮಾಡಬಲ್ಲವರು. ಅಂದರೆ ಇವರ ಭಾಷಣ, ಜನರನ್ನು ಆ ಕ್ಷಣದಲ್ಲಿ ಸೆರೆ ಹಿಡಿಯುವ, ಮೋಡಿ ಮಾಡುವ ಕೇವಲ ಸಂಪ್ರಾದಾಯಿಕ ಶೈಲಿಯದು ಎಂದು ಭಾವಿಸಬಾರದು. ಇವರ ಭಾಷಣದಲ್ಲಿ ಜನಪರವಾದ ಹೊಸ ವಿಚಾರ ಆಲೋಚನೆಗಳು ಅತ್ಯಂತ ತಾರ್ಕಿಕವಾಗಿ ಹಾಸ್ಯಲೇಪನದೊಂದಿಗೆ ಸರಳವಾಗಿ ಮಂಡಿತವಾಗುತ್ತವೆಂಬುದು ನನ್ನ ಮಾತಿನ ಉದ್ದೇಶವಾಗಿದೆ. ಸಿದ್ಧಲಿಂಗಯ್ಯನವರು ತಮ್ಮ ಸ್ವರಚಿತ ಕವನಗಳನ್ನು ಅವುಗಳ ಅರ್ಥಭಾವಗಳು ದಳದಳವಾಗಿ ಸ್ಫುರಿಸುವಂತೆ ಜಾನಪದ ಶೈಲಿಯಲ್ಲಿ ಸೊಗಸಾಗಿ ಹಾಡುತ್ತಾರೆ. ಆ ಮೂಲಕವಾಗಿ ಅವರ ಕಾವ್ಯದ ಆಶಯ ಧೋರಣೆಗಳು ಜನಸಾಮನ್ಯರಿಗೂ ತಲುಪುವಂತೆ ಮಾಡುತ್ತಾರೆ.

ಬೆಂಗಳೂರಿನ ಕನ್ನಡ ಅಧ್ಯಯನ ಕೇಂದ್ರದಲ್ಲಿ ಕನ್ನಡ ಪ್ರಾಧ್ಯಾಪಕರಾಗಿರುವ ಸಿದ್ಧಲಿಂಗಯ್ಯನವರು ತಮ್ಮ ಪ್ರತಿಭೆ ಪಾಂಡಿತ್ಯಕ್ಕಾಗಿ, ಸಾಧನೆ ಸಿದ್ದಿಗಳಿಗಾಗಿ ಅನೇಕ ಪ್ರಶಸ್ತಿ ಪುರಸ್ಕಾರಗಳನ್ನು ಪಡೆದಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ, ರಾಜ್ಯ ಸಾಹಿತ್ಯ ಅಕಾಡೆಮಿಯ ಹಾಗೂ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾಗಿ ಪುಸ್ತಕ ಪ್ರಾಧಿಕಾರದ ಸದಸ್ಯರಾಗಿ ಹೀಗೆ ರಾಜ್ಯ ಹಾಗೂ ರಾಷ್ಟ್ರಮಟ್ಟದ ಹತ್ತು ಹಲವು ಸಮಿತಿಗಳ ಸದಸ್ಯರಾಗಿ ಸೇವೆ ಸಲ್ಲಿಸಿದ ಅನುಭವ ಅವರಿಗಿದೆ. ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾಗಿದ್ದ ಕಾಲದಲ್ಲಿ ಇವರು ಕರ್ನಾಟಕ ನೋವುಂಡ ಜನತೆಯ ಪ್ರತಿನಿಧಿಯಾಗಿ ತಮ್ಮ ದನಿಯನ್ನು ಸದನದಲ್ಲಿ ಎತ್ತರಿಸಿ ಮಾತನಾಡಿದ್ದಾರೆ. ನಿಮ್ನ ವರ್ಗದ ಜನತೆಯ ಆಶೋತ್ತರಗಳಿಗೆ ಸ್ಪಂದಿಸಿದ್ದಾರೆ.

ಇವರ ಮೊದಲ ಕೃತಿಯಾದ " ಹೊಲೆ ಮಾದಿಗರ ಹಾಡು " ಕವನ ಸಂಕಲನದ ಮೂಲಕ 1975ರಲ್ಲಿ ಈ ಕೃತಿ ಪ್ರಕಟವಾದಾಗ ಸಾಹಿತ್ಯ ವಲಯದಲ್ಲಿ ವಿಭಿನ್ನರೀತಿಯ ಪ್ರತಿಕ್ರಿಯೆಗಳು, ಆಕ್ರೋಶಗಳು ವ್ಯಕ್ತವಾದವು. ಕನ್ನಡ ಸಾಹಿತ್ಯ ಲೋಕದಲ್ಲಿ ಇದುವರೆಗೆ ಪ್ರಕಟವಾಗದ ಹೊಸ ಅನುಭವವೊಂದು ಮೊದಲ ಬಾರಿಗೆ ತನ್ನೆಲ್ಲ ನೋವು - ಸಂಕಷ್ಟಗಳಿಂದ, ದುಗಡ-ದುಮ್ಮಾನಗಳಿಂದ, ವೈಶಿಷ್ಟ್ಯ- ವೈಚಿತ್ರ್ಯಗಳಿಂದ ಪ್ರಕಟವಾದಾಗ, ಬೆಳಕಿಗೆ ಬಂದಾಗ ಮಡಿವಂತ ಲೇಖಕರಿಗೆ ಸಂಪ್ರದಾಯವಾದಿಗಳಿಗೆ ಕಸಿವಿಸಿ ಉಂಟಾಗಿದ್ದು, ಒಂದು ರೀತಿಯಲ್ಲಿ ಸಹಜವೇ ಆಗಿದೆ. ಶತಮಾನಗಳಿಂದ ಉಪೇಕ್ಷೆಗೆ ಅವಜ್ಞೆಗೆ ಒಳಗಾಗಿದ್ದ ಜನಾಂಗದವರು ಮೊದಲ ಬಾರಿಗೆ ಅಕ್ಷರ ಕಲಿತು ಪ್ರಜ್ಞೆ ಮೂಡಿಸಿಕೊಂಡಾಗ ಯಾವ ಬಗೆಯ ಸಾಹಿತ್ಯ ಸೃಷ್ಟಿ ಆಗಬಲ್ಲದೆಂಬುದಕ್ಕೆ ಸಿದ್ಧಲಿಂಗಯ್ಯನವರ ಈ " ಹೊಲೆ ಮಾದಿಗರ ಹಾಡು" ಕೃತಿ ಒಂದು ನಿದರ್ಶನವಾಗಿದೆ. ಇಲ್ಲಿ ಕವಿ ಸಿದ್ಧಲಿಂಗಯ್ಯ ದಲಿತ ಲೋಕದ ನೋವು, ಅಸಹಾಯಕತೆ, ಸಿಟ್ಟು-ಸೆಡುಗಳನ್ನು, ಅವರ ಮೇಲೆ ಆಗುತ್ತಿರುವ ಅನ್ಯಾಯ, ಶೋಷಣೆಗಳನ್ನು ಆವೇಶ ಭರಿತ, ನುಡಿಗಟ್ಟುಗಳಲ್ಲಿ ಕಟ್ಟಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ಆದ್ದರಿಂದ " ದಲಿತ ಕವಿ ಸಿದ್ಧಲಿಂಗಯ್ಯನವರು "" ಹೊಲೆ ಮಾದಿಗರ ಹಾಡು" ಕವನ ಸಂಕಲನ ವಸ್ತು ವಿಶಿಷ್ಟತೆಯಿಂದ ಬಳಸಿಕೊಳ್ಳುವ

ಭಾಷೆಯ ಕಸುವಿನಿಂದ, ಅಭಿವ್ಯಕ್ತಗೊಳ್ಳುವ ಪ್ರಾಮಾಣಿಕ ಅನುಭವದಿಂದ, ಎಲ್ಲಕ್ಕೂ ಮಿಗಿಲಾಗಿ ಜಿಡ್ಡುಗಟ್ಟಿದ ವ್ಯವಸ್ಥೆಯಲ್ಲಿನ ಮೋಸದ ಎಳೆಗಳನ್ನು ಶೋಧಿಸಿ, ಅದಕ್ಕೆ ಪರಿಹಾರ ಹುಡುಕುವ ಚಿಕಿತ್ಸಕ ಮನೋದೃಷ್ಟಿಯಿಂದ ಕನ್ನಡ ಕಾವ್ಯ ಪ್ರಪಂಚಕ್ಕೆ ಹೊಸ ಕೊಡುಗೆ'' ಎಂಬ ಮಾತುಗಳು ಅರ್ಥಪೂರ್ಣ.

ಈ ಸಂಕಲನದಲ್ಲಿಯ ಎಲ್ಲಾ ಕವನಗಳ ಶಿರೋನಾಮೆ ಮಾಮೂಲಿನಂತೆ ಕವನದ ಮೇಲಿನ ಬದಿಯಲ್ಲಿ ಅಚ್ಚಾಗದೆ ಕವನದ ಅಡಿಯಲ್ಲಿ ಅಚ್ಚಾಗಿರುವುದರಿಂದ, ಕವಿ ಕಂಡುಂಡ ಇಲ್ಲಿನ ಅನುಭವ, ಸಮಸ್ಯೆಗಳು ತಳದಿಂದ, ಬುಡದಿಂದ ಶೋಧಿತವಾದಗಳು ಎಂಬ ಅರ್ಥ ಬಂದು, ಅಂಥ ಎಲ್ಲ ಸಮಸ್ಯೆ- ಅನ್ಯಾಯಗಳನ್ನು ಬುಡದಿಂದಲೇ ಬೇರು ಸಹಿತವಾಗಿ ಕಿತ್ತೊಗೆಯುವ ಆಶಾಭಾವದ ಧ್ವನಿಯೂ ಹೊರಡುತ್ತಿದೆ. ಕವಿಯೇ ಹೇಳುವಂತೆ ಇಲ್ಲಿನ ಕವನಗಳನ್ನು " ಗಟ್ಟಿಯಾಗಿ ಲಯಬದ್ಧವಾಗಿ ಹಾಡಿದಾಗ'' ಮಾತ್ರ ಹೆಚ್ಚಿನ ಅರ್ಥ ಸ್ಫುರಿಸಲು ಕವನದ ನಿಜದನಿ ಹೊರಡಲು ಸಾಧ್ಯವಾಗುತ್ತದೆ.

ಹಸಿವಿನಿಂದ ಸತ್ತೋರು ಸೈಜುಗಲ್ಲು ಹೊತ್ತೋರು
ಒದೆಸಿಕೊಂಡು ಒರಗಿದೋರು ನನ್ನ ಜನಗಳು

-'ನನ್ನ ಜನಗಳು'

ಕವನದ ಈ ನುಡಿಗಳು ದಲಿತ ಜನಾಂಗ ಕಷ್ಟಪಟ್ಟು ದುಡಿದರೂ ಅವರಿಗೆ ದುಡಿತಕ್ಕೆ ತಕ್ಕ ಪ್ರತಿಫಲ ದಕ್ಕದೆ ಹೋಗಿ ಹೇಗೆ ಅಸಹಾಯಕ ಸ್ಥಿತಿಯಲ್ಲಿ ನರಳುತ್ತಾರೆಂಬುದನ್ನು ಸಮರ್ಥವಾಗಿ ಹಿಡಿದಿಟ್ಟಿವೆ. ಕವನದ ಮುಂದಿನ ನುಡಿಗಳೂ, ರಾಷ್ಟ್ರದ ಅಭಿವೃದ್ಧಿಗಾಗಿ ದೇಶದ ಪ್ರಗತಿಗಾಗಿ ಹತ್ತು-ಹಲವು ಬಗೆಯ ಶ್ರಮದ ಕೆಲಸ ಕಾರ್ಯಗಳನ್ನೂ ಮಾಡುವ, ದೇಶದ ಪ್ರಗತಿ ಗಾಗಿ ಸರ್ವತೋಮುಖ ಏಳ್ಗೆಗಾಗಿ ತಮ್ಮ ಬದುಕನ್ನು ಮೀಸಲಾಗಿರಿಸಿದ ದಲಿತರಿಗೆ, ನಿಮ್ನ ವರ್ಗದವರಿಗೆ ಪ್ರಾಥಮಿಕ ಅವಶ್ಯಕತೆಗಳಾದ ಅನ್ನ, ಬಟ್ಟೆ, ವಸತಿ ಸೌಕರ್ಯಗಳು ಸಿಗದೆ ಹೋಗಿ ಹೇಗೆ ದುಃಖ-ದುಮ್ಮಾನದ, ನೋವು - ಸಂಕಟದ ಸ್ಥಿತಿಯಲ್ಲಿ ಬಳಲುತ್ತಾರೆಂಬುದನ್ನು ಅರ್ಥವತ್ತಾಗಿ ಧ್ವನಿಸುತ್ತವೆ. ಸರ್ವಾಧಿಕಾರ ವ್ಯವಸ್ಥೆಯಲ್ಲಿ ಈ ದೇಶದ ಜನಸಾಮಾನ್ಯನರು, ದೀನ ದಲಿತರು, ರಾಜನ ಮತ್ತು ಪುರೋಹಿತ ಶಾಹಿಯ ಸುಖ ಜೀವನಕ್ಕಾಗಿ ಕೇವಲ ದುಡಿಯುವ ಗುಲಾಮರಾಗಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಬಂದು, ಪ್ರಜಾ ಪ್ರಭುತ್ವ ವ್ಯವಸ್ಥೆ ಬಂದಾದ ಮೇಲೆ ಈ ರಾಜ- ಸೇವಕ ವ್ಯವಸ್ಥೆ ಹಿಂದಾಗಿ ಜನ ಸಾಮಾನ್ಯರು, ಶೋಷಿತರು, ಶೋಷಣೆಯಿಂದ ವಿಮೋಚನೆ ಪಡೆಯುತ್ತಾರೆಂದು ಭಾವಿಸಲಾಗಿತ್ತು. ಆದರೆ ನಮ್ಮ ದೇಶದಲ್ಲಿ ಸ್ವಾತಂತ್ರ್ಯವೆಂಬುದು ಹಣವುಳ್ಳವರಿಗೆ, ಅಧಿಕಾರಶಾಹಿಗಳಿಗೆ ಮಾತ್ರ ಮೀಸಲಾಯಿತು. ದೀನ-ದಲಿತರು, ಬಡವರು, ಸ್ವಾತಂತ್ರ್ಯದ ಸುಖ- ಸವಲತ್ತುಗಳನ್ನು ಕನಸಿನಲ್ಲಿ ಮಾತ್ರ ಅನುಭವಿಸುವಂತಾಯಿತು. " ಪ್ರಜೆಯೇ ಪ್ರಭು'' ಎಂಬು ಪ್ರಜಾಪ್ರಭುತ್ವ ವ್ಯವಸ್ಥೆ ದೊಡ್ಡ ವ್ಯಂಗ್ಯವಾಯಿತು. ಪ್ರಜಾಪ್ರಭುತ್ವದ ಮುಖವಾಡದಲ್ಲಿ ಸರ್ವಾಧಿಕಾರ, ದಮನಕಾರಿ ಪ್ರವೃತ್ತಿ ರಾರಾಜಿಸಿ ದುಡಿಯುವ ವರ್ಗವನ್ನು, ಜನ ಸಾಮಾನ್ಯರನ್ನು ದೀನ ದಲಿತರನ್ನು ಅಧೋಗತಿಗೆ ತಳ್ಳಲ್ಪಾಯಿತು. ಇವರ ಸ್ಪಷ್ಟ ಅರಿವು ಇರುವ ಕವಿ ಸಿದ್ದಲಿಂಗಯ್ಯ ಹಲವಾರು ಕವನಗಳಲ್ಲಿ ವ್ಯವಸ್ಥೆಯ ಈ ಮೋಸ ವಂಚನೆಯನ್ನು ಬಯಲಿ ಗೆಳೆದಿದ್ದಾರೆ.

ಗುಡಿಸಲಗಳು ಗುಡುಗುತಿವೆ, ಬಂಗಲೆಗಳು ನಡುಗುತಿವೆ.
ಎಲ್ಲೆಲ್ಲಿಯು ಮೊಳಗುತ್ತಿದೆ. ನವಕ್ರಾಂತಿಯ ಗಾನ

-'ಕ್ರಾಂತಿ ಪದ'

ಇದು 'ಕ್ರಾಂತಿಪದ'ದ ಮೊದಲ ನುಡಿ. ' ಗುಡಿಸಲು' ಬಡವರ, ಬಡತನದ ಕೆಳವರ್ಗದವರ ಸಂಕೇತ. 'ಬಂಗಲೆ' ಶ್ರೀಮಂತಿಕೆಯ, ಸುಖಲೋಲುಪತೆಯ ಸಂಕೇತ. ಇಲ್ಲಿಯುವರೆಗೂ ಬಂಗಲೆಗಳು ಗುಡಿಸಲುಗಳನ್ನು

ತುಳಿಯುತ್ತ,ಶೋಷಣೆ ಮಾಡುತ್ತ ಬಂದಿವೆ. ಆದರೆ ಈಗ ಕಾಲ ಬದಲಾಗತೊಡಗಿದೆ. ಶೋಷಿತ ಜನರಿಗೆ ನಿಧಾನವಾಗಿ ಪ್ರಜ್ಞೆ ಮೂಢತೊಡಗಿವೆ. ಆದ್ದರಿಂದ ಶತಮಾನಗಳಿಂದ ತುಳಿತಕ್ಕೆ ಒಳಗಾಗಿದ್ದ ಗುಡಿಸಲುಗಳು ಗುಡುಗಲು ಶುರು ಮಾಡಿದೆ.

ಗುಡಿಸಲುಗಳು ಆ ನೋವು-ಸಂಕಟಗಳ ಆಕ್ರೋಶದ ಗುಡುಗಿಗೆ ಸೊಕ್ಕಿದ ಬಂಗಲೆಗಳು ನಡುಗತೊಡಗಿವೆ. ಎಲ್ಲೆಲ್ಲಿಯೂ ನವಕ್ರಾಂತಿಯ ಗಾನ ಕವಿಗೆ ಕೇಳತೊಡಗಿದೆ. ಸಮಾಜದಲ್ಲಿ ವರ್ಗಗಳ ನಡುವಿನ ಅಂತರ ಹೆಚ್ಚಾಗುತ್ತಾ ಹೋದಂತೆಲ್ಲ ವರ್ಗ ಸಂಘರ್ಷ ಅನಿವಾರ್ಯವಾದುದು ಎಂಬ ಸತ್ಯವನ್ನೂ ಕವಿ ಹೇಳ ಹೊರಟಿದ್ದಾರೆ. ಆದ್ದರಿಂದ 'ಅಸಮಾನತೆ ಆಗುತ್ತಿದ್ದ ಕ್ರಾಂತಿಗೆ ಸೋಪಾನ' ಎಂಬ ಮಾತು ಇಲ್ಲಿ ಧ್ವನಿಪೂರ್ಣ ಕವನದ ಮುಂದಿನ ನುಡಿ ಕ್ರಾಂತಿಯ ತೀವ್ರತೆಯನ್ನು ವ್ಯಂಜಿಸುತ್ತದೆ. ಶ್ರಮಿಕ ವರ್ಗದ ಬೆವರ ಹನಿ ಬೆಂಕಿಯಾಗಿ ಸಿಡಿದು ಶೋಷಕರನ್ನು ಕಂಗೆಡಿಸುವ ಚಿತ್ರ ಅರ್ಥಗರ್ಭಿತವಾಗಿದೆ. ಕವನದ ಮುಂದಿನ ನುಡಿ ಹೀಗಿದೆ.

ಕವನದ ಮುಂದಿನ ನುಡಿಗಳು ಕ್ರಾಂತಿ ಪಥದಲ್ಲಿ ಅಡ್ಡ ಬರುವಂಥ " ಪಟ್ಟಭದ್ರಹಿತ'ವನ್ನು 'ಕರ್ಮಕಥೆ'ಯನ್ನು ಹಿಮ್ಮೆಟ್ಟಿಸಿ ಬದಲಾವಣೆಗಾಗಿ ಹೋರಾಟ ಮಾಡುವ ಸ್ಥೈರ್ಯವನ್ನು ಪ್ರಕಟಪಡಿಸುತ್ತವೆ. ಗೋರಿಯ ಕಿರು ಬಿರುಕಿನಲ್ಲೂ 'ದಲಿತರಾಗ' ಕ್ರಾಂತಿಯ ಗುನುಗುವುದು 'ಸುಡುಗಾಡಿನ ಬಿರುಗಾಳಿ ಕ್ರಾಂತಿಗೀತೆ' ಹಾಡುವುದು ವರ್ಗ ಸಂಘರ್ಷದ ಕ್ರಾಂತಿಯ ತೀವ್ರತೆ, ರೌದ್ರತೆಗಳನ್ನು ಧ್ವನಿಸುತ್ತದೆ.

ಇಕ್ರುಲಾ ವದೀರ್ಲಾ
ಈ ನನ್ ಮಕ್ಕಳ ಚರ್ಮ ಎಬ್ರುಲಾ

-ಒಂದು ಪದ

ಇದು 'ಒಂದು ಪದ ' ಎಂಬ ಕವನದ ಪೂರ್ವಾರ್ಧ. ನಮ್ಮ ಭಾರತದೇಶದಲ್ಲಿ ಜಾತಿ ಪದ್ಧತಿಯ ಕಟ್ಟುನಿಟ್ಟಿನ ಅನುಷ್ಠಾನದಿಂದಾಗಿ ನಿಮ್ನ ಜಾತಿಯವರು, ದಲಿತರು, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಮತ್ತ ಸಾಂಸ್ಕೃತಿಕ ಸಮಾತನೆ, ಸವಲತ್ತುಗಳಿಂದ ವಂಚಿತರಾಗಿ ಯಾವ ರೀತಿಯ ಅಸಮಾನತೆಯ ಕೂಪದಲ್ಲಿ ತಳ್ಳಲ್ಪಟ್ಟಿದ್ದಾರೆಂಬುದನ್ನು ನೋವು-ದುಃಖಗಳನ್ನು ಅನುಭವಿಸುತ್ತಿದ್ದಾರೆಂಬುದನ್ನು ಈ ಕವನ ತಿಳಿಯಪಡಿಸುತ್ತದೆ. ಆದರೆ ಕವನದಲ್ಲಿ ಬಳಕೆಯಾಗಿರುವ ಭಾಷೆಯ ಬಗ್ಗೆ ಭಿನ್ನಾಭಿಪ್ರಾಯ, ವಾದ-ವಿವಾದಗಳು ಇವೆ. " ಇಕ್ರುಲಾ ವದೀರ್ಲಾ'' ಎಂದು ಕಾವ್ಯದಲ್ಲಿ ಪದ ಪ್ರಯೋಗ ಮಾಡಿದ ಕೂಡಲೇ ಇದು ಸೊಕ್ಕಿನ, ಅಹಂಕಾರದ ಸೇಡಿನಮನೋಭಾವವನ್ನು ವ್ಯಕ್ತಪಡಿಸುವುದಿಲ್ಲ. ಜಾತಿ ಕೀಳು ಎಂಬ ಕಾರಣದಿಂದಾಗಿ ನಿರಂತರವಾಗಿ ಇಕ್ಕಿಸಿಕೊಂಡವರು, ಒದಿಸಿಕೊಂಡವರು ತಮಗೆ ಬಾಯಿ ಬಂದಾಗ ತಮ್ಮ ನೋವು, ಅಸಹಾಯಕತೆಗಳನ್ನು ಕಾವ್ಯದಲ್ಲಿ ಇಂಥ ಪದ ಪ್ರಯೋಗಗಳ ಮೂಲಕ ಪ್ರಕಟಪಡಿಸಿದರೆ, ಅವರನ್ನು ಇಕ್ಕಿದವರು ಒದ್ದವರು ಅನಗತ್ಯ ಚಿಂತೆ ಮಾಡುವುದು, ಕೋಪಿಸಿಕೊಳ್ಳುವುದು ಬೇಕಿಲ್ಲವೆಂಬುದು ನನ್ನ ಅನಿಸಿಕೆ ಜೊತೆಗೆ ಇಂಥ ಪದ ಪ್ರಯೋಗಗಳ ಕಾವ್ಯದಲ್ಲಿ ಆಯಾ ಸಂದರ್ಭದ ಭಾವಸ್ಫುಟತೆಗೆ, ಆಕ್ರೋಶ ನೋವಿನಂಥ ಅನುಭವಗಳ ಕಂಡರಣೆಗ ಪ್ರತಿಮೆ, ಸಂಕೇತಗಳಾಗಿ ಬಂದಿರುತ್ತವೆ.

ಸಿದ್ಧಲಿಂಗಯ್ಯನವರ ಇಂಥ ಅಸಲೀ ಭಾಷಾ ಪ್ರಯೋಗದಲ್ಲೇ ಅವರ ಪ್ರತಿಭೆಯ ಸ್ವೋಪಜ್ಞತೆಯನ್ನು ನಾವು ಕಾಣಬಹುದಾಗಿದೆ. ಹನ್ನೆರಡನೆಯ ಶತಮಾನದ ವಚನಕಾರ ಅಂಬಿಗರ ಚೌಡಯ್ಯನ ವಚನಗಳಲ್ಲಿಯೂ ಇಂಥ, ಇದಕ್ಕಿಂತಲೂ ಕಠೋರವೆನ್ನಬಹುದಾದ ಪದ ಪ್ರಯೋಗ ಆಗಿರುವುದನ್ನು ನಾವು ಸಂದರ್ಭದ ಔಚಿತ್ಯದಿಂದಾಗಿ ಅರಗಿಸಿಕೊಂಡಿದ್ದೇವೆ. ಮೆಚ್ಚಿಕೊಂಡಿದ್ದೇವೆ.

ಕ್ಸರುಗ್ತಿನಿ ಕ್ಸನೆಗೊಂಡ್ಸಲ ಕೂಗ್ತಿನಿ

ಬಡ್ಡೀ ದುಡ್ನೋನ್ ಬಂಗ್ಲೆ ಕೈಳ್ಗೆ

- 'ಒಂದು ಮೂಳೆಯ ಹಾಡು'

ಇದು 'ಒಂದು ಮೂಳೆಯ ಹಾಡು' ಎಂಬ ಪದ್ಯದ ಮೊದಲ ಭಾಗ ಇಲ್ಲಿ ಪದ್ಯದ ಹೆಸರೇ ಧ್ವನಿಪೂರ್ಣವಾಗಿದ್ದು, ಎಲ್ಲವನ್ನೂ ಕಳೆದುಕೊಂಡು ಮೂಳೆಯ ಹಂತಕ್ಕೆ ತಲುಪಿರುವ ದಲಿತ ಬದುಕಿನ ಹತಾಶ ಮನೋಭಾವವನ್ನು, ನೋವು, ಸಂಕಟಗಳನ್ನು ಇದು ಅತ್ಯಂತ ಧ್ವನಿಪೂರ್ಣವಾಗಿ ವ್ಯಂಜಿಸುತ್ತದೆ. ಇಲ್ಲಿ ಮೂಳೆ, ಗರಿಷ್ಠ ಪ್ರಮಾಣದಲ್ಲಿ ಶೋಷಣೆಗೊಂಡು ಜನಾಂಗದ ಸಂಕೇತವಾಗಿದೆ. ಇಂಥ ಮೂಳೆ ತಮ್ಮ ರಕ್ತ ಮಾಂಸವನ್ನು ಕಿತ್ತು ತಿಂದವರ ವಿರುದ್ಧ ಸಹಜವಾಗಿಯೇ ಬಂಡೆದ್ದಿದ ಬಡ ದಲಿತರಿಗೆ ಹೆಚ್ಚಿನ ಬಡ್ಡಿಯಲ್ಲಿ ಸಾಲಕೊಟ್ಟ 'ಧಣಿ' ಅಂಥ ದಲಿತರನ್ನು ಜೀವನಪರ್ಯಂತ ಜೀತಕ್ಕೆ ಇರಿಸಿಕೊಳ್ಳುವುದು ಈ ದೇಶದ ಒಂದು ಮಾಮೂಲಿ ದಂಧೆಯಾಗಿದೆ. ಆದರೆ ಈಗ ಮೂಳೆಗೆ ಸಾವಕಾಶವಾಗಿ ಅರಿವು ಮೂಡ ತೊಡಗಿದೆ. ಆದ್ದರಿಂದ ಬಡ್ಡಿ ದುಡ್ನೋನ್ ಬಂಗ್ಲೆಕೈಳ್ಗೆ ತಳಾದೀಗ್ ಸಿಕ್ಕಿರೋ ಮೂಳೆ ಸಿಡಿಯಲು ಆರಂಭಿಸಿದೆ, ಸಿಡಿದು ವರ್ಗಭೇದವನ್ನು ಅಳಿಸಲು ಅಣಿಯಾಗಿದೆ. ಇದು ವರ್ಗರಹಿತವಾದ ಸಮಾಜ ರಚನೆಗೆ ಪೂರಕವಾದ ಆಶಯವನ್ನು ಹೊಂದಿರುವ ಒಂದು ಒಳ್ಳೆಯ ಕವನ. ಕವನದ ಉತ್ತರಾರ್ಧದಲ್ಲಿ ಬರುವ "ಗಂಟ್ಮೂಳೆ ಕೊಬ್ಬ", 'ಸಾವ್ಕಾರಿ ರಕ್ತ', ' ಸಾವ್ಕಾರಿಮಯ್ಯ' ಎಂಬಂಥ ಮಾತುಗಳು ಮೇಲು ವರ್ಗದ ದಬ್ಬಾಳಿಕೆಯನ್ನು ಹೇಳಿದರೆ, ' ಸೌದೆಸಿಗದಂಗೆ ಸಿಗಿತೀನಿ', 'ಕಳ್ಳುಪಚ್ಚಿಬಗಿತೀನಿ', 'ಕುಟ್ತಿನಿ ಕುಡಿಸಿ ಗಟಗಟ'- ಈ ರೀತಿಯ ಮಾತುಗಳು ತೀವ್ರ ಪ್ರತಿಭಟನೆಯ ಸಂಕೇತವಾಗಿ ಬಂದಿರುವುದನ್ನು ಕಾಣುತ್ತೇವೆ.

ನಾ ಮೂಳೆ, ನಾ ಇಂಗೇ ಇರಲ್ಲ

ಕೂಗ್ತೀನಿ, ಸಿಡಿತಿನಿ, ಮನುಷ್ಯ ಆಯ್ತಿನಿ.

ಕವನದ ಕೊನೆಯ ಪಂಕ್ತಿಗಳಿವು. ಮೂಳೆ ತನ್ನ ಚಿಂತಾಜನಕ ಸ್ಥಿತಿಯಿಂದ ಬಿಡಿಸಿಕೊಂಡು ಸಿಡಿದು ಮನುಷ್ಯನಾಗುವ ಆಶಾಭಾವನೆಯನ್ನು ವ್ಯಕ್ತಪಡಿಸುತ್ತದೆ. ಇಲ್ಲಿ ಹೀಗೆ ಇಡೀ ಕವನ ವರ್ಗ ಪ್ರಜ್ಞೆಯನ್ನು ಒಳಗೊಂಡಿದ್ದು, ಶೋಷಿತ ವರ್ಗ, ಶೋಷಕ ವರ್ಗದ ವಿರುದ್ಧ ಬಂಡೆದ್ದಿರುವುದನ್ನು ಕಲಾತ್ಮಕವಾಗಿ, ಧ್ವನಿಪೂರ್ಣವಾಗಿ ಹೇಳುತ್ತದೆ. ಇಲ್ಲಿನ ಭಾಷೆಗೆ ನಿಜವಾದ ಮಣ್ಣಿನ ವಾಸನೆ ಇದ್ದು, ಇಂಥ ಭಾಷಾ ಪ್ರಯೋಗದಿಂದ ಕವನಕ್ಕೆ ಹೊಸ ಶಕ್ತಿ, ಚೈತನ್ಯಗಳು, ಸಂದಾಯವಾಗಿವೆ. ಇಲ್ಲಿ ಸಿದ್ದಲಿಂಗಯ್ಯ ತನ್ನ ಬದುಕಿಗೆ ಹತ್ತಿರವಾದ ಪರಿಭಾಷೆಯ ಮೂಲಕ, ಪ್ರತಿಮೆ-ಸಂಕೇತಗಳ ಮೂಲಕ ಮಾತನಾಡಿರುವುದು ಕವನ ಶಕ್ತಿಯುತವಾಗಿ, ಸತ್ವಶಾಲಿಯಾಗಿ ಮೂಡಿ ಬರಲು ಸಾಧ್ಯವಾಗಿದೆ. ಈ ಸಂಕಲನದ 'ಸತ್ತೋಗೋರಾ', ಗಳ್ಳಗಳು', 'ಹಬ್ಬ', 'ಸುಂಟರಗಾಳಿ', 'ಹಣೆಬರವು' ಎಂಬ ನಾಟಕವು 'ನಗ್ಬೇಕು', 'ನಾವು' -ಮುಂತಾದ ಕವನಗಳೂ ದಲಿತ ಜನಾಂಗದ, ಶೋಷಿತ ಸಮುದಾಯದ ನೋವು-ಸಂಕಟಗಳನ್ನು, ಆಕ್ರೋಶ- ಆವೇಶಗಳನ್ನು, ವ್ಯವಸ್ಥೆಯ ಮೋಸ, ಕುತಂತ್ರಗಳನ್ನು, ಶೋಷಣೆಯ ಪರಿಯನ್ನು ಅತ್ಯಂತ ಮಾರ್ಮಿಕವಾಗಿ ಶಬ್ದ ಚಿತ್ರಗಳ ಮೂಲಕ ಕಟ್ಟಿಕೊಡುತ್ತವೆ.

ಒಟ್ಟಿನಲ್ಲಿ ನವ್ಯ ಕಾವ್ಯದ ಅವಸಾನ ಕಾಲದಲ್ಲಿ ತನ್ನೆಲ್ಲ ಒರಗು ಅಸಲೀತನಗಳೊಂದಿಗೆ ಮೂಡಿ ಬಂದಿರುವ ಈ ಕವನ ಸಂಕಲನ ಕನ್ನಡ ನೆಲಕ್ಕೆ ಹೊಸತೊಂದು ಅನುಭವವನ್ನು ವಿಶಿಷ್ಟಕಲಾ ಮಾದರಿಯನ್ನು ನೀಡಿತೆಂದು ಹೇಳಬೇಕು.

" ಸಾವಿರಾರು ನದಿಗಳು" ಸಿದ್ದಲಿಂಗಯ್ಯನವರ ಎರಡನೆಯ ಕವನ ಸಂಕಲನ 'ಹೊಲೆ ಮಾದಿಗರ ಹಾಡು' ಕವನ ಸಂಕಲನದ ಆಶಯ. ಧೋರಣೆಗಳು ಇಲ್ಲಿ ಗಡುಸಲ್ಲದ ನಯವಾದ ಭಾಷೆಯಲ್ಲಿ ಪ್ರಕಟಗೊಂಡಿವೆ. "ಹೊಲೆ ಮಾದಿಗರ ಹಾಡಿನ' ಸತ್ವಶಾಲಿ ಭಾಷಾ ಪ್ರಯೋಗವನ್ನು ಸಿದ್ದಲಿಂಗಯ್ಯನವರು ಇಲ್ಲಿ ಯಾವ ಕಾರಣಕ್ಕಾಗಿ ತೊರೆದರೆಂಬುದು ಆಶ್ಚರ್ಯದ ಸಂಗತಿಯಾಗಿ ಉಳಿದು ಬಿಡುತ್ತದೆ. 'ಹೊಲೆ ಮಾದಿಗರ ಹಾಡು' ಕವನ ಸಂಕಲನದ ಭಾಷೆಯನ್ನು ಕುರಿತಂತೆ

ಬಂದ ಸಂಪ್ರದಾಯವಾದಿಗಳ ಟೀಕೆಯನ್ನು ಗಮನಿಸಿ ಇವರು ತಮ್ಮ ಮುಂದಿನ ಕವನ ಸಂಕಲನದಲ್ಲಿ ಭಾಷೆಯನ್ನು ನಯಗೊಳಿಸಿರಬೇಕೆಂದು ಸಂದೇಹ ಕಾಡ ತೊಡಗುತ್ತವೆ. ಆಡು ನುಡಿಯ ಸತ್ವಶಾಲಿ ಭಾಷೆಯನ್ನು ಕೈ ಬಿಟ್ಟು ಶಿಷ್ಟ ಸಂಸ್ಕೃತಿಯ ನಯ-ನಾಜೂಕಿನ ಮೃದು ಭಾಷೆಯನ್ನು ಬಳಸಿಕೊಂಡರೆ ಕಾವ್ಯಕ್ಕೆ ಬೇರೆ ರೀತಿಯ ವಿಶಿಷ್ಟವೆನ್ನಬಹುದಾದ ಸೂಕ್ಷ್ಮತೆ, ಸ್ತೋಪ್ರಜ್ಞತೆಗಳು ಪ್ರಾಪ್ತವಾಗುತ್ತವೆಂಬುದು ನಂಬುವಂಥ ಸಂಗತಿಯಲ್ಲ.

ಶಿಷ್ಟ ಸಂಸ್ಕೃತಿಯ ನಯನಾಜೂಕಿನ ಭಾಷಾ - ವ್ಯಾಮೋಹಕ್ಕೆ ಒಳಗಾದಾಗ ಒಮ್ಮೊಮ್ಮೆ ಅನುಭವವೂ ನಯನಾಜೂಕಿನ ಮುಸುಕಿನಲ್ಲಿ ದಟ್ಟವಾಗಿ ಪ್ರಕಟಗೊಳ್ಳಲು ಸಾಧ್ಯವಾಗುವುದಿಲ್ಲ. ಈ ಪರಿಸ್ಥಿತಿ ಸಿದ್ದಲಿಂಗಯ್ಯನವರ 'ಸಾವಿರಾರು ನದಿಗಳು' ಮತ್ತು 'ಕಪ್ಪು ಕಾಡಿನ ಹಾಡು' ಸಂಕಲನಗಳಿಗೆ ಬಂದಿವೆ ಎಂದರೆ ತಪ್ಪಾಗಲಾರದು. ಶೋಷಣೆ, ಅನ್ಯಾಯಗಳನ್ನು ತಡೆಯಲು ದಲಿತರು, ಶೋಷಿತರು, ಸಾವಿರಾರು ನದಿಯ ಶಕ್ತಿ ಪಡೆದು ಸಾಂಘಿಕ ಹೋರಾಟ ನಡೆಸಬೇಕೆಂಬ ಆಶಯವನ್ನು ''ಸಾವಿರಾರು ನದಿಗಳು'' ಎಂಬ ಕವನ ಧ್ವನಿಸುತ್ತದೆ. ಇದೇ ಆಶಯವನ್ನು 'ಕೆಂಪು ಸೂರ್ಯ'' ಕವನದಲ್ಲೂ ಕಾಣಬಹುದು. ತುರ್ತು ಪರಿಸ್ಥಿತಿಯ ಕರಾಳ ಅಧ್ಯಾಯವನ್ನು ಆರಂಭ ಮಾಡಿ, ದೇಶದ ಜನಗಳ ಬಾಯಿಗೆ ಬೀಗ ಹಾಕಿ, ಪ್ರಜೆಗಳ ಮೂಲಭೂತ ಹಕ್ಕು ಮತ್ತು ಸ್ವಾತಂತ್ರ್ಯವನ್ನು ಕಿತ್ತುಕೊಂಡು ಇಡೀ ದೇಶವನ್ನು ಜೈಲು ಮಾಡಿದ್ದ. ವ್ಯವಸ್ಥೆಯ ಸರ್ವಾಧಿಕಾರಿ ಪ್ರವೃತ್ತಿಯನ್ನು ಲಘು ಹಾಸ್ಯದ ಮೂಲಕ ಗೇಲಿ ಮಾಡುತ್ತದೆ. ''ಕರಾಳ ರಾಣಿಯ ಕಥೆ' ಎಂಬ ಕವನ, ಜನರ ಮೂಢ ನಂಬಿಕೆ, ಅಜ್ಞಾನವನ್ನು ಲೇವಡಿ ಮಾಡುತ್ತಲೇ, ಧರ್ಮ ಯಾವ ರೀತಿ ಜನರನ್ನು ಮೋಸಗೊಳಿಸುತ್ತದೆಂಬ ಅಂಶವನ್ನು ತಿಳಿಯಪಡಿಸುತ್ತದೆ. ''ಕತ್ತೆ ಮತ್ತು ಧರ್ಮ'' ಎಂಬ ಕವನ 'ಬೆಲ್ಚಿಯ ಹಾಡು' ಮತ್ತು 'ಬಿದ್ದಾವು ಮನೆಗಳು'ಕವನಗಳು ಶ್ರೀಮಂತರು ಸುಖಲೋಲುಪತೆಗೆ, ಅವರ ಧಿಮಾಕು, ದೌಲತ್ತುಗಳಿಗೆ, ಬಡವರ ಶೋಷಿತರ ಬೆವರು, ರಕ್ತ-ಮಾಂಸಗಳು ಬುನಾದಿ ಎಂಬ ಅಂಶವನ್ನು ತಿಳಿಸುತ್ತ ಈ ಆಳುವ ವರ್ಗ ಶ್ರೀಮಂತ ವರ್ಗ ನಡೆಸುವ ಜನ ವಿರೋಧಿ ದಮನಕಾರಿ ಪ್ರವೃತ್ತಿಗಳನ್ನು ಖಂಡಿಸುತ್ತದೆ. 'ಅಲ್ಲೆ ಕುಂತವರೆ' ಎಂಬ ಖಂಡಕಾವ್ಯ ಈ ಕವನ ಸಂಕಲನದ ಪ್ರಧಾನ ಕಾವ್ಯವಾಗಿವೆ.ವ್ಯವಸ್ಥೆಯ, ಮೋಸ, ಅನ್ಯಾಯಗಳನ್ನು ಹಲವಾರು ಸಾರ್ಥಕ ಪ್ರತಿಮೆ, ಸಂಕೇತಗಳ ಮೂಲಕ ವಿವಿಧ ಮಜಲುಗಳಲ್ಲಿ ಅನಾವರಣಗೊಳಿಸುವ ಉತ್ತಮ ಕಾವ್ಯವಿದು. 'ಕಪ್ಪು ಕಾಡಿನ ಹಾಡು' ಕೃತಿಯಲ್ಲಿ ಸಂಕಲನಗೊಂಡಿರುವ ಪದ್ಯಗಳು ಚೋಮ, ತಬರನ ಕಥೆ, ಪಂಚಮ, ಭಾರತೀಪುರ, ನೆಲಸಮ, ಪಂಚತಾರಾ ಮುಂತಾದ ಬೇರೆ ಬೇರೆ ನಾಟಕಗಳಿಗೆ ಆಯಾ ಸಂದರ್ಭದ, ಭಾವ ಸ್ಫುಟತೆಗಾಗಿ ಬರೆದ ರಂಗಗೀತೆಗಳು, ಈ ಹಾಡುಗಳಲ್ಲಿ ಈ ಹಿಂದಿನ ಕವನ ಸಂಕಲನಗಳಲ್ಲಿ ಕಾಣಸಿಗದ ವಿಶಿಷ್ಟವಾದ ಅನುಭವಗಳೇನೂ ಇಲ್ಲ. ''ನಲವತ್ತೇಳರ ಸ್ವಾತಂತ್ರ್ಯ' ಮತ್ತು 'ಸಾಮಾನ್ಯನ ಹಾಡು' - ಈ ಸಂಕಲನದ ಪ್ರಮುಖ ಪದ್ಯಗಳು. ಬಡವರಿಗೆ, ಜನಸಾಮಾನ್ಯರಿಗೆ ''ನಲವತ್ತೇಳರ ಸ್ವಾತಂತ್ರ್ಯ' ಬರೆದ ಕೇವಲ ಶ್ರೀಮಂತರಿಗೆ, ಹಣವುಳ್ಳವರಿಗೆ, ರಾಜಕಾರಣಿ ಗಳಿಗೆ, ಅಧಿಕಾರಿಗಳಿಗೆ, ಬಂದಿರುವ ದುರಂತವನ್ನು ವ್ಯಂಗ್ಯದ ದಾಟಿಯಲ್ಲಿ ಈ ಎರಡೂ ಪದ್ಯಗಳು ಸಾದರಪಡಿಸುತ್ತವೆ. ರಾಜಕಾರಣಿಗಳ ಮೋಸವನ್ನೂ, ಅವರ ಕುಟಿಲ ತಂತ್ರಗಳನ್ನೂ ಬಯಲಿಗೆಳೆಯುತ್ತಾ, ಶೋಷಿತರು ತಮ್ಮ ಮೇಲಿನ ಅನ್ಯಾಯ, ಶೋಷಣೆಯನ್ನು ತಡೆಯಲು ಸಿದ್ಧರಾಗಬೇಕೆಂಬ ಆಶಯವನ್ನು 'ತಬರನ ಹಾಡು' ವ್ಯಕ್ತಪಡಿಸುತ್ತದೆ. 'ಸಂಪಿಗೆಯ ಮರದಲ್ಲಿ', 'ಕೊಳಗೇರಿಯ ಹಾಡು' ಮತ್ತು ' ದಾರಿ ಯಾವುದೋ' ಪದ್ಯಗಳು ಶೋಷಿತರ, ಬಡವರ ಪರವಾದ ಚಿಂತನೆ ಕಾಳಜಿಯನ್ನು ಹೊಂದಿದೆ. 'ಚೋಮನ 'ನಾಟಕದ ಎರಡು ಹಾಡುಗಳು ದಲಿತ ಜಗತ್ತಿನ ಅಜ್ಞಾನ ಅಸಹಾಯಕತೆಯನ್ನು ಮತ್ತು ಉಳ್ಳವರ ಅಹಂಕಾರ, ಬಿಗುಮಾನವನ್ನು ತಿಳಿಸುತ್ತದೆ.

ಸಿದ್ಧಲಿಂಗಯ್ಯನವರು ಈ ಮೂರು ಸಂಕಲನಗಳಲ್ಲಿ ಇರುವ 'ಕಾಂತ್ರಿಪದ', 'ಸಾವಿರಾರು ನದಿಗಳು', ' ಅಲ್ಲೆ ಕುಂತವರೆ', 'ದಲಿತರು ಬರವರು', ''ನಲವತ್ತೇಳರ ಸ್ವಾತಂತ್ರ್ಯ' ಮುಂತಾದ ಹಲವಾರು ಪ್ರಮುಖ ಕವನಗಳನ್ನು ದಲಿತ ಸಂಘರ್ಷ ಸಮಿತಿಯ, ಜನಮನ ತಂಡದ ರೈತ ಸಂಘದ ಹೀಗೆ ಹಲವಾರು ಎಡಪಂಥೀಯ ಸಂಘ-ಸಂಸ್ಥೆಗಳ ಗೆಳೆಯರು ಗಟ್ಟಿಯಾಗಿ ಲಯಬದ್ಧವಾಗಿ ಹಾಡಿ ಕವನದ ಭಾವ, ಅರ್ಥ, ಆಶಯ, ಧೋರಣೆಗಳನ್ನು ಸಾಮಾನ್ಯ ಜನರಿಗೆ ತಲುಪಿಸುವಲ್ಲಿ ಯಶಸ್ಸು ಕಂಡಿದ್ದಾರೆ. ಹೀಗಾಗಿ ಸಿದ್ಧಲಿಂಗಯ್ಯ ತಮ್ಮ ಜನಪರ ನಿಲುವಿನ ಹಾಡುಗಳಿಂದಾಗಿ ಕರ್ನಾಟಕ ತುಂಬೆಲ್ಲ ಪ್ರಸಿದ್ಧರಾಗಿದ್ದಾರೆ; ಪ್ರಮುಖರೆನಿಸಿದ್ದಾರೆ.

ಮಹಾಭಾರತದ ಏಕಲವ್ಯವನ್ನು ಕುರಿತಂತೆ ವಿಭಿನ್ನ ಧೋರಣೆಯ ಹಲವಾರು ನಾಟಕಗಳು ಕನ್ನಡದಲ್ಲಿ ರಚನೆಗೊಂಡಿವೆ. ಇವುಗಳಲ್ಲಿ ಟಿ. ಪಿ. ಕೈಲಾಸಂ ಅವರ 'ಏಕಲವ್ಯ' (ಪರ್ಪಸ್), ಗೋವಿಂದ ಪೈಗಳ ''ಹೆಬ್ಬೆರಳು, 'ಕುವೆಂಪು' ಅವರ 'ಬೆರಳ್‌ಗೆ ಕೊರಳ್' ಮೇಘಮಿತ್ರರ', 'ಎಚ್ಚೆತ್ತ ಏಕಲವ್ಯ ' ಮತ್ತು ಸಿದ್ಧಲಿಂಗಯ್ಯನವರ 'ಏಕಲವ್ಯ'- ನಾಟಕಗಳು ಪ್ರಮುಖವಾದವುಗಳು. ಅಂಬೇಡ್ಕರ್ ವಿಚಾರಧಾರೆಯಿಂದ, ಮಾರ್ಕ್ಸ್‌ವಾದದ ಚಿಂತನೆಗಳಿಂದ ಮತ್ತು ಲೋಹಿಯಾ ವಾದರಿಂದ ಪ್ರಭಾವಗೊಂಡಿರುವ ಸಿದ್ಧಲಿಂಗಯ್ಯನವರು ಜಾತಿ, ಧರ್ಮಗಳ ಅರ್ಥಪೂರ್ಣ ಹಿನ್ನೆಯಲ್ಲಿ ಏಕಲವ್ಯ ಪಾತ್ರದ ವ್ಯಾಖ್ಯಾನಕ್ಕೆ ತೊಡಗಿದ್ದಾರೆ. ಏಕಲವ್ಯ ಕೆಳಜಾತಿಗೆ ಸೇರಿದವನೆಂಬ ಕಾರಣಕ್ಕಾಗಿಯೇ ಇಲ್ಲಿಯೂ ಅವನಿಗೆ ಬಿಲ್ಲುವಿದ್ಯೆಯನ್ನು ನಿರಾಕರಿಸಲಾಗುತ್ತದೆ. ದ್ರೋಣ ಪ್ರತಿಮೆಯ ಮೂಲಕ ಬಿಲ್ಲು ವಿದ್ಯೆಯನ್ನು ಸಂಪಾದಿಸಿದ ಏಕಲವ್ಯನ ಬಲಗೈ ಹೆಬ್ಬೆರಳನ್ನು ದ್ರೋಣ, ವ್ಯವಸ್ಥೆಯ ಕುತಂತ್ರದ ಸಂಕೇತವೆಂಬಂತೆ ಪಡೆದು ಸಣ್ಣವನಾಗುತ್ತಾನೆ. ಆದರೆ ಕೆಳಜಾತಿ, ವರ್ಗದ ನಿಷ್ಠೆ, ಶ್ರದ್ಧೆಯ ಪ್ರತೀಕವಾದ ಏಕಲವ್ಯ ಎಡಗೈ ಸಾಧನೆ ಮಾಡಿ ತನ್ನ ಬಿಲ್ಲು ವಿದ್ಯೆಯಲ್ಲಿ ಮರಳಿ ಪರಿಣಿತಿ, ಪಾಂಡಿತ್ಯವನ್ನು ಸಂಪಾದಿಸಿಕೊಳ್ಳುತ್ತಾನೆ, ಅಧಿಕಾರಗಳಿಕೆಯ ಹವಣಿಕೆಯಲ್ಲಿರುವ ಕೌರವ-ಪಾಂಡವರ ವಿನಂತಿಗೆ ಬೆಲೆಕೊಡದೆ. '' ತನ್ನದು ಜಗತ್ತಿನ ಮೇಲು ಕೀಳಿನ ವಿರುದ್ಧ ಇಲ್ಲದವರ ಪರವಾದ ಹೋರಾಟ'' ಎಂದು ತನ್ನ ನಿಲುವನ್ನು ತಿಳಿಸಿ ಆ ವಿನಂತಿಯನ್ನು ತಿರಸ್ಕರಿಸುತ್ತಾನೆ. ಆ ಮೂಲಕ ತನ್ನ ಶೋಷಿತರ ಪರ ಧೋರಣೆಯನ್ನು ಪ್ರಕಟಪಡಿಸುತ್ತಾನೆ. ಅಸಮಾನತೆ ಪ್ರಕೃತಿ ಸಹಜವೆಂಬ ದ್ರೋಣನ ಮಾನವ ವಿರೋಧಿ ನಿಲುವನ್ನು ಏಕಲವ್ಯ ಸೂಕ್ತ ವಾದದೊಂದಿಗೆ ಒಡೆಯುತ್ತಾನೆ, ಪುರಾಣದ ಮಾನವ ವಿರೋಧಿ ನಿಲುವಿನ ಪರಿಮಿತ ಚೌಕಟ್ಟನ್ನು ಮೀರಿ ನಿಲ್ಲುವ ಈ ನಾಟಕ ಶೋಷಿತ ಜನಾಂಗದ ಪರವಾಗಿ ತನ್ನ ಒಲವು-ನಿಲುವುಗಳಿಗೆ ಸ್ಪಂದಿಸಿ, ಜನಾಂಗ ಪ್ರಜ್ಞೆ ಹೊಂದಿದ ಧೀಮಂತ ನಾಯಕನಾಗಿ ರೂಪುಗೊಂಡಿದ್ದಾನೆ. ಈ ದೃಷ್ಟಿಯಿಂದ ಇದೊಂದು ಉತ್ತಮ ನಾಟಕವೆಂದು ಹೇಳಬಹುದು. ಪಂಚಮ, ನೆಲಸಮ ನಾಟಕಗಳೂ ಕೆಳವರ್ಗಜಾತಿಗಳ ಹಿತವನ್ನು ಎತ್ತಿ ಹಿಡಿಯುವ ಒಳ್ಳೆಯ ನಾಟಕಗಳು.

'' ಅವತಾರಗಳು'' ಸಿದ್ಧಲಿಂಗಯ್ಯನವರ ವೈಚಾರಿಕ ಗ್ರಂಥ. ಈ ಗ್ರಂಥವನ್ನು ಸಿದ್ಧಲಿಂಗಯ್ಯ ಬರೆದಿದ್ದಾರೆಂದರೆ, ಇದು ಭಗವಂತನ ಅಸ್ತಿತ್ವವನ್ನು, ದಶಾವತಾರದ ಕಲ್ಪನೆಯನ್ನು ವೈಜ್ಞಾನಿಕ ವಿಚಕ್ಷಣೆಗೆ ಒಳಪಡಿಸಿ ಅಲ್ಲಿನ ಸತ್ಯ ಸಂಗತಿಯನ್ನು ಬೆಳಕಿಗೆ ಹಿಡಿಯುವ ಕೃತಿ ಇರಬಹುದೆಂದು ಸಹಜವಾಗಿಯೇ ಅನಿಸುತ್ತದೆ. ಆದರೆ ಇಲ್ಲಿ ದೇವರ ಅಸ್ತಿತ್ವವನ್ನು, ದಶಾವತಾರದ ಕಲ್ಪನೆಯನ್ನು, ವೈಜ್ಞಾನಿಕ ವಿಚಕ್ಷಣೆಗೆ ವೈಚಾರಿಕತೆ ಒರೆಗಲ್ಲಿಗೆ ಹಚ್ಚುವ ನಿಷ್ಠುರ ಸತ್ಯ ಶೋಧಕ ಮನೋಧರ್ಮಅಷ್ಟಾಗಿ ಕಾಣುವುದಿಲ್ಲ. ಕರ್ನಾಟಕದ ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಕಂಡು ಬರುವ ವಿವಿಧ ಬಗೆಯ ಜನಪದ ದೇವರುಗಳ ಸತ್ಯಾ-ಸತ್ಯತೆಗಳನ್ನು ಒರಗೆ ಹಚ್ಚುವ, ಮೋಸ -ನಕಲೀತನಗಳನ್ನು ಬಯಲಿಗೆಳೆಯುವ ಗೇಲಿ ಗುಣವಿದೆ. ದೇವರ ಅಸ್ತಿತ್ವವನ್ನು ಕುರಿತಂತೆ ಎ. ಎನ್. ಮೂರ್ತಿರಾವ್ ಅವರು 'ದೇವರು ಕೃತಿ ಮತ್ತು ದೇವರು ದೆವ್ವ ವಿಜ್ಞಾನ ಎಂಬ ಡಾ. ಕೋವೂರ್ ಅವರ ಗ್ರಂಥ ಇವು ಅಧಿಕೃತ ಗ್ರಂಥಗಳು. ಇಲ್ಲಿ ದೇವರ ಅಸ್ತಿತ್ವವನ್ನು ಮತ್ತು ಅವತಾರವಾದವನ್ನು

ವೈಜ್ಞಾನಿಕವಾಗಿ ವಿಚಕ್ಷಣೆಗೆ ಒಳಪಡಿಸಿ, ವೈಚಾರಿಕತೆಯ ಒಲೆಗಲ್ಲಿಗೆ ಹಚ್ಚಿ ಸತ್ಯಶೋಧನೆಯ ಕೆಲಸವನ್ನು ನಿಷ್ಠುರವಾಗಿ ಕೈಗೊಂಡು ಆ ಅಸ್ತಿತ್ವ, ನಂಬಿಕೆಗಳನ್ನು ಅಲ್ಲಗಳೆಯಲಾಗಿದೆ. " ಅವತಾರಗಳು'' ಗ್ರಂಥ ಈ ಪರಿಯದಲ್ಲಿ. ಅದು ಆದರ ಉದ್ದೇಶವೂ ಅಲ್ಲ. ಲೇಖಕ ಸಿದ್ದಲಿಂಗಯ್ಯ ತಾವು ಕರ್ನಾಟಕದ ಹಲವಾರು ಹಳ್ಳಿಗಳಿಗೆ, ಪಟ್ಟಣಗಳಿಗೆ ಭೇಟಿ ನೀಡಿದಾಗ ಅಲ್ಲಿನ ಜನಪದ ದೇವರಿಗೆ ಸಂಬಂಧಿಸಿದ ವಿಚಿತ್ರ ಆಚರಣೆ, ವಿಧಿ, ಸಂಪ್ರದಾಯ ನಂಬಿಕೆಗಳ ಹಿಂದಿನ ಸತ್ಯ-ಸತ್ಯವನ್ನು ಒರಗೆ ಹಚ್ಚಿ ಅಲ್ಲಿನ ಸುಳ್ಳು, ಟೊಳ್ಳು, ನಕಲಿತನಗಳನ್ನು ವ್ಯಂಗ್ಯದ ದಾಟಿಯಲ್ಲಿ ಗೇಲಿ ಮಾಡುತ್ತಾ, ನಗಿಸುತ್ತಾ ಹೋಗುತ್ತಾರೆ. ಹೀಗೆ ಈ ಜನಪದ ದೇವರ ಬಗೆಗಿನ ನಂಬಿಕೆ - ಆಚರಣೆಗಳ ಟೊಳ್ಳುತನವನ್ನು ಗೇಲಿ ಮಾಡುತ್ತಾಳೇ, ಆ ನಂಬಿಕೆ ಆಚರಣೆಗಳಿಂದ ಜನಸಾಮನ್ಯರ ಶೋಷಣೆ ಆಗುವುದನ್ನು ಹಾಸ್ಯದ ಲಹರಿಯಲ್ಲಿ ಬೆಳಕಿಗೆ ಹಿಡಿಯುತ್ತಾರೆ. ''ಹಳ್ಳಿಯ ದೇವರ ಸಾಹಸಗಳು'', " ಓಡುವ ದೇವತೆ ", 'ಕೊರಳು ಬಳಸುವ ದೇವರು', 'ಕಳ್ಳಿ ತಿನ್ನುವ ದೇವರು', 'ದೇವರ ಸೂಳೆಗಾರಿಕೆ''ಕಳ್ಳ ಭೈರವ'' ಈ ಮುಂತಾದ ಅಧ್ಯಯನದ ಹೆಸರುಗಳು ಗ್ರಂಥದ ಉದ್ದೇಶವನ್ನು ಸ್ಪಷ್ಟಪಡಿಸುತ್ತವೆ. ಇಲ್ಲಿ ಯಾವುದೇ ಒಂದು ಜನಪದ ದೇವರನ್ನು ಆ ಬಗೆಗಿನ ನಂಬುಗೆ, ಆಚರಣೆಗಳನ್ನು ಕುರಿತು ಸಿದ್ಧಲಿಂಗಯ್ಯ ವಿವರಿಸುವಾಗ, ವಿಶ್ಲೇಷಿಸುವಾಗ ಅವರ ವೈಚಾರಿಕ ದೃಷ್ಟಿಕೋನ, ಸೂಕ್ಷ್ಮಜ್ಞತೆಗಳು ಎದ್ದು ಕಾಣುತ್ತವೆ. ಕನ್ನಡಕ್ಕೆ ಇದೊಂದು ವಿಶಿಷ್ಟ ಮಾದರಿಯ ಕೃತಿಯನ್ನಬೇಕು. 'ಹಕ್ಕಿನೋಟ' ಸಿದ್ಧಲಿಂಗಯ್ಯನವರ ವಿಮರ್ಶಾ ಲೇಖನಗಳ ಸಂಕಲನ, ಇಲ್ಲಿ ಸಾಹಿತ್ಯ ಪಂಥಗಳನ್ನು, ಸಾಹಿತ್ಯ ಕೃತಿಗಳನ್ನು ವಸ್ತು ನಿಷ್ಠ ಧೋರಣೆಯಿಂದ ವಿಮರ್ಶಿಸುವ, ವಿಶ್ಲೇಷಿಸುವ ಪ್ರಯತ್ನವಿದೆ. ಸಾಹಿತ್ಯ ಆಳುವ ವರ್ಗದ ಪುರೋಹಿತಶಾಹಿಯ ಮುಖವಾಣಿಯಾಗದೆ ಜನಸಾಮಾನ್ಯರ, ದೀನ-ದಲಿತರ ಸಂವೇದನೆಗಳಿಗೆ ಮಹತ್ವ ನೀಡಿ, ಸಾಂಸ್ಕೃತಿಕ ಹಿನ್ನಲೆಯೊಂದಿಗೆ ದೀನ-ದಲಿತರ ಶ್ರಮಿಕ ವರ್ಗದವರ ಬದುಕಿನ ಚಿತ್ರಣ ಮಾಡಬೇಕೆಂಬ ಆರೋಗ್ಯಪೂರ್ಣಧೋರಣೆ ಇದೆ. ಇಲ್ಲಿ ಜಾತಿ ಪದ್ಧತಿಯ ಫಲವಾದ ಅಸ್ಪೃಶ್ಯತೆಯನ್ನು ಹೋಗಲಾಡಿಸುವ ಕರ್ತವ್ಯ, ಮೇಲುವರ್ಗ, ಜಾತಿಗಳ ತರಣಿರಿಗೆ ಸೇರಿರುವ ಸಂಗತಿ ಎಂದು ಸರಿಯಾಗಿಯೇ ನುಡಿಯುತ್ತಾರೆ. ಸಿದ್ದಲಿಂಗಯ್ಯ ವಚನ ಸಾಹಿತ್ಯ, ದಾಸ ಸಾಹಿತ್ಯ ಮತ್ತು ಜನಪದ ಸಾಹಿತ್ಯ, ಜನ ಸಾಮಾನ್ಯರ ಸಂವೇದನೆಗಳಿಗೆ ಮಹತ್ವ ನೀಡಿರುವ ಸಂಗತಿಯನ್ನು ತಿಳಿಸುತ್ತದೆ. ಇಂದಿನ ದಲಿತ ಮತ್ತು ಬಂಡಾಯ ಪಂಥಗಳು ಜನಪರವಾದ ಆಶಯ ಧೋರಣೆಗಳೊಂದಿಗೆ ಸಾಹಿತ್ಯ ಸೃಷ್ಟಿಕಾರ್ಯದಲ್ಲಿ ತೊಡಗಿರುವುದನ್ನು ಮೆಚ್ಚುತ್ತಾರೆ. ಜಾತಿ ಪದ್ಧತಿಯ ಅಸ್ಪೃಶ್ಯತಾ ಆಚರಣೆಯ ವಿರುದ್ಧದ ಪ್ರತಿಭಟನೆ ಆಕ್ರೋಶಗಳು ಜಾನಪದ ಆಚರಣೆಯಾದ 'ಆಸಾದಿ ಆಚರಣೆ'ಯಲ್ಲಿ ಅರ್ಥಪೂರ್ಣವಾಗಿ ಪ್ರಕಟವಾಗುವುದನ್ನು ದಾಖಲುಗೊಳಿಸಿದ್ದಾರೆ. ' ದಲಿತ ಸಂಸ್ಕೃತಿ', 'ವಚನ ಚಳುವಳಿ' ಮತ್ತು 'ದಲಿತರು', ' ನಿರಂಜನರ ಚಿರಸ್ಮರಣೆ' ಎಂಬಂಥ ಲೇಖನಗಳು ಇನ್ನಷ್ಟು ವಿವರ, ವಿಶ್ಲೇಷಣೆಯನ್ನು ಅಪೇಕ್ಷಿಸುತ್ತವೆ. ಗಾಢವಾದ ಸಾಂಸ್ಕೃತಿಕ ಅರಿವಿನಿಂದ ಸಾಮಾಜಿಕ ಕಳಕಳಿಯಿಂದ ಅಧ್ಯಯನ ಶೀಲತೆಯಿಂದ ಇಂಥ ಲೇಖನಗಳ ಆಶಯ ಧೋರಣೆಗಳನ್ನು ವಿಸ್ತರಿಸಬೇಕಾಗುತ್ತದೆ. : ವಿಷಾದಪಡಿಸಬೇಕಾಗುತ್ತದೆ.

ಈ ರೀತಿಯ ಕೆಲವು ಮಿತಿಗಳು ಇಲ್ಲಿ ಕಾಣಿಸಿಕೊಂಡರೂ ಶಿಷ್ಟ ಮತ್ತು ಜನಪದ ಸಾಹಿತ್ಯದ ಇತಿಮಿತಿಯನ್ನು, ಸಾಧನೆ ಸಿದ್ಧಿಗಳನ್ನು, ಅಲ್ಲಿನ ಆಶಯ- ಧೋರಣೆಗಳನ್ನು ವಾಸ್ತವ ಚಿಂತನೆಯ ಹಿನ್ನಲೆಯೊಂದಿಗೆ, ವೈಚಾರಿಕತೆಯ ನೆಲಗಟ್ಟಿನ ಆಧಾರದ ಮೇಲೆ ಸಾಂಸ್ಕೃತಿಕ ಕಾಳಜಿಯಿಂದ ಬೆಲೆ ಕಟ್ಟುವ, ಮೌಲ್ಯಮಾಪನ ಮಾಡುವ ಸ್ತುತ್ಯ ಕೆಲಸವಿದೆ. ಈ ಕೃತಿಯ ಕಾರಣದಿಂದಾಗಿ ಕವಿಸಿದ್ದಲಿಂಗಯ್ಯ ವಿಮರ್ಶಕನಾಗಿ, ಸಿದ್ದಲಿಂಗಯ್ಯನಾಗಿ ಬೆಳೆಯುವ ಎಲ್ಲಾ ಸೂಚನೆಗಳು ಸ್ಪಷ್ಟವಾಗಿಗೋಚರಿಸುತ್ತದೆ.

ಒಟ್ಟಿನಲ್ಲಿ ಸಿದ್ದಲಿಂಗಯ್ಯ ಕವಿಯಾಗಿ, ನಾಟಕಕಾರನಾಗಿ, ಚಿಂತಕನಾಗಿ, ವಿಮರ್ಶಕವಾಗಿ, ಉತ್ತಮ ವಾಗ್ಮಿ ಮತ್ತು ಹಾಡಿಗಾರನಾಗಿ ಕನ್ನಡದ ನೆಲದಲ್ಲಿ ಕನ್ನಡ ಸಾಹಿತ್ಯದಲ್ಲಿ ಒಳ್ಳೆಯ ಹೆಸರು ಮಾಡಿದ್ದಾರೆಂದು ನಿಸ್ಸಂಕೋಚವಾಗಿ ಹೇಳಬಹುದು. ಇದು ಡಾ. ಸಿದ್ದಲಿಂಗಯ್ಯನವರು ಆತ್ಮಕಥನ. ಇದರಲ್ಲಿ ಮುಖ್ಯವಾಗಿ ಎರಡು ಭಾಗಗಳಿವೆ. ಪರಿವಿಡಿಯ ಪ್ರಕಾರ ಮೊದಲನೆಯ ಭಾಗ ಊರುಕೇರಿ (ಆತ್ಮಕಥನ). ಎರಡನೆಯ ಭಾಗ ಡಾ. ಡಿ. ಆರ್. ನಾಗರಾಜ್ ಅವರ 'ಬಡವರ ನಗುವಿನ ಶಕ್ತಿ' ಎಂಬ ಹಿನ್ನುಡಿ. ಆತ್ಮಕಥನವು ಐದು ಆಧ್ಯಾಯಗಳಲ್ಲಿ ಬೆಳೆದಿದೆ. 1. ಶಾಲೆಗೆ ಸೇರುವ ಮೊದಲ ದಿನಗಳು. 2. ಶಾಲೆಯ ದಿನಗಳು. 3. ಹಾಸ್ಟೆಲ್ ಜೀವನ. 4. ಕಾಲೇಜು ದಿನಗಳು ಮತ್ತು 5. ಬೇರೆ ಬೇರೆ ಪ್ರಗತಿಪರ ವೇದಿಕೆಗಳು. ಸಂಘಗಳು ಹಾಗೂ ವ್ಯಕ್ತಿಗಳ ಸಂಬಂಧವನ್ನು ಕುರಿತದ್ದು, ಕನ್ನಡದಲ್ಲಿ ಆತ್ಮಕಥನ ಬರವಣಿಗೆಯ ಹಿಂದಿರುವ ಒತ್ತಡಗಳ ಸ್ವರೂಪಗಳೇನು ? ಸಮಾಜದ ಯಾವ ಬಗೆಯ ಬೆಳವಣಿಗೆಯಲ್ಲಿ ಇದು ಸೃಷ್ಠಿಯಾಗುತ್ತದೆ ? ಈ ಕುರಿತು ಚರ್ಚೆ ನಡೆದಂತಿಲ್ಲ.

ಕೈಗಾರಿಕಾ ಕ್ರಾಂತಿಯು ಹಲವಾರು ಪರಿಣಾಮಗಳನ್ನು ಹಡೆಯಿತು. ದುಡಿಮೆಯೊಂದಿಗೆ ಜನರಿಗಿದ್ದ ಕರುಳುಬಳ್ಳಿ ಸಂಬಂಧವನ್ನೇ ಅದು ಕತ್ತರಿಸಿ ಹಾಕಿತು. ಬಂಡವಾಳಶಾಹಿ ಉತ್ಪಾದನಾ ವಿಧಾನವು ಬಂಡವಾಳಕ್ಕೆ ಬಂಡವಾಳಗಾರನನ್ನೂ, ಶ್ರಮಕ್ಕೆ ಶ್ರಮಿಕನನ್ನೂ ಏಕವ್ಯಕ್ತಿಯಂತೆ ನಿರ್ಮಿಸಿತು. ಈ ವಾತಾವರಣದಲ್ಲೇ ವೈಯಕ್ತಿಕತೆಯ ಸೃಷ್ಠಿಯಾಯಿತು. ವ್ಯಕ್ತಿಯು ಹಳೆಯ ಉತ್ಪಾದನಾ ವಿಧಾನ, ಸಮುದಾಯ ಮತ್ತು ಸಮಾಜದಿಂದ ತಾನು ಪ್ರತ್ಯೇಕ ಎಂದು ಗುರುತಿಸಿಕೊಳ್ಳು ವಂತಾಯಿತು. ಹಾಗಾಗೀ ಅಲ್ಲಿ ವೈಯಕ್ತಿಕತೆಗೆ ಸ್ಪಷ್ಟವೆನ್ನಬಹುದಾದ ರೀತಿಯ ಸಾಮಾಜಿಕ ವಿನ್ಯಾಸ ಪ್ರಾಪ್ತವಾಯಿತು. ಇಂಡಿಯಾ ಸಂಪೂರ್ಣ ಬಂಡವಾಳಶಾಹಿ ಉತ್ಪಾದನಾ ವಿಧಾನಕ್ಕೆ ಜಂಪ್ ಆಗಿಲ್ಲ. ಹಳೆಯ ಹಲವಾರು ಉತ್ಪಾದನಾ ವಿಧಾನಗಳು ನಾಶವಾಗಿಲ್ಲ. ಇಂಥ ಪರಿಸ್ಥಿತಿಯಲ್ಲಿ ವೈಯಕ್ತಿಕತೆಯನ್ನು ರೂಪಿಸುವ ವಿಧಾನ ವಿನ್ಯಾಸಗಳು ಯಾವುವು ? ಆತ್ಮಕಥನ ಎಂಬ ಸಂಕಥನ ಹುಟ್ಟುವುದೇ ತನ್ನದಾಗಿದ್ದ ಪರಿಸರದಿಂದ ತಾನು ಬೇರ್ಪಟ್ಟಾಗ. ಇಲ್ಲಿ 'ಪರಿಸರ' ಮತ್ತು 'ಬೇರ್ಪಡುವಿಕೆ'ಯ ನಿರ್ವಚನೆಗಳು ಸಂಕೀರ್ಣ ಮಾದರಿಯವಿರಬಹುದು.. ವಿವೇಚನೆಯ ನೆಲೆಗಳೂ ಭಿನ್ನ ಭಿನ್ನ ಇರಬಹುದು. 'ಅಕ್ಷರ ಚಿಂತನ' ಮಾಲೆಯ ಸಂಪಾದಕೀಯದಲ್ಲಿ 'ಸಮಾಜಗಳಿಗೆ ವಿಚಿತ್ರ ರೀತಿಯ ಮರೆವು ಆವರಿಸುತ್ತದೆ' ಎಂಬ ಹೇಳಿಕೆಯನ್ನು ಸದ್ಯಕ್ಕೆ ಒಪ್ಪಿಕೊಂಡಿದ್ದೇವೆಂದು ತಿಳಿಯೋಣ. ಊರುಕೇರಿ ಒಂದು ಸಾಂಸ್ಕೃತಿಕ ಘಟಕ. ಅದರಲ್ಲಿರುವುದು ಸಮಾಜದ ಲಕ್ಷಣಗಳಲ್ಲ.

ಸಮುದಾಯದ ಲಕ್ಷಣಗಳು. ಇವು ಚಲನಶೀಲರಾಗಿರುತ್ತವೆ ಎಂಬ ಎಚ್ಚರಿಕೆಯಲ್ಲೂ ಹೇಳಲಾಗಿದೆ. ಸ್ಥಾಪಿತ ಆಲೋಚನೆಗಳ ಪ್ರಕಾರ ಊರುಕೇರಿ 'ಪ್ರಧಾನ ಸಂಸ್ಕೃತಿ' ಯಿಂದ ಹೊರಗಿರುವಂಥದು. ಮೌಖಿಕತೆಯೇ ಅದರ ಜೀವಾಳ. ನೆನಪುಗಳೇ ಇದರ ಮೂಲಭೂತ ವಾಹಕ. ಇಂಥದಕ್ಕೂ ಕೂಡ 'ವಿಸ್ಮೃತಿ' ಆವರಿಸುವುದು ಹೇಗೆ ? ಒಂದು ವೇಳೆ ಇದರ ಒಡಲಿನಿಂದಲೇ ಆತ್ಮಕಥನವೊಂದು ಹೊರಬಂದರೆ,. ಅದು ಖಚಿತವಾಗಿ ಈ ಒಡಲಿನಿಂದ ಬೇರ್ಪಟ್ಟ ಸಂಕಥನವಾಗಿರುತ್ತದೆ. ಅಂದರೆ ಈ ಮೊದಲು ಯಾವುದನ್ನು 'ಪ್ರಧಾನ ಸಂಸ್ಕೃತಿ' ಎಂದು ಸೂಚಿಸಲಾಯಿತೋ ಅದರ ಒಂದು ಭಾಗವಾಗುತ್ತದೆ. ಅಂದರೆ 'ಊರುಕೇರಿ'ಗೆ ಲಿಖಿತ ಆತ್ಮಕಥನವಿರುತ್ತದೆ ಎಂಬುದೇ ಒಂದು ವಿಪರ್ಯಾಸ.

ಆತ್ಮಕಥನದ ಏಕೈಕ ಧಾರೆ ಎಂದರೆ ಅದು ಆತ್ಮಕಥನದಲ್ಲಿ ದಾಖಲಾದ ಅನುಭವಗಳಿಗೆ ತಾನೊಬ್ಬನೇ ಏಕೈಕ ವಾರಸುದಾರ ಎಂದು ಮಂಡಿಸುವುದು. ಅನುಭವದ ಎಂತಹದೇ ಸ್ಥಿತಿ ಇರಲಿ ಅದು ತನಗೆ ಮಾತ್ರ ವಿಶಿಷ್ಟ ಎಂದು ಬಗೆಯುವುದು ಮತ್ತು ಈ ವಿಶಿಷ್ಟ ಅನುಭವದಿಂದ ಬೇರೆಯವರು ಭಿನ್ನ ಎಂದು ಸಾಧಿಸುವುದು. ಹೀಗೆ ಹಲವರಿಗೆ ಇರಬಹುದಾದ ಸಂಕೀರ್ಣ ಅನುಭವಗಳ ಮೇಲೆ ಏಕಾಏಕಿ ಯಜಮಾನಿಕೆಯನ್ನು ಸ್ಥಾಪಿಸುವುದು.

ಆತ್ಮಕಥನಕಾರ ಮೊದಲಿಗ ತನ್ನ ಅನುಭವ ಲೋಕದಿಂದ ಪ್ರತ್ಯೇಕಗೊಳ್ಳುತ್ತಾನೆ. ಆ ನಂತರ ತನ್ನಿಂದಲೇ ತಾನು ಪ್ರತ್ಯೇಕಗೊಳ್ಳುತ್ತಾನೆ. ಉದಾ. 5ನೇ ತರಗತಿಯಲ್ಲಿದ್ದ ಸ್ಥಿತಿಯನ್ನು, ನೌಕರಿ ಸಿಕ್ಕಿದ ಮೇಲೆ ನೆನಪಿಸಿಕೊಳ್ಳುವುದು. ಈ ಎರಡೂ ಸ್ಥಿತಿಗಳೂ ಒಂದೇ ಅಲ್ಲ, ಬೇರೆ ಬೇರೆ. ಇದರಿಂದ ಅನುಭವ ಲೋಕ- ಅನುಭವಗಳ ವಾರಸುದಾರ - ಆತ್ಮಕಥನಕಾರ ಈ ಮಾದರಿಯ ವಿನ್ಯಾಸ ಅನಾಯಸವಾಗಿ ಬಂದು ಬಿಡುತ್ತದೆ. ಇಲ್ಲಿ ಆತ್ಮಕಥನಕಾರ ಅನುಭವಗಳ ವಾರಸುದಾರನ ಮೂಲಕವೇ ಅನುಭವ ಲೋಕವನ್ನು ಪ್ರವೇಶಿಸುತ್ತಾನೆ. ಹಾಗಾಗೀ ಅನುಭವಗಳ ವಾರಸುದಾರ 'ಯಜಮಾನ'ನಾಗಿ ರೂಪಿತನಾಗುತ್ತಾನೆ. ಇದರ ಮತ್ತೊಂದು ತುದಿ ಎಂತಹ ಕಹಿ ಅನುಭವಕ್ಕೂ ತಾನೇ ಕೊನೆಯವನು ಎಂಬುದನ್ನು ಸ್ಥಾಪಿಸುವುದಾಗಿರುತ್ತದೆ. ಊರುಕೇರಿಯಂತಹ ಸಾಂಸ್ಕೃತಿಕ ಲೋಕದ ಬಗ್ಗೆ ನಡೆಯುವ ಸಂವಾದಗಳು ಈ ಕೃತಿಯನ್ನು ಯಾವ ಬಗೆಯ ಆಕರವಾಗಿ ಪರಿಗಮಿಸುತ್ತವೆಯೋ ಕಾದು ನೋಡಬೇಕಾಗಿದೆ.

ಅರವಿಂದ ಮಾಲಗತ್ತಿ ಅವರ ಸಾಹಿತ್ಯ : -

ದಲಿತರೆಂದು ಹೇಳಿಕೊಳ್ಳಲು ಹಲವಾರು ಹಿಂದೇಟು ಹಾಕುವ ಸಂದರ್ಭದಲ್ಲಿ ಅರವಿತ ಮಾಲಗತ್ತಿಯವರು " ನಾನೊಬ್ಬ ದಲಿತ ಬ್ರಾಹ್ಮಣ' ಎಂದು ಕೆಚ್ಚಿನಿಂದ ಎಲ್ಲರೆದುರು ಹೇಳುತ್ತಾರೆ. ಅವರ ಲೇಖನಿಯಿಂದ ಇಪ್ಪತ್ತೈದು ಸೃಜನಶೀಲ ಕೃತಿಗಳು ಹೊರ ಬಂದಿವೆ. ಇವರು ಸೃಜನಶೀಲತೆಯನ್ನು ಮೈಗೂಡಿಸಿಕೊಂಡಿದ್ದರಿಂದ, ನೈಜ ಕಳಕಳಿಯಿಂದ ದಲಿತರ ಪರ ನಿಂತು ಮತಾಡುತ್ತಾರೆ. 'ಮೂಕನಿಗೆ ಬಾಯಿ ಬಂದಾಗ' ಕಾವ್ಯದಿಂದ ಪ್ರಾರಂಭವಾದ ಇವರ ಬರವಣಿಗೆ ಈ ಲೇಖನ ಬರೆಯುವ ಹೊತ್ತಿಗೆ 'ಸಮುದ್ರದೊಳಗಣ ಉಪ್ಪಾಗಿ' ಘನೀಕರಿಸಿದೆ. ಇವರು ಕಾವ್ಯ, ನಾಟಕ, ಕಾದಂಬರಿ, ಆತ್ಮಕಥೆ, ವಿಮರ್ಶೆ, ಸಂಶೋಧನೆ, ವಯಸ್ಕ ಶಿಕ್ಷಣ ಕೃತಿಗಳು, ಸಂಪಾದನೆಗಳಲ್ಲಿ ತಮ್ಮನ್ನು ತೀವ್ರವಾಗಿ ತೊಡಿಗಿಸಿಕೊಂಡಿದ್ದಾರೆ. ಸದಾ ಕ್ರಿಯಾಶೀಲರಾಗಿರುತ್ತಾರೆ.

ಗ್ರಾಮೀಣ ದಲಿತರಾಗಿ ಹುಟ್ಟುವುದೇ ಪಾಪದ ಕೆಲಸ ಎಂದು ತಿಳಿದಿದ್ದ ಕಾಲದಲ್ಲಿ ಮಾಲಗತ್ತಿಯವರು ಹಳ್ಳಿಯಲ್ಲಿ ಹುಟ್ಟಿ ಅಲ್ಲಿಯೇ ಬೆಳೆದು, ತಮ್ಮ ಜನರ ದಾಸ್ಯ ಮನೋಭಾವ, ಜೀತ ಪದ್ಧತಿಯ ಸಂಕೋಲೆಗಳನ್ನು ಬಹಳ ಹತ್ತಿರದಿಂದ ಅವಲೋಕಿಸಿದ್ದಾರೆ.

ಆದುದರಿಂದಲೇ ಬ್ರಾಹ್ಮಣನು ಅವನಿಂದ ಎಲ್ಲ ಸೇವೆಗಳನ್ನು ಮಾಡಿಸಿಕೊಳ್ಳಬಹುದು. ಶೂದ್ರನು ಸ್ವಾಮಿಯಿಂದ ಬಿಡಲಟ್ಟರೂ, ಅವನು ತನ್ನ ದಾಸ್ಯತ್ವದಿಂದ ಬಿಡುಗಡೆ ಹೊಂದುವುದಿಲ್ಲ. ದಾಸ್ಯತ್ವದ ಹೊರತು ಅವನಿಗೆ ಬೇರೆ ಪುಣ್ಯ ಕಾರ್ಯಗಳಲ್ಲಿ ಕಾರಣ ಅವನಿಗೆ ಬ್ರಾಹ್ಮಣ ಸೇವೆಯಿಂದಲೇ ಮುಕ್ತಿಯು'' ಎಂಬ ನುಡಿಗಳನ್ನು ದಲಿತ ತನ್ನ ಹುಟ್ಟಿನಿಂದಲೂ ಕೇಳುತ್ತಲೇ ಬಂದಿದ್ದಾನೆ. ತನ್ನ ಸ್ವಾಭಿಮಾನ ಆತ್ಮಾಭಿಮಾನಗಳನ್ನು ಬದಿಗೊತ್ತಿ ಬಾಳಲು ಕಲಿತಿದ್ದಾನೆ.

ಮಾಲಗತ್ತಿಯವರು ಗ್ರಾಮೀಣ ಸಮಾಜದಿಂದ ಬಂದವರು. ಅವರಿಗೆ ದಲಿತರ ನೋವಿನ ದಟ್ಟ ಅನುಭವವಿದೆ. 'ಮನುಷ್ಯರನ್ನು ಮನುಷ್ಯರಂತೆ ನಡೆಸಿಕೊಳ್ಳದ ರೂಢ ಮೂಲ ಅನಿಷ್ಟಪರಂಪರೆಯನ್ನು ಗೊಡ್ಡು ಸಂಪ್ರದಾಯಗಳನ್ನು ಪುರೋಹಿತ ಶಾಹಿಯ ಹೀನ ಪ್ರವೃತ್ತಿಯನ್ನು, ಜಾತಿ ವೈಷಮ್ಯ, ಅಸ್ಪೃಶ್ಯತೆ, ಅನಾಚಾರ, ಅತ್ಯಾಚಾರಗಳನ್ನು ಮುಚ್ಚುಮರೆಯಿಲ್ಲದೆ ಖಂಡಿಸುವ ಹಾಗೂ ಪ್ರತಿಭಟಿಸುವಲ್ಲಿಯ ಮಾನಸಿಕ ತಳಮಳ, ಕಿಚ್ಚು ರೊಚ್ಚು ಸಿಟ್ಟು ಸಿಡುಕುಗಳು 'ಮೂಕನಿಗೆ ಬಾಯಿ ಬಂದಾಗ' ಅನಾವರಣಗೊಳ್ಳುತ್ತವೆಂದು ಹೇಳಿದ ಜಾನಪದ ವಿದ್ವಾಂಸರಾದ ಸೋಮಶೇಖರ ಇಮ್ರಾಪುರದ ಮಾತು ಉಲ್ಲೇಖನಾರ್ಹ.

ಹರಿಜನರು ನಾವು

ಹರಿಯ ಕಾಲಲ್ಲಿ ಹುಟ್ಟಿಸಿ

ಹಿರಿಯರ ಕಾಲಲ್ಲಿ ತುಳಿಯಲ್ಪಟ್ಟವರು

(ಹರಿಜನೋದ್ಧಾರ)

ಎನ್ನುತ್ತಲೇ ಬಂಡಾಯವೇಳುವ ಕವಿಗೆ ದಲಿತರ ಎಡಬಿಡುಗಿ ನಡೆ ನುಡಿಯ ಬಗ್ಗೆ ಆಕ್ರೋಶವಿದೆ.

ಹರಿ ಜನ್ರಾದವರು

ಹರಿಜನ, ಅಂತ ಹೇಳಿಕೊಳ್ಳಾಕ

(ಗಜಮುಗಳು-ದಾರಿ)

ಬಹಳಷ್ಟು ಕಡೆ ದಲಿತರು, ದಲಿತರೆನ್ನದೆ ಗೌಡರೋ, ಲಿಂಗಾಯಿತರು ಆಗಿರುವ ಬಗೆಗಳು ವಾಸ್ತವ ಸಂಗತಿಯಾಗಿದೆ. ಅದಕ್ಕೆ ಕಾರಣವೂ ಇಲ್ಲದಿಲ್ಲ. ದಲಿತರನ್ನು ನಾಯಿ, ಬೆಕ್ಕುಗಳಿಗಿಂತಲೂ ಕಡೆಯಾಗಿ ಕಾಣುವ ಇಂದಿನ ಸಮಾಜಗಳಲ್ಲಿ ದಲಿತರು ನಿಜವನ್ನು ಹೇಳಲು ಹಿಂಜರಿಯುತ್ತಿದ್ದಾರೆ. ನಿಜ ಹೇಳಿದರೆ ಮನೆ ಬಾಡಿಗೆಗೆ ಸಿಗುವುದಿಲ್ಲ. ಸ್ನೇಹಿತರ ಬಳಗವನ್ನು ಕಳೆದುಕೊಳ್ಳಬೇಕಾಗುತ್ತದೆ. ಬೇರೆ ಸಮಾಜದ ಜನರಿಂದ ಲೇವಡಿ, ಅಪಹಾಸ್ಯಕ್ಕೆ ಒಳಗಾಗಬೇಕಾಗುತ್ತದೆ. ನಾವೇನೋ ಹರಿಶ್ಚಂದ್ರನ ನೆರೆಯವರಲ್ಲವಾದ್ದರಿಂದ ಸುಳ್ಳನ್ನು ಸತ್ಯಕ್ಕಿಂತಲೂ ಹೆಚ್ಚಾಗಿ ಹೇಳಲು ಕಲಿತಿದ್ದೇವೆ. ನಾವು ಎಲ್ಲರಂತೆ ಬದುಕಬೇಕಾದರೆ ಈ ಬಗೆಯ ಹುಸಿ ಹೇಳಿಕೆ ಅವಶ್ಯವಾದುದು ಎನ್ನುತ್ತಾರೆ.

ನಮ್ಮ ಜನರಲ್ಲಿ ಕ್ರಾಂತಿಯ ಕಿಚ್ಚನ್ನು ಹಚ್ಚಬೇಕಾದರೆ " ಗೋರ್ಕಲ್ಲ ಮೇಲೆ ಮಳೆ ಹುಯ್ದಂತೆ' ಅವರು ತುಂಬಾ ಸಹನಾಮಯಿಗಳು ದಾಸ್ಯದ ಹೊರತಾಗಿ ಅವರಿಗೆ ಬೇರೇನು ಗೊತ್ತಿರುವುದಿಲ್ಲ. ಅಸಹಾಯಕತೆ, ನಿರಾಶೆ, ಬಡತನ ಅವರನ್ನು ಮುಗಿಸಿ ಬಿಟ್ಟಿರುತ್ತದೆ. ಕನ್ನಡದ ಜನರನ್ನು ಎಚ್ಚರಿಸಲು ಕುವೆಂಪುರವರು ಕನ್ನಡ ಡಿಂಡಿಮವ ಬಾರಿಸಿದಂತೆ, ತಮ್ಮ ಜನರಲ್ಲಿ ಜಾಗೃತಿ ಮೂಡಿಸಲು ಮಾಲಗತ್ತಿಯವರು ಸರ್ವವಿಧದಲ್ಲೂ ಪ್ರಯತ್ನವನ್ನು ಮಾಡುತ್ತಾರೆ. ಅವರ ನಿಷ್ಕಲ್ಮಷ ಕಳಕಳಿ, ಕಾಳಜಿಗಳು ದಲಿತರಂತಹ ದಪ್ಪ ಚರ್ಮದವರಿಗೆ ಬೇಗನೆ ಅರ್ಥವಾಗುವುದಿಲ್ಲ.

ಹೊಲೆಯರ ಕೆಂಡರ ಹೊರೆಗೆ ನಿಲ್ಲಂತಾರ

ಹೊಲಸಿಲ್ಲೆನ ಇವು ಹೊಟ್ಟ್ಯಾಗ ! ನನ ಬಳಗ (ತ್ರಿಪದಿ)

ಮೂಕನಿಗೆ ಮಾತು ಬಂದಾಗ ಪ್ರತಿಭಟಿಸುತ್ತಾನೆ.ತಾನನ್ನುಭವಿಸಿದ ಮೂಕವೇದನೆ, ಅರಣ್ಯರೋಧನವನ್ನು ತನ್ನ ಜನರು ಅನುಭವಿಸದಿರಲಿ ಎಂದು ಆಶಿಸುವ ಕವಿ ತನ್ನೆಲ್ಲ ಭಾವನೆಗಳನ್ನು ಸಾಗೆ ಹಿಡಿದಿರುವುದು ಇಲ್ಲಿ ಗೋಚರಿಸುತ್ತದೆ. (ಈ ಕೃತಿ ದೇವರಾಜ ಬಹದ್ದೂರ್ ಪ್ರಶಸ್ತಿಗೆ ಪಾತ್ರವಾಗಿದೆ. - 1982ರಲ್ಲಿ)

ಇವರ ಮಹತ್ವದ ಕಾದಂಬರಿಯಾದ 'ಕಾರ್ಯ' ವಿಭಿನ್ನ ವಸ್ತುವನ್ನೊಳಗೊಂಡ ಓದುವವರನ್ನು ಚಿಂತನೆಗ್ಹಚ್ಚಿ ಅದರ ಸ್ವಾದವನ್ನು ಮೆಲುಕು ಹಾಕುವಂತೆ ಮಾಡುತ್ತದೆ. ನಮ್ಮ ಜನರ ಅಪ್ಪಿ ಹಾಕಿದ ಆಲದ ಮರಕ್ಕೆ ಜೋತು ಬೀಳುವುದು ವಾಡಿಕೆ. ಕಾರ್ಯದಲ್ಲೂ ಕೆಲವೊಂದು ಸನ್ನಿವೇಶಗಳು, ನಂಬಿಕೆಗಳು ಅಂತರಂಗವನ್ನು ಮುಟ್ಟಿಬರುತ್ತವೆ. ಎಲ್ಲಾ ಕಾದಂಬರಿಗಳು 1ನೇ ಪುಟದಿಂದ ಆರಂಭವಾಗುವುದು ಸಾಮಾನ್ಯ ಸಂಗತಿ. ಇಲ್ಲಿ ಕಾದಂಬರಿ ಆರಂಭವಾಗುವುದೇ 66ನೇ ಪುಟದಿಂದ ಏರುವಿಕೆ ಕ್ರಮದಿಂದ ಇಳಿಯುವ ಕ್ರಮವನ್ನು ಅನುಸರಿಸುತ್ತದೆ. ಇದೊಂದು ರೀತಿಯಲ್ಲಿ ವಿಚಿತ್ರ ವಿಧಾನವೂ ಹೌದು. ಪುಟ್ಟ ಕಾದಂಬರಿಯಾದರೂ ಕೆಲವು ಕಡೆ ಅಚ್ಚರಿ ಹುಟ್ಟಿಸುತ್ತದೆ. ಆ ಕಾದಂಬರಿಯ ತಂತ್ರ-ವಿಧಾನ-ಶೈಲಿ ಎಲ್ಲವೂ ಹೊಸತನದಿಂದ ಕೂಡಿವೆ. ಭಾಷೆ ಏಕಾಗ್ರತೆಯಿಂದ ಓದಿದರು ಅರ್ಥವಾಗಬಲ್ಲದು.

ದಲಿತರ ಸಿಟ್ಟು, ಆಕ್ರೋಶ, ಸೆರೆಯ ಸಹವಾಸ, ಅವರ ನಡವಳಿಕೆ, ಮೂಢನಂಬಿಕೆ, ಪ್ರತಿಭಟನೆ, ಅಸಹಾಯಕತೆ, ರಾಜೀಮನೋಭಾವ ಇತ್ಯಾದಿಗಳೆಲ್ಲವೂ ಮೇಳೈಸಿದೆ. ಇದು ವಾಮನ ರೂಪದ ತ್ರಿವಿಕ್ರಮ ಮನೋಭಾವದ ಕಾದಂಬರಿ. ಇಂತಹ ವಿಷಯದ ಬಗ್ಗೆ ಸವಿಸ್ತಾರವಾಗಿ ಹೇಳುವ ಕಾದಂಬರಿ - ಇದೆ ಮೊದಲಿರಬಹುದು. ಅಲ್ಲಿನ ಸಮಸ್ಯೆಗಳು ಪಡೆದುಕೊಳ್ಳುವ ಹೊಸ ತಿರುವುಗಳನ್ನು ಎಲ್ಲಾ ಕಾದಂಬರಿಗಳಂತೆ ಊಹಿಸಲಾಗುವುದಿಲ್ಲ. ಕುಡುಕರ ನಡೆಯಂತೆ ಒಂದಕ್ಕೊಂದು ತೊಡರು ಹಾಕಿಕೊಂಡು ಸಾಗುವ ಕಾದಂಬರಿಯಲ್ಲಿ ಬಂಡಾಯಕ್ಕಿಂತ ಬದುಕೇ ಮುಖ್ಯವಾಗುತ್ತದೆ. ಕೆಲವೊಂದು ನಂಬಿಕೆಗಳಿಂದ ಜನರನ್ನು ಹಿಡಿದೆಳೆಯಲಾಗುವುದಿಲ್ಲ.

ಡಾ. ಶಿವರಾಮಕಾರಂತರು ವ್ಯಕ್ತಿ ಬದುಕಿರುವಾಗಲೇ ಆತ್ಮಕಥೆ ಬರೆದರೆ ಅದು ನಮಗೇ ನಾವೇ ಮಾಡಿಕೊಳ್ಳುವ 'ಆತ್ಮಹತ್ಯೆ'ಯಾಗುತ್ತದೆ ಎನ್ನುತ್ತಾರೆ. ಅದರಂತೆಯೇ ಮಾಲಗತ್ತಿಯವರು ಬದುಕಿನ ವಾಸ್ತವದ ಸಂಗತಿಗಳನ್ನು ಯಥಾವತ್ತಾಗಿಕೊಡುವುದು ಎಂದರೆ ಬದುಕಿರುವಾಗಲೇ ಜನತೆಯ ಬಾಯಿಗೆ ಎಲೆ ಅಡಿಕೆಯಾಗುವುದು ಎಂದರ್ಥ ಎನ್ನುತ್ತಾರೆ. "ಭಾವನಲ್ಲ ಅಕ್ಕನ ಗಂಡ " ಎನ್ನುವಂತೆ, ಗೌರ್ಮೆಂಟ್ ಬ್ರಾಹ್ಮಣನನ್ನು ಓದುವ ಹಂತದಿಂದ ಮುಕ್ತಾಯ ದವರೆಗೂ ಇಪ್ಪತ್ತೆರಡು ಜೀವನ ಘಟನೆಗಳನ್ನು ದಾಖಲಿಸುತ್ತಾರೆ. ಅನುಭವಗಳನ್ನು ಹಂಚಿಕೊಳ್ಳಲು ಮುಮುಕರಾಗಬೇಕಿಲ್ಲ. ಸಶಕ್ತರಾದ ಯುವಕರು, ಸಶಕ್ತ ಮನೋಭಾವ ಹೊಂದಿರುವಾಗಲೇ ತಮ್ಮ ಆತ್ಮಕಥೆಯನ್ನು ಬರೆದಿಡುವುದು ಔಚಿತ್ಯ ಪೂರ್ಣ ಎನ್ನುತ್ತಾರೆ. ಬಾಲ್ಯದಲ್ಲಿ ಅವರಿಗೆ ಅವರ ಅಜ್ಜಿಯನ್ನು ಬಿಟ್ಟು ಬದುಕಲು ಗೊತ್ತಿರುವುದಿಲ್ಲ. ಅವರ ಭೌತಿಕ, ಅಭೌತಿಕ ನಿಲುವಿಗೆ ಮೂಲ ಕಾರಣಕರ್ತಳಾಗುತ್ತಾಳೆ. ಆಯಿ.

ಲೇಖಕರದು ಸ್ವಾಭಿಮಾನ ತುಂಬಿದ ಮನಸ್ಸು ಬೇರೆಲ್ಲ ಜಾತಿಯವರು ಎದುರು ತಲೆಯೆತ್ತಿ, ಅವರ ಎದೆಯ ಮೇಲೆ ಮೆಟ್ಟಿ ನಡೆಯಬೇಕೆಂಬ ವಾಂಛೆಯುಳ್ಳವರು. ಎಲ್ಲ ಕಡೆಯೂ ನಾನು ಹರಿಜನರವನು ಎಂದು ಎದೆ ತಟ್ಟಿ ಎದೆ ಮುಟ್ಟಿ ಹೇಳುತ್ತಾ ಸಾಗುತ್ತಾರೆ. ದಲಿತರಾಗಿರುವ ಅವರಿಗೆ ತಾವು ಈ ಜಾತಿಯಲ್ಲಿ ಹುಟ್ಟಿರುವೆನಲ್ಲ ಎಂಬ ಪರಿತಾಪವಿಲ್ಲ. ಬದಲಾಗಿ ಈ ಜಾತಿಯ ಹೆಸರನ್ನು ಅಜರಾಮರಗೊಳಿಸುವ ಬಗೆ ಹೇಗೆ ? ಎಂದು ಚಿಂತಿಸುತ್ತಾರೆ. ನಮ್ಮದು ಪೂರ್ವಾಗ್ರಪೀಡಿತ ಮನಸ್ಸು ಯಾರೋ ಬ್ರಾಹ್ಮಣರ ಪೂರ್ವಜರು ಹಿಂದೆ ನಮ್ಮ ಜನರನ್ನು ಬಹಳವಾಗಿ ಶೋಷಿಸಿದ್ದರಂತೆ. ಅದರಿಂದಾಗಿಯೇ ನಾವೆಲ್ಲರೂ " ಬ್ರಾಹ್ಮಣ ದ್ವೇಷಿ" ಗಳಂತೆ ವರ್ತಿಸುತ್ತೇವೆ. ಈಗಿರುವ ಬ್ರಾಹ್ಮಣರಿಗೆ ನಮ್ಮೊಂದಿಗೆ ಹೊಂದಿಕೊಂಡು ಹೋಗುವ ಮನಸ್ಸಿದೆ. ನಮ್ಮ ಪ್ರತಿಭೆಯನ್ನು ಕಂಡಾಗ ಒಪ್ಪಿಕೊಳ್ಳುವ ಜಾಣತನವಿದೆ. ಹಾಗೆಂದ ಮಾತ್ರಕ್ಕೆ ನಾವು ಅವರನ್ನು ಹಳಿಯುವುದಾಗಲೀ, ದೂಷಿಸುವುದಾಗಲೀ ಯಾವ ನ್ಯಾಯ ? ಪೂರ್ವ ಕಾಲದ ಬ್ರಾಹ್ಮರು ಮಾಡಿರುವ ಪಾಪಕ್ಕೆ ಇಂದಿನ ಬ್ರಾಹ್ಮಣರು ಬಲಿಯಾಗಬೇಕೆ ?

ಮಾಲಗತ್ತಿಯವರಿಗೆ ಬ್ರಾಹ್ಮಣ ಸಮಾಜದ ಮೇಲೆ ತೀವ್ರ ಅಸಮಾಧಾನವಿದೆ. ಅದು ಅವರೊಬ್ಬರ ಭಾವನೆ ಮಾತ್ರವಲ್ಲ. ಒಟ್ಟಾಗಿ ದಲಿತ ಸಮುದಾಯದ ಮನಸ್ಥಿತಿಯೂ ಇದೆ ಆಗಿದೆ. ಹೆಣದ ಮೇಲಿನ ಹಣ ಆಯುವವರೆಗೆ, ನಂತರ ಶಾಲೆಯಲ್ಲಿ ಉಪಧ್ಯಾಯರು ಕೊಡುತ್ತಿದ್ದ ಶಿಕ್ಷೆ ಅವರಿಗೆ ಸಹಜವಾದುದು ಎನಿಸಿಬಿಟ್ಟರು. ಎಷ್ಟರ ಮಟ್ಟಿಗೆ ಎಂದರೆ " ಶಿಕ್ಷೆ ಕಾಲ ಬಂದಾಗ ಅವರು ಹೇಳುವುದಕ್ಕಿಂತ ಮುಂಚೆವಾಗಿಯೇ ನಾವು ಆಸಾನ ಹಾಕುತ್ತಿದ್ದೆವು" ಎಂದಿರುವವರು. ಶಿಕ್ಷೆಗೆ ಜಡ್ಡುಗಟ್ಟಿ ಹೋಗಿದ್ದರು. " ನನ್ನವ್ವೆಯರೇನು ಮೌನ ಸಂಪನ್ನೆಯರಲ್ಲ ಅವರು ಕಡ್ಡಿಗೀರುವುದನ್ನೇ ಕಾಯುವ ಸ್ವಾಭಿಮಾನಿ ಕದನಗಾತಿಯರು. ಕೆರೆಗೆ ಹೋದರೆ ಕದನವಿಲ್ಲದೆ ಮರಳುವ ಹಾಗೆಯೇ ಇರಲಿಲ್ಲ.

ಅವರು ಹೇಳುವ ಕೆಲವೊಂದು ವಿಚಾರಗಳು ನಮ್ಮ ಸುತ್ತಮುತ್ತಲೂ ನಡೆದಿವೆಯೇನೋ ಎನಿಸುತ್ತದೆ. ಒಂದು ನಿರ್ಮದ ಬಂಧ. ಬದುಕಿಗೆ ಬಂಧನವಾದಾಗ ಅದು ಭಯಾನಕ ಎನಿಸುತ್ತದೆ ಎನ್ನುವಾಗ ಅವರ ಮನೆಯವರು ಸ್ವಾತಂತ್ರ್ಯದ

ಸಮಯದಲ್ಲಿ ವೀರಶೈವ ಧರ್ಮಕ್ಕೆ ಮತಾಂತರ ಹೊಂದುತ್ತಾರೆ. ಇದಕ್ಕೆ ಅಂಬೇಡ್ಕರ್‌ರವರ ಬೌದ್ಧಧರ್ಮಾವಲಂಬನೆಯ ಪ್ರೇರಣೆಯೂ ಇರಬಹುದು. ಮತಾತೀತರಾಗಿಯೇ ಇರಬಹುದಾಗಿತ್ತು.

ಕಾಗೆಯ ಬಣ್ಣ ಬಿಳಿಯದಾಗಲು ಸಾಧ್ಯವೇ ? ಕೆಟ್ಟ ಸಾಮಾಜಿಕ ವ್ಯವಸ್ಥೆ ಬದಲಾಗುವ ಕಾಲಕ್ಕೆ ಬಹುಶಃ ಮನುಕುಲ ಉಳಿಯಲಾರದೇನೋ ! ಹಂತ ಹಂತವಾಗಿ ತಮ್ಮ ಬದುಕಿನ ಅನಾವರಣಕ್ಕೆ ಕಾರಣವಾಗುವ ಲೇಖಕರು ತುಂಬಾ ಧೈರ್ಯವಾಗಿ ಮಾಜಿ ಪ್ರೇಯಸಿಯ ಬಗ್ಗೆ ಸಂಕ್ಷಿಪ್ತವಾಗಿ ಹೇಳಿಕೊಳ್ಳುತ್ತಾರೆ. ಆ ಹೇಳಿಕೊಳ್ಳುವ ಸಂದರ್ಭದಲ್ಲೂ ಆಕೆಯನ್ನು ತಾತ್ಸಾರವಾಗಿ ಕಂಡಿಲ್ಲ. ಇನ್ನು ಕಮರದ ಪ್ರೀತಿಯು ಇದಕ್ಕೆ ಕಾರಣವಾಗಿರಬಹುದು. ಆಕೆಯ ಬಗೆಗಿನ ಅವರ ಮಾತುಗಳು ಎಲ್ಲಿಯೂ ಸಭ್ಯತೆಯ ಗಡಿ ದಾಟಿಲ್ಲ. ಹುಡುಗಿಯರು ಒಂದು ವಿಧದಲ್ಲಿ ಅವಕಾಶವಾದಿಗಳೆಂದರೆ ಖಂಡಿತ ತಪ್ಪಲ್ಲ. ತಮಗೆ ಅವಶ್ಯವೆನಿಸಿದರೆ ಕತ್ತೆ ಕಾಲನ್ನು ಬೇಕಾದರೆ ಹಿಡಿಯುತ್ತಾರೆ. ಅದೇ ಬೇಡವೆ ಹೋದಾಗ ಬೆಣ್ಣೆಯಲ್ಲಿ ಕೂದಲು ತೆಗೆದಂತೆ ನಯವಾಗಿ ನುಣಸಿಕೊಳ್ಳುತ್ತಾರೆ.

ಲೇಖಕರು ಮದುವೆಯಾಗಿ ಸಪತ್ನೀಕರಾಗಿದ್ದರೂ ನನ್ನ ಮಾಜಿ ಪ್ರೇಯಸಿಗೆ ಎಂದು ಹೇಳಿ ಬರೆದಿದ್ದಾರೆ. ಇದನ್ನು ಅವರ ಪತ್ನಿ ವಿಶಾಲಮನದಿಂದ ಕ್ಷಮಿಸಿರಬಹುದು. ಆದರೆ ಒಂದು ವೇಳೆ ಅವರ ಪತ್ನಿ ಲೇಖಕರ ಸ್ಥಾನದಲ್ಲಿ ನಿಂತು ಹೀಗಲ್ಲ ಮುಕ್ತವಾಗಿ ನುಡಿದಿದ್ದರೆ, ಆಗ ಲೇಖಕರ ಪ್ರತಿಕ್ರಿಯೆ ಹೇಗಿರಬಹುದಿತ್ತು ? ಎಂಬ ಪ್ರಶ್ನೆ ಕಾಡುತ್ತದೆ.

ಏನಸ್ಸೇ ಆಗಲಿ ಪುರುಷರು ರಾಜಾರೋಷವಾಗಿ ಹೇಳಿಕೊಳ್ಳುವಂತೆ, ಸ್ತ್ರೀಯರು ಹೇಳಿಕೊಳ್ಳಲು ಸಾಧ್ಯವಾಗುವುದೇ ಇಲ್ಲ. ಏಕೆಂದರೆ ಅವರಿಗೆ ಅವರದೇ ಆದ ಮಿತಿಗಳಿವೆ. ತಮ್ಮ ಪ್ರೀತಿಯ ಹೆಣ್ಣು ತಮ್ಮಿಂದ ದೂರವಾಗುವಾಗ ಲೇಖಕರು ನಡೆದುಕೊಳ್ಳುವ ರೀತಿ ಉನ್ನತವಾದದ್ದು ಎನಿಸಿದರೂ, ಅವರಿಗೆ ಅನ್ಯಮಾರ್ಗವಿರಲಿಲ್ಲ. ನಮ್ಮ ಸ್ವಾರ್ಥದ ಬದುಕಿಗೆ ಇನ್ನೊಬ್ಬರನ್ನೇಕೆ ಬಲಿ ತೆಗೆದುಕೊಳ್ಳುವುದು ? ನಾನು ಭಗ್ನ ಪ್ರೇಮಿಯಾದರೂ ಸಾಯಲಾರೆ. ಬದುಕಿ ತೋರಿಸುತ್ತೇನೆ. ನಾನಾರೆಂದು ಎಂಬ ಅವರ ದೃಢಚಿತ್ತವನ್ನು ಕಾಣುವಾಗ ಪ್ರೇಮಿಗಳೆಲ್ಲರೂ ಈ ಬಗೆಯಲ್ಲಿ ಆಲೋಚಿಸಿದರೆ ಅವರೆಲ್ಲರ ಬದುಕು ದುರಂತವಾಗುವುದು ತಪ್ಪುತ್ತದೆ. " ಹಿಡಿದರೂ ಹಿಡಿಯಲಾಗದ, ಬಿಡಿದಿದ್ದರೂ ಬಿಟ್ಟು ಹೋಗುವ ಸ್ಥಿತಿಯ ಅರಿವು" ಅವರಿಗೆ ಚೆನ್ನಾಗಿ ಗೊತ್ತಿವೆ. ಅವರೆಂದು ಭ್ರಮಾಧೀನರಲ್ಲ. ವಾಸ್ತವದ ನೆಲೆಗಟ್ಟಿನಲ್ಲಿ ನಿಂತು ಬದುಕ ಕಂಡವರು."ನನ್ನ ಮಿದುಳೆಂಬ ಕೆಸರಿನ ಮೇಲೆ ಎರಡು ಸಣ್ಣ ಹುಳುಗಳು ಕೆಸರು ಮೆತ್ತಿದ್ದ ಕಾಲುಗಳನ್ನು ಎತ್ತಿ ಎತ್ತಿ ಇಡುತ್ತಾ ಹೊರಟ ಅನುಭವ ಮಾತ್ರ ಆಗುತ್ತಿತ್ತು" ಎಂದವರು ಸೂಚ್ಯವಾಗಿ ಅಂತರ್ಯ ತೆರೆದಿಡುತ್ತಾರೆ.

ಪ್ರೇಮ ವೈಫಲ್ಯಗೊಂಡಾಗ ನಿರಾಶೆಯಾದರೂ ಹತಾಶರಾಗುವುದಿಲ್ಲ. ಆಗುವುದೆಲ್ಲ ಒಳ್ಳೆಯದಕ್ಕೆ ಎಂಬ ತತ್ವದಂತೆ ಸಂಶೋಧನೆಯ ಕಡೆಗೆ ತಮ್ಮ ಇಡೀ ಗಮನವನ್ನು ಕೇಂದ್ರೀಕರಿಸುತ್ತಾರೆ. ತುಂಬಾ ಬುದ್ಧಿಮಂತ ವಿದ್ಯಾರ್ಥಿಯಾದ ಅವರ ಹಾಸ್ಟೆಲಿನ ರೂಂಮೇಟ್‌ನ ಧಾರುಣ ಸ್ಥಿತಿಯನ್ನು ಕಂಡು ಮರಗುತ್ತಾರೆ. ಅದೊಂದು ಬಗೆಯಲ್ಲಿ ಆ ದಲಿತ ವಿದ್ಯಾರ್ಥಿ ಶೋಷಣೆಗೆ ಬಲಿಯಾಗುತ್ತಾರೆ. ನಮ್ಮ ಜೀವನದಲ್ಲಿ ನಡೆವ ಒಂದೊಂದು ಘಟನೆಗಳೂ, ಒಂದೊಂದು ಸನ್ನಿವೇಶಗಳೂ ನಮಗೆ ಹೊಸ ಪಾಠಗಳನ್ನು ಕಲಿಸಿಕೊಡುತ್ತಾ ಹೋಗುತ್ತದೆ. ನಮ್ಮ ಜೀವನ ಮೂಗಿದೇ ಹೋಯಿತು. ಬದುಕಿನಲ್ಲಿ ಏನು ಉಳಿದಿಲ್ಲ. ಎಂದು ಕಂಗೆಡುವಾಗಲೇ ಜೀವನ " ಅಕ್ಷಯ ಪಾತ್ರೆ" ಯಾಗುತ್ತಾ ಹೋಗುತ್ತದೆಂಬ ಸತ್ಯವನ್ನು ಅವರು ಅರಿತಿದ್ದರು. "ಕಹಿಯುಂಡು ಬೆಳೆದ ದೇಹಕ್ಕೆ ವಿಷ ಕುಡಿದರೂ ಅಮೃತವಾಗುತ್ತದೆ."

ಮಾಲಗತ್ತಿಯವರು ಪ್ರಾಮಾಣಿಕವಾಗಿ ತಮ್ಮ ಆತ್ಮಾವಲೋಕನ ಮಾಡಿಕೊಂಡಿದ್ದರೂ, ಎಲ್ಲೋ ಇನ್ನೂ ಇರಬಹುದಾಗಿತ್ತು ಎನಿಸುತ್ತದೆ. ಕೆಲವು ಕಡೆ ಸ್ವಗತಕ್ಕೆ ಹೇಳಿಕೊಳ್ಳುವ ಮಾತುಗಳನ್ನು ಆತ್ಮಕಥೆ ಎಂದು ಕರೆದುಕೊಳ್ಳುವ ಔಚಿತ್ಯವಾದರೂ ಏನು ? ಸಂಪೂರ್ಣವಾಗಿ ಅನಾವರಣಗೊಳ್ಳದೆ ಹೇಳುವ ಮಾತುಗಳು ಆತ್ಮಕಥೆಗೆ ಪೂರಕವಾಗಿರಲು ಹೇಗೆ ಸಾಧ್ಯ ? ಇದಕ್ಕೆ ಕಾದಂಬರಿ ಎಂಬ ಹೆಸರನ್ನೇ ಕೊಡಬಹುದಿತ್ತಲ್ಲವೇ ? ಎಂಬ ಪ್ರಶ್ನೆಗಳು ಓದುಗರನ್ನು ಒಮ್ಮೊಮ್ಮೆ ಕಾಡುವುದುಂಟು. ಜೀವನದ ಸಿಂಹಾವಲೋಕನದ ಚುಟುಕು ಮಾತ್ರ ಇದಾಗಿದೆ. ಇದು ಅವರ ಬದುಕಿನ ಮೊದಲ ಭಾಗ. ಉಳಿದ ಭಾಗ ನಂತರ ಬಂದರೂ ಬರಬಹುದು ಎನ್ನುವುದಕ್ಕೆ "ಹೆಮ್ಮೆತರುವ, ಪ್ರಸಂಗಗಳನ್ನು ಹೇಳಿಕೊಳ್ಳುವಂತೆ, ಹೇಸಿಗೆ ತರಿಸುವ ಪ್ರಸಂಗಗಳನ್ನು ಬಿಚ್ಚಿ ಬರೆಯ ಬೇಕೆನ್ನುವ ನಾನು'' ಎಂಬ ಅವರ ಮಾತೇ ಸಾಕ್ಷಿಯಾಗಿದೆ. ಬಿತ್ತಲಾದಷ್ಟು ಮನುಷ್ಯ ಮಾನವಂತನಾಗಬಹುದು.

"ಮೂರನೇ ಕಣ್ಣು '' ಅವರ ಮೂರನೇ ಕಾವ್ಯವಾಗಿದೆ. ಶಿವನ ಬಿರುಗಣ್ಣನ್ನೇ ಅವರು ಕವನದ ಶೀರ್ಷಿಕೆಗೆ ಬಳಸಿದ್ದಾರೆ. ಸೃಷ್ಟಿ ಸ್ಥಿತಿಲಯಕ್ಕೆ ಕಾರಣವಾಗುವ ಶಿವನ ಹಣೆಗಣ್ಣಿನಷ್ಟು ತಾಪ ಅವರ ಹೃದಯದಲ್ಲಿನ್ನು ಜೀವಂತವಾಗಿದೆ. ತಮ್ಮ ಜನರಿಗಾಗುವ ಅನ್ಯಾಯಕ್ಕೆ ಕುದಿ ಕುದಿದು ಇಂಗಿ ಹೋಗದೆ ಚಿಗುರುತ್ತಾರೆ''. ಬಂಡಾಯ ನನಗೆ ಪ್ರತಿಭಟಿಸುವುದನ್ನು ಕಲಿಸಿತೇವಿನಃ ಸಮಾಜದೊಂದಿಗೆಯಿದ್ದು, ಬದುಕುವುದನ್ನು ಕಲಿಸಲಿಲ್ಲ''. ಎಂಬ ಇವರ ಕಾವ್ಯವೂ ಖಂಡ ಕಾವ್ಯದಲ್ಲಿ ಸೀಳ್ಗವನಗಳಾಗಿವೆ.

" ನನ್ನ ನೆಲದಲಿ ; ನನ್ನವರ ಜೀತದ ಬಗ್ಗೆ ಹೇಳುವುದು ಬೆಟ್ಟದಷ್ಟಿದೆ
ಅಡಿಗಿರುವ ಧರೆಯೇ ಕುಸಿದಿರಲು

- (ತೀನಿದಾಸ್ಯದ ಕಾಲ)

ನೋವು, ಅಸಹಾಯಕತೆ, ಸಿಟ್ಟು ಎಲ್ಲವೂ ಇಲ್ಲಿ ಸೇರಿಕೊಂಡಿವೆ. ಅವರ ಕವನ 'ಒಲೆ ಹತ್ತಿ ಉರಿದರೆ ನಿಲಬಹುದಲ್ಲದೆ ಧರೆ ಹತ್ತಿ ಉರಿದರೆ ನಿಲಬಹುದೆ' ಎಂಬ ಬಸವಣ್ಣನವರ ವಚವನವನ್ನು ನೆನಪಿಗೆ ತರುತ್ತದೆ. ಅವರ ಕಾವ್ಯದಲ್ಲಿ ಬಹಳಷ್ಟು ಜನರ ಮೆಚ್ಚುಗೆಗೆ ಪಾತ್ರವಾದ ಕಾವ್ಯ ಇಳಾಗಾನ -

ತಾಳ್ಮೆಯಿಲ್ಲದ ಹರೆಯಕೆ
ಅಣೆಕಲ್ಲಾಡುವ ಬಯಕೆ
ಕದ ತೆರೆಯದ ಕಣಕೆ.......

ಪುರಾಣ ಪ್ರಸಿದ್ಧ ಕತೆಗಳನ್ನು ಇವರು ಸೊಗಸಾಗಿ ತಮ್ಮ ಕಾವ್ಯದಲ್ಲಿ ಅಳವಡಿಸಿಕೊಳ್ಳುತ್ತಾರೆ. ಉಪಮೆಯಾಗಿ, ರೂಪಕವಾಗಿ ಅಲ್ಲಲ್ಲಿ ಬಳಸಿಕೊಳ್ಳುತ್ತಾರೆ.

ಶಂಬುಕ ತ್ರಿಶಂಕುಗಳಿಗೆ ಸ್ವರ್ಗದ ಜೋಗ
ರಾಮ ಪರಶುರಾಮರಿಗೆ ಸಮರದ ಜೋಗ

(ಕಡಲುಪ್ಪು ಕಾವ್ಯ)

ಯಾರಾದರೂ ಜಾತಿ ಹಿಡಿದು ನಿಂದಿನಿಸದರೆ ಅವರಿಗೆ ಅಪಾರ ನೋವಾಗುತ್ತದೆ. ಚಿಕ್ಕಂದಿನಿಂದಲೂ ಇಂತಹ ನೋವಿನಲ್ಲೆ ಹುಟ್ಟಿ ಬಂದ ಅವರು ಹಿರಿಯರ ಮೂಲಕ ಹೇಳಿಸುವ ಮಾತು ಯಾರ ಮನದಾಳವೆನ್ನಾದರೂ ಚುಚ್ಚಿರುತ್ತವೆ.

ಹೊಲತಿ ನೀನೋ ನಾನೋ ?
ಮುಟ್ಟದಿರೆನ್ನಲು ನಿನ್ನ ತೊಗಲೇನು ಹೊನ್ನಿನದೇನು ? - (ಸಪ್ತಮಾಸಗಳ ತೇರು)

ಇದೊಂದು ರೀತಿಯಲ್ಲಿ ಸಮಾನತೆಯ ತತ್ವದಂತಿತೆ. ಸೀಸ್ಟೆಗೋ ನಾನು ಹಾಗೆ ಎಂದು ಹೇಳಲು ಅವರು ಬಳಸುವ ಹರಿತ ನುಡಿಗಳು ಅರ್ಥಪೂರ್ಣವಾಗಿದೆ. ಇದು ನಿಜವೂ ಹೌದಲ್ಲವೆ ? ಈ ಮಾತುಗಳು ಅಥವಾ ಕಾವ್ಯ ಇಂದಿನ ಸಮಾಜಕ್ಕೆ ಕೈಗನ್ನಡಿಯಂತಿದೆ. ಮಲಗಿರುವವರನ್ನು ತಟ್ಟಿ ಎಬ್ಬಿಸುತ್ತದೆ.

ದಲಿತ ಸಾಹಿತ್ಯ ಪ್ರವೇಶಕ್ಕೆ ಚಿಕ್ಕ ಚೊಕ್ಕ ಪುಸ್ತಕ. ಅರವಿಂದ ಮಾಲಗತ್ತಿ ಸ್ವಭಾವತಃ ಮಿತಭಾಷಿ, ಎಗ್ಗಿಲ್ಲದೆ ಕಾಡು ಹರಟೆ ಹೊಡೆಯಲಾರರು. ಅವರ ಬರಹಗಳು ಅವರಂತೆಯೇ ಒಂದು ಗಡಿಯಂಚಿನಲ್ಲಿ ಬಂದು ನಿಲ್ಲುತ್ತವೆ. ಏನನ್ನು ಹೇಳಬೇಕೆಂದು ಬಯಸುತ್ತಾರೋ ಅವನನ್ನು ನೇರವಾಗಿ, ಮುಚ್ಚುಮರೆ ಇಲ್ಲದೆ ವಿಶಾದಪಡಿಸುತ್ತಾರೆ. ಇದೊಂದು ಸುದೀರ್ಘ ಲೇಖನವಷ್ಟೆ. ಕೆಲವೊಮ್ಮೆ ಅವರ ವರ್ತನೆ 'ಇದೇನು ದಲಿತರನ್ನು ಹೊತ್ತು ಕೊಂಡವರಂತೆ ಆಡುವರಲ್ಲ' ಎನಿಸುತ್ತದೆ. ಆದರೆ ಆಳದಲ್ಲಿ ಅವರಿಗಿರುವ ಆರ್ದ್ರತೆ ಮನವನ್ನು ಮುಟ್ಟದೆ ಇರದು. ಕಲ್ಲು ಹೃದಯವನ್ನು ಕರಗಿಸುವ, ಮಾನವೀಯತೆಯನ್ನು ಮೊಳಕೆಯಾಡಿಸುವ ಕ್ರಿಯಾವಿಧಾನ ಇದಷ್ಟೇ. 'ದಲಿತ' ಇಲ್ಲ ಎಂದರೆ ಧಮನಕ್ಕೆ ಒಳಗಾದವರು ಎಂದರ್ಥ.

12ನೇ ಶತಮಾನದಲ್ಲಿ ಹರಿದಾಸರು ಅಸ್ಪೃಶ್ಯರನ್ನು 'ಹರಿಜನ' ಎಂದು ಕರೆದರು. ಇತಿಹಾಸದಲ್ಲಿ ಹುದುಗಿ ಹೋಗಿದ್ದ ಈ ಪದವನ್ನು ಗಾಂಧೀಜಿಯವರು ಹೆಕ್ಕಿ ತೆಗೆದರೆಂಬ ಮಾತು ನಮಗೆ ಹೊಸದೆನಿಸುತ್ತದೆ. ದಲಿತರ ಕುರಿತು ಯಾರೇ ಬರೆದರೂ ಅದು ದಲಿತ ಸಾಹಿತ್ಯವಾಗುತ್ತದೆ. ದಲಿತರು ಬರೆದದ್ದು ರಕ್ತ-ಮಾಂಸಗಳಿಂದ ಕೂಡಿರುತ್ತದೆ. ಅಥೆಂಟಿಕ್ ಆಗಿರುತ್ತದೆ. 'ದಲಿತ ಸಾಹಿತ್ಯ ಹಗೆತನ ಸಾಧಿಸುವ ಸಾಹಿತ್ಯವಲ್ಲ. ಮನುಷ್ಯ ಪ್ರೀತಿಯನ್ನು ಸಾರುವ ಸಾಹಿತ್ಯ, ಮೌನ ಹೋರಾಟ ದಲಿತ ವಾಙ್ಮಯದ ಅಂತಃಸ್ವತ್ವ' ಎಂಬ ಮಾತುಗಳನ್ನು ಮೆಲುಕು ಹಾಕುವಾಗ ಅದರಲ್ಲಿಪೊಳ್ಳದೆ ಎನಿಸುವುದಿಲ್ಲ. ಅಸ್ಪೃಶ್ಯವಾದ ಹರಿಜನ ವ್ಯಕ್ತಿಯೊಬ್ಬ ಪ್ರತಿಭಟನೆಗೆ ತೊಡಗಿದನೆಂದರೆ ಅವನ ಅಸ್ತಿತ್ವಕ್ಕೋ, ವ್ಯಕ್ತಿತ್ವಕ್ಕೋ ಎಲ್ಲೋ ಏನೋ ಬಲವಾದ ಪೆಟ್ಟು ಬಿದ್ದಿದೆ ಎಂದರ್ಥ. ಇರುವೆ ಗೂಡಿನಲ್ಲಿ ಒಂದು ಸಲ ನಿಂತು ನೋಡಿ, ಅವು ತಮ್ಮ ಇರುವಿಕೆಗೆ ಧಕ್ಕೆ ಬಂದಾಗ ಶತ್ರುವನ್ನು ಆಕ್ರಮಣ ಮಾಡುವ ರೀತಿಯನ್ನು ! ಮನುಷ್ಯನಲ್ಲಿ ಮನದ ಮೂಲೆಯಲ್ಲಿರುವ ಆತ್ಮಾಭಿಮಾನ ಜಾಗೃತಗೊಳ್ಳುವುದು. ಬೇರೊಬ್ಬರ ದಬ್ಬಾಳಿಕೆ ಸಹಿಸಲಸಾಧ್ಯವಾದಾಗಲೇ ! ಸಹನೆಗೂ ಒಂದು ಮಿತಿ ಇರುತ್ತದೆ. ಅಲ್ಲವೇ? ಕೆಲವೊಮ್ಮೆ ನಮಗೆ ಇಷ್ಟವಾಗದ ವ್ಯಕ್ತಿ ಪದೇ ಪದೇ ಎದುರಿಗೆ ಬಂದಾಗ, ಅವನನ್ನು ನೇರವಾಗಿ ಪ್ರತಿಭಟಿಸ ಲಾಗದಿದ್ದಾಗ, ಲೇಖನ ಆ ಕೆಲಸವನ್ನು ಸಮರ್ಥವಾಗಿ ಮಾಡುತ್ತದೆ. ಗೇಯತೆಯನ್ನು ಕಳೆದುಕೊಂಡಿದ್ದ ಕನ್ನಡ ಕಾವ್ಯಕ್ಕೆ ಗೀಯತೆಯ ಮೂಲಕ ಹೊಸ ಚೈತನ್ಯವನ್ನು 'ದಲಿತ ಸಾಹಿತ್ಯ' ತಂದುಕೊಟ್ಟಿತು. ವ್ಯಕ್ತಿ ಯಾವುದೇ ಮಾರ್ಗವನ್ನು 'ಆಯ್ಕೆ' ಮಾಡಿಕೊಂಡಿದ್ದರೂ ಅಲ್ಲಿ ಭಿನ್ನಾಭಿಪ್ರಾಯಗಳು ಮೊದಲಿಗೆ ಸಹಜವಾಗಿಯೇ ಇರುತ್ತವೆ. ದಲಿತೀಯ ಜ್ಞಾನ ದೀವಿಗೆಯನ್ನು ಹಣತೆಯಿಂದ ಹಣತೆಗೆ ಬೆಳಗುತ್ತಾ ಹೋಗುವುದೇ ದಲಿತ ಪ್ರಜ್ಞೆ.

'ನಾದ-ನಿನಾದ' ಅವರ ನಾಲ್ಕನೆಯ ಕಾವ್ಯ ಸಂಕಲನ. ಪ್ರತಿ ಹಂತದಲ್ಲೂ ಮಾಲಗತ್ತಿಯವರು ಒಂದೊಂದು ಮೆಟ್ಟಲನ್ನು ತಾಳ್ಮೆಯಿಂದ ಏರುತ್ತಾ ಹೋಗಿರುವುದನ್ನು ಕಂಡಿದ್ದೇವೆ. ಅಬ್ಬರದ ಅರಚಾಟವಿಲ್ಲದೆ, ಸ್ನಿಗ್ಧ ಮೌನದಿಂದಲೇ ಎಲ್ಲವನ್ನು ಬರೆಯುವ, ಪಡೆಯುವ ಕವಿಯ ಸಂಯಮ ಹೆಚ್ಚಿನದೆಂದೇ ಹೇಳಬಹುದು. ಜೀವನದಲ್ಲಿ ಏನಾದರೂ 'ಅವಘಢ' ಸಂಭವಿಸಬೇಕಾದರೆ ತಟ್ಟನೆ ಆಗುತ್ತದೆ. ಅದೇ ವ್ಯಕ್ತಿಗೆ ಒಳ್ಳೆಕಾಲ ಬರಬೇಕಾದರೆ ಕಾಲನ ಉರುಳುವಿಕೆಗೆ ಬದ್ಧರಾಗಲೇ ಬೇಕಾಗುತ್ತದೆ. ಕವಿಗೆ ಒಳ್ಳೆಯ ಕಾಲವನ್ನು ಕಾಯುವ ಸಹನೆಯಿದೆ.

ಒಬ್ಬ 'ಅಸ್ಪೃಶ್ಯ' ಎಷ್ಟೇ ಕಲಿತಿರಲಿ, ಡಿಗ್ರಿಗಳನ್ನು ಪಡೆದಿರಲಿ, ಅಧಿಕಾರವಿರಲಿ, ಉದಾರಿಯಾಗಿರಲಿ, ವಿಶಾಲ ಹೃದಯವನ್ನು ಹೊಂದಿರಲಿ, ಆತನನ್ನು ಜಾತಿ ಸೀಮಾರೇಖೆಯನ್ನು ದಾಟಿ ಮುಂದೆ ಹೋಗಲು ಬಿಡುವುದಿಲ್ಲ. ತಮಗಾದ

ಸಾಮಾಜಿಕ ನೋವನ್ನು ತಮ್ಮದೇ ಆದ ಸಂವೇದನಾಶೀಲತೆಯಿಂದ ಅವರು ಅಭಿವ್ಯಕ್ತಿಸುವ ಕಾರಣಕ್ಕಾಗಿಯೇ ಮಾಲಗತ್ತಿಯವರ ಕಾವ್ಯದ ಅಭ್ಯಾಸ ಇಂದು ಮುಖ್ಯವೆನಿಸುತ್ತದೆ. ಅವರಲ್ಲಿನ ಹುಡುಕಾಟದ ಮನಸ್ಸು ಇನ್ನೂ ಹೊಸದನ್ನು ಹುಡುಕುತ್ತಲೇ ಇದೆ.

ಅರಿತರೆ ಹೂವು ಮರೆತರೆ ಹಾಲು

ಹುಟ್ಟಿದರೆ ಮಾವು ಸಾವೆಂದರೆ ಬೇವು - (ಯಾರು ನಾನು ?)

ಪ್ರತಿಯೊಬ್ಬ ದಲಿತನು ಸಾಯುತ್ತಲೇ ಹುಟ್ಟುತ್ತಾನೆ. ಹುಟ್ಟುತ್ತಲೇ ಸಾಯುತ್ತಾನೆ. ಆರಂಭ ಅಂತ್ಯವಾಗಿ ಅಂತ್ಯವೇ ಪ್ರಾರಂಭ ಕಾಲವಾಗುವುದನ್ನು ಮಾಲಗತ್ತಿಯವರು ಸೂಚ್ಯವಾಗಿ ಹೇಳುತ್ತಾ ಸಾಗುತ್ತಾರೆ.

ಜಾತಿ ಬದುಕ ಭೂಮಿಯಲ್ಲಿ

ನನ್ನ ಕೊಳಲೇ ನನಗೆ ಸಾಥಿ - (ಮೂಳೆ ಕೊಳಲು)

ಇಲ್ಲಿನ ಅವರ ಬಹುತೇಕ ಕಾವ್ಯಗಳಲ್ಲಿ ದ. ರಾ. ಬೇಂದ್ರೆಯವರ ಪ್ರಭಾವ ಪ್ರಧಾನವಾಗಿ ಎದ್ದು ಕಾಣುತ್ತದೆ. ಈ ಕಾವ್ಯ ಅರ್ಪಿತವಾಗಿರುವುದು ಅವರಿಗೆ.

ದಲಿತ ಹೆಣ್ಣುಗಳ ಜೀವನ ಧಾರುಣವಾದುದು ನಗರದಲ್ಲಿಯಾದರೆ, ಅಲ್ಪಸ್ವಲ್ಪ ವಿದ್ಯೆ ಕಲಿತು ಎಲ್ಲರಂತೆ ಬಾಳುವುದನ್ನು ಇಲ್ಲಿನ ಹೆಣ್ಣುಗಳು ಕಲಿತಿರುತ್ತಾರೆ. ಆದರೆ ಗ್ರಾಮೀಣ ಬದುಕಿನ ಬಾಲೆಯರ ಕಥೆ ಕಣ್ಣೀರ ವ್ಯಥೆಯನ್ನು ಹಾಡುವ ಕವನ ಹೊಸ್ತಿಲಾದವರಲ್ಲಿದೆ.

ಕುರೂಪಿಯಾಗಿರಲಿ, ರೂಪವತಿಯಾಗಿರಲಿ ಕಷ್ಟಾನಕ್ಕ

ಮದುವೆ ಆಗಿತ್ತು, ಆಗದೆ ಹೋಗಿದ್ರು ಕಷ್ಟಾನೆ ಅಕ್ಕ.

ದಲಿತ ಹೆಂಗಳೆಯರು ಪರಿಸ್ಥಿತಿಯ ಕೈಗೂಸುಗಳೇ ಸರಿ. ಅವರಿಗೆ ಸ್ವಾತಂತ್ರ್ಯ ಬಹಳ ಕಡಿಮೆ ಬಾಯಿ ಬಿಟ್ಟರೆ ಬೇರೇನೂ ಗೊತ್ತಿಲ್ಲ. ಮುಗ್ಧ ಮನದವರು ಖಡಾ ಖಂಡಿತ ನಿಷ್ಠೂರ ವಾದಿಗಳು. ಮೊದಲು ಶೋಷಣೆಗೆ ಗುರಿಯಾಗುವವರೆಂದರೆ ಇವರ ಬದುಕು ಕತ್ತಿಯ ಅಲುಗಿನ ಮೇಲೆ ನಡೆದಷ್ಟೇ ಸೂಕ್ಷ್ಮವಾದುದು. ಹರಿಶ್ಚಂದ್ರನ ಅಮೃತಮತಿಯನ್ನು ತಮ್ಮ ಕಾವ್ಯದಲ್ಲಿ ಅಳವಡಿಸಿಕೊಂಡಿರುವ ಸೊಗಸು, ನಮ್ಮ ದಲಿತ ಹೆಣ್ಣುಗಳ ಪ್ರಲಾಪವೂ ಆಗಿದೆ.

ಕಾಮುಕ್ಕ ಕಣ್ಣಿಲ್ಲ ಮೋಹಕ್ಕೆ ಬಣ್ಣಿಲ್ಲ

ಹರದಾಡು ಹಾವು ಮನದಾಗ (ಅಮೃತಮತಿಯ ಪ್ರಳಾಪ)

"ಮೂಕನಿಗೆ ಬಾಯಿ ಬಂದಾಗ" ಇರುವ ಸೊಗಸು ಸೊಗಡೇ ಬೇರೆ. ಇಲ್ಲಿನ ಕಾವ್ಯಗಳಲ್ಲಿನ ಲಯವೇ ಬೇರೆ. ಒಂದಕ್ಕಿಂತ ಒಂದು ತುಂಬಾ ವಿಭಿನ್ನವಾಗಿದೆ. ಇಡೀ ಕವನದ ತುಂಬೆಲ್ಲ ಬೇಂದ್ರೆಯವರ ಮೋಡಿ ಜಾದುವಿನಂತೆ ಕೆಲಸ ಮಾಡಿದೆ. ಮಾಲಗತ್ತಿಯವರು ಆರಂಭದ ಕಾವ್ಯದಲ್ಲಿ ಸಾಂಸ್ಕೃತಿಕ ಪರಿಸರದ ಹಿಂಸೆ, ರೋಷವನ್ನು ಅಭಿವ್ಯಕ್ತಿಯುವ ಆಶಯವನ್ನು ಹೊಂದಿದ್ದರೂ, ಭಾವಾವೇಶದಿಂದ ಪ್ರತಿಭಟಿಸಿದ್ದರೂ, ಈಗ ಅವರ ಭಾವಾವೇಶ ಸ್ವಲ್ಪ ಮಟ್ಟಿಗೆ ತಹಬದಿಗೆ ಬಂದಿದೆ. ಹೆಜ್ಜೆ ಹೆಜ್ಜೆಗೂ ತಾಯಿಗಿಂತ 'ಆಯಿ'ಯ ನೆನಪು ಅವರನ್ನು ಗಾಢವಾಗಿ ಕಾಡುತ್ತದೆ. ಅವರೇ ಹೇಳಿಕೊಂಡಿರುವ ಹಾಗೇ ನನ್ನ ಕಾವ್ಯದ ನಡಿಗೆಯೊಂದಿಗಿನ ನನ್ನ ಮನಸ್ಸಿನ ಆಂತರಿಕ ದ್ವಂದ್ವಕ್ಕೆ ಈ ಸಂಕಲನ ಪ್ರತೀಕವಾಗಬಹುದು ಎಂಬ ಮಾತು ಸರಿ ಎನಿಸುತ್ತದೆ.

ಮಾಲಗತ್ತಿಯವರು ಬರೆದ ಕೃತಿಗಳಲ್ಲಿ ಉಲ್ಲೇಖಿಸಬಹುದಾದ ಕೆಲವು ಪ್ರಮುಖ ಕೃತಿಗಳೆಂದರೆ - ''ಕಪ್ಪುಕಾವ್ಯ'', ''ಮಸ್ತಾಭಿಷೇಕ (ನಾಟಕ)'', ''ಅಗೇಪೀಣಿ'', ಜಾನಪದ ವ್ಯಾಸಂಗ, ಜಾನಪದ ಶೋಧ, ಭೂತಾರಾಧನೆ, ದಲಿತಯುಗ, ಜಾನಪದ ಮತ್ತು ದೇಶೀವಾದ, ಸಂಪಾದನೆಯ ಕೃತಿಗಳು- ಸಮಾವೇಶ, ನಾಲ್ಕು ದಲಿತೀಯ ಕಾದಂಬರಿಗಳು, ಡಾ. ಅಂಬೇಡ್ಕರ್ ವಿಚಾರಧಾರೆ. ಅಂಬೇಡ್ಕರ್ ವಾದ - ಸಂವಾದಿ, ಗೋಮಾಳದಿಂದ ಗಂಗೋತ್ರಿಗೆ, ದಲಿತ ಸಾಹಿತ್ಯ ನೆಲೆ - ಹಿನ್ನಲೆ ಮುಖ್ಯವಾದವು.

''ಸಮುದ್ರದೊಳಗಣ ಉಪ್ಪು ನಾಟಕ''ದಲ್ಲಿ ಮಾಲಗತ್ತಿಯವರು ಪರಕಾಯ ಪ್ರವೇಶ ಮಾಡಬೇಕಿತ್ತು. ಮೀಸಲಾತಿಯ ಬಗ್ಗೆ ಬರೆದ ನಾಟಕವಾದರೂ ಮನದೊಳಗೆ ಬರಲು ತಡಕಾಡುತ್ತದೆ. ಬದುಕಿನಲ್ಲಿ ಅನುಭವ ಮುಖ್ಯ ; ಪಾತ್ರಗೌಣ ! ಪರಂಪರೆ ಮುಖ್ಯ, ವಿಚಾರಗೌಣ. ಚರಿತ್ರೆಯಲ್ಲಿ ಎಲ್ಲರೂ ಇತಿಹಾಸವಾಗುವುದಿಲ್ಲ ಪಾತ್ರಗಳಾಗುತ್ತಾರೆ ಎನ್ನುವ ಆರಂಭದ ನುಡಿಗಳು ವಿಚಾರವೆಂಬ ಸಾಗರವನ್ನು ಈಜಲಾರದೆ ಸೋಲುತ್ತವೆ. ಅಂತರ್ಜಾತಿಯ ವಿವಾಹ ಎಷ್ಟು ಪ್ರಗತಿಪರ ? ಎಂದು ಪ್ರಶ್ನೆಯೊಂದಿಗೆ ಬರುವ ಈ ಪುಟ್ಟಕೃತಿ ಯಾರನ್ನೂ ಬಿಡದೆ ಕಾಡುತ್ತದೆ. ಅನುಲೋಮ ವಿಲೋಮ ವಿವಾಹಗಳು ನೆನ್ನೆ ಮೊನ್ನೆ ಹುಟ್ಟಿಕೊಂಡವಲ್ಲ, ಅವಕ್ಕೆ ತಮ್ಮವೇ ಆದ ಇತಿಹಾಸವಿದೆ. ಪುರಾಣಗಳಲ್ಲಿ ಬರುವ ಶಿವ-ಗಂಗೆಯರ, ಶ್ರೀನಿವಾಸ - ಪದ್ಮಾವತಿಯರ ವಿವಾಹಗಳು ಅಂತರ್ಜಾತಿಯ ವಿವಾಹಗಳಾದರೂ ಸುಖ್ಯಾಂತವನ್ನು ಕಾಣುತ್ತದೆ. ಆದರೆ ನಮ್ಮ ಜನಪದ ಪುರಾಣದ ಮಾರಿಯ ವೈವಾಹಿಕ ಜೀವನ ಮಾತ್ರ ವೈಫಲ್ಯಗೊಂಡ ಅಂತರ್ಜಾತೀಯ ಮದುವೆ ಆಗುತ್ತದೆ. ನಮ್ಮ ಸಂಪ್ರದಾಯಸ್ಥ ಮನಸ್ಸುಗಳಲ್ಲಿ ಆಳವಾಗಿ ತುಂಬಿಕೊಂಡಿರುವ ಜಾತಿ ಎಂಬ ವಿಷವೃಕ್ಷವನ್ನು ಕಡಿದು ಬಿಸಾಡುವುದು ಸುಲಭ ಸಾಧ್ಯವಲ್ಲ.

ಇತಿಹಾಸದಲ್ಲಿ ಅಂತರ್ ಧರ್ಮೀಯ ಪಿವಾಹಗಳು ಸ್ವಇಚ್ಛೆಯಿಂದ ನಡೆಯುತ್ತಿರಲಿಲ್ಲ. ಬಲವಂತವಾಗಿ ಮತಾಂತರಗೊಳಿಸಿ, ಆಕೆಯ ಮಾನಸಿಕ, ದೈಹಿಕ ಅತ್ಯಾಚಾರಕ್ಕೆ ಕಾರಣರಾಗುತ್ತಿದ್ದವರು ಮೊಗಲ್ ಅರಸರು ಎಲ್ಲೋ ಅಲ್ಲೊಂದು ಇಲ್ಲೊಂದು ಬೆರಳೆಣಿಕೆಯಷ್ಟು ಮದುವೆಗಳು ಮಾತ್ರ ಸಫಲತೆನ್ನುಗಳಿಸಿವೆ. ಈ ಜಾತಿ, ಧರ್ಮಗಳು ನಮ್ಮ ಜನರನ್ನು ಎಷ್ಟರ ಮಟ್ಟಿಗೆ ತಮ್ಮ ತೆಕ್ಕೆಗೆ ಹಾಕಿಕೊಂಡಿದ್ದವು ಎಂಬುದು ಇದರಿಂದ ತಿಳಿಯುತ್ತದೆ.

ಜಾತಿಯನ್ನು ಮೀರಿ ನಿಂತರೆ ಸಮಸ್ಯೆಗಳನ್ನು ಸಲೀಸಾಗಿ ದಾಟಬಹುದು. ಜಾತಿ ವ್ಯವಸ್ಥೆಯನ್ನು ಯಾರು ವಿರೋಧಿಸುತ್ತಾರೋ ಅವರು ಜಾತಿಯನ್ನು ಮೀರುವುದಕ್ಕಾಗಿ ಶಕ್ತಿಮೀರಿ ಹೆಣಗಾಡುತ್ತಾರೆ. ಜಾತಿಯಿಂದ ಜೀವನವೋ, ಜೀವನದಿಂದ ಜಾತಿಯೋ ? ಎಂಬುದು ಬೀಜವೃಕ್ಷನ್ಯಾಯದಂತಿದೆ.

ಜಾತಿ ಹೀನನ ಮನೆಯ ಜ್ಯೋತಿ ತಾ ಹೀನವೇ
ಜಾತಿ ವಿಜಾತಿ ಎನಬೇಡ ದೇವನೊಲಿದಾತನೇ ಜಾತ ಸರ್ವಜ್ಞ

ಎಂದು ಬಹಳ ಹಿಂದೆ ಸರ್ವಜ್ಞ ಹೇಳಿದ್ದರೂ ಆ ಕಾಲದಿಂದಲೂ ಈ ಕಾಲದವರೆಗೂ ಜಾತಿಯೂ ತನ್ನ ವಿಸ್ತಾರ ಸಾಮ್ರಾಜ್ಯಕ್ಕೆ ಅನಭಿಷಿಕ್ತ ದೊರೆಯಾಗಿಯೇ ಮೆರೆಯುತ್ತಿದೆ. ಬಹಳಷ್ಟು ವಿಚಾರವಾದಿಗಳು ವಿವಾಹವಾಗುವವರೆಗೆ ಮಾತ್ರ ಜಾತಿಯನ್ನು ಮೀರುತ್ತಾರೆ. ಮದುವೆಯ ನಂತರ ಜಾತಿಯನ್ನು ಹುಡುಕುತ್ತಾರೆ. ಹೊಸ ಚಿಂತನಾ ಪ್ರವಾಹವನ್ನು ಹುಟ್ಟು ಹಾಕಿದ ಮೇಲೆ ಅದಕ್ಕೊಂದು ಪರ್ಯಾಯ ವ್ಯವಸ್ಥೆ ಅನಿವಾರ್ಯ. ಅಂತರ್ಜಾತೀಯ ವಿವಾಹಕ್ಕೆ ವ್ಯಕ್ತಿಗತ ಸಮಸ್ಯೆಗಳು ಎದುರಾದಂತೆ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳು ಎದುರಾಗುತ್ತವೆ.

ನಾವು ಅಂತರ್ಜಾತೀಯ ವಿವಾಹಗಳ ಬಗ್ಗೆ ಮಾತಾಡುವುದಕ್ಕಿಂತ ಮೊದಲು ದಲಿತರಲ್ಲಿರುವ ಪ್ರಮುಖ ಒಳಜಾತಿಗಳಲ್ಲಿ ಎರಡನ್ನು ಉಲ್ಲೇಖಿಸುವುದು ಅವಶ್ಯ. ಬಲಗೈಯವರು ಅಂದರೆ ಹೊಲೆಯರು ಮತ್ತು ಎಡಗೈನವರು

ಅಂದರೆ ಮಾದಿಗರು. ಈ ಎರಡು ಜಾತಿಗಳಲ್ಲಿ ನಿತ್ಯ ಘರ್ಷಣೆ, ಬೂದಿ ಮುಚ್ಚಿದ ಕೆಂಡದಂತೆ ಹೊಗೆಯಾಡುತ್ತಲೇ ಇರುತ್ತದೆ. ಒಬ್ಬರನ್ನು ಕಂಡರೆ ಒಬ್ಬರಿಗಾಗುವುದಿಲ್ಲ. ವೈವಾಹಿಕ ಸಂಬಂಧಗಳಂತೂ ನಡೆಯಲೇ ದುಸ್ತರವಾಗಿದೆ. ನಾವೆಲ್ಲ ದಲಿತರು ಎಂಬ ಏಕತಾ ಮನೋಭಾವ ಯಾರಲ್ಲಿಯೂ ಇಲ್ಲದೆ ಇರುವುದರಿಂದ ಇವರಿಬ್ಬರಲ್ಲೂ ಐಕ್ಯತೆ ಕೂಡಿ ಬರುತ್ತಿಲ್ಲ. ಹಾಗಿರುವಾಗ ನಾವು ಅದೇ ನೆಲೆಯಲ್ಲಿ ನಿಂತು ಅಂತರ್ಜಾತಿಯ ಮದುವೆಯ ಬಗ್ಗೆ ಚರ್ಚಿಸುವುದರ ಔಚಿತ್ಯವಾದರು ಏನು ? ಒಂದು ತಲೆಮಾರು ಸಮಸ್ಯೆ ಎದುರಿಸುವುದರಿಂದ ಮುಂದಿನ ತಲೆಮಾರುಗಳು ಮುಕ್ತವಾಗುವುದಾದರೆ ಒಂದು ತಲೆಮಾರು ದಂಡನೆಗೊಳಗಾಗುವುದು ಅಸಮರ್ಥನೀಯವೇನಲ್ಲ.

ಹಿಂದೂ ಧರ್ಮದ ವರ್ಣ ವ್ಯವಸ್ಥೆಯಲ್ಲಿ ಯಾವುದೇ ಬಗೆಯ ಆಂತರಿಕ ಕಟ್ಟುಪಾಡುಗಳಿಲ್ಲದೆ ವಿವಾಹಗಳು ನಡೆಯುವ ಕಾಲವೂ ಇತ್ತು. ಬರಗಾಲದಂತಹ ಸಂದರ್ಭಗಳಲ್ಲಿ ತಿನ್ನುವ ಆಹಾರದಲ್ಲಿ ವ್ಯತ್ಯಾಸಗಳಾಗಿ ಜಾತಿ ಹುಟ್ಟಿಕೊಂಡಂತಹ ಉದಾಹರಣೆಗಳು ಹೇರಳವಾಗಿವೆ. ಹೊಸ ಅಲೆಯ ವಿಚಾರದ ಪ್ರವಾಹದಲ್ಲಿ ಜಾತಿಯನ್ನು ಮೀರುವ ಚಿಂತನೆ ಅನಿವಾರ್ಯವಾಗುತ್ತದೆ. ಭಿನ್ನಾಭಿಪ್ರಾಯಗಳು ಬದುಕಿನಲ್ಲಿ ಬೇಕು ನಿಜ. ಆ ಭಿನ್ನಾಭಿಪ್ರಾಯಗಳು ಆರೋಗ್ಯಕರ ವಾದ ಭಿನ್ನಾಭಿಪ್ರಾಯಗಳಾಗಿರಬೇಕೇ. ಹೊರತು ಇರುಸು ಮುರಿಸಿನ ಭಿನ್ನಾಭಿಪ್ರಾಯಗಳು ಕೂಡದು. ಆರೋಗ್ಯಕರ ಭಿನ್ನಾಭಿಪ್ರಾಯಗಳು ಬದುಕನ್ನು ಪರಿಷ್ಕರಿಸುತ್ತಾ ಎತ್ತರದ ಮಟ್ಟಕ್ಕೆ ಕರೆದುಕೊಂಡು ಹೋಗುತ್ತದೆ. ಒಪ್ಪಂದಗಳು ಅರಿವಿನ ಮೂಲಕ ನಡೆಯದೆ ಇದ್ದಲ್ಲಿ ಉದಾರನೀತಿಯನ್ನು ಬದುಕಿನಲ್ಲಿ ಅಳವಡಿಸಿಕೊಳ್ಳದೆ ಹೋದಲ್ಲಿ ಅಂತರ್ಜಾತಿಯ ವಿವಾಹದ ಬದುಕು ದುರಂತಕ್ಕೀಡಾಗುವುದರಲ್ಲಿ ಸಂಶಯವೇ ಇಲ್ಲ. ಗೆಲುವಿನ ಕಾರಣ ಗುರುತಿಸುವಂತೆ ಸೋಲಿಗೆ ಕಾರಣಗಳನ್ನು ಗುರುತಿಸಿ ತಪ್ಪೊಪ್ಪಿಕೊಳ್ಳುವ ಗುಣ ಅಷ್ಟೇ ಅಗತ್ಯ.

ಡಾ. ಅರವಿಂದ ಮಾಲಗತ್ತಿಯವರು ದಲಿತ ಜನಾಂಗವನ್ನು ಪ್ರತಿನಿಧಿಸುವ ದಲಿತರ ಆಶೋತ್ತರಗಳಿಗೆ ಸ್ಪಂದಿಸುವ ಮನಸ್ಥಿತಿಯುಳ್ಳ ಅಂತಃಕರಣದ ಕವಿ. ಬರೆಯುವುದು ಇವರಿಗೆ ಹವ್ಯಾಸವಾಗಿಲ್ಲ ಅವಿಭಾಜ್ಯ ಅಂಗವಾಗಿದೆ. ಬರೆಯುವುದನ್ನು ಬಿಟ್ಟು ಬದುಕಲು ಈ ಕವಿಗೆ ಗೊತ್ತಿಲ್ಲ. ಅವರ ವಿಚಾರ ಯುಕ್ತ ಲೇಖನಗಳು, ಆರೋಗ್ಯಕರ ಚಿಂತನೆಗಳು ಬೇರೆಯವರ ಕಣ್ಣು ಕೆಂಪಾಗುವಂತೆ ಮಾಡುತ್ತವೆ. ಇವೇರನು " ಅಜಾತ ಶತ್ರು"ವಲ್ಲ ಇವರಿಗೆ ನಿಜವಾದ ಶತ್ರುಗಳಿಗಿಂತ ಹಿತಶತ್ರುಗಳೇ ಜಾಸ್ತಿ. ಇವರ ಕಾವ್ಯದ ಬನಿ ನಾಟಕಗಳಲ್ಲಿ ಅಷ್ಟಾಗಿ ಕಂಡು ಬರುವುದಿಲ್ಲ. ಮರಾಠಿ ಆತ್ಮಕಥೆಗಳನ್ನು ಓದಿದವರಿಗೆ ಇವರ ಆತ್ಮಕಥೆ ಸಪ್ಪೆಯಾಗಿ ಕಾಣಬಹುದು. ಆದರೆ ಕನ್ನಡದಲ್ಲಿ ಬೇರೆ ದಲಿತರು ಬರೆದ ಆತ್ಮಕಥೆಗಳಿಗೆ ಹೋಲಿಸಿದರೆ ಇವರದು ಉತ್ಕೃಷ್ಟವಾದುದು ಎನಿಸದಿರದು. ಪ್ರತಿಯೊಬ್ಬ ದಲಿತನು ಅನಾವರಣಗೊಂಡರೆ ಇಂತಹ ನೂರಾರು ಆತ್ಮಕಥೆಗಳು ಕನ್ನಡದಲ್ಲಿ ಬರಬಹುದು. ಆದರೆ ಅವ್ಯಾವೂ ಅವರಿಗೆ ಬೇಕಿಲ್ಲ. ಸತ್ಯವನ್ನು ಹೇಳಿಕೊಂಡು ಸಮಾಜದ ಅವಕೃಪೆಗೆ ಪಾತ್ರರಾಗಲು ಅವರು ಒಪ್ಪುವುದಿಲ್ಲ. ಅವರಿಗೆ ತಮ್ಮ ಜೀವನಕ್ಕಿಂತ ಸಮಾಜ ಮುಖ್ಯವಾಗಿರುತ್ತದೆ. ಮಾಲಗತ್ತಿಯಂತವರಿಗೆ ಸಮಾಜಕ್ಕಿಂತ ತೆರೆದುಕೊಳ್ಳಬೇಕೆಂಬ ಹಂಬಲ ಬಹಳ ಮುಖ್ಯವಾಗಿರುತ್ತದೆ.

ಒಬ್ಬ ಅಸ್ಪೃಶ್ಯನಾದ ವ್ಯಕ್ತಿ ವಿದ್ಯೆ ಕಲಿತು, ಸ್ವಾಭಿಮಾನ ರೂಢಿಸಿಕೊಂಡು ಎಲ್ಲರಂತೆ ತಲೆಯೆತ್ತಿ, ದಿಟ್ಟತನದಿಂದ ನಡೆಯುವ ಹೊತ್ತಿಗೆ, ಆ ವ್ಯಕ್ತಿಯನ್ನು ಓದಿಸಿದ ಹೆತ್ತವರು ಜೀವಚ್ಛವಗಳಂತಾಗಿ ಬಿಟ್ಟಿರುತ್ತಾರೆ. ಆತನ ಅಕ್ಷರಗಳಲ್ಲಿ ಹೆತ್ತವರ ಬೆವರಿಗೆ, ರಕ್ತವಿದೆ, ಅಪಾರವಾದ ಪರಿಶ್ರಮವಿದೆ, ಹಿಂಸೆಯಿದೆ, ಕಣ್ಣೀರಿದೆ, ಕೀಳರಿಮೆ ಇದೆ. ಇದರಿಂದಾಗಿಯೋ ಏನೋ ನಮ್ಮ ದಲಿತರಲ್ಲಿ ಹೆಚ್ಚು ಕಲಿತವರು ಅಧಿಕಾರಕ್ಕೆ ಬಂದೊಡನೆ ಒಂದೋ ದುರಂಕಾರಿಗಳಂತೆ ವರ್ತಿಸುತ್ತಾರೆ. ಇಲ್ಲವೇ ತಮ್ಮ ಜನರನ್ನೇ ತಾವು ಶೋಷಿಸುತ್ತಾ ಹೋಗುತ್ತಾರೆ. ಕೆಲವೊಮ್ಮೆ ಸರ್ವಾಧಿಕಾರಿಗಳಂತೆ ವರ್ತಿಸುತ್ತಾರೆ.

ಮಾಲಗತ್ತಿಯವರಲ್ಲಿ ಇಂತಹ ವಿಕಲ್ಪ ಮನೋಭಾವ ಎಲ್ಲಿಯೂ ಕಂಡು ಬರುವುದಿಲ್ಲ. ಇವರ ಜೀವನ ತೆಂಗಿನಕಾಯಿಯಂತೆ. ಮೇಲೆಲ್ಲ ಒರಟು ಒಳಗೆ ರುಚಿಯಾದ ತಿರುಳು ಇರುವಂತೆ. ಇದೇ ವ್ಯಕ್ತಿ ಬೇರೆ ಜಾತಿಯಲ್ಲೇನಾದರೂ ಇದ್ದರೆ ಇಷ್ಟೊತ್ತಿಗೆ ಅವರು ಉತ್ಸವ ಮೂರ್ತಿಯಾಗಿ ಬಿಡುತ್ತಿದ್ದರು. ಪ್ರಚಾರ ಸೌಲಭ್ಯಗಳಂತೂ ಅವರು ಬೇಡ ಬೇಡವೆಂದರೂ ಹುಡುಕಿ ಬರುತ್ತಿದ್ದವು. ಆದರೆ ನಮ್ಮ ಜನರಿಗೆ ಪಿತ್ತಲಗಿಡ ಮದ್ದಾಗಿರುವುದು ಅಷ್ಟಾಗಿ ಗೊತ್ತಿರುವುದಿಲ್ಲ. ಒಂದು ವೇಳೆ ಗೊತ್ತಾದರೂ ಜಾಣ ಪೆದ್ದರಂತೆ ವರ್ತಿಸಿ ಬಿಡುತ್ತಾರೆ. ಇವರಿಂದ ಮತ್ತಷ್ಟು ಉಜ್ವಲ ಬರಹಗಳು ಹೊರಬರಲಿ. ಅವರ ಕೀರ್ತಿ ಗಗನಹೆತ್ತರಕ್ಕೆ ಏರಲಿ ಎಂಬುದೇ ಸಹೃದಯ ಮನದ ದಲಿತರ ಆಸೆ ಕನಸು.

ಮಾಲಗತ್ತಿ ಅವರು ಕವಿಯಾಗಿ, ಕಾದಂಬರಿಕಾರರಾಗಿ ಚರ್ಚೆಗೊಳಗಾಗಿರುವ ಶಕ್ತ ಲೇಖಕರು. ತಮ್ಮ ಕವಿತೆ, ಕಾದಂಬರಿಗಳಲ್ಲಿ ಬಳಸಿಕೊಳ್ಳಲಾಗದ ವಿಭಿನ್ನ ಅನುಭವ ಜಗತ್ತನ್ನು ಈ ಆತ್ಮಕಥೆಯ ಬರಹದಲ್ಲಿ ಸಹಜವಾಗಿ, ಪ್ರಖರವಾಗಿ ತೆರೆದು ಇಟ್ಟಿದ್ದಾರೆ. ಹಾಗೆ ನೋಡಿದರೆ ಈ ಕೃತಿ ಒಂದೇ ಸಲಕ್ಕೆ ಬರೆದದ್ದಲ್ಲ. ಆತ್ಮಕಥೆಯ ತುಣುಕುಗಳಂತಿರುವ ಇಲ್ಲಿನ ಬಹುತೇಕ ಲೇಖನಗಳನ್ನು ಕಳೆದ ಹತ್ತು ವರ್ಷಗಳಿಂದ ಲೇಖಕರು ಬಿಡಿ ಬಿಡಿಯಾಗಿ ಪ್ರಕಟಿಸಿಕೊಂಡೇ ಬಂದಿರುವರು. ಬಿಡಿ ಬರಹಗಳಾಗಿ ಪ್ರಕಟವಾಗಿದ್ದಾಗಲೇ ಇವು ಕನ್ನಡದ ಓದುಗರನ್ನು ತಾಕಿದ್ದವು. ಈಗ ಈ ಲೇಖನಗಳಲ್ಲಿ ಕೃತಿಯಾಗಿ ಬಂದು, ಕನ್ನಡದ ಓದುಗರ ಸಂವೇದನೆಯನ್ನು ಅಲ್ಲಾಡಿಸಲು ಅಣಿಯಾಗಿವೆ. ಕನ್ನಡದೊಳಗೆ ನಡೆಯುತ್ತಿರುವ ಸಂಸ್ಕೃತಿ ಚಿಂತನೆಯಲ್ಲಿ ಅನೇಕ ಚಲನೆಗಳನ್ನು ಮಾಡುವಷ್ಟು ''ಗೌರ್ಮೆಂಟ್ ಬ್ರಾಹ್ಮಣ' ಕೃತಿಯು ಸಮರ್ಥವಾಗಿದೆ. ಈ ಆತ್ಮಕಥನದಲ್ಲಿ ಲೇಖಕರ ಪ್ರಾಯದ ಕಾಲದವರೆಗಿನ ಅನುಭವಗಳು ಮಾತ್ರ ದಾಖಲಾಗಿದೆ. ಅದರಲ್ಲೂ ಬಾಲ್ಯದ ದಿನಗಳು, ಶಾಲೆ-ಕಾಲೇಜು ಕಲಿವಾಗಿನ ದಿನಗಳ ಅನುಭವಗಳು. ಈ ಕುರಿತು ಮಾಲಗತ್ತಿ ಹೀಗೆ ಬರೆಯುತ್ತಾರೆ.

"ಆತ್ಮಕಥೆ ಬರೆಯುವುದು ನನ್ನ ಚಿಕ್ಕ ವಯಸ್ಸಿಗೆ ಬೇಕೆ ಎನ್ನುವ ಪ್ರಶ್ನೆ ನನ್ನನ್ನು ಕಾಡಿದೆ. ಏಕೆಂದರೆ ಕನ್ನಡ ಸಾಹಿತ್ಯದಲ್ಲಿ ಆತ್ಮಕಥೆ ಬರೆಯುವುದು ಸಾಮಾನ್ಯವಾಗಿ ಕೂದಲು ನರೆತು ತಲೆ ಅಲುಗಾಡುವಾಗ ಅನುಭವಗಳನ್ನು ಹೇಳಿಕೊಳ್ಳಲು ಕೂದಲು ನಲಿಯಬೇಕಾಗಿಲ್ಲ. ಬಾಯೊಳಗಿನ ಹಲ್ಲುಗಳು ಉದುರಬೇಕಿಲ್ಲ. ಬದುಕಿನ ವಾಸ್ತವದ ಸಂಗತಿಗಳನ್ನು ಯಥಾವತ್ತಾಗಿ ಕೊಡುವುದು ಎಂದರೆ ಬದುಕಿರುವಾಗಲೇ ಜನತೆಯ ಬಾಯಿಗೆ ಎಲೆ-ಅಡಿಕೆಯಾಗುವುದು ಎಂದರ್ಥ''.

ಜನಾಂಗವಾದ (**racism**) ಇರುವ ಸಮಾಜದಲ್ಲಿ ಒಬ್ಬ ಕಪ್ಪುವರ್ಣೀಯ, ಜಾತಿ ಸಮಾಜವಿದ್ದಲ್ಲಿ ಒಬ್ಬ ಅಸ್ಪೃಶ್ಯ ವ್ಯಕ್ತಿ ತನ್ನ ಆತ್ಮಕಥೆ ಬರೆದಾಗ ಅದು " ಒಬ್ಬ ವ್ಯಕ್ತಿ' ಯ ಕಥನವಾಗಿರುವುದಿಲ್ಲ. ಇಡೀ ಒಂದು ಸಮುದಾಯವೇ ಚರಿತ್ರೆಯಲ್ಲಿ ಪಟ್ಟ ಅಪಮಾನದ ಬದುಕುಳಿಯಲು ಮಾಡಿದ ಸೆಣಸಾಟದ ಕಥನವಾಗಿರುತ್ತದೆ. ಜತೆಯಲ್ಲೇ ಅದು ಸಾಂಪ್ರದಾಯಿಕ ಸಮಾಜ ಒಂದರ ಒಳಗಿನ ಅಮಾನವೀಯತೆ...... ಕೌರ್ಯಗಳ ಕಥನ ಕೂಡ ಆಗಿರುತ್ತದೆ. ಈ ಅರ್ಥದಲ್ಲಿ ''ಗೌರ್ಮೆಂಟ್ ಬ್ರಾಹ್ಮಣ '' ಕೂಡ 'ಒಬ್ಬ ವ್ಯಕ್ತಿ'ಯ ಚರಿತ್ರೆಯಲ್ಲ : ಮನುಷ್ಯರ ಹಸಿವನ್ನು ಹಸಿವೆಂದರಿಯದ, ಅವರ ಭಾವನೆಗಳನ್ನು ಭಾವನೆಗಳೆಂದು ಗುರುತಿಸಲಾರದ ಅವರ ಪ್ರೇಮವನ್ನು ಪ್ರೇಮವಾಗಿ ಒಪ್ಪಿಕೊಳ್ಳದ ಸಮಾಜವೊಂದರ ನಂಬಿಕೆ-ಆಚರಣೆಗಳ ಚರಿತ್ರೆ. ಇಲ್ಲಿನ ಬರಹಗಳು ಜಾತಿ ಸಮಾಜದ ಸ್ವಭಾವವನ್ನು ವರ್ಣಿಸುತ್ತಲೇ ಅವುಗಳ ಬಗೆಗಿನ ಕಾಮೆಂಟುಗಳಾಗುವ ರೀತಿಯನ್ನು ಗಮನಿಸಬಹುದು.

ಮಾಲಗತ್ತಿಯವರು ಈ ಬರಹವನ್ನು ಬರೆಯುವಾಗ ಯಾವ ಧೋರಣೆಯನ್ನು ತಳೆದಿದ್ದಾರೆ ? ತಮ್ಮ ನೋವನ್ನು ವೈಭವೀಕರಿಸಿ ಹೇಳಿ, ಓದುಗರ ಅನುಕಂಪ ಪಡೆಯುವುದೇ ? ತನಗೆ ಮಾತ್ರದಕ್ಕಿರುವ ಅನುಭವಗಳನ್ನು ನಿರೂಪಿಸುತ್ತ ದಿಗ್ಭ್ರಮೆ, ವಿಸ್ಮಯಗೊಳಿಸುವುದೇ ? ತಮ್ಮ ಹೋರಾಟದ ಕಥೆಯನ್ನು ನಿರ್ಲಿಪ್ತವಾಗಿ ಹೇಳುತ್ತ ಮನುಷ್ಯತ್ವ ಕಳೆದುಕೊಂಡಿರುವ ವ್ಯವಸ್ಥೆಯನ್ನು ವಿಮರ್ಶಿಸುವುದೇ ? ಎಂಥದ್ದು ? ಬಹುಶಃ ಮೂರನೆಯ ಧೋರಣೆಯೇ ಇಲ್ಲಿದ್ದಂತಿದೆ.

ಕಾರಣ ಕೀಳರಿಮೆಯಿಲ್ಲದೆ, ತಮ್ಮ ಅನುಭವವನ್ನು ದಿಟ್ಟವಾಗಿ ಹೇಳುತ್ತ, ಅದನ್ನು ತಾತ್ವಿಕವಾಗಿ ವಿಮರ್ಶಿಸುತ್ತ ಚಿಂತನೆಯನ್ನು ಹುಟ್ಟಿಸಬಲ್ಲ ಲೇಖಕರ ಪ್ರಬುದ್ಧತೆ ಹೀಗಾಗಿ ಜಾತಿ ಗೊತ್ತಿದ್ದೂ, " ನಮ್ಮವನೆಂದು" ರಾಘವೇಂದ್ರ ಮಠದೊಳಗೆ ನಡೆದ ಹಲ್ಲೆಯಿಂದ ರಕ್ಷಿಸಲು ಮುಂದಾಗುವ ಜನರ ಬಗ್ಗೆ, ಜಾತಿ ಗೊತ್ತಿದ್ದೂ, ತನ್ನನ್ನು ಗಾಢವಾಗಿ ಪ್ರೇಮಿಸುವ " ಬ್ರಾಹ್ಮಣ" ಹೆಣ್ಣಿನ ಬಗ್ಗೆ ಅಂದರೆ ನಿಜವಾದ ಮನುಷ್ಯರ ಬಗ್ಗೆ ಮಾಲಗತ್ತಿ ಪೂರ್ವಾಗ್ರಹವಿಲ್ಲದೆ ಬರೆಯಬಲ್ಲರು.

ಈ ಕೃತಿಯಲ್ಲಿ ಜೀವಂತವಾಗಿ ಮೈದಳೆದು ನಿಲ್ಲುವ ಲೇಖನ 'ಆಯಿ' (ಅಜ್ಜಿ)ಯ ಬಗ್ಗೆ ಹೇಳಲೇಬೇಕು. ತನ್ನ ಜಾಣತನ, ಜಿಗುಟುತನ, ತಾಯ್ತನ, ಸಾಹಸಗಳಿಂದ ಈ 'ಆಯಿ' ಅತ್ಯಂತ ಅದ್ಭುತ ಚೈತನ್ಯಶೀಲ ವ್ಯಕ್ತಿಯಾಗಿ ಬೆಳೆದು ಕೃತಿಯಲ್ಲಿ ನಿಲ್ಲುತ್ತಾಳೆ. ಓದುಗರ ಮನಸ್ಸಲ್ಲಿ ಗಟ್ಟಿಯಾಗಿ ನಿಂತು ಬಿಡುವ ಈ ಪಾತ್ರವು ದೇವನೂರರ 'ಒಡಲಾಳದ ಸಾಕವ್ವನಂತೆ. ಮಾಲಗತ್ತಿ ತಮ್ಮ ಆತ್ಮಕಥೆಯನ್ನು ಸದಾಕಾಲ ಮೊಮ್ಮಕ್ಕಳನ್ನು ಹಿಂಡುಕಟ್ಟಿಕೊಂಡು ಬೆಳೆಸಿದ 'ಆಯಿ'ಯ ನೆನಪಿಗೆ ಅರ್ಪಿಸಿರುವುದು ಸಹಜವಾಗಿದೆ. ಲಂಬಾಳೆಯವರು ಕೂಡ ತಮ್ಮ ಆತ್ಮಕಥೆಯಲ್ಲಿ ಜೀವನ ಪ್ರೀತಿಯುಳ್ಳ, ಬದುಕುಳಿಯಲು ಅನೇಕ ಬಗೆಯಲ್ಲಿ ಹೋರಾಡುವ ಇಂಥ ವ್ಯಕ್ತಿಗಳನ್ನು ಚಿತ್ರಿಸುವುದುಂಟು. ಲಂಬಾಳೆಯಾಗಲೀ, ಲಕ್ಷ್ಮಣ ಆಗಲಿ ನಮ್ಮ ಕಲ್ಪನೆಗಳಿಗೂ ಮೀರಿದ, ಬೆಚ್ಚಿಬೀಳಿಸುವಂಥ ಪ್ರಸಂಗಗಳನ್ನು ತಮ್ಮ ಸಮುದಾಯದ ಬಾಳುವೆಯಿಂದ ಎತ್ತಿ ಚಿತ್ರಿಸುತ್ತಾರೆ. (ಅವಕ್ಕೆ ಹೋಲಿಸಿದರೆ ಮಾಲಗತ್ತಿಯವರು ಹೇಳುವ ಅನುಭವಗಳು 'ಸೌಮ್ಯ' ಎನ್ನಬಹುದಾದವು) ಆದರೆ ಸಮಾಜ ಹಾಕಿರುವ ಎಲ್ಲ ದಿಗ್ಬಂಧನಗಳ ಒಳಗೂ ಕೂಡ, ತಮ್ಮ ಜಾಣತನದಿಂದ, ಲವಲವಿಕೆಯಿಂದ 'ಮೋಸ' ಮಾಡುವ, ಪುಟಿಯುವ ಉತ್ಸಾಹದ ವ್ಯಕ್ತಿಗಳನ್ನು ಕಾಣಿಸುತ್ತಾರೆ. ಸಮುದಾಯಿಗಳು ಬದುಕುಳಿಯಲು ಕಂಡುಕೊಂಡಿರುವ ಒಳದಾರಿಗಳನ್ನು, ತಂತ್ರಗಳನ್ನು ವರ್ಣಿಸುತ್ತಾರೆ. ಇಲ್ಲಿ ಬರುವ 'ಆಯಿ' ಇಂಥವಳು.

ಉಳಿದಂತೆ ಮಾಲಗತ್ತಿಯವರು ದಲಿತರ ಬಾಳಿನಲ್ಲಿ ಅವರಲ್ಲೂ ಶಿಕ್ಷಣ ಪಡೆಯುವ ವ್ಯವಸ್ಥೆಯೊಳಗೆ ಬರುವ ಪ್ರಜ್ಞಾವಂತ ದಲಿತರ ಬಾಳಿನಲ್ಲಿ, ಎದುರಾಗುವ ತಲ್ಲಣಮಯ ಪ್ರಸಂಗಗಳನ್ನು ಬರೆಯುತ್ತಾ ಹೋಗಿದ್ದಾರೆ. ಅವರದು ವೇದನೆ ತುಂಬಿದ, ದಾರ್ಶನಿಕನಂತೆ ವಿವೇಚನೆ ಮಾಡುವ ಗಂಭೀರ ಬರಹವಾಗಿದೆ. ಕೆಲವೊಮ್ಮೆ ಅವರು ಸಮಾಜದ ವರ್ತನೆಯನ್ನು ವಿಮರ್ಶೆ ಮಾಡುವ ಸಿನಿಕತೆ ಎನಿಸುವ ಆಕ್ರೋಶದ ಅಂಚಿಗೂ ಸರಿಯುವುದುಂಟು. ಅವರ ಬರಹದ ಶಕ್ತಿ ಇರುವುದು ಅತ್ಯಂತ ವಿಶಿಷ್ಟವಾದ ಅನುಭವಗಳಲ್ಲಷ್ಟೆ ಅಲ್ಲ, ಆ ಅನುಭವಗಳನ್ನು ನಿರೂಪಿಸಲು ಬಳಸುವ ಚಿತ್ರಮಯ ಭಾಷೆಯಲ್ಲಿ, ಈ ಬರಹಗಳು. ಹೀಗಾಗಿ ಒಮ್ಮೆ ಕವಿತೆಯಂತೆ, ಮತ್ತೊಮ್ಮೆ ಪ್ರಬಂಧಗಳಂತೆ, ಬಹಳ ಸಲ ಕತೆಗಳಂತೆ ಓದಿಸಿಕೊಳ್ಳುತ್ತವೆ ; ಮುಟ್ಟಿದರೆ ಮಿಡಿಯುತ್ತವೆ.

ಬಿ. ಬಿ. ಲಲಿತಾನಾಯಕ್ ಅವರ ಸಾಹಿತ್ಯ :-

ಕನ್ನಡ ಸಾಹಿತ್ಯದಲ್ಲಿ ನವ ನಿರ್ಮಾಣದ ರೂಪವಾಗಿ ದಲಿತ ಸಾಹಿತ್ಯ ಸೃಷ್ಟಿಯಾಗಿ, ಆರಂಭದಲ್ಲಿ ಸಾಕಷ್ಟು ಪ್ರಚಾರವನ್ನು ಪಡೆಯಿತು. ಇಂತಹ ಹೊಸ ಪ್ರವಾಹದಲ್ಲಿ ತೇಲಿ ಬಂದ ಹಲವಾರು ದಲಿತ ಬರಹಗಾರರಲ್ಲಿ ಶ್ರೀಮತಿ ಬಿ. ಟಿ. ಲಲಿತಾನಾಯಕ್ ಒಬ್ಬರು. ದಲಿತ ಬಂಡಾಯ ಲೇಖಕಿಯಂದೇ ಗುರುತಿಸಲ್ಪಟ್ಟಿರುವ ಇವರು ಗಿರಿಜನ ಸಂಸ್ಕೃತಿಯಿಂದ ಅರಳಿ ಬಂದವರಾಗಿದ್ದಾರೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ಮಾಡಿರುವ ಲಲಿತಾನಾಯಕ್ ಅವರು ವೃತ್ತಿಯಲ್ಲಿ ರಾಜಕಾರಣಿಯಾದರೂ, ಪ್ರವೃತ್ತಿಯಲ್ಲಿ ಶ್ರೇಷ್ಠ ಬರಹಗಾರರಂದೇ ಪ್ರಸಿದ್ಧರು. ಇವರ ಬರಹ ಸಾಹಿತ್ಯಕವಾಗಿ ಹಾಗೂ ಸಾಂಸ್ಕೃತಿಕವಾಗಿ ಮುಖ್ಯವಾಗುತ್ತದೆ. ಲಲಿತಾನಾಯಕ್ ಅವರು "ನೆಲೆ ಬೆಲೆ" ಹಾಗೂ 'ಗತಿ' ಯಂತಹ ಕಾದಂಬರಿಗಳನ್ನೂ, 'ಹಬ್ಬ ಮತ್ತು ಬಲ', 'ಭಟ್ಟನ ಕನಸು' ಎಂಬ ಸಣ್ಣ ಕಥಾ ಸಂಕಲನಗಳನ್ನು ಹೊರತಂದಿದ್ದಾರೆ. ಜೊತೆಗೆ "ನಂರೂಪ್ಲಿ" ಇದೇ ಕೂಗು ಮತ್ತೆ ಮತ್ತೆ' ಯಂತ ಕವನಸಂಕಲನಗಳನ್ನು ಪ್ರಕಟಿಸಿದ್ದಾರೆ. "ಚಂದ್ರಪರಾಭವ'ದಂತಹ ರೇಡಿಯೋ ನಾಟಕವನ್ನೂ, ದೇವದುರ್ಗ, ರಾಯಚೂರು ತಾಲ್ಲೂಕು ದರ್ಶನಗಳಂತಹ ಚಿಕ್ಕ ಚಿಕ್ಕ ಗ್ರಂಥಗಳನ್ನು ರಚಿಸಿದ್ದಾರೆ.

'ಗತಿ' ಲಲಿತಾನಾಯಕ್ ಅವರ ಎರಡನೆಯ ಹಾಗೂ ಯಶಸ್ವಿ ಕಾದಂಬರಿಯಾಗಿದೆ. ಲಂಬಾಣಿ ಜನರನ್ನು, ಅವರ ಜೀವನ ವಿಧಾನವನ್ನೂ ಈ ಕಾದಂಬರಿ ಪರಿಚಯ ಮಾಡಿಕೊಡುತ್ತದೆ. ಬುಡಕಟ್ಟು ಜನಾಂಗದಲ್ಲಿ ಹುಟ್ಟಿದ ಸೋನುಬಾಯಿ ಗಂಡ ಮತ್ತು ಮಾವನ ದೌರ್ಜನಕ್ಕೆ ಒಳಗಾಗಿ ನರಳಾಡುವುದೇ ಇದರ ಕೇಂದ್ರವಸ್ತುವಾಗಿದೆ. ವರದಕ್ಷಿಣೆಯಂಥ ಆಧುನಿಕ ಸಾಮಾಜಿಕ ಪಿಡುಗಿಗೆ ಸಿಲುಕಿ ಗಂಡ, ಮಾವನಿಂದ ತಿರಸ್ಕೃತಳಾಗುವ ಸೋನೂ, ಲಚ್ಚಿ ಚಂದೂರಂಥ ಅಂತಃಕರಣವುಳ್ಳವರ ಆಶ್ರಯದಲ್ಲಿ ತನ್ನನ್ನೂ ತಾನು ಗುರುತಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಗಂಡನ ಕ್ರೌರ್ಯವನ್ನು ತಾಳಲಾರದೆ ಬೇರೆ ಮನೆ ಮಾಡಿಕೊಂಡು ಬದುಕುವ ಆಸೆಯನ್ನು ಮೂಡಿಸಿಕೊಂಡರೂ, ಸಾಮಾಜಿಕ ವ್ಯವಸ್ಥೆ ಅವಳನ್ನು ಒಂಟಿಯಾಗಿ ನೆಲೆನಿಲ್ಲಲು ಬಿಡುವುದಿಲ್ಲ. ಅವಳ ಸುತ್ತ ಹಲವಾರು ಊಹಾಪೋಹಗಳು ಸೃಷ್ಟಿಯಾಗುತ್ತವೆ.

ಮಹಿಳೆಯರಿಗೆ ಸಂಬಂಧಪಟ್ಟ ನೋವು, ದುಃಖ ದುಮ್ಮಾನಗಳನ್ನು ಗ್ರಹಿಸುವ ಸಂದರ್ಭದಲ್ಲಿ ಲಲಿತಾನಾಯಕ್ ಅವರು ತಮ್ಮ ಸಮಾಜವನ್ನು ಆಯ್ಕೆ ಮಾಡಿಕೊಂಡಿರುವುದು ಅವರ ಬರವಣಿಗೆ ಪರಿಪಕ್ವವಾಗಲು ಸಹಾಯಕವಾಗಿದೆ. ಇವರ ಕೃತಿಗಳಲ್ಲಿ ಬರುವ ಎಲ್ಲಾ ಪಾತ್ರಗಳು ವೈಯಕ್ತಿಕ ಹಾಗೂ ಸಾಮೂಹಿಕ ನೆಲೆಯಲ್ಲಿ ಕೆಲಸ ಮಾಡುತ್ತವೆ. ಬದುಕು ಒಟ್ಟಾರೆಯಾಗಿ ಯಶಸ್ವಿಯಾಗಬೇಕೆಂದು ಹೋರಾಟ ನಡೆಸುವ ಮನಸ್ಸುಗಳನ್ನು ಇಲ್ಲಿ ಗುರುತಿಸಬಹುದು. ಈ ಕಾದಂಬರಿಯಲ್ಲಿ ಬರುವ ಕ್ರೌರ್ಯವು ಸಹ ವೈಯಕ್ತಿಕ ನೆಲೆಯದಾಗಿದೆ. ಸಮೂಹ ಪ್ರಜ್ಞೆಯ ಪ್ರತೀಕವಾಗಿ ನಿಲ್ಲುತ್ತದೆ.

ಗ್ರಾಮೀಣ ಪ್ರದೇಶದ ಜನರ ಮೂಢನಂಬಿಕೆ, ಸಂಪ್ರದಾಯ, ಸಣ್ಣತನ, ಲೈಂಗಿಕ ಸಂಬಂಧಗಳು, ಸಾರಾಯಿ ಮುಂತಾದ ದಲಿತ ಸಮೂಹದ ದೌರ್ಬಲ್ಯಗಳನ್ನು ಇಲ್ಲಿ ವೈಭವೀಕರಿಸಲಾಗಿದೆ. ಪಕ್ಷಪಾತತನವನ್ನುಳ್ಳ ನ್ಯಾಯ ಪಂಚಾಯಿತಿ ಕಟ್ಟೆ ನಿರಪರಾಧಿಗಳಿಗೆ ಗ ದಂಡ ವಿಧಿಸುವ ರೀತಿ, ಮಾನವ ನಿರ್ಮಿತ ಮೌಢ್ಯಗಳನ್ನೇ ಬಂಡವಾಳವಾಗಿಸಿಕೊಂಡಿರುವ ಸಮಾಜ, ತಮ್ಮದೇ ಸರಿಯೆಂದು ಸಾಧಿಸಲು, ಮರಿಯಮ್ಮ ದೇವಿ ಬಗೆಹರಿಯದ ವಿಚಾರಗಳನ್ನು ಇತ್ಯರ್ಥ ಮಾಡಲೆಂದೇ ಇರುವುದು ಎಂಬ ವಾದವನ್ನು ಮುಂದೆ ಒಡ್ಡುತ್ತಾರೆ. ಆ ಮೂಲಕವಾಗಿ ಸ್ವಾರ್ಥ ಸಾಧಿಸಲು ಯತ್ನಿಸುವುದು ಈ ಜನರು ಶೋಷಣೆಯ ಪ್ರತೀಕವಾಗಿ ಬಂದಿವೆ. ಹೀಗೆ ನ್ಯಾಯ ತೀರ್ಮಾನಕ್ಕಾಗಿ ದೇವರನ್ನು ಆಶ್ರಯಿಸುವುದು. ದೇವರ ಪ್ರತಿನಿಧಿಯಾಗಿ ಬರುವ ಕಾಶ್ಯ ಜನರನ್ನು ವಂಚಿಸುವುದು, ಬಲಿಕೊಡುವ ಪದ್ಧತಿ, ಮೈಮೇಲೆ ದೇವರು ಬರುವುದು ಇವೆಲ್ಲ ಹಳ್ಳಿ ಜನರ ಮುಗ್ಧತೆಯ ಸಂಕೇತವಾಗಿ ಬಂದಿವೆ. ಇಂತಹ ಅಸಹಜ ವಾತಾವರಣದಲ್ಲಿ ಸಹಜತೆಯನ್ನು ಮೂಡಿಸಲೆಂಬಂತೆ ಬರುವ ಚಂದೂ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಒದ್ದಾಡುವ ರೀತಿಯನ್ನು ನೋಡಿದರೆ ಆ ಸ್ಥಿತಿಯ ಅರಿವಾಗುತ್ತದೆ.

ಚಂದೂ ದಿಬ್ಬದ ತಾಂಡದವನೇ ಆದರೂ ಹರಸಿಂಗನಂಥ ತಂದೆಯ ವಂಚನೆಗೆ ಬಲಿಯಾಗಿ ಊರನ್ನು ಬಿಡಬೇಕಾಗುತ್ತದೆ. ಆದರೆ ಕೆಲವಾರು ದಿನಗಳ ನಂತರ ಸಮಾಜ ಸುಧಾರಕನಾಗಿ ತನ್ನೂರಿಗೆ ಮರಳಿ ಬಂದು ಕಾರ್ಯಮಗ್ನನಾಗುತ್ತಾನೆ. ಸವರ್ಣೀಯರಂತೆ ತನ್ನವರನ್ನೂ ರೂಪಿಸಬೇಕೆಂಬ ಹಂಬಲದಿಂದ, ಸಹಕಾರ, ಅಸಹಕಾರಗಳ ನಡುವೆಯೂ ಪ್ರಯತ್ನಶೀಲವನಾಗುವುದು ಆತನ ವೈಯಕ್ತಿಕ ನೆಲೆಯನ್ನು ದಾಟಿ ನಿಲುತ್ತದೆ, ಅಕ್ಷರಸ್ಥ ಸಮಾಜವು ಗ್ರಾಮೀಣ ಪ್ರದೇಶದ ದುರಂತಗಳನ್ನೆಲ್ಲ ತಡೆಯಬಲ್ಲದೆಂಬ ಅರಿವು ಲೇಖಕಿಗಿದೆ. ಆದ್ದರಿಂದಲೇ ಚಂದೂನಂಥ ಯುವಕನ ಮೂಲಕ ಆ ಕಾರ್ಯವನ್ನು ಮಾಡಿಸುತ್ತಾರೆ. ಓದುವುದನ್ನೂ, ಬರೆಯುವುದನ್ನೂ ಕಲಿತರೆ ಸಾಮಾಜಿಕವಾಗಿಯೂ, ಆರ್ಥಿಕವಾಗಿಯೂ ಪ್ರಬಲರಾಗಬಹುದೆಂಬ ಕೂಗೂ ಚಂದೂನ ಮೂಲಕ ಹೊರೆ ಹೊಮ್ಮುತ್ತದೆ. ನಾವು ಸಾಂಸ್ಕೃತಿವಾಗಿ ಹಿಂದುಳಿದಿರುವುದು ಈ ಕಾರಣದಿಂದಲೇ ಎಂದು ಜನರನ್ನು ಹುರಿದುಂಬಿಸುವ ಚಂದೂ, ವಯಸ್ಕರೂ, ಮಹಿಳೆಯರೂ, ಮಕ್ಕಳೆನ್ನದೆ ಎಲ್ಲರಲ್ಲೂ ಅಕ್ಷರಜ್ಞಾನ ಮೂಡಿಸಲು ಪ್ರಯತ್ನಿಸುತ್ತಾನೆ. ಇವನ ಉತ್ಸಾಹಕ್ಕೆ ತಣ್ಣೀರೆರಚುವ ಪಾತ್ರಗಳು ಸೃಷ್ಟಿಯಾದರೂ, ಸೋನೂ, ಲಚ್ಚಿಯಂತಹ ದಿಟ್ಟ ಮಹಿಳೆಯರ ಸಹಕಾರದಿಂದ ಯಶಸ್ವಿಯಾಗುತ್ತಾನೆ. ಒಟ್ಟಾರೆ ಇಲ್ಲಿ ವಿದ್ಯಾವಂತ ಸಮಾಜವು ಮಾನವನ ದೌರ್ಬಲ್ಯವನ್ನು ಕಳೆಯಬಹುದೆಂಬ ಆಶಯ ಇರುವುದನ್ನು ಕಾಣುತ್ತೇವೆ. ಜೊತೆಗೆ ಆ ಮೂಲಕವೇ ಸಮಾಜದ ಉದ್ಧಾರ ಸಾಧ್ಯ ಎಂಬುದನ್ನು ತೋರಿಸಲೆಂದೇ ಅಕ್ಷರಸ್ಥ ಜನರ ಸಂಸ್ಕೃತಿ, ಸಜ್ಜನಿಕೆಯನ್ನು ಕಾದಂಬರಿಗಾರ್ತಿ ಪರಿಚಯಿಸುತ್ತಾರೆ. ಯಾವುದೇ ಜಾಗೃತಿ ವಿದ್ಯಾವಂತರಿಂದ ಮಾತ್ರ ಸಾಧ್ಯ. ವಿದ್ಯಾವಂತರಾಗುವ ಯುವಕರು ಪಟ್ಟಣಗಳಿಗೆ ಹೋಗಿ ಸೇರಿ ಹಳ್ಳಿಗರ ದಾರಿದ್ರ್ಯವನ್ನು ದೂರ ಮಾಡಬಲ್ಲರು ಎಂಬ ಆಶಯ ಲೇಖಕಿಯದಾಗಿದೆ. ಇದರ ಜೊತೆ ಜೊತೆಗೆ ಕಲಿಯುವುದರಿಂದ ಬರುವ ತಿಳುವಳಿಕೆ ಸಾಮಾಜಿಕ ಚಲನೆಗೆಕಾರಣವಾಗುತ್ತದೆ ಎಂದು ತಿಳಿದೇ ಪ್ರತಿಗಾಮಿ ಶಕ್ತಿಗಳು ಅದನ್ನು ವಿರೋಧಿಸುತ್ತವೆ ಎಂಬ ಅಂಶದ ಕಡೆಗೂ ಈ ಕಾದಂಬರಿಯಲ್ಲಿ ಗಮನಸೆಳೆಯಲಾಗಿದೆ.

ಲಚ್ಚಿ, ಸೋನುಬಾಯಿಯಂಥ ಮುಗ್ಧ ಹೆಣ್ಣು ಮಕ್ಕಳು ಪುರುಷ ಪ್ರಧಾನ ಸಮಾಜದ ದೌರ್ಬಲ್ಯವನ್ನು ತಿಳಿದುಕೊಳ್ಳಲು ಬಹಳ ಕಾಲ ಹಿಡಿಯುದಿಲ್ಲ. ಅವರು ತಮ್ಮಲ್ಲಿನ ಜಾಗೃತಿ ಪ್ರಜ್ಞೆಯಿಂದ ಎಚ್ಚೆತ್ತುಕೊಂಡು ಪ್ರತಿಭಟಿಸುತ್ತಾರೆ. ಕಾದಂಬರಿಯಲ್ಲಿನ ಸೋಸಿ ಎಂದರೆ ದುರಂತಕ್ಕೆ ಹೇಳಿ ಮಾಡಿಸಿದ ಪಾತ್ರವಾಗಿದೆ. ಮಾನ್ಯನ ಕ್ರೌರ್ಯ ಸೋನುಗೆ ಮಾತ್ರ ಸಂಬಂಧಿಸಿರದೆ ಇಡೀ ಮಹಿಳಾ ಸಮುದಾಯವನ್ನು ಪ್ರತಿನಿಧಿಸುತ್ತದೆ. ಅವನು ಕಟ್ಟಿಕೊಳ್ಳುತ್ತಿರುವ ಬದುಕಿನ ಇಡೀ ಆವರಣವು ಜೀವ ವಿರೋಧಿಯೆಂದೇ ಹೇಳಬೇಕಾಗುತ್ತದೆ. ಹರಸಿಂಗನ ಕ್ರೌರ್ಯ ಮಗನಲ್ಲಿ ಮುಂದುವರೆದರೆ, ಚಂದೂ ಅಂಥ ನೆಲೆಯನ್ನು ತಿರಸ್ಕರಿಸಿ, ಸಮಾಜ ಮುಖಿಯಾಗಿ ಬೆಳೆಯಬೇಕೆಂಬ ಹಂಬಲ ವ್ಯಕ್ತಪಡಿಸುತ್ತಾನೆ. ಒಟ್ಟಾರೆ ಇಲ್ಲಿ ಹಳ್ಳಿಯ ಮೌಲ್ಯಗಳು ಅವನತಿಯ ದಾರಿ ಹಿಡಿದಿರುವುದನ್ನು ಚಿತ್ರಿಸಲಾಗಿದೆ. ದಿಬ್ಬದ ತಾಂಡಾದಲ್ಲಿ ಹರಿಸಿಂಗ್, ಮಾನಸಿಂಗ್‌ರಂತಹ ವ್ಯಕ್ತಿಗಳ ದಬ್ಬಾಳಿಕೆ ಹೆಚ್ಚಾದಾಗ ಪೊಲೀಸರ ಪ್ರವೇಶವಾಗುವುದು ಅಂತಹ ದುಂಡಾವರ್ತಿ, ಜನರಿಗೆ ಕಡಿವಾಣ ಹಾಕಿದಂತಾಗುತ್ತದೆ. ಇಲ್ಲಿ ಬರುವ ಸೀತೆಯಂಥ ಮುಗ್ಧ ಬಾಲಕಿಯೂ ಪ್ರೌಢಳಂತೆ ವರ್ತಿಸುವುದು ಆ ಸಮಾಜದ ಪ್ರಗತಿಯ ಸಂಕೇತವಾಗುತ್ತದೆ. ಒಟ್ಟಾರೆ 'ಗತಿ' ಕಾದಂಬರಿಯ ದಲಿತ ಸಮಾಜದ ಒಳ-ಹೊರಗನ್ನು ಚಿತ್ರಿಸುವುದರ ಮೂಲಕ ಅಲ್ಲಿನ ದೌರ್ಬಲ್ಯಗಳಿಗೆ ಪರಿಹಾರವನ್ನು ಸೂಚಿಸಿ, ನ್ಯೂನತೆಗಳನ್ನು ಸರಿಪಡಿಸಲು ಪ್ರೇರಣೆಯನ್ನು ನೀಡುತ್ತದೆ.

"ನೆಲೆ ಬೆಲೆ" ಲಲಿತಾನಾಯಕರ ಮತ್ತೊಂದು ಪ್ರಮುಖ ಕಾದಂಬರಿಯಾಗಿದೆ. ಇಲ್ಲೂ ಸಹ ದಲಿತ ಜನಾಂಗದ ನೋವನ್ನು ಅವರ ಬದುಕಿನ ದುರಂತವನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಶೋಷಕ ಮತ್ತು ಶೋಷಿತ ಜನರ ನಡುವಿನ ತಿಕ್ಕಾಟವನ್ನು ಮನಮುಟ್ಟುವಂತೆ ಚಿತ್ರಿಸುವ ಕಾದಂಬರಿಗಾರ್ತಿ, ಈ ತಾರತಮ್ಯಗಳನ್ನು ಹೋಗಲಾಡಿಸಲು ಅಲ್ಲಲ್ಲಿ ಪರಿಹಾರ

ಸೂಚಿಸಿರುವುದನ್ನು ಕಾಣುತ್ತೇವೆ. ಹೀಗೆ ಅವರ ಎರಡೂ ಕಾದಂಬರಿಗಳು ದಲಿತ ಜನಾಂಗದ ನೋವು ನಲಿವಿನ ಚಿತ್ರಣಗಳಾಗಿದ್ದು, ಅಲ್ಲಿನ ಬದುಕಿನ ದ್ವಂದ್ವಗಳನ್ನು ಚಿತ್ರಿಸುವಲ್ಲೂ ಯಶಸ್ವಿಯಾಗಿವೆ. ಅದೇ ಸಮಾಜದಿಂದ ಬಂದವರಾಗಿರುವ ಲಲಿತಾನಾಯಕ್ ಅವರು ಅಂತಹ ಚಿತ್ರಣ ಮಾಡುವಾಗ ಪ್ರಾದೇಶಿಕ ಭಾಷೆಯ ಜೊತೆಗೆ ಶಿಷ್ಟ ಭಾಷೆಯ ಮಿಶ್ರಣ ಮಾಡಿರುವುದು ಇಲ್ಲಿನ ವಸ್ತುವಿಗೆ ಅನುಗುಣವಾಗಿ ಬಂದಿದೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಇವು ವಿಶಿಷ್ಟ ಕಾದಂಬರಿಗಳಾಗಿವೆ ಎನ್ನಬಹುದು.

"ಹಬ್ಬ ಮತ್ತು ಬಲಿ" (ಸಣ್ಣ ಕಥಾ ಸಂಕಲನ) ಲಂಬಾಣಿ, ಸಂಪ್ರದಾಯ ಬದ್ಧ ಸಮಾಜದಲ್ಲಿ ಒಳಗೇ ಅಂತರ್ಗತವಾಗಿರುವ ಹೆಣ್ಣಿನ ಶೋಷಣೆ, ಗಂಡಿನ ದಬ್ಬಾಳಿಕೆ, ಅಲ್ಲಿನ ಬಡತನ, ನಿರಾಶಾದಾಯಕ ಬದುಕು ಹಾಗೂ ಮುಕ್ತತೆಯ ಕಡೆಗೆ ಹೆಣ್ಣಿನ ತುಡಿತ ಇವುಗಳು ಲಲಿತಾನಾಯಕ್ ಅವರ ಸಮಷ್ಟಿ ನೆಲೆಯಲ್ಲೇ ತಮ್ಮ ವೈಯಕ್ತಿಕ ಬಯಕೆ, ನೋವುಗಳನ್ನು ಹಂಚಿಕೊಳ್ಳುತ್ತಾರೆ. ಇಂತಹ ಮಹಿಳಾ ಪರ ಚಿಂತನೆಗಳಿರುವುದನ್ನು ಕಾಣುತ್ತೇವೆ. ಸಾಂಪ್ರದಾಯಿಕ ಆವರಣದೊಳಗೆ ಚಿಂತಿಸುತ್ತಿರುವ ಸ್ತ್ರೀ ತನ್ನ ನೆಲೆಯನ್ನು ಗುರುತಿಸಿಕೊಳ್ಳುವುದು ಸುಲಭದ ಕೆಲಸವಲ್ಲ. ಮಹಿಳೆ ಸ್ವಾಭಿಮಾನದಿಂದ ಬದುಕಬೇಕೆಂದೂ ಪ್ರಯತ್ನಿಸಿದರೂ ವ್ಯವಸ್ಥೆ ಅವಳನ್ನು ಹಾಗೆ ಬಿಡುವುದಿಲ್ಲ. ಈ ಸಂಕಲನದ ಮೊದಲ ಕತೆಯಾದ "ಲೂಟಿ ಇದೇ ಆಶಯವನ್ನೊಳಗೊಂಡಿದೆ. 'ಲೂಟಿ' ಕತೆಯಲ್ಲಿನ ರಾಮಿ ಗಂಡ ಮತ್ತು ಮಕ್ಕಳನ್ನು ಪಡೆದಿದ್ದಾಳೆ. ಗಂಡ ರೋಗಪೀಡಿತನಾದಾಗ ಮನೆತನದ ಜವಾಬ್ದಾರಿ ಇವಳದಾಗುತ್ತದೆ. ತನ್ನ ನೋವನೆಲ್ಲ ರಾಮಿ ಅದುಮಿಕೊಂಡು ಬದುಕುತ್ತಿದ್ದರೂ ವ್ಯವಸ್ಥೆ ಅವಳನ್ನು ದುರಂತಕ್ಕೆ ತಳ್ಳುತ್ತದೆ. ತಾನು ಒಂದೇ ದಾರಿಯಲ್ಲಿ ಸಾಗಬೇಕೆಂದು ಬಯಸಿದರೂ ಅವಳ ದಾರಿ ಕವಲಾಗುತ್ತದೆ. ಸ್ವಾಭಿಮಾನದಿಂದ ಬದುಕಬೇಕೆಂದುಕೊಂಡಿದ್ದ ರಾಮಿಯ ಮಾನ, ಆಭರಣ ಮತ್ತು ಉತ್ಪಾದನಾ ಸಾಧನವಾದ ಕೊಡಲಿ ಇಲ್ಲದಾಗ ರೋಷ ಉಕ್ಕಿ ಬರುತ್ತದೆ. ಆದರೆ ಎಲ್ಲವೂ ಅವಳಿಂದ ಲೂಟಿಯಾಗಿದ್ದರಿಂದ ಅವಳಲ್ಲಿ ಮೂಡುವ ರೋಷವು ಸಹಜವಾಗಿದ್ದರೂ, ಅದು ಮುಗಿದು ಹೋದ ಕತೆಯಂತಾಗುತ್ತದೆ.

ಬಡತನ ಮತ್ತು ಹಸಿವು ಬದುಕನ್ನು ಕಿತ್ತು ತಿನ್ನುವ ರಾಕ್ಷಸನಿದ್ದಂತ ಎಂಬದು 'ಕಳ್ರು' ಕತೆಯ ಆಶಯವಾಗಿದೆ. ಬಡತನ ವ್ಯಕ್ತಿತ್ವದ ಬವಣೆಯನ್ನು ಕುಂಠಿತಗೊಳಿಸುತ್ತದೆ. ಹಸಿವು ಎಂಥ ಹೇಯ ಕೆಲಸವನ್ನಾದರೂ ಮಾಡಿಸಬಹುದು. ಆದ್ದರಿಂದಲೇ 'ಕಳ್ರು' ಕತೆಯ ಪಾಪಿ ಹಸಿವನ್ನು ತಾಳಲಾರದೆ ಪರಿತಪಿಸುವ ತನ್ನ ಕುಟುಂಬದ ಇಂಗಿತವನ್ನು ಕಡಿಮೆ ಮಾಡಲು ತಾನು ಕೆಲಸ ಮಾಡುವ ಯಜಮಾನನ ಮನೆಯಿಂದ ತಂಗಳು ಸಾರನ್ನು ಕದ್ದು ತರುತ್ತಾಳೆ. ಆದರೆ ತಾವು ಬಾಡಿನೂಟವನ್ನುಂಡು ಕೆಲಸದಾಕೆಗೆ ತಂಗಳು ಸಾರನ್ನೂ ಕೊಡದೆ, ಅದನ್ನು ಆಕೆ ಕದ್ದಾಗ ಅವಳಿಗೆ ಚಿತ್ರಹಿಂಸೆ ಕೊಡುವುದು ಶ್ರೀಮಂತರ ಮನಸ್ಸನ್ನು ತೆರೆದು ತೋರಿಸುತ್ತದೆ. ಒಟ್ಟಾರೆ ಇಲ್ಲಿ ಉಳ್ಳವರ ಮತ್ತು ಬಡವರ ನಡುವಿನ ಅಂತರವನ್ನು ಶ್ರೀಮಂತರು ಕಳ್ಳಾರಾದರೂ ಅದು ಮುಚ್ಚಿ ಹೋಗಿ, ಬಡವರು ಸಣ್ಣದನ್ನು ಕದ್ದರೂ ಅದು ಬೆಳಕಿಗೆ ಬಂದು ದೊಡ್ಡದಾಗುವುದರ ಬಗ್ಗೆಯೂ ಇಲ್ಲಿ ಚಿತ್ರಣಗೊಂಡಿದೆ. ಆದರೆ ಬಡವರ ಸ್ವಾಭಿಮಾನವು ಉಳ್ಳವರಿಗಿಂತ ದೊಡ್ಡದು ಎಂಬ ಆಶಯ ಈ ಕತೆಯ ಕೊನೆಯಲ್ಲಿ ಚಿತ್ರಣಗೊಂಡಿದೆ.

'ತಾಯಿ ಸಾಕಿಬಾಯಿ' ಕಥಾನಕದ ದೃಷ್ಟಿಯಿಂದ ಉತ್ತಮವೆನಿಸಿದರೂ, ನಿರೂಪಣೆಯಲ್ಲಿ ಸೋತಿರುವುದನ್ನು ಕಾಣುತ್ತೇವೆ. ವಿಧವೆ ಸಾಕಿಬಾಯಿ ಮಗನ ಅಂತರ್ಜಾತಿ ವಿವಾಹದಿಂದಾಗಿ ಅವನಿಂದ ಸುಖ ಕಾಣದೆ ಪ್ರಿಯಕರ ಮುನಿಯನನ್ನು ಆಶ್ರಯಿಸುತ್ತಾಳೆ. ಆದರೆ ಹೆಂಡತಿ ಮಕ್ಕಳು ಇದ್ದವನೊಡನೆಯ ಸಂಬಂಧದಿಂದಾಗಿ ಸಾಕಿಬಾಯಿ ಸಮಾಜದ ಕೆಂಗಣ್ಣಿಗೆ ಗುರಿಯಾಗುತ್ತಾಳೆ. ಅಲ್ಲದೆ ಸ್ವತಃ ಮಗನೆ ತಾಯಿಯ ಈ ಸಂಬಂಧಕ್ಕೆ ವಿರೋಧಿಯಾಗುತ್ತಾನೆ. ಹೀಗೆ

ಎಲ್ಲರಿಂದಲೂ ನಿಂದನೆಗೊಳಗಾಗುವ ಸಾಕಿಬಾಯಿ ಜೀವನದುದ್ದಕ್ಕೂ ಎಲ್ಲೂ ಸುಖ ಕಾಣದೆ ಪರಿತಪಿಸುವುದು ಮಹಿಳೆಯರ ಅಸಹಾಯಕತೆಯ ಪ್ರತೀಕವಾಗಿದೆ. ಈ ಎಲ್ಲಾ ಜಂಜಾಟದಿಂದ ಪಾರಾಗಲು ಸಾವೊಂದು ಪರಿಹಾರವೆಂದು ಬಗೆದ ಅವಳು ಮುದಿಯನೊಂದಿಗೆ ಆತ್ಮಹತ್ಯೆ ಮಾಡಿಕೊಳ್ಳುವುದು ಸಾಮಾಜಿಕ ದುರಂತವಾಗಿ ಗೋಚರಿಸುತ್ತದೆ.

'ಉಪಚಾರ' ಕತೆಯು ಅಸಹಾಯಕ ಮುದುಕಿಯೊಬ್ಬಳನ್ನು ಅವಳ ಮೈಮೇಲಿನ ಒಡವೆಗಳಿಗೋಸ್ಕರ ಮಗ, ಸೊಸೆ ಹಾಗೂ ಮೊಮ್ಮಕ್ಕಳು ಎಂದು ಇಲ್ಲದ ಪ್ರೀತಿ ತೋರಿಸುವುದು ಈ ಕತೆಯ ವಸ್ತುವಾಗಿದೆ. ಕೂಗಿ ಕೂಗಿ ಗಂಟಲು ಹರಿದುಕೊಂಡರೂ ಏನು ಪಡೆಯಲಾಗದ ಮುದುಕಿಗೆ ಇದ್ದಕ್ಕಿದ್ದಂತೆ ರಾಜೋಪಚಾರ ಪ್ರಾರಂಭವಾಗುತ್ತದೆ. ಒಳಗಿಂದ ಗುಟುಕು ನೀರು ತಂದು ಕೊಡದ ಮೊಮ್ಮಕ್ಕಳು ಅವಳ ಕೈಯಲ್ಲಿನ ಬೆಳ್ಳಿ ಕಡಗವನ್ನು ಪಡೆಯುವುದಕ್ಕೋಸ್ಕರ ಹೀಗೆ ಆತಿಥ್ಯ ನೀಡುತ್ತಿದ್ದಾರೆಂಬ ಉದ್ದೇಶ ಬಹುಬೇಗ ಅಜ್ಜಿಗೆ ತಿಳಿದುಬಿಡುತ್ತದೆ. 'ಗಾಂಧಿ ಗುಂಡು ಸಾವು ಇತ್ಯಾದಿ' ಕತೆಯು ತೊಳಜನಂತಹ ವ್ಯಕ್ತಿಯ ಕನಸು ನನಸಾಗದೆ ಭಗ್ನಗೊಳ್ಳುವ ಪರಿಯನ್ನೂ ಚಿತ್ರಿಸುತ್ತವೆ. ಕಷ್ಟಪಟ್ಟು ಓದಿಸಿದ ಮಗನಿಗೆ ನೌಕರಿ ಸಿಕ್ಕ ಮೇಲೆ ಅವನಿಂದ ಸುಕ ಪಡೆಯಬೇಕೆಂಬ ಹಂಬಲದಲ್ಲಿದ್ದ ತೊಳಜನ ಆಸೆ ಕ್ಷಣಾರ್ಧದಲ್ಲೇ ಕಮರಿ ಹೋಗುತ್ತದೆ. ಮಗನ ವಿದ್ಯಾಭ್ಯಾಸಕ್ಕೋಸ್ಕರ ಬದುಕನ್ನೇ ಸವೆಸಿಕೊಂಡಿದ್ದ ತೋಳಜನಿಗೆ, ಮಗ ರಾಮ ವಿದ್ಯಾವಂತನಾಗಿ ನೌಕರಿ ಹಿಡಿದು ಅಂತರ್ಜಾತಿ ವಿವಾಹವಾಗುತ್ತಾನೆ. ಮಗನ ಇಂತಹ ಸ್ವಾರ್ಥಪರ ನಿಲುವು ತಂದೆಯ ಮನಸ್ಸನ್ನು ಘಾತಿಗೊಳಿಸುತ್ತದೆ.

'ಕೊಲೆ' ಅನ್ಯಾಯಕ್ಕೊಳಗಾದ ಕುಟುಂಬಕ್ಕೆ ನ್ಯಾಯ ಸಿಗದಿದ್ದಾಗ ಆಕ್ರೋಶಗೊಳ್ಳುವ ಪರಿಯನ್ನು ಚಿತ್ರಿಸುತ್ತದೆ. ದೇವಿಯ ತಂದೆ ಕಾರ್ಖಾನೆಯಲ್ಲಿ ದುಡಿಯುತ್ತಿದ್ದಾಗ ಅಪಘಾತಕ್ಕೀಡಾಗಿ ಕಾಲು ಕಳೆದುಕೊಳ್ಳುತ್ತಾನೆ. ಹೀಗೆ ಅಂಗವಿಕಲನಾದ ಮೇಲೆ ಜೀವನ ಸಾಗಿಸಲು ಕಿರಾಣಿ ಅಂಗಡಿಯನ್ನಿಡುತ್ತಾನೆ. ಇದರಿಂದ ಪಕ್ಕದ ಅಂಗಡಿಯ ಜಾಲಶೆಟ್ಟಿಗೆ ತೊಂದರೆಯಾಯಿತೆಂದು ಬಗೆದು ಶೆಟ್ಟಿ ಅವನನ್ನು ಕೊಲೆ ಮಾಡುತ್ತಾನೆ. ಈ ಎಲ್ಲವನ್ನೂ ಕಣ್ಣಾರೆ ಕಂಡಿದ್ದ ಅಪ್ರಾಪ್ತವಯಸ್ಸಿನ ದೇವಿ ಪೊಲೀಸರ ಹತ್ತಿರ ನ್ಯಾಯ ಕೇಳಲು ಹೋಗಿ ಅಸಹಾಯಕಳಾಗುತ್ತಾಳೆ. ಸೇಡಿಗೆ ಪ್ರತಿ ಸೇಡು ಎಂಬಂತೆ ಜಾಲಶೆಟ್ಟಿಯನ್ನು ಕೊಲೆ ಮಾಡಿದರೂ, ಕಾನೂನಿನಿಂದ ಅವಳು ತಪ್ಪಿಸಿಕೊಳ್ಳಲಾಗುವುದಿಲ್ಲ. 'ಮರು ಮದುವೆ ಗಂಡು ಮಕ್ಕಳಿಲ್ಲದ ಗೌರಿಯ ಸುಖ ಬಹು ಬೇಗ ಕಮರಿ ಹೋಗುವುದನ್ನು ಹೇಳುವುದಾಗಿದೆ. ಆದರೆ ಮರು ಮದುವೆಗೆ ನಿರ್ಧರಿಸಿದ್ದ ರಾಮಣ್ಣನ ಆಸೆ ಕೈಗೂಡದೆ, ತನಗೆಂದು ನಿಶ್ಚಯವಾಗಿದ್ದ ಸಂಗಪ್ಪಯ್ಯನ ಮಗಳು ತನ್ನ ಪ್ರಿಯಕರನೊಂದಿಗೆ ಓಡಿ ಹೋಗ್ತುವುದು ಗೌರಿಗೆ ಬೀಸಬೇಕಾದ ದೊಣ್ಣೆ ರಾಮಣ್ಣನಿಗೆ ಬಡಿದು ಅವಳಲ್ಲಿ ಸಮಾಧಾನವನ್ನು ತರುತ್ತದೆ. "ಸುದ್ದಿ" ವಯಸ್ಸಿಗೆ ಬಂದ ಹೆಣ್ಣು ಮಗಳನ್ನು ತನ್ನ ಮನೆಯಲ್ಲೇ ಇಟ್ಟುಕೊಂಡು ಅವರಿವರ ಮನೆಯ ಹೆಣ್ಣು ಮಕ್ಕಳ ಸುದ್ದಿಯನ್ನು ಕುರಿತು ಮಾತಾಡುವ ರಾಜಿಯ ತಾಯಿಗೆ ತನ್ನ ಮಗಳೇ ಬೇರೊಬ್ಬನೊಂದಿಗೆ ಓಡಿ ಹೋದ ಸುದ್ದಿ ಕೇಳಿ ದಿಗ್ಭ್ರಮೆಯಾಗುತ್ತದೆ. " ಉಣ್ಣ ಉಂಟು ಉಡ ಉಂಟು" ಕತೆಯು ದುಷ್ಟ ವ್ಯಕ್ತಿತ್ವದ ಚಿತ್ರಣವಾಗಿ ಮೂಡಿ ಬಂದಿದೆ. ಸರ್ಕಾರಿ ನೌಕರಿಯಲ್ಲಿದ್ದ ಚಂದ್ರಯ್ಯನಿಗೆ ಎಲ್ಲವೂ ಇದ್ದು ವಿವೇಕ ಇರುವುದಿಲ್ಲ. ಸ್ನೇಹಿತನ ಸಹವಾಸದಿಂದ ಸ್ವೇಚ್ಛಾಚಾರಿಯಾಗುವ ಚಂದ್ರಯ್ಯ ಹೆಂಡತಿ ಮಕ್ಕಳನ್ನು ಕಡೆಗಣಿಸಿ, ಅವರ ಸಾವಿಗೆ ಕಾರಣನಾಗುತ್ತಾನೆ. 'ಮಾನ' ಕತೆಯಲ್ಲಿನ ರುಕ್ಮಜ್ಜನಿಗೆ ಜೀವ ಮಾನವಿಡೀ ದುಡಿದಿದ್ದರೂ, ಅವನ ಮಾನ ಮುಚ್ಚುವಷ್ಟು ಬಟ್ಟೆಗೂ ಗತಿ ಇರುವುದಿಲ್ಲ. ಇಂತಹ ಸ್ಥಿತಿಯಲ್ಲಿ ಅವನಿಗೆ ಸರ್ಕಾರದ ಧನ ಸಹಾಯ ದೊರೆತು ಮೈ ಮುಚ್ಚಿಕೊಳ್ಳಲು ಆ ಹಣದಿಂದ ಪೇಟೆಯಿಂದ ಬಟ್ಟೆ ತರಿಸಿದರೂ ಅದನ್ನು ಹಾಕಿ ಕೊಳ್ಳುವಷ್ಟರಲ್ಲೇ ಪ್ರಾಣ ಕಳೆದುಕೊಳ್ಳುತ್ತಾನೆ.

'ಹಬ್ಬ ಮತ್ತು ಬಲಿ' ಈ ಸಂಕಲನದ ಕೊನೆಯ ಕತೆಯಾಗಿದ್ದು, ಹಬ್ಬದ ನೆಪದಲ್ಲಿ ಸಿರ್ಗತಿಕನಾಗುವ ಸಣ್ಣನ ಅವಿವೇಕಿತನದ ಚಿತ್ರಣವನ್ನು ನೀಡುತ್ತದೆ. ನಾಲ್ಕು ಜನರಂತೆ ತಾನು ಹಬ್ಬ ಮಾಡಬೇಕೆಂದು ತೀರ್ಮಾನಿಸಿದ್ದನ್ನು ಹಣವಿಲ್ಲದೆ ಅಸಹಾಯಕನಾಗುತ್ತಾನೆ. ಆದರೆ ಸಾಲ ಮಾಡಿಯಾದರೂ ಹಬ್ಬ ಮಾಡಲೇ ಬೇಕೆಂದು ತೀರ್ಮಾನಿಸಿ ಗೌಡನ ಹತ್ತಿರ ಜೀತಕ್ಕಿರುತ್ತೇನೆಂದು ಸಾಲ ತರುತ್ತಾನೆ. ಹೀಗೆ ಸಾಲ ತಂದು ಬಟ್ಟೆ ಬರೆಯ ಜೊತೆಗೆ ಹಬ್ಬಕ್ಕೆ ಬಲಿಕೊಡಲು ಕುರಿಯನ್ನು ತರುತ್ತಾನೆ. ಅಲ್ಲದೆ ನೆಂಟರಿಸ್ಟರನ್ನು ಕರೆಸಿ, ದುಂದು ವೆಚ್ಚ ಮಾಡುವ ಸಣ್ಣ ಕಡೆಗೆ ತನ್ನತನದ ಅರಿವಿನಿಂದ ಮೌನವಾಗುವುದನ್ನು ಕಾಣುತ್ತೇವೆ. ಹೀಗೆ 'ಹಬ್ಬ ಮತ್ತು ಬಲಿ' ಕಥಾ ಸಂಕಲನದಲ್ಲಿ ಲೇಖಕಿ ತಮ್ಮ ಕಥೆಯ ಮೂಲಕ ಶೋಷಿತ ವರ್ಗದ ಸ್ಥಿತಿಗತಿಯ ಅರಿವು ಮೂಡಿಸಿರುವುದನ್ನು ಕಾಣಬಹುದು. ಜೊತೆಗೆ ಇಂತಹ ವಸ್ತುನಿಷ್ಠ ಚಿತ್ರಣಗಳ ಮೂಲಕ ಓದುಗರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಕತೆಗಳ ನಿರೂಪಣಾ ಶೈಲಿ ಸರಳವಾಗಿದ್ದು, ಶೈಲಿ ಮತ್ತು ಭಾಷೆಯಲ್ಲಿ ಹೊಸ ಪ್ರಯೋಗ ನಡೆದಿದೆ. ಸಾಮಾಜಿಕ ವಿಷಯತೆಯನ್ನು ಚಿತ್ರಣ ಮಾಡುವಾಗ ಅದಕ್ಕೆ ತಕ್ಕ ಶೈಲಿಯನ್ನು ಬಳಸಿಕೊಂಡಿರುವುದು. ಆರೋಗ್ಯಕರ ಲಕ್ಷಣವಾಗಿದೆ.

" ಭಟ್ಟನ ಕನಸು'' (ಮಕ್ಕಳ ಕಥಾ ಸಂಕಲನ) ಇದು ಅಂತರಾಷ್ಟ್ರೀಯ ಮಕ್ಕಳ ವರ್ಷದಲ್ಲಿ ಪ್ರಕಟವಾಗಿರುವ ಕೃತಿಯಾಗಿದೆ. ಇಲ್ಲಿ ಬರುವ ಎಲ್ಲಾ ಕೃತಿಗಳು ಮಕ್ಕಳಿಗಲ್ಲದೆ, ವಯಸ್ಕರಿಗೂ ಹಿತವನ್ನುಂಟು ಮಾಡುತ್ತವೆ. ಕತೆ ಹೇಳುವ ಧಾಟಿ ಕುತೂಹಲಕಾರಿಯಾಗಿದ್ದು, ಓದುಗರಲ್ಲಿ ಆಸಕ್ತಿಯನ್ನು ಕೆರಳಿಸುತ್ತದೆ. ಈ ಕತೆಗಳನ್ನು ಓದುವಾಗ ಸಣ್ಣ ವಯಸ್ಸಿನ ಮಕ್ಕಳಲ್ಲಿ ಅಲೋಚನಾ ಸಾಮರ್ಥ್ಯ ಹೆಚ್ಚುತ್ತದೆ. ಜೊತೆಗೆ ಓದುಗರಲ್ಲಿ ನೈತಿಕತೆಯವನ್ನು ಮೂಡಿಸುತ್ತದೆ. ''ಭಟ್ಟನ ಕನಸು'' ಕಥಾ ಸಂಕಲನದಲ್ಲಿ ಒಟ್ಟು ಹತ್ತು ಚಿಕ್ಕ ಕತೆಗಳಿದ್ದು, ಎಲ್ಲವೂ ಒಂದೇ ಧಾಟಿಯಲ್ಲಿ ರಚನೆಗೊಂಡಿವೆ. ''ವಂಚನೆಯ ಫಲ'' ಇಲ್ಲಿನ ಮೊದಲ ಕತೆಯಾಗಿದ್ದು, ಆಕಸ್ಮಿಕವಾಗಿ ಬಂದಿಳಿದ ಅತಿಥಿಗೆ ತಾವು ಮಾಡಿದ ಅಡಿಗೆಯನ್ನು ಬಡಿಸದೆ ತಾವೇ ಊಟ ಮಾಡಬೇಕೆಂಬ ಸ್ವಾರ್ಥಿಪರ ಆಲೋಚನೆಯನ್ನುಳ್ಳ ದಂಪತಿಗಳು, ಸ್ವತಃ ತಾವೇ ವರಾಂತಾರಾಗುವುದನ್ನು ಇಲ್ಲಿ ಹೇಳಲಾಗಿದೆ. ' ಇಸ್ಪೀಟಿನ ಕತೆ' ಎಂಬಲ್ಲಿ ಬ್ರಹ್ಮ ವಿಷ್ಣು ಮಹೇಶ್ವರರಿಂದ ಹಾಗೂ ಅವರ ಪತ್ನಿಯರಿಂದ ತಿರಸ್ಕೃತಳಾದ ಮೋಹಿನಿ ತನ್ನ ಸೇಡನ್ನು ತೀರಿಸಿಕೊಳ್ಳಲು ಇಸ್ಪೀಟ್, ಪಗಡೆದಾಳಗಳನ್ನು ಸೃಷ್ಠಿಸಿದಳು ಎಂಬ ವ್ಯಂಗ್ಯಾತ್ಮಕತೆ ಇರುವುದನ್ನು ಕಾಣುತ್ತೇವೆ. 'ಮಾತನಾಡುವ ಕೋಣ' ಎಂಬ ಕತೆಯಲ್ಲಿ ಹಾಸ್ಯ ತುಂಬಿಕೊಂಡಿದ್ದು, ಸಂಗಪ್ಪ ತಾನು ಸಾಕಿದ್ದ ಕೋಣವು ಮಾತನಾಡಬೇಕೆಂಬ ಹುಂಬ ಸಾಹಸಕ್ಕೆ ಇಳಿದು ಪಾಠ ಕಲಿಯುವ ಅಂಶವಿದೆ. ಸಂಗಪ್ಪ ಸಾಧು ಸಂತರನ್ನು ಹಿಡಿದು ತನ್ನ ಕೋಣ ಮಾತನಾಡುವಂತೆ ಮಾಡಿಕೊಳ್ಳುತ್ತಾನೆ. ಆದರೆ ಅದು ನಂತರ ನೀಡುವ ಯಾತನೆಯನ್ನು ಸಹಿಸಲಾಗದೆ. ತನ್ನ ಮೂರ್ಖತನದ ಅರಿವಾಗಿ ಇದರಿಂದ ಪಾರಾಗಲು, ಅದು ಪುನಃ ಮೊದಲಿನ ಸ್ಥಿತಿಗೆ ಬರಲೆಂದು ತೀರ್ಮಾನಿಸಿ ತನಗೆ ತಾನೆ ಪಾಠಕಲಿಯುವುದನ್ನು ಕಾಣುತ್ತೇವೆ.

''ಭಟ್ಟನ ಕನಸು'' ಮತ್ತೊಂದು ಹಾಸ್ಯಭರಿತ ಕತೆಯಾಗಿದೆ. ಮಹಾ ಜಿಪುಣನಾಗಿದ್ದ ಒಬ್ಬ ಶ್ರೀಮಂತ ತನ್ನ ಅಡಿಗೆಯವನನ್ನು ವಂಚಿಸಲು ಪ್ರಯತ್ನಿಸಿ, ತಾನೇ ಮೋಸ ಹೋಗುವುದನ್ನು ಚಿತ್ರಿಸಲಾಗಿದೆ. ಇದು ಮನುಷ್ಯನ ಸಣ್ಣತನವನ್ನು ಬಹಿರಂಗಗೊಳಿಸುವ ತಂತ್ರವಾಗಿ ಮೂಡಿ ಬಂದಿದೆ. ಈ ಸಂಕಲನದ ಮತ್ತೊಂದು ಕತೆಯಾದ 'ನರಿ ಮತ್ತು ಪಾರಿವಾಳ'ವೂ ಅಲ್ಪ ವಿದ್ಯೆ ಮಹಾಗರ್ವಿ ಎಂಬ ಧೋರಣೆಯನ್ನುಳ್ಳದ್ದಾಗಿದೆ. ತಾನೇ ಮಹಾ ಬುದ್ಧಿವಂತನೆಂದು ಮೆರೆಯುತ್ತಿದ್ದ ನರಿಯು ಎಂತಹ ಸಂದರ್ಭದಲ್ಲೂ, ಸೋಲೊಪ್ಪಿಕೊಳ್ಳದೆ ಮೂರ್ಖತನವನ್ನು ಮೆರೆಯುವುದನ್ನು ಹೇಳಲಾಗಿದೆ. 'ಕಪಟ ನರಿ' ಇಂತಹದೆ ಮತ್ತೊಂದು ಕತೆಯಾಗಿದೆ. ಮುಂದಾಲೋಚನೆ ಇಲ್ಲದವರು ಮೂರ್ಖರಾಗುತ್ತಾರೆ ಎಂಬುದಕ್ಕೆ ಇದು ತಕ್ಕ ಸಾಕ್ಷಿಯಾಗುತ್ತದೆ.

ಇಲ್ಲಿ ಬರುವ ಕುರಿಯು ಮುಂದಾಲೋಚನೆ ಮಾಡದೆ, ಕಪಟ ನರಿಯ ಮೋಸಕ್ಕೆ ಬಲಿಯಾಗಿ ಪ್ರಾಣ ಕಳೆದುಕೊಳ್ಳುತ್ತದೆ. ಅಂತೆಯೇ ಸತ್ತ ಕುರಿಯ ಮಾಂಸವನ್ನು ಭಕ್ಷಿಸಬೇಕೆಂಬ ನರಿಯ ಹಂಬಲವೂ ಅದರ ಚಾಣಾಕ್ಷತತನ ದಿಂದ ಈಡೇರುತ್ತದೆ. 'ಕಾಗೆಯ ಸಬೂಬು' ಕೈಯಲ್ಲಿ ಆಗದಿದ್ದರೂ ಬಾಯಲ್ಲಿ ಆಡಿ ತೋರಿಸಬಹುದೆಂಬುದನ್ನು ಪ್ರತಿನಿಧಿಸುತ್ತದೆ. ಕಾಗೆಯು ಗರುಡನ ಸಮಾನ ಹಾರಲಾಗದಿದ್ದರೂ, ಮಾತಿನಲ್ಲೇ ಎಲ್ಲದನ್ನು ಮುಗಿಸುತ್ತಿರುವುದನ್ನು ಇಲ್ಲಿ ಕಾಣುತ್ತೇವೆ. 'ಉಪಕಾರದ ಫಲ' ಕತೆಯು ಅದರ ಶೀರ್ಷಿಕೆಯೇ ಸೂಚಿಸುವಂತೆ ಉಪಕಾರಕ್ಕೆ ಪ್ರತ್ಯುಪಕಾರವಾಗಲೀ ಬೇಕೆಂಬುದನ್ನು ಸೂಚಿಸುತ್ತದೆ. ಅಂತೆಯೇ ತಮ್ಮ ಸ್ವಾರ್ಥ ತಮ್ಮನ್ನೇ ಬಲಿ ತೆಗೆದುಕೊಳ್ಳುತ್ತದೆಂಬ ನೀತಿಯನ್ನೂ ಇಲ್ಲಿ ಅಡಕವಾಗಿದೆ. ಹೀಗೆ ಇಲ್ಲಿನ ಎಲ್ಲ ಕತೆಗಳು ಒಂದಲ್ಲ ಒಂದು ಹಂತದಲ್ಲಿ ಆಕರ್ಷಕವಾಗಿದ್ದು, ಓದುಗರಲ್ಲಿ ಕುತೂಹಲವನ್ನೂ, ನೀತಿಯು ತುಂಬ ಬಲ್ಲವುಗಳಾಗಿವೆ. ಆದ್ದರಿಂದ ಕತೆಗಾರ್ತಿ ಈ ಹಂತದಲ್ಲೂ ಯಶಸ್ವಿಯಾಗಿದ್ದಾರೆ.

" ಇದೇ ಕೂಗು ಮತ್ತೆ ಮತ್ತೆ" (ಕವನ ಸಂಕಲನ) ಇದು ಬಿ. ಟಿ. ಲಲಿತಾನಾಯಕ್ ಅವರ ಎರಡನೆಯ ಕವನ ಸಂಕಲನವಾಗಿದೆ. ದಲಿತ ಬಂಡಾಯ ಕಾವ್ಯಕ್ಷೇತ್ರದಲ್ಲಿ ತಡವಾಗಿ ಕೃಷಿ ಮಾಡಲು ಹೊರಟರೂ ಇವರು ಉತ್ತಮ ಕವನಗಳನ್ನು ರಚಿಸುವಲ್ಲಿ ಯಶಸ್ವಿಯಾಗಿದ್ದಾರೆ. ಶೋಷಿತ ವರ್ಗದಿಂದ ಬಂದವರಾಗಿರುವ ಇವರು ತಮ್ಮ ಕಾವ್ಯದುದ್ದಕ್ಕೂ ಶೋಷಣೆಯ ವಿರುದ್ಧದ ಧ್ವನಿ ಎತ್ತಿದ್ದರೂ ಅಲ್ಲಲ್ಲಿ ಇತರ ಅಂಶಗಳು ಗೋಚರಿಸುತ್ತವೆ. ಈ ಕವನ ಸಂಕಲನದಲ್ಲಿ ಬಡತನ, ಅಸಮಾನತೆ, ಸ್ತ್ರೀ ಶೋಷಣೆ ಹಾಗೂ ಧಾರ್ಮಿಕ ವಿಡಂಬನೆಯ ಚಿತ್ರಣವಿದೆ. 'ಶ್ರದ್ಧಾಂಜಲಿ' ಈ ಸಂಕಲನದ ಮೊದಲನೆಯ ಕವನ. ದಿವಂಗತ ಇಂದಿರಾ ಗಾಂಧಿಯವರನ್ನು ಕುರಿತ ಇದು, ಅವರು ಬದುಕಿದ್ದಾಗಿನ ದಿನಗಳಲ್ಲಿ ಕೈಗೊಂಡ ರಾಜಕೀಯ ನಿರ್ಣಯಗಳು. ಅವರ ಜನಪ್ರಿಯತೆ ಮುಂತಾದ ಅಂಶಗಳು ವೈಜ್ಞಾನಿಕ ವಿಶ್ಲೇಷಣೆಯಂತಿದೆ. 'ಯುಗ ಕೊರೆದ ಅಕ್ಷರವಾಗಿ ಮೂಡಿ ನಿಂತವಳೆ' ಎಂದು ಸಂಬೋಧಿಸುವ ಅವರನ್ನು ಈ ಶತಮಾನದ ದುರಂತ ಮಹಿಳೆಯ ಸಾಲಿಗೆ ಸೇರಿಸಿದ್ದಾರೆ. 'ಹಿಂದೆ ನಿನ್ನಾಣತಿಯಂತೆ' ಎಷ್ಟೆಷ್ಟು ಎದೆಯ ಹೊಕ್ಕವೋ ಗುಂಡುಗಳು" ಎಂಬ ಅವರ ಸರ್ವಾಧಿಕಾರಿ ಧೋರಣೆಗಳನ್ನು ದಾಖಲಿಸಿದ್ದಾರೆ, 'ನೀನು ಸರ್ಪಿಣಿ, ನರಿ, ತೋಳ, ಚಿರತೆಯ ಪ್ರತಿರೂಪಿಣಿ' ಚಂಡಿ ಚಾಮುಂಡಿ ಕಾಳಿ ಏನಾಗಿದ್ದರೂ ಸರಿಯೋ ನೀನೊಂದು ಹೆಣ್ಣು ನನ್ನಂತೆ'... ಎಂದು ಇಂದಿರಾಗಾಂಧಿಯವರನ್ನು ಕುರಿತು ಚಿತ್ರಿಸಿರುವುದನ್ನು ಕಾಣುತ್ತೇವೆ. 'ನಿನ್ನ ದೇಹಕ್ಕೆ ಬಿದ್ದಾ ಗುಂಡೇಟು ನನ್ನೆದೆಗೂ ತಾಕಿತು'.... ಎಂದು ಕಂಬನಿಗರೆಯುವ ಕವಿಯತ್ರಿ ಇಲ್ಲಿ ವಸ್ತುನಿಷ್ಠ ನಿರೂಪಣೆ ಮಾಡಿರುವುದು ಔಚಿತ್ಯಪೂರ್ಣವೆನಿಸುತ್ತದೆ.

'ಒಂದೇ ಒಂದು ಬಾರಿ ಹೊರಬನ್ನಿ', ' ಬೆತ್ತಲಾಗಬೇಕು'.... ಮುಂತಾದ ಕವಿತೆಗಳು ಭಾರತದ ಸಂಪ್ರದಾಯಸ್ಥ ಮನಸ್ಸುಗಳು ದೇಶದ ಅಭಿವೃದ್ಧಿಗೆ ಮಾರಕವಾಗಿರುವುದನ್ನು. 'ತೋಡಿ ಕೊಂಡಿರುವ ಹೊಂಡ.... ಕಟ್ಟಿಕೊಂಡಿರುವ ಗೋಡೆ...ಗೋಪುರಗಳ ಕೆಡವಿ ಬನ್ನಿ...' ಎಂದು ಮೂಲಭೂತ ವಾದಿಗಳನ್ನು ಎಚ್ಚರಿಸುತ್ತವೆ. ಬೆತ್ತಲಾಗಬೇಕು ಎನ್ನುವುದು ಇದೇ ಬಗೆಯ ಮತ್ತೊಂದು ಕವನವಾಗಿದೆ. ಅಕ್ಕಮಹಾದೇವಿ, ಗೊಮ್ಮಟೇಶ್ವರ ಮತ್ತು ತಿಳಿಜಲದ ನದಿ ಬತ್ತಲಾದಂತೆ ಬೆತ್ತಲಾಗಬೇಕೆಂಬುದು ಇಲ್ಲಿನ ಆಶಯವಾಗಿವೆ. 'ಏಕೆ ಮಲಗಿರುವೆ ; , 'ಇದೇ ಕೂಗು ಮತ್ತೆ ಮತ್ತೆ ; ಆಗಸದೆತ್ತರಕ್ಕೆ ನೀ ಏರದಿರು ಗೆಳತಿ'... ಮುಂತಾದವುಗಳು ಸ್ತ್ರೀವಾದಿ ನೆಲೆ ಹೊಂದಿರುವುದನ್ನು ಕಾಣಬಹುದು. ಅಂತ ಸೂಕ್ಷ್ಮ ಸಂದರ್ಭವನ್ನು ಕುರಿತು 'ಇದೇ ಕೂಗು ಮತ್ತೆ ಮತ್ತೆ ಕವಿತೆಯಲ್ಲಿ'.... , 'ನಾನಿನ್ನ ಬಯಸಿಲ್ಲ- ಬಯಸಿದವ ಸಿಕ್ಕಿಲ್ಲ', 'ಬಿಡೋ ರಾವಣ, ಬಿಟ್ಟು ಬಿಡೋ ನಿನ್ನ ತೆಕ್ಕೆಯನ್ನ'.. ಎಂದು ಮಹಿಳೆಯರ ಅಸಹಾಯಕತೆಯನ್ನು ಅಭಿವ್ಯಕ್ತಗೊಳಿಸಿದ್ದಾರೆ. ಏಕೆ ಮಲಗಿರುವೆ ಮುಗುದೆ ಬಯಲು ಕಟ್ಟೆಯ ಮೇಲೆ.... ಎಂಬ ಮಹಿಳೆಯರ ಸ್ಥಿತಿಯನ್ನು ಕುರಿತು ಉದ್ಗಾರವು ಇಲ್ಲಿ ಗೋಚರಿಸುತ್ತದೆ.

'ಚಿಲ್ಲರೆಯಾಗುತ್ತಿದ್ದೇನೆ'; 'ಕೇಳು ಮಗುವೆ' ಎಂಬವೂ ಕೂಡ ಇಂತಹ ವಸ್ತುವನ್ನೇ ಒಳಗೊಂಡವುಗಳಾಗಿವೆ. 'ದುಡಿದ ಕರುಳಿನ ಕೂಗು', ' ಹುಡುಕಿದರು ಸಿಗಲೊಲ್ಲದು' ಇವು ಬಂಡವಾಳ ಶಾಹಿಗಳ ವಿರುದ್ಧದ ಧ್ವನಿಗಳಾಗಿವೆ. ಇಟ್ಟಿಗೆ ಕಂಕರುಪುಟ್ಟಿ ಹೊರುತ್ತೇವೆ. ನಿಮಗಾಗಿ ಭಾರಿ ಬಂಗಲೆ ಕಟ್ಟುತ್ತೇವೆ. ಉತ್ತಿ ಬಿತ್ತಿ ಬೆವರು ಸುರಿಸು ನಿಮ್ಮ ಕಣಜಗಳ ತುಂಬುತ್ತೇವೆ ಎಂದು ಬಡವರ ದುಡಿಮೆಗೆ ತಕ್ಕ ಪ್ರತಿಫಲ ಸಿಗದಿರುವುದನ್ನು ಜ್ಞಾಪಿಸುತ್ತಾರೆ.

'ಅವಸ್ಥೆ' ಸಂಪ್ರದಾಯವಾದಿ ನೆಲೆಯನ್ನೊಳಗೊಂಡಿದ್ದು, ಅಪ್ಪ ಹಾಕಿದ ಆಲದ ಮರಕ್ಕೆ ಜೋತು ಬೀಳದೆ ಸ್ವತಂತ್ರ ನೆಲೆಯಲ್ಲಿ ಚಿಂತಿಸಿ, ಬದುಕಬೇಕೆಂಬುದರ ಕಡೆಗೆ ಓದುಗರ ಗಮನವನ್ನು ಸೆಳೆಯುತ್ತದೆ. ಗೋವಿಂದ ಅಂತ ಬಾಯಾಗ ಹೇಳು, ಗೋಡೆ ಮ್ಯಾಲಿನ ದೇವರ ಪಟ ನೋಡು... ಎನ್ನುವ ಚಿತ್ರಣಗಳು ಜನರಲ್ಲಿನ ಧರ್ಮಪರ ಕಟ್ಟಳೆಗಳ ಮತ್ತು ಮೂಢನಂಬಿಕೆಗಳ ಭಾರದಲ್ಲಿ ಜಗತ್ತು ನಾಶವಾಗುತ್ತಿರುವುದರ ವಿಡಂಬನಾತ್ಮಕ ಚಿತ್ರಣವಾಗಿದೆ. ಹೀಗೆ ಲಲಿತಾನಾಯಕ್ ಅವರು ಸಮಾಜದಲ್ಲಿನ ವಿವಿಧ ಮುಖಗಳನ್ನು ಆಧರಿಸಿಕವನ ಕಟ್ಟುವ ರೀತಿ, ಪ್ರಸ್ತುತ ವ್ಯವಸ್ಥೆಯ ಪ್ರತಿಬಿಂಬದಂತಿದೆ. ಸ್ವಾರ್ಥಕ್ಕೋಸ್ಕರ ಪ್ರತಿಭೆಯನ್ನು ಹತ್ತಿಕ್ಕಲಾಗುತ್ತಿರುವುದನ್ನು ಈ ಮೂಲಕ ತೋರಿಸಿಕೊಟ್ಟಿದ್ದಾರೆ. ನಮ್ಮ ವ್ಯವಸ್ಥೆಯಲ್ಲಿನ ಪ್ರಗತಿಪರ ಚಿಂತನೆಗಳು ಉರುಳಿ ಬಿದ್ದಿರುವುದವನ್ನು ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀ ಅಸಹಾಯಕಳಾಗಿ ಅವಳ ಕನಸಿನ ಗೋಡೆಗಳು ಉರುಳಿಬಿದ್ದಿವೆ ಎಂದು ಹೇಳುವುದನ್ನು ಮರೆತಿಲ್ಲ. ಇಲ್ಲಿನ ಕವಿತೆಗಳಲ್ಲಿ ಭಾವುಕತೆ ಇದ್ದರೂ ಈ ಸಮಾಜದ ಸೋಗುಗಳನ್ನೂ ಮುಖವಾಡಗಳನ್ನೂ ವಿಡಂಬನಾತ್ಮಕವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಇವರ ಕಾವ್ಯಭಾಷೆ ಆಡು ಮಾತಿಗೆ ಹತ್ತಿರವಾಗಿದ್ದು, ಓದುಗರನ್ನು ಆಕರ್ಷಿಸುತ್ತದೆ. ಕಾವ್ಯ ಕಟ್ಟುವ ಕಲೆಯಲ್ಲಿ ಸಣ್ಣ ಪುಟ್ಟ ದೋಷಗಳಿದ್ದರೂ ಕೆಲವೊಂದು ಕವನಗಳಲ್ಲಿ ಒಡಮೂಡುವ ಸಹಜತೆಯಿಂದಾಗಿ ಅದು ದೊಡ್ಡದೆಂದು ಅನ್ನಿಸುವುದಿಲ್ಲ.

'ನಂ ರೂಪ್ಲಿ'- ಲಲಿತಾನಾಯಕ್ ಅವರ ಮತ್ತೊಂದು ಜನಪ್ರಿಯ ಕವನ ಸಂಕಲನವಾಗಿದೆ. ಇದರಲ್ಲೂ ಸಹ ಬಡತನ, ಸ್ತ್ರೀ ಶೋಷಣೆ ಮತ್ತು ಪುರುಷ ಪ್ರಧಾನ ಸಮಾಜದ ನಡವಳಿಕೆಗಳ ಬಗೆಗಿನ ಚಿತ್ರಣಗಳಿರುವುದನ್ನು ಕಾಣುತ್ತೇವೆ. ದಲಿತ ಸಮುದಾಯದ ಮಹಿಳೆ ಮತ್ತು ಪುರುಷರು ಅನ್ಯಾಯಕ್ಕೊಳಗಾಗುವ ಪರಿಯನ್ನು ಬೆಳಕಿಗೆ ತರುವ ಇಲ್ಲಿನ ಪ್ರಯತ್ನದಲ್ಲಿ ಕವಿಯತ್ರಿ ಯಶಸ್ವಿಯಾಗಿದ್ದಾರೆ. ಹೀಗೆ ಇವರ ಕವಿತೆಗಳ ಮೂಲಕ ದಲಿತ ಸಮಾಜವು ಹೊಸ ರೀತಿಯಲ್ಲಿ ರೂಪುಗೊಳ್ಳುವುದು ಕುತೂಹಲಕಾರಿ ಸಂಗತಿಯಾಗಿದೆ. ಪುರುಷ ಮತ್ತು ಮಹಿಳೆ, ಬಡವ ಹಾಗೂ ಶ್ರೀಮಂತರುಗಳು ನಡುವಿನ ವೈರುದ್ಯಗಳನ್ನು ಬಿಚ್ಚಿಡುವ ಇಲ್ಲಿನ ಕವನಗಳ ಕಲಾತ್ಮಕತೆ ಕಾವ್ಯ ಕ್ಷೇತ್ರದಲ್ಲಿ ಹೊಸ ಪ್ರಯೋಗವೆನಿಸುತ್ತದೆ.

ದೇವದುರ್ಗ ಮತ್ತು ರಾಯಚೂರು ತಾಲ್ಲೂಕು ದರ್ಶನ ಎಂಬ ಎರಡು ಚಿಕ್ಕ ಚಿಕ್ಕ ಗ್ರಂಥಗಳು, ಆ ಎರಡು ತಾಲ್ಲೂಕುಗಳ ಐತಿಹಾಸಿಕ ಹಿನ್ನಲೆ, ಭೌಗೋಳಿಕ, ಆರ್ಥಿಕ, ಸಾಮಾಜಿಕ ಚಿತ್ರಣಗಳ ಜೊತೆಗೆ ಅಲ್ಲಿನ ಜನ ಸಂಖ್ಯೆ, ಪ್ರೇಕ್ಷಣೀಯ ಸ್ಥಳಗಳು.... ಮುಂತಾದ ಮಾಹಿತಿಗಳನ್ನು ನೀಡುತ್ತವೆ. ರಾಯಚೂರು ಮತ್ತು ದೇವದುರ್ಗ ತಾಲ್ಲೂಕುಗಳ ದರ್ಶನ ಮಾಡಿಸುವಾಗ ವಿಭಾಗ ಕ್ರಮಗಳನ್ನು ಮಾಡಿಕೊಂಡು ಓದುಗರಿಗೆ ಅಲ್ಲಿನ ಮಹತ್ವಗಳ ಬಗೆಗೆ ಪ್ರತ್ಯಕ್ಷದರ್ಶನ ಮಾಡಿಸಿದ್ದಾರೆ. ಅಶೋಕನ ಕಾಲದಿಂದಲೂ ಮಹತ್ವವನ್ನು ಪಡೆದಿರುವ ರಾಯಚೂರಿನ ಸಮೀಪದ ಮಸ್ಕಿಯಲ್ಲಿನ ಶಿಲಾಶಾಸನದ ಬಗ್ಗೆ ಮಾಹಿತಿ ಇದೆ. ಈ ಶಾಸನದಿಂದಲೇ ರಾಯಚೂರು ಹೆಚ್ಚು ಪ್ರಸಿದ್ಧವಾಯಿತೆಂದು ವಿವರಿಸುವ ಲೇಖಕಿ ಇನ್ನಿತರ ಅಂಶಗಳ ಕಡೆಗೂ ಗಮನ ಹರಿಸುತ್ತಾರೆ. ರಾಯಚೂರಿನ ಸಂಸ್ಕೃತಿಯ ಸ್ವರೂಪ, ಅಲ್ಲಿನ ಕೋಟೆಯ ಹೊರ, ಒಳ ಮೈಭಾಗ ಹಾಗೂ ಅವುಗಳ ಮೇಲಿನ ಕಲಾತ್ಮಕತೆಯ ಮೇಲೂ ಬೆಳಕು ಚೆಲ್ಲಿದ್ದಾರೆ.

ರಾಮಗಡ್ಡೆ, ನಾರದಗಡ್ಡೆ ಮುಂತಾದ ಪ್ರಸಿದ್ಧ ಸ್ಥಳಗಳ ಪರಿಚಯ ಇಲ್ಲಿದೆ. ಅಲ್ಲದೆ ಕನ್ನಡ ಸಾಹಿತ್ಯಕಾರರಾದ ಶಿವ ಶರಣರು, ಹರಿದಾಸರುಗಳಲ್ಲಿ ಕೆಲವರು ಈ ಊರಿನವರೇ ಆಗಿದ್ದಾರೆಂಬುದಕ್ಕೆ ಮಾಹಿತಿ ಒದಗಿಸುತ್ತಾರೆ. ಹೀಗೆ ತಾಲ್ಲೂಕು ದರ್ಶನದಂತಹ ಕೃತಿಯಲ್ಲೂ ಲೇಖಕಿ ತನ್ನ ಬರಹದ ಶಿಸ್ತನ್ನು ಮೂಡಿಸಿಕೊಂಡಿರುವುದನ್ನು ಕಾಣುತ್ತೇವೆ.

ಲಲಿತಾನಾಯಕ್ ಅವರು ಸ್ತ್ರೀವಾದಿ ನೆಲೆಯಲ್ಲೇ ಸಾಹಿತ್ಯ ಸೃಷ್ಟಿಸಿದರೂ, ಅಂತಹ ಸೂಕ್ಷ್ಮ ಸಂದರ್ಭಗಳ ಚಿತ್ರಣವನ್ನು ಮಾಡುವಾಗ ಸಂಯಮವನ್ನು ಕಳೆದುಕೊಳ್ಳುವುದಿಲ್ಲ. ಇವರ ಕೃತಿಯಲ್ಲಿನ ಸ್ತ್ರೀ ಪಾತ್ರಗಳು ಸ್ವತಂತ್ರವಾಗಿ ಹೋರಾಟಕ್ಕೆ ಇಳಿಯದೆ, ಪುರುಷರೊಂದಿಗೆ ಕೈ ಜೋಡಿಸುವುದು ಆರೋಗ್ಯಕರವಾದ ಲಕ್ಷಣವಾಗಿದೆ. ಅಂದರೆ ಹೆಣ್ಣಿನ ಅಸ್ತಿತ್ವವು ಗಂಡಿನ ಅಸ್ತಿತ್ವದಂತೆ ಆಗಬೇಕಾದರೆ ಪರಸ್ಪರದಲ್ಲಿ ಸ್ವಾಮರಸ್ಯ ಬೇಕು ಎನ್ನುವುದು ಇವರ ಧೋರಣೆಯಾಗಿದೆ. ಇಂತಹ ಧೋರಣೆ ಇನ್ನಿತರ ಮಹಿಳಾ ಲೇಖಕಿಯರಲ್ಲಿ ಗೋಚರಿಸುವುದು ಅಪರೂಪವೆಂದೇ ಹೇಳಬಹುದು. ಯಾಕೆಂದರೆ ಇಂತಹ ಸೂಕ್ಷ್ಮ ಅಂಶಗಳನ್ನು ತಮ್ಮ ಕೃತಿಗಳಲ್ಲಿ ತರುವಾಗ ಬೇರೆ ಲೇಖಕಿಯರು ಆವೇಶಕ್ಕೆ ಒಳಗಾಗುವುದನ್ನು ಕಾಣುತ್ತೇವೆ. ಆದರೆ ಲಲಿತಾನಾಯಕ್ ಅವರು ಇಂಥ ಸಂದರ್ಭಗಳಲ್ಲಿ ನಿರ್ಲಿಪ್ತತೆಯನ್ನು ಕಾಯ್ದುಕೊಳ್ಳುತ್ತಾರೆ. ಈ ಬಗೆಯ ವಸ್ತುನಿಷ್ಠ ಧೋರಣೆಯನ್ನುಳ್ಳ ಇವರ ಬರಹ ಮತ್ತು ಆಲೋಚನೆಗಳು ಮಹಿಳಾ ಹಾಗೂ ದಲಿತ ಸಂವೇದನೆಯ ಶೋಧನೆಯಲ್ಲಿ ತೊಡಗುವವರಿಗೆ ಅವಶ್ಯವಾಗಿ ಬೇಕಾಗುವ ಪೂರಕ ಸಾಮಾಗ್ರಿಗಳಾಗುವುದರಲ್ಲಿ ಸಂದೇಹವಿಲ್ಲ.

-ಃ ಬರಗೂರು ರಾಮಚಂದ್ರಪ್ಪ ಅವರ ಸಾಹಿತ್ಯ ಃ-

ಕನ್ನಡ ಸಾಹಿತ್ಯಕ್ಕೆ ನವ್ಯತೆಯನ್ನು ಕಸಿಗೊಳಿಸಿದ ಕೆಲವರು ಅದರ ಫಲವನ್ನು ತಮ್ಮ ಮಠದ ವಟುಗಳ ಮುಂದೆ ಪ್ರದರ್ಶಿಸಿ, ಖುಷಿಗೊಳಿಸಿ ಪರಾಕಿನ ಪ್ರಚಾರಪಡೆದುಕೊಳ್ಳುತ್ತ, ಸಾಹಿತ್ಯದ ವಾರಸುದಾರರಂತೆ "ಸಾಹಿತ್ಯವೆಲ್ಲರಿಗೂ ಅಲ್ಲ" ಎಂಬ ಪ್ರಣಾಳಿಕೆಗಳನ್ನು ಪ್ರಕಟಿಸಿಕೊಳ್ಳುತ್ತಿದ್ದ ದಿನಗಳಲ್ಲಿಯೇ ಹಳ್ಳಿಗಾಡೊಂದರಿಂದ ಬಂದ ಬರಗೂರು ರಾಮಚಂದ್ರಪ್ಪನವರು ಬರೆಯಲು ಪ್ರಾರಂಭಿಸಿದರು. ಅವರ ಅನುಭವ ಸಾಹಿತ್ಯದಲ್ಲಿ ಸಹಜವಾಗಿ ಅಭಿವ್ಯಕ್ತಿ ಪಡೆಯುತ್ತಿರುವುದನ್ನು ಗಮನಿಸಿದ ಸಾಹಿತ್ಯವಲಯದ ಪಟ್ಟಭದ್ರರು ಇರುಸು -ಮುರುಸುಗೊಂಡದ್ದುಂಟು. ನಮ್ಮನ್ನು ಬಿಟ್ಟರೆ ಬರೆಯಲು ಬೇರೆಯಾರಿದ್ದಾರೆಂದು ಬೀಗುತ್ತಿತ್ತದವರಿಗೆ ಬರಗೂರರ ಸಾಹಿತ್ಯ ಚುರುಕು ಮುಟ್ಟಿಸಿ ಘಾತಿಗೊಳಿಸಿತು.

ಅವರು ತಮ್ಮ ಬರವಣಿಗೆಯಲ್ಲಿ ಚಲನಶೀಲವಲ್ಲದ ಮೌಲ್ಯಗಳನ್ನು ನಿರಾಕರಿಸುತ್ತ ಚಲನಶೀಲವಾದುದನ್ನು ಉಳಿಸಿಕೊಳ್ಳುತ್ತ, ಸೃಜನಶೀಲವುದಾದ್ದನ್ನು ಬೆಳೆಸುತ್ತಾ ಹೊರಟ ಪರಿಯನ್ನು ಕಂಡು ಕೆಲವರು ಬೆರಗಾದರು. ಅವರ ಸಾಹಿತ್ಯದಲ್ಲಿ ಮುಂಬರುವ ಸಾಹಿತ್ಯಕ್ಕೆ ಹೊಸ ತಿರುವನ್ನು ಕೊಡಬಲ್ಲ ಸತ್ವ, ಲಕ್ಷಣಗಳಿರುವುದನ್ನು ಮತ್ತೆ ಕೆಲವರು ಗ್ರಹಿಸಿದರು. ಆದರೂ ಕೆಲವಾರು ಸ್ವಯಂ ಘೋಷಿತ ವಿಮರ್ಶಕರು ಅವರ ಸಾಹಿತ್ಯದ ಬಗ್ಗೆ ಅಪಸ್ವರ ನುಡಿದದ್ದುಂಟು. ಅಂಥವಕ್ಕೆ ಅಂಜತೆ ತಮ್ಮತನವನ್ನು ಮುಕ್ಕುಗೊಳಿಸದೆ ಬರಗೂರರು ಸಾಹಿತ್ಯ ರಚನೆಯನ್ನು ಮುಂದುವರೆಸಿದರು.

ಬರಗೂರು ರಾಮಚಂದ್ರಪ್ಪನವರು ತುಮಕೂರು ಜಿಲ್ಲೆಯ ಸಿರಾ ತಾಲ್ಲೂಕಿನ ಬರಗೂರು ಗ್ರಾಮದಲ್ಲಿ ಜನಿಸಿದವರು. ಅಲ್ಲದೆ ಹಲವಾರು ವರ್ಷ ಆ ಗ್ರಾಮದ ಆಸುಪಾಸಿನಲ್ಲಿಯೇ ಶಿಕ್ಷಣ ಪಡೆದು ಬೆಳೆದವರು. ಹಾಗಾಗೀ ಅವರು ಬಾಲ್ಯದಿಂದಲೇ ಹಳ್ಳಿಗಳ ಒಳ-ಹೊರಗನ್ನು ಚೆನ್ನಾಗಿಬಲ್ಲರು. ವೃತ್ತಿಯಿಂದ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾಗಿರುವ ಬರಗೂರರು ಬಹುಮುಖ ಪ್ರತಿಭೆಯುಳ್ಳವರು. ಕವಿತೆ, ಸಣ್ಣಕಥೆ, ಕಾದಂಬರಿ, ನಾಟಕ,ವಿಮರ್ಶೆ, ವಿಚಾರ ಸಾಹಿತ್ಯ ಈ ಒಂದೊಂದು ಪ್ರಕಾರದಲ್ಲೂ ಗಣನೀಯವಾದ ಕೊಡುಗೆಯನ್ನು ಬರಗೂರರು ನೀಡಿದ್ದಾರೆ. ಅಲ್ಲದೆ ಚಲನಚಿತ್ರ, ಸಾಹಿತ್ಯ, ನಿರ್ದೇಶಕಗಳಿಂದಲೂ ಜನಪ್ರಿಯತೆ ಮತ್ತು ಯಶಸ್ಸುಗಳಿಸಿಕೊಂಡಿದ್ದಾರೆ.

ಬರಗೂರರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ರೂಪಿಸಿದ ಯೋಜನೆಗಳು ನಿಜಕ್ಕೂ ಮೆಚ್ಚುವಂಥವುಗಳಾಗಿವೆ. ಅವುಗಳಲ್ಲಿ ಕನ್ನಡ ಸಾಹಿತ್ಯ ಪುನರ್ ಮೌಲೀಕರಣ, ಉಪ ಸಂಸ್ಕೃತಿಗಳ ಅಧ್ಯಯನ, ಅಂತರ್‌ಶಿಸ್ತೀಯ ಅಧ್ಯಯನ, ಸಾಮಾಜಿಕ ಚಿಂತನಮಾಲೆ, ಕಮ್ಮಟದ ಕೃತಿಗಳು ಈ ಮೊದಲಾದವನ್ನು ಅಗತ್ಯವಾಗಿ ಸ್ಮರಿಸಬೇಕಾಗುತ್ತದೆ. ಅಲ್ಲದೆ ಅವರು ಅವಕಾಶ ವಂಚಕರಾಗಿದ್ದ ಹಲವಾರು ಪ್ರತಿಭಾವಂತ ಲೇಖಕರನ್ನು ಗುರುತಿಸಿ, ಪುಸ್ತಕಗಳನ್ನು ಬರೆಸಿದರು. ಈ ಎಲ್ಲಾ ವಿಚಾರಗಳ ಹಿನ್ನೆಲೆಯಲ್ಲಿಯೇ 'ಬರಗೂರರ ಸಾಹಿತ್ಯವಲೋಕನ' ಮಾಡಬೇಕಾಗುತ್ತದೆ. ಅದು ಔಚಿತ್ಯಪೂರ್ಣಕೂಡ.

"ಕಾವ್ಯ" :- 'ಕನಸಿನ ಕನ್ನಿಕೆ' ಬರಗೂರರ ಮೊದಲನೆ ಕವನ ಸಂಕಲನ, ಆಗಿನ್ನೂ 'ಬಂಡಾಯ ಸಾಹಿತ್ಯ' 'ರೂಪುಗೊಂಡಿರಲಿಲ್ಲವಾದರೂ ಕಂಟಕಗಳಿಗೆ ಕತ್ತು ಒಡ್ಡಿ ಎಡರುಗಳಿಗೆ ಎದೆಯೊಡ್ಡಿ ತೊಡರುಗಳಿಗೆ ತಲೆಯೊಡ್ಡಿ ಮುಂದೆ ಸಾಗಬೇಕೆಂಬುದೇ ' ಅವರ ಅಭಿಪ್ರಾಯವಾಗಿತ್ತು. ಅಂದಿನ ದಿನಗಳಲ್ಲೆ ಅವರು ಸಾಮಾಜಿಕ ಕಾಳಜಿಯುಳ್ಳ ಕವಿತೆಗಳನ್ನು ಬರೆದಿದ್ದರು. ಸಮಾಜದಲ್ಲಿ ವ್ಯಕ್ತಿ ವ್ಯಕ್ತಿಗಳ ನಡುವಿನ ದ್ವೇಷ, ಅಸೂಯೆ, ಕಲಹಗಳು, ಮಾನಸಿಕ ನೆಮ್ಮದಿ, ಸುಖ ಶಾಂತಿಗೆ ಧಕ್ಕೆಯುಂಟು ಮಾಡುತ್ತಿರುವುದನ್ನು ಕಂಡು, 'ಭುವಿಯೇ ಮನೆಯ ನೆಲ, ಬಾನೇ ಮಾಳಿಗೆಯು , ಶಶಿತಾರೆ, ಗವಾಕ್ಷಿಯಿದಕೆ, ಬೆಳ್ಳಿ ಹೊದಿಕೆಯು ಇದನರಿತೊಡೆ ವಿಶ್ವಸದನಕೆ ಸುಖ-ಶಾಂತಿ ' ಎಂದು ಸಾರಿದರು. ಅವಕಾಶವಾದಿ ರಾಜಕಾರಣಿಗಳನ್ನು ವಿಡಂಬಿಸಿದರು. ರೈತನನ್ನು ರಾಷ್ಟ್ರದ ಕವಚ ಎಂದರು. ಸ್ವತಂತ್ರವಾಗಿ ಹಾರಾಡುವ ಪಕ್ಷಿಗಳನ್ನು ಕಂಡು, 'ನೀನೆ ಧನ್ಯ' ಎಂದರು. ಕಾವ್ಯದಲ್ಲಿ 'ಪೊರಕೆ'ಗೆ ಸ್ಥಾನ ನೀಡಿ'..... ಸ್ವಚ್ಛತೆಗೆ ಶ್ರಮಿಸುವೆ ಅದಕ್ಕಾಗಿ ಸವೆಯುವೆ, ಸವೆಯುತ್ತ, ಸವೆಯುತ್ತ ಸೇವೆಯಲ್ಲಿ ಸಾಯುವೆ' ಎಂದು ನುಡಿದರು. ಅಂದಿನ ಅವರ ಕೆಲವು ಕವಿತೆಗಳ ಮೇಲೆ ಕುವೆಂಪು ಬೇಂದ್ರೆಯವರ ಪ್ರಭಾವವಿರುವುದನ್ನು ಗುರುತಿಸಬಹುದು. "ಎದ್ದೇಳು ಕನ್ನಡಿಗ', 'ಅನ್ನದೇವ', 'ಮನುಜನಿಗ' ಮೊದಲಾದ ಕವಿತೆಗಳಲ್ಲಿ ನವೋದಯ ಕಾವ್ಯದ ಲಕ್ಷಣಗಳು ಕಂಡು ಬರುತ್ತವೆ.

ನವ್ಯ ಸಾಹಿತ್ಯ ರೂಪಕ, ಪ್ರತಿಮೆ, ಪ್ರತೀಕಗಳಲ್ಲಿ ಮುಳುಗಿದ್ದ ದಿನಗಳಲ್ಲಿ ಬರಗೂರರ ಎರಡನೆಯ ಸಂಕಲನ 'ಮರಕುಟಿಗ' ಪ್ರಕಟವಾಯಿತು. ಈ ಸಂಕಲನದ ಬಹುತೇಕ ಕವಿತೆಗಳಲ್ಲಿ ಸಾಮಾಜಿಕ ವೈರುಧ್ಯಗಳನ್ನು ದಾಖಲಿಸಲಾಗಿದೆ. ಸಮಾಜದ ಒಳನೋಟಗಳನ್ನು ಇಲ್ಲಿನ ಕವಿತೆಗಳಲ್ಲಿ ಕಾಣಬಹುದಾಗಿದೆ. ನವ್ಯರು ನಗರದ ಯಾಂತ್ರಿಕ ಬದುಕನ್ನೇ ಅಭಿವ್ಯಕ್ತಿಸುತ್ತಿದ್ದಾಗ, ಹಳ್ಳಿಗಾಡಿನಿಂದ ಬಂದು ನಗರದಲ್ಲಿ ನೆಲೆಸಿದ್ದ ಬರಗೂರರು ಗ್ರಾಮೀಣ ಜೀವನದ ಅನುಭವಗಳನ್ನು ನಗರದ ಜೊತೆ ಜೊತೆಯಲ್ಲಿರಿಸಿ ಗ್ರಾಮೀಣ ಭಾರತವನ್ನು ನೀಡುವ ಪ್ರಯತ್ನ ಮಾಡಿದ್ದಾರೆ. ಅಲ್ಲದೆ ಕಲಾತ್ಮಕವಾಗಿ ಅಭಿವ್ಯಕ್ತಗೊಳಿಸಿ ಯಶಸ್ವಿಯಾಗಿದ್ದಾರೆ.

'ಊರ ಹೊಕ್ಕರೆ ಸಂದಿ ಗೊಂದಿಗಳಲ್ಲಿ ನೆಲಕ್ಕೆ ಕಾಲರ

ಕಕ್ಕಿತ್ತು ; ಗಾರೆ ನೆಲ ಉಪ್ಪು ಉಕ್ಕಿತ್ತು'. - (ಹಳ್ಳಿ)

ಈ ಸಾಲುಗಳು ಗ್ರಾಮೀಣ ಭಾರತದ ಸಹಜ ಪರಿಸರವನ್ನು ನೀಡುತ್ತಾ ಬದುಕಿನ ನೋವಿನ ಪದರಗಳನ್ನು ತೆರೆದಿಡುತ್ತವೆ. ಇಲ್ಲಿನ ಕವಿತೆಗಳಲ್ಲಿ ಸಾಮಾಜಿಕ, ರಾಜಕೀಯ ಸ್ಥಿತಿಗತಿಗಳ ವಿಶ್ಲೇಷಣೆಯನ್ನು ಕಾಣಬಹುದು. " ಜೈ Money ಭಾರತದ'ದ ಜಯಮುನಿ 'ಜೈ Money ' ಆಗುವುದೇ ಒಂದು ವ್ಯಂಗ್ಯ, ಪುರಾಣಗಳನ್ನು ವೈಭವೀಕರಿಸಿ ಆಡಿ ಹಾಡಿ ಹೊಗಳುತ್ತಿರುವ ಸುತ್ತಿ ಸಂಸ್ಕೃತಿಯ ಸಂದರ್ಭದಲ್ಲಿ ಪೌರಾಣಿಕ ಪ್ರಸಂಗವನ್ನು ಸಮಕಾಲೀನ ಸಂದರ್ಭಕ್ಕೆ ತುಳುಕು ಹಾಕಿ ಹೇಳುವಲ್ಲಿ ಬರಗೂರರ ಕಲೆಗಾರಿಕೆ ಮೇಲು ಮಟ್ಟದ್ದಾಗಿರುತ್ತದೆ. ಅಲ್ಲದೆ ಯುದ್ಧದಿಂದಾದ ಹಿಂಸೆಗೆ ಪ್ರಾಯಶ್ಚಿತ್ತವೆಂದು

ಮನಃಶಾಂತಿಗೆಂದು ಅಶ್ವಮೇಧದ ಕುದುರೆಯನ್ನು ಬಿಡುವುದು. ಅದನ್ನು ತಡೆದರೆ ಮತ್ತೆ ಯುದ್ಧ ಮಾಡುವುದು. ಅದರ ಮೂಲಗುಣವನ್ನೇ ಹಿಡಿದು ಕಟಕಿಯಾಡಲಾಗಿದೆ. ಈ ಸಂಕಲನ 'ಹಳ್ಳಿ'" ಜೈ Money ಭಾರತ ; 'ಕೆಂಬಕ್ಕ; 'ಶಕುನಿ; 'ಉದ್ಧಾರಕ' ಮೊದಲಾದ ಕವಿತೆಗಳು ಗಮನಾರ್ಹವಾದವು.

'ನೆತ್ತರಲ್ಲಿ ನೆಂದ ಹೂವು' ಸಂಕಲನ ಪ್ರಕಟವಾಗುವ ಕಾಲ ಕಾಲಕ್ಕೆ ನವ್ಯತೆಗೆ ಸೆಡ್ಡುಹೊಡೆದು ನಿಂತ ದಲಿತ ಬಂಡಾಯ ಸಾಹಿತ್ಯ 'ಬಾಯಿಲ್ಲದವರ ಬಾಯಾಗಿ' ಮಾತನಾಡ ತೊಡಗಿತ್ತು. ಬರಗೂರರೇ ಹೇಳುವಂತೆ' ಈ ಹೂವು ನೆತ್ತರಲ್ಲಿ ನೆಂದದ್ದು. ಈ ಅರಳುವ ಕ್ರಿಯೆಯ ಹಿಂದೆ ಹೊರಳಿ, ನರಳಿ ನೊಂದು ಬೆಂದ ಭಾವ ತೀವ್ರತೆ ತುಂಬಿದೆ. ನಿಂತ ನೆಲದ ನೋವು ಮನದ ನೋವಾಗಿ, ಮನದ ನೋವು ನಿಂತ ನೆಲದ ನೋವಾಗಿ ಒಳಮೂಡಿ ಹೊರ ಹೊಮ್ಮಿದ ಅನುಭವ ರೂಪವೇ ಈ " ನೆತ್ತರಲ್ಲಿನೆಂದ ಹೂವು". ಇದು ಬಂಡಾಯ ಚಳುವಳಿಯ ಆಶಯಗಳನ್ನು ಕಾವ್ಯ ಕ್ಷೇತ್ರದಲ್ಲಿ ಅತ್ಯಂತ ಕಲಾತ್ಮಕವಾಗಿ ದಾಖಲೆಗೊಳಿಸಿದ ಒಂದು ಅಪರೂಪದ ಕೃತಿ.

ನನ್ನ ಈ ನಾಡಿನಲ್ಲಿ ಭವ್ಯವಾದ ಬೀಡಿನಲ್ಲಿ
ಬೇಗೆಯೇ ಬೆಟ್ಟವಾಗಿ ಉತ್ತರಕ್ಕೆ ಕಾವಲು
ಬೆವರಿಲ್ಲ ನದಿಗಳಾಗಿ ಮೂರು ದಿಕ್ಕು ಕಡಲು.

ಎಂಬ " ನೆತ್ತವರಲ್ಲಿ ನೆಂದ ಹೂವು" ಕವಿತೆಯಲ್ಲಿ ದೇಶ ಎಂದರೆ ಕೇವಲ ಭೌಗೋಳಿಕ ಲಕ್ಷಣಗಳಲ್ಲ, ಅದು ಮನುಷ್ಯರಿಂದ ಕೂಡಿದ್ದು, ಅವರ ಆಸೆ ಆಕಾಂಕ್ಷೆ, ನೋವು ನಲಿವುಗಳಿಂದ ರೂಪುಗೊಂಡಿರುವುದು ಎಂಬ ಹೊಸ ರೀತಿಯ ತಾತ್ವಿಕ ಚಿಂತನೆಯಿದೆ; ಬರಗೂರು ಭಾಷೆಯನ್ನು ಸಹನಾಶೀಲರಾಗಿ ಬಳಸಿಕೊಳ್ಳುತ್ತಲೇ ವಿಷಾದವವನ್ನು ದಾಖಲಾಸಿಬಲ್ಲರು ಎಂಬುದನ್ನು

ಮೌನದಲ್ಲಿ ಕೊಲ್ಲಬೇಡಿ. ಕರುಣೆ ನಮಗೆ ಬೇಡ
ಲೆಕ್ಕ ಮಿಕ್ಕು ಬೆಳ್ಳಿ ಕೋಳಿ ಅಂಕಗಣಿತ ಬೇಡ

ಇಂಥ ಸಾಲುಗಳಲ್ಲಿ ಕಾಣಬಹುದಾಗಿದೆ.ಇಲ್ಲಿಯ ಗದ್ಯಗುಣ, ಘೋಷಣಾತ್ಮಕ ಶೈಲಿಯನ್ನು ಬರಗೂರರ ಇತರ ಕೆಲವು ಕವಿತೆಗಳಲ್ಲಿ ಕಾಣಬಹುದು. ಈ ಸಂಕಲನದ ಕೆಲವು ಕವಿತೆಯ ವಸ್ತುವೇ ಹೊಸದೆನಿಸುತ್ತದೆ. 'ಸುಯುವ ಮುಂಚೆ ನೀರು ಕೊಡಿ / ಬಾಯಾರಿದೆ ಹೃದಯ' ಎಂಬುದಾಗಲಿ' 'ನಮ್ಮ ಜೀವ ನಮಗೆ ಬಿಡಿ ಬದಕಲಿಷ್ಟು ಕಾಲ ಕೊಡಿ / ಎಂಬಂಥ ಸಾಲುಗಳು ಪಲ್ಲವಿಯಂತೆ ಬರುತ್ತವೆ.

ಕವಿ 'ಇತಿಹಾಸ' ಎಂಬ ಕವಿತೆಯಲಿ
'ಇಲ್ಲಿರುವ ಬಡತನಕೆ / ಇಲ್ಲಿ ಕಾರಣವಿಲ್ಲ.

ಒಂದು ವರ್ಗಕ್ಕೆ ಪ್ರಾಪ್ತವಾದ ಪ್ರಾಬಲ್ಯಕ್ಕೆ ಪುಣ್ಯವು ಇನ್ನೊಂದು ವರ್ಗಕ್ಕೆ ಪ್ರಾಪ್ತವಾದ ದೌರ್ಬಲ್ಯಕ್ಕೆ ಪಾಪವೂ ಕಾರಣವಾಗಿದೆ ಎಂಬುದನ್ನು ಪರಸ್ಪರ ತಳುಕು ಹಾಕಿ ನೋಡುವಲ್ಲಿ ಜನ್ಮಾಂತರದ ಹೆಸರಿನಲ್ಲಿ ರೂಢಿಸಿಕೊಂಡು, ಬಂದಿರುವ ಅಬಲ ಸಬಲರ ನಡುವಿನ ಕಂದರ ಮೂಲಗಳು ಸ್ಥೂಲವಾಗಿ ತೋರುತ್ತವೆ ಹಾಗೆಯೇ ಈ ಸಂಕಲನದ 'ಮಾದಿಗರ ಹುಡುಗಿ ; ' ಒಂಟಿ ದನಿ ; 'ಶ್ರಮಜೀವಿಗಳ ಹಾಡು ; 'ಬೂದಿಯ ಬೆಳಕು ; ' ಬಡವನ ಆಸೆ ; ' ಗುಡಿಸಲ ಗೋರಿಯಿಂದ ; ಕೆಂಡದ ಹಾಡು ' ಕವಿತೆಗಳು ಗಮನಾರ್ಹವಾದವು.

ಗುಲಾಮಿ ಸಂಸ್ಕೃತಿಯನ್ನು ಆಶಯವಾಗಿರಿಸಿಕೊಂಡು ಬಂದ 'ಗುಲಾಮ ಗೀತೆ' ಯ ಮೂಲಕ ಹೊಸ ಪರಿಕಲ್ಪನೆ ಕನ್ನಡ ಕಾವ್ಯವನ್ನು ಪ್ರವೇಶಿಸಿತು. 'ಹಸಿರು ಮುತ್ತೈದುಯೊಂದಿಗೆ ವಿಧವೆ ಬೋಳು ಮರವು ' ಅವರಿಗೆ ನೆನಪಾಗುತ್ತದೆ. ಅವರ

ಪ್ರಕೃತಿ ಸೌಂದರ್ಯ ಪ್ರಜ್ಞೆಯೂ ಸಾಮಾಜಿಕ ನೆಲೆಯಲ್ಲೇ ಅರಳುತ್ತದೆ. 'ಸ್ಮಶಾನ' ಎಂಬ ಕವಿತೆಯಲ್ಲಿ ಐತಿಹಾಸಿಕ ಮಹತ್ವವಿರುವ ಊರಿಗೆ ಹೋದ ಕವಿಗೆ ಕರಿಯ ಊರನ ಪ್ರಸಿದ್ಧ ಸ್ಥಳಗಳನ್ನು ತೋರಿಸುತ್ತಾನೆ. ಎಲ್ಲ ಸ್ಥಳಗಳನ್ನು ನೋಡಿ ಬಂದ ನಂತರ ಕವಿ' ಈ ಊರಿನಲ್ಲಿ ಸ್ಮಶಾನ ಎಲ್ಲಿದೆ ? ಎಂದು ಕೇಳಿದಾಗ ಗೆಳೆಯ ಕರಿಯ ನಿಟ್ಟುಸಿರು ಬಿಟ್ಟು ನಿಮ್ಮ ಜೊತೆ ಓಡಾಡಿ ಈಗ ಎದುರು ನಿಂತಿದೆ' ಎನ್ನುತ್ತಾನೆ. ರಕ್ತ ಮಾಂಸಗಳಿಂದ ಕೂಡಿರುವ ಮನುಷ್ಯ ಜೀವಂತಿಕೆಯ ನೆಲೆಯಿಂದ ನಿರ್ಜೀವ ವಸ್ತುವಿನ ನೆಲೆಗೆ ಸ್ಥಳಾಂತರಗೊಂಡ ಪ್ರತಿಮೆಯಾಗುವ ಈ ದುರಂತದ ಹಿಂದೆ ಎಂಥ ಅಮಾನವೀಯತೆಯಿದೆ ಎನ್ನುವುದನ್ನರಿಯಬೇಕು.

ರಾಜಶಾಹಿ, ಆಡಳಿತಶಾಹಿ, ಧರ್ಮಶಾಹಿ, ವರ್ಗಶಾಹಿಗಳಿಗೆ ಸೇವೆ ಸಲ್ಲಿಸುತ್ತ ಹಿಂದಿನಿಂದಲೂ ಶೋಷಣೆಗೆ ತುತ್ತಾಗಿ ಇಂದಿಗೂ ಶೋಷಿಸಲ್ಪಡುತ್ತಿರುವ ಮನುಷ್ಯ ಮಾನಸಿಕವಾಗಿ ಗುಲಾಮಗಿರಿಗೆ ತುತ್ತಾಗಿದ್ದಾನೆ. ಇಂಥ ಮನಸ್ಸುಗಳ ಒಳತೋಟೆಯನ್ನು 'ಗುಲಾಮ ಗೀತೆ' ಸಂಕಲನದ ಹಲವಾರು ಕವಿತೆಗಳಲ್ಲಿ ಕಾಣಬಹುದಾಗಿದೆ. ' ಈ ಕೃತಿ ನಮ್ಮ ಸಮಾಜ, ರಾಜಕೀಯ, ಸಂಸ್ಕೃತಿಯ ವಿಪರಾಸ್ಯಗಳ ಬಗ್ಗೆ ವ್ಯಂಗ್ಯ ವಿಡಂಭನೆಯ ಮೂಲಕ ರೋಷವನ್ನು ಪ್ರಕಟಿಸುತ್ತಲೇ ಅದರ ಚೆಲವು -ಒಲವುಗಳ ಬಗ್ಗೆ ಮಾರ್ಧವವಾಗಿದೆ.' (ಬ್ಲರ್ಬ್‌ನಲ್ಲಿ). 'ಮಗುವಿನ ಹಾಡು' ಸಂಕಲನದ ಕವಿತೆಗಳಳಿಲ್ಲ ಕವಿಯ ಮಗುವಿನ ಮನಸ್ಸು ಕಾರ್ಯನಿರ್ವಹಿಸಿರುವ ರೀತಿ ಅಚ್ಚರಿ ಮೂಡಿಸುತ್ತದೆ. ಈ ಸಂಕಲನಕ್ಕೆ ಬರೆದಿರುವ ' ಕಾವ್ಯದ ನೆಲೆಯಿಂದ' ಎಂಬ ಪ್ರಸ್ತಾವನೆ ಬಂಡಾಯ ಸಾಹಿತ್ಯದ ಹೊಸ ತಿರುವುಗಳನ್ನು ಸೂಚಿಸುತ್ತವೆ. ಅದನ್ನು 'ಮಗುವಿನ ಹಾಡು' ಕವಿತೆಯಲ್ಲಿ

' ತುಂಬಿಹುದು ತಾಯಿ ನನಗೆ ಒಂಭತ್ತು ತಿಂಗಳು
ಹೇಗೆ ಹುಟ್ಟಲಿ ನಾನು ಈ ಮಣ್ಣಿನಲ್ಲಿ

ಎಂದು ಪ್ರಶ್ನಿಸುವ ಮಗುವೆ 'ತಾಯಿ ತಿನ್ನುವ ನೋವು ನನ್ನ ನೋವಾಗಿದೆ' ಎಂದು ಹೇಳುತ್ತದೆ. ಆ ಮಗುವಿನ ದೃಷ್ಟಿಗೆ ಬದುಕೇ ಭಯಂಕರವಾಗಿ ಕಾಣುತ್ತಿದೆ.

'ಹೊಟ್ಟೆಯ ಒಳಗಿಲ್ಲ ಅಭಿಮನ್ಯು ಸಾರ
ಚಕ್ರವ್ಯೂಹ ಚಿತ್ರ ಅಚ್ಚೊತ್ತಿದೆ.

ಮಾನವ ಜನಾಂಗ ಜಾತಿ ಮತಧರ್ಮಗಳ ಸೆಳೆತಗಳಿಗೆ ಸಿಲುಕಿ ಕಾದಾಡುತ್ತಿರುವುದಲ್ಲದೆ, ಅದರ ಸಲುವಾಗಿಯೇ ನಿರ್ನಾಮವಾಗುತ್ತಿದೆ. ಆದರೆ ಇಂಥ ಬಂಧನಗಳಿಂದ ಮುಕ್ತರಾಗಿ ಹೊರಬರುವ ಜೀವಂತ ಕಲೆಯನ್ನು ತಿಳಿಯುವ ಅಭಿಮನ್ಯುಗಳಾಗಿದ್ದೇವೆ ಎಂಬ ಆಶಯ ಅರ್ಥಪೂರ್ಣವಾದುದು. ಮಿತವಾದ ಮಾತುಗಳಲ್ಲಿ ಅಭಿಮನ್ಯುವಿನ ಒಟ್ಟು ಬದುಕನ್ನು ಸಂಗ್ರಹಿಸಿಕೊಡುವ ಕವಿ ಬರಗೂರರ ಕಾವ್ಯ ಕೌಶಲವನ್ನು ಮೆಚ್ಚುದವರ್‍ಯಾರು ? "ಬರಗೂರರು ಮೊದಲಿನಿಂದಲೂ ತಾವು ನಂಬಿದ್ದನ್ನು ಬರೆಯುತ್ತಾ, ಬದುಕುತ್ತಾ ಬಂದಿದ್ದಾರೆ. ಮುಕ್ಕಾಗ ಮಾನವೀಯತೆ ಮತ್ತು ಒತ್ತದ ನೆಲೆಯಂಥ ಬಂಡಾಯದ ಗುಣ ಇವರ ಸೃಜನಶೀಲತೆಯ ಹಿಂದಿನ ನಿಯಂತ್ರಕ ಶಕ್ತಿ. ಕಾವ್ಯ ಅಥವಾ ಒಟ್ಟಾರೆ ಕಲೆಯ ಪ್ರಾಣಶಕ್ತಿ. ಸಮಾಜದ ಅಂಕುಡೊಂಕುಗಳನ್ನು ಸರಿಪಡಿಸಬೇಕೆಂಬುದೇ ಬರಗೂರರ ಕಾವ್ಯದ ಪ್ರಧಾನ ಆಶಯ " ಎಂದು ಗುಲಾಮ ಗೀತೆಯ ಬ್ಲರ್ಬನಲ್ಲಿ ಬರೆದಿರುವ ಈ ಮಾತುಗಳು ಸತ್ಯಾಸತ್ಯವಾಗಿವೆ. " ಬರಗೂರರ ಕಾವ್ಯವನ್ನು ಅವರ ಚಿಂತನೆಗಳನ್ನು ಅರ್ಥಮಾಡಿಕೊಳ್ಳಲು ಕಸರತ್ತು ಮಾಡಬೇಕಾಗಿಲ್ಲ. ಅವರ ಕಾವ್ಯ ಓದುಗನನ್ನು ಇನ್‌ವಾಲ್ವ್ ಮಾಡಿಕೊಂಡು ಬಿಡುತ್ತದೆ. ಕೆಲವರು ಸುಲಭವಾಗಿ ಅರ್ಥವಾಗದಿರುವುದೇ ಕಾವ್ಯದ 'ದೊಡ್ಡಸ್ತಿಕೆ' ಎಂಬ ಭ್ರಮೆಗಳಲ್ಲಿದ್ದಾರೆ.

ಇಂಥವರಿಗೆ ದಲಿತ ಬಂಡಾಯದಲ್ಲಿ ಬಂದಿರುವ ಒಳ್ಳೆಯ ಕಾವ್ಯ ಕಣ್ಣಿಗೆ ಕಾಣಿಸುವುದಿಲ್ಲ, ಮನಕ್ಕೆ ಮುಟ್ಟುವುದಿಲ್ಲ. ಆದರೆ ಬರಗೂರರ ಕಾವ್ಯ ಕಾಣದ ಕನಸಿನ ಪ್ರಪಂಚದಲ್ಲಿ ವಿಹರಿಸುವುದಿಲ್ಲ. ನೆಲದ ಮೇಲಿನ ಬದುಕನ್ನು ಪ್ರೀತಿಸುತ್ತದೆ. ನಿಜವಾದಿ 'ಮಣ್ಣಿನ ವಾಸನೆ' ಇರುವುದು ಬರಗೂರರ ಕಾವ್ಯದಲ್ಲಿ (ಡಾ. ಜಿ. ಆರ್. ತಿಪ್ಪೇಸ್ವಾಮಿ- ಬರಗೂರರ ಕಾವ್ಯ : ಒಂದು ಚಿಂತನೆ)

"ಕಥೆ" :- ಬರಗೂರರು ಈವರೆಗೆ 'ಸುಂಟರಗಾಳಿ' ಕಪ್ಪು ನೆಲದ ಕೆಂಪು ಕಾಲು' ಮತ್ತು 'ಬಯಲಾಟದ ಭೀಮಣ್ಣ' ಎಂಬ ಮೂರು ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವರ ಆಯ್ದಕತೆಗಳ ಸಂಕಲನ 'ಬಯಲಾಟದ ಭೀಮಣ್ಣ' ಕರ್ನಾಟಕದಲ್ಲಿರುವ ವಿಶ್ವವಿದ್ಯಾನಿಲಯವೊಂದರ ಪದವಿ ತರಗತಿಗಳಿಗೆ ಉಪ-ಪಠ್ಯವಾಗಿತ್ತು. ಆದರೆ ಕೆಲವು ಪಟ್ಟಭದ್ರ ಹಿತಾಸಕ್ತರ ಪೂರ್ವಾಗ್ರಹಗಳಿಂದಾಗಿ ಅದನ್ನು ರದ್ದುಪಡಿಸಲಾಯಿತು. ಬಹುಶಃ ವ್ಯವಸ್ಥೆಯನ್ನು ಸ್ವಲ್ಪವೂ ಮಿಸುಕದ ಹಾಗೆ ವಾರಸುದಾರಿಕೆಯನ್ನು ಮೆರೆಸುತ್ತಿರುವವರ ಕೈವಾಡ ಸಾಹಿತ್ಯ ಕ್ಷೇತ್ರವನ್ನು ನಿಯಂತ್ರಿಸುತ್ತಿರುವುದಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕಾಗಿಲ್ಲ. ಇವೆಲ್ಲ ಹಿನ್ನಲೆಗಳೂ ಅವಶ್ಯವೆಂಬ ಕಾರಣಕ್ಕಾಗಿ ಈ ಪ್ರಸಂಗವನ್ನು ಹೇಳುವುದು ಅನಿವಾರ್ಯ ಮತ್ತು ಅಗತ್ಯವೆನಿಸಿದ್ದರಿಂದ ನೆನಪಿಸಬೇಕಾಯಿತು.

ಕಥೆಗಾರರಾಗಿ ಬರಗೂರರು ಆರಿಸಿಕೊಂಡಿರುವ ಕಥಾವಸ್ತು ಜಾತಿ-ವರ್ಗಗಳಿಗೆ ಸಂಬಂಧಿಸಿದ್ದು. ಅದರೊಟ್ಟಿಗೆ ಬರುವ ಗಂಡು ಹೆಣ್ಣಿನ ಸಂಬಂಧ, ಹಸಿವು ಸೃಷ್ಟಿಸುವ ತಾಕಲಾಟಗಳದ್ದಾಗಿರುತ್ತದೆ. ಶೋಷಣೆಯ ನೆಲೆಯಲ್ಲಿ ಅವುಗಳ ಕ್ರಿಯೆ -ಪ್ರತಿಕ್ರಿಯೆಗಳನ್ನು ಅವರ ಕತೆಯ ಪಾತ್ರಗಳಲ್ಲಿ ಕಾಣಬಹುದಾಗಿದೆ. ಅವು ಹಳ್ಳಿಗಾಡಿನ ನೆಲೆಯಲ್ಲಿದ್ದಾಗ 'ಪ್ರಗತಿಪರ' ನಿಲುವುಗಳಾಗಿ ತೋರುವಂತೆಯೇ ನಗರದ ಬದುಕು, ಶಿಕ್ಷಣ ತುಂಬಿಕೊಡುವ ಸಾಮಾಜಿಕ ಎಚ್ಚರಗಳೂ ಆಗಿರುತ್ತವೆ. 'ಅನಾದಿಕಾಲದ ಅನಕ್ಷರಸ್ಥ ಸಮಾಜ ಎಚ್ಚೆತ್ತುಕೊಳ್ಳುವ ಬಗೆ ಹೇಗೆಂಬುದನ್ನು ಕಾಣಲು ನಾವು ಬರಗೂರರ ಕಥಾ ಸಾಹಿತ್ಯವನ್ನು ಪ್ರವೇಶಿಸಿದಾಗ ಅರಿವಾಗುತ್ತದೆ. ಒಬ್ಬ ನಿರುದ್ಯೋಗಿ, ಒಬ್ಬ ಜೀತದಾಳು, ಒಬ್ಬ ಆರ್ಥಿಕ ಅಸಹಾಯಕ, ಒಬ್ಬ ವಿಚಾರವಂತ ಹೀಗೆ ಬಗೆ ಬಗೆಯ ಪಾತ್ರಗಳಲ್ಲಿ ಅವರ ಯೋಚನಾ ಹಾದಿ ಅದುವರೆಗಿನ ಜಡಗಟ್ಟಿದ ಸಮಾಜದ ಎಲ್ಲೆಗಳನ್ನು ಪ್ರಶ್ನಿಸುತ್ತಲೇ ಮೀರುತ್ತದೆ. ಅದು ಅಂತಿಮವಾಗಿ ಪ್ರತಿಪಾದಿಸುವುದು ಶುದ್ಧ ಚಿತ್ತದ ನಿರ್ಭಿಡೆಯ ಮಾನವೀಯತೆಯನ್ನು ಜಮೀನ್ದಾರಿ, ಪಾಳೇಗಾರಿಕೆಗಳ ಅವಸಾನವಾಗುತ್ತಿದ್ದಂತೆಯೆ ಹೇಗೆ ಪ್ರಜಾಪ್ರಭುತ್ವದ ನೆಲೆಗಳು ಬದುಕಿನಲ್ಲಿ ಊರ್ಜಿತಗೊಳ್ಳಬೇಕೆಂಬ ನೆಲೆಗಳನ್ನು ಸ್ಪಷ್ಟಪಡಿಸುವ ಅವರ ಕಥಾಸಾಹಿತ್ಯ ಮೊದಲ ಬಾರಿಗೆ ಕನ್ನಡ ಸಾಹಿತ್ಯದಲ್ಲಿ ಪರಿಪೂರ್ಣವಾದ ಬಂಡಾಯದ ಪಾತ್ರಗಳನ್ನು ಸೃಷ್ಟಿಸಿದ್ದು, ಅದುವರೆಗೆ ಇದ್ದ ರೆಡಿಮೇಡ್ ಕ್ರಾಂತಿಕಾರಕ ಪಾತ್ರಗಳಿಗಿಂತ ಭಿನ್ನವಾಗಿ ನಿಲ್ಲುವುದರಿಂದಲೇ (ರಾಜಪ್ಪ ದಳವಾಯಿ ಕನ್ನಡ ಸಾಹಿತ್ಯ ಪುನರ್ ಮೌಲ್ಯೀಕರಣ ಮಾಲೆಯಲ್ಲಿ) ಎಂಬ ಅಭಿಪ್ರಾಯ ಒಪ್ಪತಕ್ಕದ್ದು.

ಜಮೀನ್ದಾರಿ ಪದ್ಧತಿಯು ಇದ್ದಕ್ಕಿದ್ದಂತೆ ಕೊನೆಗೊಳ್ಳುವಂಥದ್ದಲ್ಲ. ಅದು ವ್ಯಕ್ತಿಗೆ ಮಾತ್ರ ಸಂಬಂಧಿಸಿದ್ದಾಗಿರದೆ ವರ್ಗ ರೂಪದಲ್ಲಿ ಮುಂದುವರೆಯುವಂಥದ್ದಾಗಿದೆ. ಅದರ ಮುಂದೆ ಮನುಷ್ಯ ಮನುಷ್ಯರ ನಡುವಿನ ಸ್ನೇಹ ಸಂಬಂಧಗಳಿಗೆ ಕಿಮ್ಮತ್ತಿಲ್ಲ. ಮಾನವೀಯತೆ ಮರೆಯಾಗುತ್ತದೆ. ದರ್ಪ ದೌರ್ಜನ್ಯಗಳು ಬಗೆ ಬಗೆಯ ರೂಪದಲ್ಲಿ ಮೆರೆಯುತ್ತವೆಂಬ ಸತ್ಯವನ್ನು ಬರಗೂರರ 'ಎದುರಾಳಿ 'ಕಥೆಯಲ್ಲಿ ಕಾಣಬಹುದು. ಜಮೀನ್ದಾರ್ ಜಯಣ್ಣನ ಮಗ ಚಂದ್ರಣ್ಣ ಊರಿನಲ್ಲಿ ತನ್ನ ತಂದೆಯನ್ನು ಪ್ರಬಲವಾಗಿ ವಿರೋಧಿಸುತ್ತಿರುವ ತನ್ನ ಸಹಪಾಠಿ ರಂಗಪ್ಪನನ್ನು ಕುರಿತು-' ಯಾಕ್ ಹಿಂಗಾಡ್ತಿಯ, ನಮ್ಮನ್ನ ಕಂಡ್ರೆ ಇಷ್ಟ ಪಡ್ತಿಯ. ನನ್ನಪ್ಪನ್ನ ಕಂಡ್ರೆ ಕೆಂಡವಾಗ್ತೀಯ. ಈಗ್ಲೂ ಯೋಚ್ನೆ ಮಾಡು ಅಪ್ಪಂಗೇಳ್ತಿನಿ ನಿಂಗೊಂದು ಕೆಲ್ಸ ಕೊಡುಸ್ತಾರೆ. ಸುಖವಾಗಿರು ಅದು ಬಿಟ್ಟು ಇದೇನ್ ನಿಂದು ಹುಡುಗಾಟ ? ಊರ್‍ನಾಗೆ ಹೊಂದಿಕೊಳ್ಳೋದ್ ಕಲಿಬೇಕು

ರಂಗಪ್ಪ ' ಎಂದು ಹೇಳುವ ಮಾತುಗಳಲ್ಲಿ ಸ್ನೇಹ ಸಂಬಂಧದ ಮಾನವೀಯ ಸ್ವಭಾವದ ಮಿಡಿತ ಕಂಡು ಬರುತ್ತದೆ. ಆದರೆ ತನ್ನಪ್ಪ ಸತ್ತ ನಂತರ ಚಂದ್ರಣ್ಣನೇ ಜಮೀನ್ದಾರನಾದಾಗ ಊರು ತೊರೆದು ಹೋಗಿದ್ದ ರಂಗಪ್ಪ ತನ್ನ ಊರಲ್ಲೇ ಬೇಸಾಯ ಮಾಡಿಕೊಂಡು ಬದುಕುವ ಮನಸ್ಸು ಮಾಡಿ, ಊರಿಗೆ ಮರಳಿ ಬರುತ್ತಾನೆ. ಜಮೀನ್ದಾರ್ ಜಯಣ್ಣ ಸತ್ತ ಸುದ್ದಿ ತಿಳಿಯುತ್ತದೆ. ಆಗ ತನ್ನ ಗೆಳೆಯ ಚಂದ್ರಣ್ಣನನ್ನು ಕಂಡು ಸಾಂತ್ವಾನಗೊಳಿಸುವ ಉದ್ದೇಶದಿಂದ ಮಾತನಾಡಿಸಲು ಬಂದಾಗ, ಆತನ ಮಾತುಗಳಿಗೆ ಕಿವಿಗೊಡದೆ 'ಅದಕ್ಕೇನೀಗ ನಿಂದು ! ನಮ್ಮಪ್ಪಸತ್ರೆ ನಾನ್ ಬದ್ಕಿದ್ದೀನಲ್ಲ ? ನಮ್ಮಪ್ಪನ ಹತ್ರ ಬಾಲ ಬಿಚ್ಚಂಗೆ ನನ್ನ ಹತ್ರ ಬಿಚ್ಬೇಡ, ನಿನ್ ಜಾತಕ ಎಲ್ಲ ನಂಗೊತ್ತೈತೆ. ಏನೋ ಇಲ್ಲಿ ಊರಾಗಿರಾಕ್ ಬಂದಿದ್ದೀಯಂತಲ್ಲ ಅದ್ಕೆ ಈಗ್ಲೆ ಹೇಳ್ತಾ ಇದ್ದೀನಿ ಇನ್ ಮೇಲೆ ಹುಷಾರಾಗಿರು' ಎನ್ನುತ್ತಾನೆ. ಗೆಳೆಯನ ಈ ಮಾತುಗಳಿಂದ ರಂಗಪ್ಪನಿಗೆ ಜಮೀನ್ದಾರ್ ಜಯಣ್ಣ ಸತ್ತಿಲ್ಲ ಅನ್ನಿಸುತ್ತದೆ. ' ಈ ಕತೆಯಲ್ಲಿ ರಂಗಪ್ಪನ ಪ್ರತಿಭಟನಾ ಸ್ವರೂಪ ಕಾಣಿಸುವ ಕ್ರಿಯಾಶಕ್ತಿಗಿಂತ ಹೊಡೆತ ಬಡಿತಗಳಿಗೆ ಒಳಗಾಗಿ ಹಸಿರು ಅವಮಾನಗಳನ್ನು ಒಡಲಾಳದಲ್ಲಿ ತುಂಬಿಕೊಂಡ ಪುಟ್ಟ ನರಸನ ಮೌನದುಚ್ಚಿಗೆ ಸಿಡಿಯುವ ತಾಖತ್ತಿರುವ ನಿಜವಾದ ಶಕ್ತಿ ಮೂಲವೆನ್ನುವುದನ್ನು ಅಂಥ ಮೂಲದಲ್ಲಿ ಹುಟ್ಟುವ ಅರಿವು ಮಾತ್ರ ಕ್ರಿಯಾಶೀಲವಾಗಬಲ್ಲದೆಂಬ ಅಂಶವನ್ನು ಕಥೆ ಧ್ವನಿಸುತ್ತದೆ. ಹೀಗೆ ಗ್ರಾಮೀಣ ಮೂಲದ ಪಟ್ಟೆ ಜಮೀನ್ದಾರನೊಬ್ಬನ ದಬ್ಬಾಳಿಕೆಯ ವಾಸ್ತವ ಚಿತ್ರಣವನ್ನು ಕಟ್ಟಿಕೊಡುತ್ತಲೇ, ಆ ದಬ್ಬಾಳಿಕೆಯ ತೆಕ್ಕೆಯಲ್ಲಿ ವಿಜ್ರಂಭಿಸುವ ಆರ್ಥಿಕ ರಾಜಕೀಯ ಮತೀಯ ಅಧಿಕಾರಶಾಹಿ ಸಂಗತಿಗಳನ್ನು ಕತೆ ಕಾಣಿಸುತ್ತದೆ. (ಸಾಲಾವಳಿ - ಎಸ್. ಸಿ. ಸಿದ್ಧರಾಮಯ್ಯ ಎಂದು ಸರಿಯಾಗಿ ಗುರುತಿಸಿದ್ದಾರೆ)

'ಕಪ್ಪು ನೆಲದ ಕೆಂಪು ಕಾಲು' ಕತೆಯ ಹೆಸರಿನಲ್ಲಿರುವ ವರ್ಣಗಳು ವರ್ಗವನ್ನು ಪ್ರತಿನಿಧಿಸುತ್ತದೆ. ಕಾಲದ ಜೊತೆಯಲ್ಲಿ ಬದಲಾಗುವ ಶೋಷಣೆಯ ಮಾದರಿಗಳನ್ನು ಹೋಲಿಸಿ ನೋಡುತ್ತಾ ನೋವಿನ ನಿಜವನ್ನು ಮಾನವೀಯ ಸ್ತರದಲ್ಲಿ ಮಿಡಿಯುವ ಈ ಕತೆ ಕುವೆಂಪು ಅವರ 'ಕಲ್ಕಿ' ಕವನದ ನಿರೂಪಣಾ ತಂತ್ರದ ಪ್ರಭಾವಕ್ಕೊಳಗಾಗಿದೆ. 'ನೋಡ್ತಾ ನೋದಂತೆ ಆ ಮರದ ಪೊದೆ ಮತ್ತೆ ಮತ್ತೆ ಮೂಕ ಸಾಕ್ಷಿಯಾದವು. ನರಳುವ ನೋವಿಗೆ ಮುಚ್ಚಿದ ಬಾಯಿಗೆ ಕಟ್ಟಿದ ಮೈಗೆ ಕಣ್ಣಾಗಿ ಕಪ್ಪಿಟ್ಟವು. ಅವುಗಳ ಹಸಿರು ನಿಟ್ಟುಸಿರಾಯ್ತು'. ' ಒಬ್ಬನಾದ ಮೇಲೊಬ್ಬ ಕರಿಯ..... ಅದೇ ಲಕ್ಪತಿ ದಢೂತಿಗಳು ನಡು ನಡುವೆ ಪುರೋಹಿತ ದಢೂತಿಗಳು ಜನಿವಾರ ಶಿವದಾರ ಅಷ್ಟೇಕೆ ಉಡಿದಾರದ ಪುರೋಹಿತ ಪುಣ್ಯ ಪುರುಷರು... ಅವರ ಗಂಟೆಯಂಥ ಬಾಯಿಗಳು..... ದಣಿ ದಾಂಡಿಗರು ಒಟ್ಟಾಗಿ ಕಟ್ಟಿ ಬಡಿದು ಸುಲಿದ ಮೈಗಳು ಮೈಲಿಗಟ್ಟಲೆ ಬಿದ್ದವು.' ಮೆಲ್ಲಗೆ ಧಿಕ್ಕಾರದ ದನಿ ಮಾಡುತ್ತಾ ಮಿಸುಗಾಡ್ತ ಮೇಲೇಳುವ ಮೈಗಳು ದಿಗ್ಗನೆದ್ದು ಕರಿಯನಷ್ಟೆ ಗಟ್ಟಿಯಾಗಿ ಕೂಗಿದಾಗ ಸಿಕ್ಕು ತೋಚದ ಸ್ಥಿತಿ. ಹೌದು ಬಿದ್ದಿದ್ದ ಖದೀಮರು ಮೇಲೆದ್ದು ಕೂಗಿದರು.'

'ಬಯಲಾಟದ ಭೀಮಣ್ಣ' ಹಳ್ಳಿಗಾಡಿನ ಹವ್ಯಾಸಿ ನಟನೊಬ್ಬನ ಬದುಕಿನ ಅಂತರಾಳವನ್ನು ತೆರೆದು ತೋರುತ್ತದೆ ಕಲಾವಿದನ ಕರುಳಾಳವನ್ನು ಪರಿಚಯಿಸುತ್ತಲೇ ಸಿರಿವಂತಿಕೆಯ ದೌಲತ್ತು ಮತ್ತು ಅದರ ಕ್ರೂರತೆಯನ್ನು ತೆರೆದಿಡುತ್ತದೆ. ರಂಗಭೂಮಿಯಲ್ಲಿ ಕಲೆಯ ಪ್ರೌಢಿಮೆಯನ್ನು ತೋರುವ ಭೀಮಣ್ಣನ ಆಡಂಬರಗಳು ವಾಸ್ತವ ಸಂದರ್ಭದಲ್ಲಿ ಅವನನ್ನು ಸಜ್ಜನನ್ನಾಗಿಸಿವೆ. ಕೊನೆಗೆ ರಂಗಭೂಮಿಯ ಮೇಲೆ ಕೊನೆಯುಸಿರೆಳೆವ ಭೀಮಣ್ಣನ ದುರಂತ ಮನ ಕರಗಿಸುತ್ತದೆ. ಒಂದು ಗ್ರಾಮದ ಸಾಂಸ್ಕೃತಿಕ ವಾತಾವರಣವನ್ನು ಅದರ ಸಂಭ್ರಮವನ್ನು ವರ್ಣಿಸುತ್ತಲೇ ವಾಸ್ತವದ ಧಾರುಣತೆಯನ್ನು ಅಬ್ಬರವಿಲ್ಲದೆ, ಕಡಿಮೆ ಮಾತುಗಳಲ್ಲಿ ಸರಳವಾಗಿ ಹೇಳುವ ಈ ಕತೆ ಧ್ವನಿ ಪೂರ್ಣವಾದುದಾಗಿದೆ, ಅಲ್ಲದೆ ಅವರ ಇತರ ಕತೆಗಳಿಗಿಂತ ಭಿನ್ನವಾದ ಶೈಲಿಯಲ್ಲಿದೆ.

'ಬಾಗಿಲಿಗೆ ಬಂದವನು' ಕತೆಯ ಸುಂದ್ರಕ್ಕೆ 'ಇಟ್ಟುಕೊಂಡವಳು' ಎಂಬ ಕಾರಣಕ್ಕಾಗಿ ಅನಾಥ ಭಾವನೆಯನ್ನು ನುಭವಿಸುತ್ತಿದ್ದಾಗ, ಅವಳ ಬಾಳಲ್ಲಿ ಶಂಕರ ಮತ್ತು ಬಾಲಕ ಚಂದ್ರ ಪ್ರವೇಶಿಸಿ, ಪ್ರೀತಿ ವಾತ್ಸಲ್ಯವನ್ನು ಅರಳಿಸುತ್ತಾರೆ. ತನ್ನ ರಿ ಸಂಪತ್ತನ್ನೆಲ್ಲ ಶಂಕರನಿಗೆ 'ವಿಲ್' ಬರೆದಂತೆ ಪತ್ರದಲ್ಲಿ ಬರೆದಿರುವುದು, ಅವಳ ಯಾವ ಕೊರತೆಯನ್ನು ನುಭವಿಸುತ್ತಿದ್ದಳೊ ಅಂಥವನ್ನು ತುಂಬಿ ಕೊಟ್ಟವರಿಗೆ ಕೊಟ್ಟ ಪ್ರತಿಫಲವಾಗಿದೆ.

'ಮಳೆ' ಕತೆಯಲ್ಲಿ ಬರುವ ಪಾತ್ರಗಳ ಮನಸ್ಸಿನ ಬಿರುಕುಗಳ ಪ್ರತಿಯ ಏರಿಳಿತದಲ್ಲಿ ನಿಧಾನವಾಗಿ ೂಂದಿಕೊಳ್ಳುವುದನ್ನು ಕಾಣಬಹುದು. ಮನೆಯ ಹೆಂಗಸರ ಒತ್ತಡಗಳಿಂದಾಗಿ ಅಣ್ಣ-ತಮ್ಮಂದಿರ ಸಂಬಂಧಗಳು ೂರತೊಡಗಿದಾಗಿ ಮನೆಯ ಸೋರುವಿಕೆ ಅವರನ್ನು ಒಂದಾಗಿಸುತ್ತದೆ. ಮೂಲತಃ ಅಣ್ಣ ತಮ್ಮಂದಿರಲ್ಲಿ ಕೂಡಿ ಬಾಳುವ ಾವ ಬಂಧನಗಲಿದ್ದರೂ ಹೆಂಗಸರ ಹಠ ಸಾಧನೆಗಳೇ ಬಿರುಕು ಮೂಡಲು ಕಾರಣವಾಗಿವೆ ಎಂಬುದನ್ನು ಕತೆಯಲ್ಲಿ ಣಬಹುದು. ಗೂರಲು ಗಂಡನೊಡನೆ ಬಾಳಬೇಕಾದ ಹೆಣ್ಣೊಬ್ಬಳ ಅಂತರಂಗದ ತಳಮಳಗಳನ್ನು 'ಕ್ಷಾಮ' ಕತೆಯಲ್ಲಿ ತ್ರಿಸಲಾಗಿದೆ. ಕತೆಯಲ್ಲಿ ಬರುವ ಪರಿಸರದ ವಿವರಗಳು ಕೇವಲ ವಿವರಗಳಾಗದೇ ಕತೆಗೆ ವ್ಯಂಗ್ಯ, ಅರ್ಥ ಧ್ವನಿಯನ್ನು ಲಾತ್ಮಕವಾಗಿ ತಂದು ಕೊಡುತ್ತವೆ. ಎಷ್ಟು ಊದಿದರೂ ಉರಿಯದ ಹಸಿ ಸೌದೆ, ಏನೆಲ್ಲ ಪಾಡುಪಟ್ಟು ಹಾಕಿದರೂ ಾಕಿಕೊಳ್ಳದ ಚಿಲಕ ಕಥೆಯ ಚೆನ್ನಿಯ ಅಂತರಂಗಕ್ಕೆ ಪ್ರತಿಮೆಗಳಾಗಿ ನಿಲ್ಲುತ್ತದೆ. ಕತೆಯ ಕ್ಷಾಮ ಎಂಬ ಹೆಸರೇ ಒಂದು ತಿಮೆಯಾಗುತ್ತದೆ. ಸರಿಯಾದ ದಿನಗಳಲ್ಲಿ ಬಾರದ ಮಳೆ ಅಕಾಲದಲ್ಲಿ ಒಂದು ಕೆರೆಯೊಡೆದದ್ದು, ಮೈ ಕೈ ಕರಗಿ ಮೂಳೆ ಕ್ಕಳವಾದ ಚೆನ್ನಿ ಮೈಮೇಲೆ ಬಿದ್ದು ಬಂದಾಗ ತೀಟೆ ರಂಗಪ್ಪ ಅವಳನ್ನು ಹೊರದೂಡುತ್ತಾನೆ ಒಟ್ಟಾರೆ ಚೆನ್ನಿಯ ಬಾಳಿನ ುರಂತವನ್ನು ಕ್ಷಾಮ ಅನನ್ಯವಾಗಿ ತಿಳಿಸುತ್ತದೆ.

ಗಾಳಿಯಲ್ಲಿ ತೇಲಿ ಬರುವ ಜನರ ಬಾಯಿ ತೀಟೆಯ ಮಾತುಗಳು ದುರಂತಕ್ಕೆ ಕಾರಣವಾಗುವುದನ್ನು 'ಟೆಲಿಗ್ರಾಂ' ತೆಯಲ್ಲಿ ಕಾಣಬಹುದಾಗಿದೆ. ಕೊಲೆಯಾಗಿದ್ದಾನೆಂದು ಹಬ್ಬಿದ ಸುದ್ದಿ ಕೇಳಿ ಊರಿಗೆ ಬಂದ ನಾಯಕನ ಸುತ್ತ ಗುಸುಗುಸು ಾತುಗಳು ಕೇಳಿ ಬರುತ್ತವೆ. ಅಸಹ್ಯಕರವಾದ ಮಾತುಗಳನ್ನು ತಡೆದುಕೊಳ್ಳಲಾರದ ಶಾಂತಣ್ಣ ಮತ್ತು ಆತನ ಪತ್ನಿ ಆತ್ಮಹತ್ಯೆ ಾಡಿಕೊಳ್ಳುತ್ತಾರೆ. ಕೊಲೆಯಾಗಿದ್ದಾನೆಂದು ಭಾವಿಸಿದ್ದ ವ್ಯಕ್ತಿ ಊರಿಗೆ ಬರುತ್ತಾನೆ. ಆದರೆ ಎರಡು ಮುಗ್ಧ ಜೀವಿಗಳ ಬಲಿ ಡೆದು ಹೋಗಿರುತ್ತದೆ. ಶಾಂತಣ್ಣನನ್ನು ಕೊಲೆಗಾರನೆಂದು ಹೇಳಿದ ಜನರೇ ತಮ್ಮ ಕಡಿವಾಣವಿಲ್ಲದ ಮಾತುಗಳಿಂದ ಆ ಂಪತಿಗಳ ಕೊಲೆಗೆ ಕಾರಣರಾಗಿರುತ್ತಾರೆ. ಆದರೆ ಕತೆಗಾರರು ಎಲ್ಲಿಯೂ ಕೊಲೆಯ ಬಗ್ಗೆ ವ್ಯಾಖ್ಯಾನ, ತೀರ್ಮಾನ ನೀಡದೆ ತೆಯನ್ನು ಕುತೂಹಲಕಾರಿಯಾಗಿ ಬೆಳೆಸಿರುವುದು ಕತೆಯ ಸೊಗಸಿಗೆ ಮೆರುಗನ್ನು ತಂದಿದೆ.

ಬರಗೂರರ ಕತೆಗಳಲ್ಲಿ ಸಮಾಜವನ್ನು ಬದಲಿಸಬೇಕೆಂಬ ಆಶಯವಿದ್ದು, ಅದು ಎಲ್ಲಿಯೂ ಬೋಧನೆಯಾಗಿ ಂಡುಬಾರದೆ, ಕತೆಗಳೊಳಗೆ ಸೇರಿಕೊಂಡು ಓದುಗರ ಮನಸ್ಸಿನ ಮೇಲೆ ಪರಿಣಾಮ ಬೀರುವುದನ್ನು ಕಾಣಬಹುದು.

"ಕಾದಂಬರಿ" :- ಸಾಹಿತ್ಯದ ಇತರೆ ಪ್ರಕಾರಗಳಿಗಿಂತ ಕಾದಂಬರಿ ಪ್ರಕಾರ ಹೆಚ್ಚು ಜನಪ್ರಿಯವಾದದ್ದು. ಂಡಾಯ ಸಾಹಿತ್ಯ'ದ ಹೆಸರು ಕೇಳಿ ಬರುವ ಮೊದಲೇ ಬರಗೂರು ರಾಮಚಂದ್ರಪ್ಪನವರು ಬಂಡಾಯ ಪರ ದಂಬರಿಗಳನ್ನು ಬರೆದಿದ್ದಾರೆ. ಅವರು ಸಮಾಜವನ್ನು ಮಾರ್ಕ್ಸ್‌ವಾದದ ಚೌಕಟ್ಟಿನಲ್ಲಿರಿಸಿ ನೋಡುವುದರಿಂದಾಗಿ, ಕೆಲವು ದಂಬರಿಗಳು ಸಿದ್ಧಾಂತವೊಂದನ್ನು ಹೇಳಲು ಹೊರಟಂತೆ ಕಂಡು ಬರುತ್ತದೆ. ಆದರು ಅವರು ಕಾದಂಬರಿ ಪ್ರಕಾರದಲ್ಲಿ ಈ ಶದ ವ್ಯವಸ್ಥೆಯಲ್ಲಿರುವ ದ್ವಂದ್ವಗಳನ್ನು ವಿಶ್ಲೇಷಿಸುವಲ್ಲಿ ಯಶಸ್ವಿಯಾಗಿದ್ದಾರೆ.

'ಸೂತ್ರ' ಬರಗೂರರ ಮೊದಲ ಕಾದಂಬರಿ. ಊರಿನ ಗೌಡನ ಶೋಷಣೆ, ಆತನ ಪ್ರತಿಸ್ಪರ್ಧಿಯಾಗಿರುವ ಂದ್ರಯ್ಯನ ಸಣ್ಣತನ, ಗೌಡನ ಹೆಂಡತಿಯಾದ ಪಾರ್ವತಕ್ಕನಿಗೂ, ಶ್ರಮದಿಂದ ದುಡಿದು ಹೊಟ್ಟೆ ಹೊರೆಯುವ ಚೆನ್ನನಿಗೂ

ಮಧ್ಯೆ ಇರುವ ವಿವಾಹೇತರ ಸಂಬಂಧ ಇವುಗಳನ್ನು ಹೇಳುವ ರೀತಿಯಲ್ಲಿಯೇ ಕಾದಂಬರಿ ಬೆಳೆಯುತ್ತದೆ. ವ್ಯವಸ್ಥೆಯಲ್ಲಿನ ಟ್ಟಿ ಭದ್ರತೆಯ ವಿರುದ್ಧ ಪಾರ್ವತಕ್ಕನನ್ನು ಎತ್ತಿಕಟ್ಟುವುದುದಕ್ಕಾಗಿಯೇ ಆಕೆಗೂ ಚೆನ್ನನಿಗೂ ಲೈಂಗಿಕ ಸಂಬಂಧವನ್ನು ರಲಾಗಿದೆ. ಜಡತೆಯ ವಿರುದ್ಧ ಬಂಡಾಯವನ್ನು ಸಾರುವುದರಲ್ಲಿಯೇ ಪಾರ್ವತಕ್ಕ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಪ್ರತಿಪಾದಿಸುವುದಲ್ಲದೇ, ಅವುಗಳನ್ನು ಸಂರಕ್ಷಿಸುವವಳು ಆಗುತ್ತಾಳೆ. ಇದನ್ನೆಲ್ಲ ಹೇಳುವಲ್ಲಿ ಬರಗೂರರು ತಾವು ಪ್ರಬಲವಾಗಿ ನಂಬಿದ ಮೌಲ್ಯಗಳನ್ನು ಪ್ರತಿಪಾದಿಸಲು ಈ ಕಾದಂಬರಿಯ ಪಾತ್ರಗಳನ್ನು ದುಡಿಸಿಕೊಂಡಿದ್ದಾರೆ. 'ಹುತ್ತ' ಅವರ ಎರಡನೆಯ ಕಾದಂಬರಿ. ಮೊದಲನೇ ಕಾದಂಬರಿಯಲ್ಲಿ ಕಂಡು ಬರುವ ಸಿದ್ಧಾಂತಗಳೇ ಇಲ್ಲಿಯೂ ಕಂಡು ಬರುತ್ತವೆ. ಈ ಕಾದಂಬರಿಯಲ್ಲಿ ಕೆಂಗಪ್ಪ ಶೋಷಕನಾದರೆ ಮಾರ ಆತನ ವಿರುದ್ಧ ಹೋರಾಡುವ ಪಾತ್ರವಾಗಿದ್ದಾನೆ. ಬಹುತೇಕ ಪಾತ್ರಗಳು ಕೆಂಗಪ್ಪನ ಪರವಾಗಿ ಅಂದರೆ ವ್ಯವಸ್ಥೆಯ ಪರವಾಗಿ ಕೆಲಸ ಮಾಡುತ್ತವೆ. ಪ್ರಾಮಾಣಿಕರು ಹೆಜ್ಜೆ ಹೆಜ್ಜೆಗೂ ನೋವನ್ನು ಅನುಭವಿಸುತ್ತಾರೆ. ಕಾದಂಬರಿಯ ಕೊನೆಯ ಭಾಗದಲ್ಲಿ ವ್ಯವಸ್ಥೆಯ ವಿರುದ್ಧ ಕೊರಳೆತ್ತುವ ಪಾತ್ರಗಳು ಯಾಂತ್ರಿಕವಾಗಿ ಓಡಾಡುತ್ತವೆ.

ಬರಗೂರರ ಕಾದಂಬರಿಯ ನಾಯಕಿಯರು ಯಜಮಾನ ಸಂಸ್ಕೃತಿಯ ಪ್ರಬಲ ಪ್ರತಿಪಾದಕರನ್ನು ಮುಖಾಮುಖಿಯಾಗಿ ನಿಂತು ಪ್ರತಿಭಟಿಸುತ್ತಾರೆ. "ಉಕ್ಕಿನ ಕೋಟೆ" ಯಲ್ಲಿನ ನಾಗಮ್ಮ ಯಜಮಾನಿಕೆ. ಮೆರೆಯುವವರ ಎದುರು ನಿಂತು ಮಾತನಾಡುವುದರ ಮೂಲಕತ ಸ್ಫೋಟಿಸುತ್ತಾಳೆ. ತನಗೂ ಒಂದು ವ್ಯಕ್ತಿತ್ವ ಅಸ್ತಿತ್ವವಿದೆಯೆಂಬುದನ್ನು ಇತರರಿಗೆ ನೆನಪು ಮಾಡಿಕೊಡಲು 'ನಿಜಾನೇ ಹೇಳ್ತಿದ್ದೀನಿ, ನಾನು ಈ ಮನ್ಯಾಗಿದ್ದೀನಿ. ಈ ಮನೆ ಊರ್ನಾಗೈತಿ-ಅದಕ್ಕೆ ಊರಿನ ಷ್ಯ ಮಾತಾಡ್ತೀನಿ' ಎಂದು ಹೇಳುತ್ತಲೆ ಹೊಸಿಲು ದಾಟುವ ಸೂಚನೆಯನ್ನು ಸಹ 'ಮನ್ಯಾಗಿರ್ಬೇಕ್ ತಾನೆ ? ಇವಾಗಿರೋದು ಮನ್ಯಾಗೇ ಮತ್ತೆ ಆದ್ರೆ ನೀವ ಇವಾಗ ಮಾಳವ್ವನ್ನ ಸುಮ್ನೆ ಬಿಡದಿದ್ರೆ ಮನೆ ಬಿಟ್ಟು ಹೊರ್ಗಡೆ ಬಂದು ಎಲ್ಲರೆದರಿಗೂ ಹೇಳ್ತೀನಿ. ಯಾಕಾದ್ರೆ ನಾನು ಅವಳಂಗೆ ಅಂಬ್ತಿ ತಿಳ್ಕಾಳ್ಳಲಿ ಉರ್ನಾರೆಲ್ಲ' ಎಂದು ನಾಗಮ್ಮ ಉಕ್ಕಿನ ಕೋಟೆಯನ್ನು ಭೇದಿಸಲು ಪ್ರಯತ್ನಿಸುತ್ತಾಳೆ.

'ಒಂದು ಊರಿನ ಕತೆ' ಕಾದಂಬರಿಯಲ್ಲಿ ಸ್ವಾತಂತ್ರ್ಯ ಬಂದ ನಂತರ ಒಂದು ಹಳ್ಳಿಯಲ್ಲಿ 'ಸಮಾಜ ಕೇಂದ್ರ ಕಟ್ಟಡ' ಸಿದ್ಧವಾಗಿ ನಿಲ್ಲುತ್ತದೆ. ಆ ಕಾಲಕ್ಕೆ ಊರ ಪಟೇಲ ಗೌಡರ ಮೇಲೆ ದಾಳಿಯಾಗಬಹುದೆಂಬ ತಿಳುವಳಿಕೆ ಕೂಡ ಇದ್ದಿರಲಿಲ್ಲ. ಅದು ಇಡೀ ಕಾದಂಬರಿಗೆ 'ಚಲನಶೀಲತೆ' ಯನ್ನು ತಂದು ಕೊಡುತ್ತದೆ. ಈ ಕಟ್ಟಡದಿಂದ ಸಮಾಜದ ಮೇಲೆ ಉಂಟಾಗುವ ಪರಿಣಾಮ ಮುಖ್ಯವಾದದ್ದು. ಇದರಿಂದ ಶ್ರೀ ಸಾಮಾನ್ಯರು ಹರ್ಷಿತರಾಗುತ್ತಾರೆ. ಇಷ್ಟಾದರೂ ಜಮೀನ್ದಾರರ ಅಧಿಕಾರ ಕುಟಕಾಗುವುದಿಲ್ಲ. ಕಾಲ ಸರಿದಂತೆ ಗೌಡರ ಮನೆಯಲ್ಲಿ ನಡೆಯುತ್ತಿದ್ದ ಪಂಚಾಯ್ತಿ ಕಟ್ಟೆ ಸಮಾಜ ಕೇಂದ್ರಕ್ಕೆ ಸ್ಥಳಾಂತರಗೊಳ್ಳುತ್ತದೆ.

ಈ ಕಾದಂಬರಿಯಲ್ಲಿ ಸಿಡಿಯುವ ಶಕ್ತಿಯಾಗಿ ರಾಮು ಕಾಣಿಸಿಕೊಳ್ಳುತ್ತಾನೆ. ಆದರೆ ಆತನಿಗೆ ಯಾವುದೇ ಆರ್ಥಿಕ ಬಲವಿಲ್ಲ. ಅಲ್ಲದೆ ತುತ್ತಿನ ಚೀಲ ತುಂಬಿಕೊಳ್ಳುವುದೇ ಕಷ್ಟ. ಇಂಥ ರಾಮುವನ್ನು ಬರಮಪ್ಪ ದತ್ತು ತೆಗೆದುಕೊಳ್ಳುತ್ತಾನೆ. ಆತನಿಗೆ ಅಲ್ಪಸ್ವಲ್ಪ ಜಮೀನಿಗೆ ರಾಮು ತನ್ನ ಕಾಲೇಜಿಲ್ಲಿ ಕಲಿಯಲು ಕಳಿಸುತ್ತಾನೆ.

ಇಲ್ಲಿ ಆಸ್ತಿ ವರ್ಗ ರಚನೆಯಲ್ಲಿ ಕಾರ್ಯನಿರ್ವಹಿಸಿ, ರಾಮುವಿಗೆ ಸಿಡಿದು, ನಿಲ್ಲುವ ಶಕ್ತಿಯನ್ನು ತಂದು ಕೊಡುತ್ತದೆ. ಅದರ ಮುಖಾಂತರ ಆತ ನಗರ ಸಂಸ್ಕೃತಿಯನ್ನು ಕಾಣುತ್ತಾನೆ. ಅಲ್ಲಿಂದ ಮುಂದೆ ಅವನು ಊರಿನ "ಬಸವೇಶ್ವರ ಟೀ ಕಾಫೀ ಬಾರ್" ನಲ್ಲಿ ಗರಡಿಯಲ್ಲಿ ಹೊರಗೆ ಕುಳಿತು ಕುಡಾಯಲಾರ 'ಗಳಾಸ' ಗಾಗಿ ಜಟಾಪಟಿ ಮಾಡುತ್ತಾನೆ. ಅದು ಕೇವಲ ಲಾಸಾಗಿರದೆ ಊಳಿಗಮಾನ್ಯ ಸಂಸ್ಕೃತಿಯ 'ಜಾತಿ' ಹೆಪ್ಪುಗಟ್ಟಿರುವುದನ್ನು ತಿಳಿಸುತ್ತದೆ.

ಪಂಚಾಯ್ತಿ ಸಭೆಯಲ್ಲಿ ರಾಮು ಸಿಗರೇಟು ಸೇದುವುದು ಸರಿ-ತಪ್ಪಿನ ಪ್ರಶ್ನೆಯಾಗಿರದೆ ಅವನ ಸ್ವಾತಂತ್ರ್ಯದ ಂಕೇತವಾಗುತ್ತದೆ. ಆದರೆ ಅಧಿಕಾರದ ಆಸೆಯಿಂದ ಅವನ ಪರವಾಗಿದ್ದ ಮೇಲು ಜಾತಿಯ ಜನರು ಸಹ ಈ ಕ್ರಿಯೆಯಿಂದ ಮ್ಮ ಪರಿಮಿತಿಯನ್ನು ತೋರುತ್ತಾರೆ. ಇಲ್ಲಿ ರಾಮುವಿನ ದಲಿತರ ಸ್ವಾತಂತ್ರ್ಯದ ಪರಿಮಿತಿ ಜಮೀನುದಾರಿಕೆಯಲ್ಲಿ ಜಾತಿ ಹ ಪ್ರಾಧಾನ್ಯತೆ ಪಡೆಯುತ್ತದೆ. ಪಂಚಾಯ್ತಿ ಕಟ್ಟೆಯ ನ್ಯಾಯ ಸದಸ್ಯರಾಗಿ ಯಾರ್ಯಾರು ಇರಬೇಕೆಂಬುದರ ಬಗ್ಗೆ ಚರ್ಚೆ ಡೆಯುತ್ತದೆ. ಆಗ ಬಸವಯ್ಯ, ದಲಿತ ಬರಮಪ್ಪನಿಗೆ ಸ್ಥಾನ ದೊರಕುತ್ತದೆ. ಇದು ಮುಂದೆ ಇತರರಿಗೆ ಸ್ಥಾನ ದೊರಕುವ ೂಚನೆಯಾದರೂ ಬರಮಪ್ಪ ಅಲ್ಪಸ್ವಲ್ಪ ಆಸ್ತಿವಂತ ಎಂಬುದನ್ನು ಮರೆಯಬಾರದು.

ಅಧಿಕಾರ ಪಡೆದುಕೊಳ್ಳಲು ಸಂಘಟನೆ ಮುಖ್ಯವಾಗುತ್ತದೆ. ಅದು ಕೂಡ ಜಾತಿಯಾಧಾರಿತವಾಗಿರುತ್ತದೆ. ಆದರೆ ಯಾವುದೇ ಒಂದು ಜಾತಿ ನಿರ್ಣಾಯಕ ಪಾತ್ರವನ್ನು ವಹಿಸಲು ಸಾಧ್ಯವಾಗದು. ಅಂದರೆ ಪ್ರಧಾನಶಕ್ತಿಯನ್ನು ತಡೆಯಲು ತರೆ ಜಾತಿಯವರು ಒಗ್ಗೂಡಬೇಕಾಗುತ್ತದೆ. ಆದರೆ ಬಸವಯ್ಯ ಜಮೀನುದಾರರರ ಪರವಾಗುವುದರಿಂದ ಶೋಷಿತ ರ್ಗ ಶಕ್ತಿ ಮುಂದಾಗಿ, ಜಾತಿಯನ್ನು ವರ್ಗಶಕ್ತಿ ಹತ್ತಿಕ್ಕುತ್ತದೆ. ಆದರೆ ಈ ಕಡೆ ದಲಿತರೆಲ್ಲರೂ ರಾಮುವಿನ ಮುಂದಾಳುತನ ಲ್ಲಿ ವರ್ಗಶಕ್ತಿಯನ್ನು ರೂಪಿಸುತ್ತಾರೆ. ಇಷ್ಟಾದರೂ ಹಟ್ಟಿಯ ಹನುಮ, ಪುಟ್ಟಗೌರಿ ದಲಿತರಾಗಿಯೇ ಉಳಿದು ಬಿಡುತ್ತಾರೆ. ದಂಬರಿಯ ಸಮಸ್ಯೆಯಲ್ಲೊಂದಾದ ರಾಮು ಮತ್ತು ಗೌರಿಯರ ಅತ್ಯಾಚಾರ ತೀರಿಸುವುದು ಕಾಣೆಯಾಗಿ ಅದರ ರ್ಣಯ ಪಂಚಾಯ್ತಿ ಕಟ್ಟೆಗೆ ಬಿಡುವುದು ವ್ಯಂಗ್ಯವಾಗಿ ಬಿಡುತ್ತದೆ.

"ರಾಮು - ಗೌರಿಯರ ಕಾಮ ಸಂಬಂಧ, ರಾಮು ಪುಟ್ಟಿಯರ ಪ್ರೇಮ ಸಂಬಂಧ, ಇಲ್ಲಿ ವರ್ಗಶಕ್ತಿಯ ಕೈ ೇರುತ್ತದೆ. ಕಾಮ - ಪ್ರೇಮ ಸಂಬಂಧ, ಮದುವೆ ಸಂಬಂಧದಂಥ ಒಂದು ಅತ್ಯಂತ ಮಹತ್ವದ ಸಾಂಸ್ಕೃತಿಕ ಸಂಬಂಧ ಕೂಡ ರ್ಧಾರವಾಗುವುದು ಕೂಡ ರಾಜಕೀಯ ಅಧಿಕಾರದ ಶಕ್ತಿಯಲ್ಲ, ವರ್ಗ ಸಮಾಜ ಹೀಗೆ ಇಂಥ ಸಾಂಸ್ಕೃತಿಕ ಒಳಜಗತ್ತಿನ ೕಲೆ ದಾಳಿ ಇಡುವ ಮತ್ತು ಅದನ್ನು ಧ್ವಂಸ ಮಾಡುವ ಕ್ರಿಯೆಗಳನ್ನು ಕಾದಂಬರಿಅನಾವರಣಗೊಳಿಸುತ್ತದೆ. ಇಷ್ಟಾಗಿಯೂ ಮುವಿನ ಸ್ಫೋಟಕ ಶಕ್ತಿಯೇ ಚರಿತ್ರೆಯ ಚಲನಶಕ್ತಿಯಾಗಬೇಕಾದ ಮುಖ್ಯ ಶಕ್ತಿಯಾಗುತ್ತದೆ ಎಂದು (ಆರ್.ವಿ. ಂಡಾರಿ - ಕನ್ನಡ ಸಾಹಿತ್ಯ ಪುನರ್ ಮೌಲ್ಯೀಕರಣ ಮಾಲೆ) ವಿಮರ್ಶಕರು ಅಭಿಪ್ರಾಯಪಟ್ಟಿದ್ದಾರೆ.

'ಬೆಂಕಿ' ಮತ್ತು 'ಸೂರ್ಯ' ಕಾದಂಬರಿಗಳನ್ನು ಒಟ್ಟೊಟ್ಟಿಗೆ ಇರಿಸಿ ನೋಡಲು ಅವಕಾಶವಿದೆ. ಈ ಎರಡು ಬಂದರಿಯ ನಾಯಕರು ಲೈಂಗಿಕವಾಗಿ ಹೆಂಡತಿಯರ ಬಯಕೆಗಳನ್ನು ಪೂರೈಸುವ ಸಾಮರ್ಥ್ಯವಿಲ್ಲದವರು. ಆ ರಣದಿಂದಾಗಿ ಆ ಹೆಂಗಸರು ಇತರೆ ವ್ಯಕ್ತಿಯೊಂದಿಗೆ ಸೇರಿ ತಮ್ಮ ಬಯಕೆಗಳನ್ನು ಪೂರೈಸಿಕೊಳ್ಳುತ್ತಾರೆ. ಇದು ಅಷ್ಟು ಾತ್ರವಾಗಿರದೆ ಸಾಮಾಜಿಕ ಸಮಸ್ಯೆಯೇ ಆಗಿ ಬಿಡುತ್ತದೆ.

'ಬೆಂಕಿ'ಯ ನಾಯಕಿ ಲಕ್ಷ್ಮೀ. ಆಕೆಯ ಗಂಡ ಹೆಂಡತಿಯ ಲೈಂಗಿಕ ಬಯಕೆಯನ್ನು ಪೂರೈಸಲಾರದ ಅಸಮರ್ಥ, ಪುಂಸಕ, ನಾಯಕಿ ಲಕ್ಷ್ಮೀಯ ವ್ಯಕ್ತಿ ಮಟ್ಟದ ಸಮಸ್ಯೆಯು ಬೆಳದಂತೆ, ಆಕೆಯ ಗಂಡನ ನಪುಂಸಕತ್ವದ ನಿವಾರಣೆಗಾಗಿ ತೆಯುವ ಆಚರಣೆ, ಉತ್ಸವ, ಆರಾಧನೆ, ಸ್ವಾಮಿ ದರ್ಶನ ಮೊದಲಾದವು ಸೇರಿ ಸಾಮೂಹಿಕ ಸಮಸ್ಯೆಯಾಗಿ ಕಾಡುತ್ತದೆ. ಗೆಯೇ 'ಸೂರ್ಯ' ಕಾದಂಬರಿಯನ್ನು ಗಮನಿಸಿದಾಗ 'ಸೂರ್ಯ' ಕಾದಂಬರಿ ದಲಿತ ಬಂಡಾಯ ಕಾದಂಬರಿ ಸಾಹಿತ್ಯದ ಶಯವನ್ನು ಪ್ರಾತಿನಿಧಿಕವಾಗಿ ವ್ಯಕ್ತಪಡಿಸುತ್ತದೆ. ಗ್ರಾಮೀಣ ಶ್ರಮಿಕ ಜನಾಂಗ ಕೇವಲ ದೈಹಿಕವಾಗಿ ಶೋಷಣೆ ಳಪಡದೇ ಇಡೀ ಅವರ ಬದುಕು, ಅವರ ಸೊತ್ತು, ಅವರ ಸ್ತ್ರೀಯರು, ಸಂಸ್ಕೃತಿ ಇವೆಲ್ಲ ಯಜಮಾನರ ಆಸ್ತಿಯೇ ಆಗಿ ಂತರ ಶೋಷಣೆಗೊಳಗಾಗುತ್ತಾರೆ. (ಡಾ. ಸಿದ್ದನಗೌಡ ಪಾಟೀಲ - ಕನ್ನಡ ಸಾಹಿತ್ಯ ಪುನರ್ ಮೌಲ್ಯೀಕರಣ ಮಾಲೆಯಲ್ಲಿ) ರ್ಯ'ಕಾದಂಬರಿಯಲ್ಲಿ ಬರುವ ಶೋಷಕ ಜಮೀನ್ದಾರ ಲೈಂಗಿಕ ರೋಗಕ್ಕೆ ಈಡಾಗಿ ಸಂತಾನ ಸಾಮರ್ಥ್ಯವನ್ನು

ಿದುಕೊಂಡಿದ್ದರೂ ಮೊದಲು ಮದುವೆಯಾಗಿದ್ದ ಇಬ್ಬರು ಹೆಂಡತಿಯರನ್ನು ಕೊಂದು ಮೂರನೇ ಹೆಂಡತಿಯಾಗಿ ೀತಕ್ಕನನ್ನು ಮದುವೆಯಾಗುತ್ತಾನೆ. ಗಂಡನ ಲೈಂಗಿಕ ರೋಗದ ಪೂರ್ವಾಪರವನ್ನೆಲ್ಲ ತಿಳಿದ ಸೀತಕ್ಕ ತಮ್ಮ ಮನೆಯ ೀತಗಾರನಾದ ಕರಿಯನ ಜೊತೆ ಲೈಂಗಿಕ ಸಂಬಂಧವಿರಿಸಿಕೊಳ್ಳುತ್ತಾಳೆ. ಶೋಷಿತ ಮಹಿಳೆ ಯಾವುದೇ ವರ್ಗದಲ್ಲಿದ್ದರೂ ೕವರ್ಗದ ಜೀತಗಾರನೊಂದಿಗೆ ಒಂದಾಗುವುದು. ಎರಡು ಶೋಷಿತ ಸಂಸ್ಕೃತಿಗಳ ಒಗ್ಗೂಡುವಿಕೆ ಮತ್ತು ಹೋರಾಟವನ್ನು ೂಚಿಸುತ್ತದೆ.

ಈ ಕಾದಂಬರಿಯಲ್ಲಿ ಶೋಷಿತರು ಜಾಗೃತರಾಗುವ ದಿನಮಾನಗಳಲ್ಲಿ ನಡೆದ ಸಾಮಾಜಿಕ ಸ್ಥಿತ್ಯಂತರಗಳನ್ನು ಟನೆಯೊಂದರ ಮೂಲಕ ಕಾದಂಬರಿಕಾರರು ಹೀಗೆ ಗುರ್ತಿಸಿದ್ದಾರೆ. 'ಮನೆಯೊಳಗೆ ಮಾತ್ರವಲ್ಲ, ಮನೆ ಹೊರಗೂ ಹಿಡಿತ ಲ್ಲ ಅನ್ನೋದು ಅವನಿಗೆ ಅರಿವಾಗಿತ್ತು. ಈಗ ಮೊದಲಿನಂತೆ ಇಲ, ರಾಮಣ್ಣನ ರಾಜಕೀಯ ಶುರುವಾಗಿದೆ. ಅವನದೇ ಂಪು ಹಿಂದೆ ಮುಂದೆ ಸುತ್ತಾಡ್ತಾ ಇದೆ. ಬಡವರ ಉದ್ಧಾರ, ಹರಿಜನ ಉದ್ಧಾರ, ಹರಿಜನ ಉದ್ಧಾರ, ಗಿರಿಜನ ಉದ್ಧಾರ ದೂ ಇದೂ ಹೇಳ್ಕೊಂಡು ಬಡವರ ಬಂಧು ಬೇರೆ ಆಗ್ತಾ ಇದಾನೆ. ಇಂಥಾದರಲ್ಲಿ ತನ್ನ ದರ್ಪವೆಲ್ಲ ಸತ್ತ ರ್ಪವಾಗುತ್ತಿದೆಯೇನೋ ಅನ್ನಿಸಿ, ಆಗಾತಗೊಂಡು, ಊರೊಳಗಿನ ಶಕ್ತಿಗಳೆಲ್ಲ ಸೀತಕ್ಕನ ರೂಪದಲ್ಲಿ ಒಳಗೆ ಒಂದು ಸೇರಿ ಂಡಂತೆ ಕಾಣ್ತೆದೆಯಲ್ಲ ಅಂತ ಹಿಂಸೆಯ ಉಸುಕಿನಲ್ಲಿ ಬಿದ್ದು ಒಡ್ಡಾಡಿದ. 'ಭರತನಗಿರಿ' ಯಲ್ಲಿ ವಿಡಂಬನೆಯ ಧಾನವಾಗಿ ಕಂಡು ಬರುತ್ತದೆ. ಕಾದಂಬರಿಯಲ್ಲಿ ಭ್ರಷ್ಟರಾಜಕಾರಣದ ವಿವಿಧ ಮುಖಗಳನ್ನು ಕಟುವಾಗಿ ಡಂಬಿಸಲಾಗಿದೆ. 'ಸಂಗಪ್ಪನ ಸಾಹಸಗಳು' ಕಾದಂಬರಿಯಲ್ಲಿ ಸ್ವಾತಂತ್ರ್ಯ ದೇವಿಯ ಸಿಂಹಾಸನಾರೋಹಣ, ಸಂವಿಧಾನ ನ, ಸಂವಿಧಾನ ಶಾಹಿ, ಯುವರಾಜಪಟ್ಟಾಭೀಷೇಕಂ, ಚುನಾವಣೇಶ್ವರ, ಚಿತ್ತಸೇವಿ, ಗುಂಡು ಸೇವೆ, ನಗರಿಗೀತೆಯಂಥ ಡಂಬನಾತ್ಮಕ ಅಧ್ಯಾಯಗಳಿವೆ.

ಪ್ರಸ್ತುತ ವ್ಯಕ್ತಿಗಳು ಹೆಸರಿನ ಬದಲಾವಣೆಯೊಂದಿಗೆ ಕಾದಂಬರಿಯ ಪಾತ್ರಗಳಾಗಿದ್ದಾರೆ. ಉದಾಹರಣೆಗೆ ಟಾ-ಬಿಲ್ಲಾಗಳು ತಾತಯ್ಯ, ಬೀರಯ್ಯ ಆಗಿದ್ದಾರೆ. ಮೊರಾರ್ಜಿ ದೇಸಾಯಿ, ಮಾರ್ಜೀಬಾಯಿ, ಜಗಜೀವನ್‌ರಾಂ ವರು ಜಗ್ಗೂರಾಮ್, ವಾಜಪೇಯಿಯವರು ಮಜಪೇಯಿ ಬಿಹಾರಿಗಳಾಗಿ ಹೆಸರಿನ ಬದಲಾವಣೆಯೊಂದಿಗೆ ಬರುತ್ತಾರೆ. ಷ್ಟಾದರೂ ಈ ಕೃತಿ ವ್ಯಕ್ತಿ ಮಟ್ಟಕ್ಕೆ ಮಾತ್ರ ಸೀಮಿತಗೊಳ್ಳದೇ, ಸೃಜನಶೀಲ ರಾಜಕೀಯಕ್ಕೆ ಬರೆದ ರಾಜಕೀಯಕ್ಕೆ ಬರೆದ ಷ್ಯವಾಗಿದೆ. 'ಹೀಗೆ ಈ ಕೃತಿ ರಾಜಕಾರಣಿಗಳ, ಮಠಾಧಿಪತಿಗಳ, ಬಂಡವಾಳ ಶಾಹಿಗಳ ಹಿಡಿತದಲ್ಲಿರುವ ಎಲ್ಲ ಶಕ್ತಿಗಳ ರ್ಯ ಮತ್ತು ದಮನಗಳನ್ನು ವಿಡಂಬಿಸುವಲ್ಲಿ ಯಶಸ್ವಿಯಾಗಿದೆ. ಈ ನಮೂನೆಯ ಕಾದಂಬರಿಗಳು ಬಂಡಾಯ ದಲಿತರ ಲಯದಲ್ಲಿ ಸಾಕಷ್ಟು ಜನಪ್ರಿಯತೆಯನ್ನು ಗಳಿಸಿವೆ. ಹೀಗೆ ಬರಗೂರು ರಾಮಚಂದ್ರಪ್ಪನವರು ಕೃತಿಗಳು ತಮ್ಮೆಲ್ಲಾ ತಿಗಳ ನಡುವೆಯೂ ಬಂಡಾಯ ಪರ ನಿಲುವಿನಿಂದಾಗಿ ಮುಖ್ಯವಾಗುತ್ತವೆ.' (ಪುರುಷೋತ್ತಮ ಬಿಳಿಮಲೆ ಬಂಡಾಯ ಲಿತ ಸಾಹಿತ್ಯ).

ಇವಲ್ಲದೆ ಬರಗೂರು 'ಸೀಳುನೆಲ', 'ಗಾಜಿನ ಮನೆ' ಮತ್ತು 'ಸ್ವಪ್ನ ಮಂಟಪ' ಕಾದಂಬರಿಗಳನ್ನು ಬರೆದಿದ್ದಾರೆ. ಳುನೆಲ' ಕಾದಂಬರಿಯಲ್ಲಿ ನಿಜವಾದ ಕ್ರಾಂತಿಕಾರರು ನೋವಿನ ಪದರಗಳಿಂದ ಮೂಡಿ ಬರುತ್ತಾರೆಯೆ ಹೊರತು ಸುಖ, ಯ ನೆಲೆಯಿಂದಲ್ಲ ಎಂಬುದನ್ನು ಹೇಳಲಾಗಿವೆ. ಕೊಳೆಗೇರಿಯ ಕ್ರಾಂತಿಕಾರಿಯವರ, ಸಿರಿವಂತರ ಮನೆಯಿಂದ ಬಂದ ಂತಿಕಾರಿ ಯುವಕ ಮತ್ತು ಕ್ರಾಂತಿ ಕನ್ಯೆಯ ಸುತ್ತ ಕಾದಂಬರಿ ಬೆಳೆಯುತ್ತದೆ. ಆ ಇಬ್ಬರೂ ಯುವಕರು ಕ್ರಾಂತಿ ಕನ್ಯೆಯನ್ನು ತಿಸುತ್ತಾರೆ. ಆದರೆ ಸಿರಿವಂತ ಹುಸಿ ಕ್ರಾಂತಿಕಾರ. ಅವನ ಬಗ್ಗೆ ಎಚ್ಚರವಿರಬೇಕೆಂದು, ಕೊಳೇಗೇರಿಯ ಕ್ರಾಂತಿಕಾರಿ ಳಿಗೆ ತಿಳಿಸುತ್ತಾನೆ. ಆಗ ಅವಳು ಕ್ರಾಂತಿ ಯಶಸ್ವಿಯಾಗಬೇಕಾದರೆ ಸಿರಿವಂತರೂ ಕ್ರಾಂತಿಕಾರಿಗಳಾಗಬೇಕು ಎನ್ನುತ್ತಾಳೆ

ಕಾದಂಬರಿಯ ಕೆಲವು ಘಟನೆಗಳಿಂದ ಸಿರಿವಂತ ಯುವಕ ಹುಸಿಕ್ರಾಂತಿಕಾರಿಯೆಂಬುದು ತಿಳಿಯುತ್ತದೆ. ಅಂದರೆ ಶೋಷಿತ ವರ್ಗದಿಂದ ಕ್ರಾಂತಿಕಾರಿಗಳು ಮೂಡಿಬರುತ್ತಾರೆಯೇ ಹೊರತು ಶೋಷಕ ವರ್ಗದಿಂದಲ್ಲವೆಂಬುದನ್ನು ತಿಳಿಯಬಹುದು.. ಹಾಗೆಯೇ ಉಳಿದ ಕಾದಂಬರಿಗಳು ಕೂಡ ಗಮನಾರ್ಹವಾದವುಗಳಾಗಿವೆ. 'ಶೋಷಣೆಯ ವಿಕೃತ ಅಡಿಪಾಯದ ಮೇಲೆ ನಿಂತಿರುವ ವ್ಯವಸ್ಥೆಯ ವಿರುದ್ಧ ಹೋರಾಟ ಈ ಬಂಡಾಯ ಸಾಹಿತಿಗಳ ಮುಖ್ಯ ಗುರಿ ಈಗ ಅಸ್ತಿತ್ವದಲ್ಲಿರುವ ಯಜಮಾನ ಸಂಸ್ಕೃತಿ ಶೋಷಣೆ ಮತ್ತು ದಬ್ಬಾಳಿಕೆಯ ಇನ್ನೊಂದು ರೂಪ ಎಂಬುದು ಈ ಸಾಹಿತಿಗಳ ನಂಬಿಕೆ ಅದಕ್ಕಾಗಿಯೇ ಈ ಯಜಮಾನ ಸಂಸ್ಕೃತಿಯ ವಿರುದ್ಧ ಬಂಡಾಯದ ಗಟ್ಟಿದನಿ' ಈ ನಿಲುವನ್ನು ಅವರ ಎಲ್ಲ ಕಾದಂಬರಿಗಳಲ್ಲೂ ಕಾಣಬಹುದು.

"ನಾಟಕ":- ಬರಗೂರರು ಈವರೆಗೆ 'ಮುಳ್ಳುಹಾದಿ', 'ಕಪ್ಪುಹಲಗೆ' ಮತ್ತು 'ಕೋಟೆ' ಎಂಬ ಮೂರು ನಾಟಕಗಳನ್ನು ಬರೆದಿದ್ದಾರೆ. ಇದು ಸಾಹಿತ್ಯ ರೂಪದಲ್ಲಿದ್ದರೂ, 'ದೃಶ್ಯರೂಪ'ದಲ್ಲಿ ಹೆಚ್ಚು ಹೆಚ್ಚು ಜನರಿಗೆ ತಲುಪಬೇಕೆಂಬ ಆಶಯ ನಾಟಕರಾರರದು. "ಮುಳ್ಳುಹಾದಿ" ಯಲ್ಲಿ ಪ್ರೀತಿಸುವ ಗಂಡು ಹೆಣ್ಣು ವಿವಾಹವಾಗಲು ಬಯಸಿದಾಗಿ ಸಮಾಜದ ಪಟ್ಟಭದ್ರ ಶಕ್ತಿಗಳು ನಾನಾ ರೀತಿಯಲ್ಲಿ ಅಡೆತಡೆಯನ್ನುಂಟು ಮಾಡುತ್ತವೆ. ಪ್ರೇಮಿಗಳು ಇಡುವ ಒಂದೊಂದು ಹೆಜ್ಜೆಯು 'ಮುಳ್ಳುಹಾದಿ'ಯಲ್ಲಿ ನಡೆದ ಅನುಭವವನ್ನು ತಂದು ಕೊಡುತ್ತದೆ. ವಿವಾಹ ವ್ಯಕ್ತಿಗೆ ಸಂಬಂಧಿಸಿದ್ದಾದರೂ ಸಮಾಜ ಅದನ್ನು ಇನ್ನೂ ತನ್ನ ನಿಯಂತ್ರಣದಲ್ಲಿರಿಸಿಕೊಂಡಿರುವುದನ್ನು ಈ ನಾಟಕದಲ್ಲಿ ಕಾಣಬಹುದಾಗಿದೆ. ಸಮಾಜದ ಕೂಲಿ ಕಾರ್ಮಿಕರನ್ನು ತಮ್ಮ ನಿಯಂತ್ರಣದಲ್ಲಿರಿಸಿಕೊಂಡು ಅವರನ್ನು ತಮ್ಮ ಸಿರಿತನ ಹೆಚ್ಚಿಸಿಕೊಳ್ಳಲು ಮನಬಂದಂತೆ ದುಡಿಸಿಕೊಳ್ಳುತ್ತಿದ್ದಾರೆ. ಕೂಲಿ ಕಾರ್ಮಿಕರಲ್ಲಿ ಓದು ಬರಹ ಕಲಿಯಬೇಕೆಂಬ ಅರಿವು ಮೂಡುತ್ತದೆ. ಆದರೆ ಅವರೆಲ್ಲ ಕಲಿತು ಜಾಗೃತರಾದರೆ ತಾವು ಹೇಳಿದಂತೆ ಕೇಳುವುದಿಲ್ಲವೆಂಬ ಕಾರಣಕ್ಕಾಗಿ ಬಂಡವಾಳಶಾಹಿಗಳು ಅವರನ್ನು ಅನಕ್ಷರಸ್ಥನ್ನಾಗಿಯೇ ಉಳಿಸುವ ಪ್ರಯತ್ನ ಮಾಡುತ್ತಾರೆ. ಅದು ವಿಫಲವಾಗುತ್ತವೆ. ಕೂಲಿ ಕಾರ್ಮಿಕರೆಲ್ಲ ಒಂದಾಗಿ ತಮ್ಮದೇ ಶಾಲೆಯನ್ನು ಪ್ರಾರಂಭಿಸಿ ಓದು, ಬರಹಕ್ಕೆ ತೊಡಗುತ್ತಾರೆ. ಇದು ಸರ್ಕಾರದ 'ಕಪ್ಪು ಹಲಗೆ' ಯೋಜನೆಯನ್ನು ನೆನಪಿಸುತ್ತವೆ. ಬರಗೂರರ ಕೋಟೆ ನಾಟಕದಲ್ಲಿ ಪ್ರಧಾನ ನಾಯಕ ಪಾತ್ರಗಳೇ ದಲಿತರಾಗಿದ್ದಾರೆ. ಬರಗೂರರ ಸಾಹಿತ್ಯದಂತೆಯೇ ಅವರ ನಾಟಕಗಳು ಕೂಡ ಜಮೀನ್ದಾರನ, ಪುರೋಹಿತಶಾಹಿಯ, ರಾಜಕಾರಣಿಗಳ ಸಂಯೋಗಗಳೊಂದಿಗೆ ಕೆಳಜಾತಿಗಳ ಮತ್ತು ಅವರ ಮೇಲೆ ನಡೆಸುವ ಲೈಂಗಿಕ ಶೋಷಣೆಯನ್ನು ಸಮರ್ಥವಾಗಿ ರಂಗಕ್ಕೆ ತಂದವರು ದೇವ್ ನಾಗೇಶ್. ಈ ನಾಟಕದ ಅಸ್ಪೃಶ್ಯ ಪಾತ್ರಗಳು ಪ್ರೇಕ್ಷಕರ ಮನತಟ್ಟುತ್ತವೆ. ಕೆಳ ಜಾತಿಯ ಸ್ತ್ರೀ ಪ್ರಧಾನ ಪಾತ್ರ ಇವರ ನಾಟಕದ ವೈಶಿಷ್ಟ್ಯವಾಗಿದೆ. (ಎಲ್.ಹನುಮಂತಯ್ಯ - ಕನ್ನಡ ಸಾಹಿತ್ಯಪುನರ್ ಮೌಲ್ಯೀಕರಣ ಮಾಲೆಯಲ್ಲಿ)

"ವಿಚಾರ - ವಿಮರ್ಶೆ" :- 'ಸಾಹಿತ್ಯ ಮತ್ತು ರಾಜಕಾರಣ', 'ಸಂಸ್ಕೃತಿ ಮತ್ತು ಸೃಜನ ಶೀಲತೆ', ' ಬಂಡಾಯ ಸಾಹಿತ್ಯ ಮೀಮಾಂಸೆ', ' ಇಣುಕು ನೋಟ', 'ಸಂಸ್ಕೃತಿ - ಉಪಸಂಸ್ಕೃತಿ, 'ವರ್ತಮಾನ' ಮತ್ತು 'ರಾಜಕೀಯ ಚಿಂತನೆ' - ಇವು ಬರಗೂರರು ಈವರೆಗೆ ಬರೆದಿರುವ ವಿಚಾರ ವಿಮರ್ಶೆಯ ಕೃತಿಗಳು. "ಸಾಹಿತ್ಯ ಮತ್ತು ರಾಜಕಾರಣ'ದಲ್ಲಿ ಮುಖ್ಯವಾಗಿ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಕೆಲವು ಹೊಸ ಚಿಂತನೆಯ ಬರಹಗಳಿವೆ. ಹಾಗೆಯೇ ಸಾಹಿತ್ಯಕ್ಕೂ ರಾಜಕಾರಣಕ್ಕೂ ಸಂಬಂಧವಿರುವುದನ್ನು ಗುರುತಿಸಲಾಗಿದೆ. 'ಸಂಸ್ಕೃತಿ ಮತ್ತು 'ಸೃಜನ ಶೀಲತೆ'ಯಲ್ಲಿ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗೆ ಸಂಬಂಧಪಟ್ಟ ಬರಹಗಳಿವೆ. ಸರ್ವಾಧಿಕಾರಿ ಮತ್ತು ಸಂವೇಧನಾ ಶೀಲತೆ, ಮಂಡೇಲ ಮಾನವ ಮಹಾಕಾವ್ಯ ಸಾಹಿತ್ಯ ಮತ್ತು ಸಿನಿಮಾ, ಸಮೂಹ ಮಾಧ್ಯಮ ಸಂಸ್ಕೃತಿ ಮತ್ತು ಮಹಿಳೆ ಮೊದಲಾದ ಲೇಖನಗಳು ಹೊಸ ರೀತಿಯ ಆಲೋಚನೆಯಿಂದ ಕೂಡಿವೆ. ಬರಗೂರು ರಾಮಚಂದ್ರಪ್ಪ ಅವರ 'ಬಂಡಾಯ ಸಾಹಿತ್ಯ ಮೀಮಾಂಸೆ' ಬಂಡಾಯ

ಾಹಿತ್ಯದ ಸ್ವರೂಪ, ಲಕ್ಷಣ ಮತ್ತು ತಾತ್ವಿಕತೆಗಳನ್ನು ತಿಳಿಸುತ್ತದೆ. ಬಂಡಾಯ ಸಾಹಿತ್ಯದ ಬಗ್ಗೆ ಖಚಿತವಾದ ಅಭಿಪ್ರಾಯ ಮೂಡಿಸುವ ಈ ಕೃತಿ, ಸಂಘಟನೆಗೊಂದು ದಿಕ್ಸೂಚಿ ಎಂದು ಈ ಪುಸ್ತಕದ ಪ್ರಕಾಶಕರಾದ ಆರ್. ಜಿ. ಹಳ್ಳಿ ನಾಗರಾಜ್ ಅಭಿಪ್ರಾಯಪಟ್ಟಿದ್ದಾರೆ. ಅದು ನಿಜವೂ ಹೌದು ' ಇಣುಕು ನೋಟ' ಬರಗೂರರು ಇಲ್ಲಿವರೆಗೆ ಹಲವಾರು ಕೃತಿಗಳಿಗೆ ಬರೆದಿರುವ ಮುನ್ನುಡಿಗಳಿಂದ ಆಯ್ಕೆ ಮಾಡಿರುವ ಬರಹಗಳ ಸಂಗ್ರಹ. ಇದರಲ್ಲಿ ಯಾವುದೇ ಮುಲಾಜಿಗೂ ಒಳಗಾಗದೆ ಕೃತಿಗಳನ್ನು ಅವಲೋಕಿಸಿದ್ದಾರೆ. ಬಹುಶಃ ನಿಷ್ಠುರವಾದ ಬರವಣಿಗೆ ಅಂದರೆ ಮುನ್ನುಡಿಗಳು ಹೇಗಿರಬೇಕೆಂಬುದನ್ನು ಇಲ್ಲಿಯ ಒಂದೊಂದು ಬರಹಗಳಲ್ಲೂ ಕಾಣಬಹುದಾಗಿದೆ.

' ವರ್ತಮಾನ' ಕೃತಿಯಲ್ಲಿನ ಬರಹಗಳು ಬರಗೂರರು ' ಈ ವಾರ ಕರ್ನಾಟಕ ' ಎಂಬ ವಾರಪತ್ರಿಕೆಗೆ ಬರೆದ ಅಂಕಣ' ಬರಹಗಳು ಸಂದರ್ಭಕ್ಕೆ ತಕ್ಕ ಈ ಬರಹಗಳನ್ನು ವಿಶ್ಲೇಷಣಾ ದೃಷ್ಟಿಯಿಂದ ಬರೆಯಲಾಗಿದೆ. ಹಾಗೆಯೇ ರಾಜಕೀಯ ಚಿಂತನೆ' ಯಲ್ಲೂಗಮನಾರ್ಹವಾದ ಬರಹಗಳಿವೆ.

ಬರಗೂರರ ಸಾಹಿತ್ಯವನ್ನು ಕುರಿತು ಇಷ್ಟನ್ನು ಅವಲೋಕಿಸಬಹುದು. ಆದರೆ ಅವರು ಕೆಲವು ಚಲನಚಿತ್ರಗಳಿಗೆ ಸಾಹಿತ್ಯವನ್ನು ಒದಗಿಸಿದ್ದಾರೆ. ನಿರ್ದೇಶಿಸಿದ್ದಾರೆ. ಹಾಗೆ ಮಾಡುವಾಗಲೂ ಅವರು ನಂಬಿದ ಸಿದ್ಧಾಂತಗಳಿಗೆ ಎಲ್ಲಿಯೂ ಚ್ಯುತಿಬಾರದಂತೆ ನೋಡಿಕೊಂಡಿದ್ದಾರೆಂಬುದನ್ನು ಮರೆಯುವಂತಿಲ್ಲ.

ಬರಗೂರು ರಾಮಚಂದ್ರಪ್ಪನವರೂ ಇನ್ನೂ ಬರೆಯುತ್ತಿರುವುದರಿಂದ ಅವರ ಈವರೆಗಿನ ಕೃತಿಗಳನ್ನು ಮಾತ್ರ ಸಂಕ್ಷಿಪ್ತವಾಗಿ ಅವಲೋಕನ ಮಾಡಿದ್ದೇನೆ. ಈ ಲೇಖನದ ಪರಿಮಿತಿಯಲ್ಲಿ ಎಲ್ಲವನ್ನು ವಿಸ್ತಾರವಾಗಿ ಹೇಳುವುದು ಕಷ್ಟವಾಗುತ್ತದೆ. ಬರಗೂರರ ಬದುಕು-ಬರಹಗಳು ಕೆಲವಾರು ಮಹಾಪ್ರಬಂಧಗಳಿಗಾಗುವಷ್ಟು ಸಮೃದ್ಧವಾದ ವಸ್ತು-ವಿಷಯಗಳನ್ನೊಳಗೊಂಡಿದ್ದು, ಅಂಥ ಪ್ರಯತ್ನ ಮಾಡುವವರಿಗೆ ಇದೊಂದು ತೋರುಬೆರಲು ಮಾತ್ರವಾಗಿದೆ.

* * *

-: ಸಮಾರೋಪ :-

ಕನ್ನಡ ದಲಿತ ಸಾಹಿತ್ಯ ಲೋಕ ವಿಶಿಷ್ಟ ಮತ್ತು ವಿಶೇಷವಾದದ್ದು. ಗಂಭೀರ ಅಧ್ಯಯನಕ್ಕೆ ಯೋಗ್ಯವಾದ ಕ್ಷೇತ್ರ. ಆರಂಭ ಕಾಲದಿಂದ ಇಂದಿನವರೆಗೆ ರಾಚನಿಕವಾಗಿ ಹೇಗೆಲ್ಲ ರೂಪಾಂತರಗೊಂಡಿದೆಯೆಂಬುದಕ್ಕೆ ವಿಪುಲ ನಿದರ್ಶನಗಳು ದೊರೆಯುತ್ತದೆ. ಅಸಂಖ್ಯಾ ದೃಷ್ಠಿ ಕೋನಗಳನ್ನು ಅರ್ಥಪೂರ್ಣ ಸನ್ನಿವೇಶಗಳನ್ನು ಬದಕಿನ ವಾಸ್ತವಿಕತೆಯನ್ನು ಒದಗಿಸುತ್ತದೆ. ಬದಲಾಗುತ್ತಿರುವ ಸಾಮಾಜಿಕ ವಿನ್ಯಾಸಗಳು ಹಳೆಯ ಗೊಡ್ಡ ಸಂಪ್ರದಾಯ, ಸಮಾನತೆ, ಶೋಷಣೆ ಮೊದಲಾದ ಸಮಸ್ಯೆಗಳನ್ನು ಈ ಸಾಹಿತ್ಯ ತನ್ನಲ್ಲಿ ಅಂಗೀಕರಿಸಿಕೊಂಡಿದೆ.

ನನ್ನ ಅಧ್ಯಯನ ಪೂರ್ಣವಾದರೂ ಸಹ ಆಯ್ಕೆಯಲ್ಲಿ ದೇವನೂರು ಮಹಾದೇವ ಅವರ ಸಮಗ್ರ ಬರವಣಿಗೆಯ ಸಫಲತೆ, ವಿಫಲತೆಗಳನ್ನು ಚರ್ಚಿಸಲಾಗಿಲ್ಲ ಕಾರಣ ನಾನು ನಿರ್ಮಿಸಿಕೊಂಡಿರುವ ಅಧ್ಯಯನದ ವ್ಯಾಪ್ತಿ ಚೌಕಟ್ಟು ಸೀಮಿತವಾಗಿತ್ತು. ಆದ್ದರಿಂದ ಇದೊಂದು ತಾತ್ವಿಕ ಚಿಂತಾನುಕ್ರಮದ ಅಧ್ಯಯನವೆಂದೇ ಹೇಳಬೇಕು. ಈ ನೆಲದ ಮಣ್ಣಿನ ವಾಸನೆಯನ್ನು ಮಹಾದೇವ ಅವರ ಸಾಹಿತ್ಯಗಳಲ್ಲಿ ಚಿತ್ರಿಸಿರುವ ಸಾರ್ಥಕತೆಯನ್ನು ಪ್ರತಿಪಾದಿಸುವ ನಿಟ್ಟಿನಲ್ಲಿ ಕೆಲಸ ಮಾಡಿದ್ದೇನೆ. ಶೈಲಿ ಮತ್ತು ತಂತ್ರದ ದೃಷ್ಠಿಯಿಂದ ಸಹಜತೆಯನ್ನು ಗುರುತಿಸಬಹುದು. ಕೆಳವರ್ಗ-ಕೆಳಜಾತಿಗಳ ನುಡಿಗಟ್ಟು ಗಳನ್ನು ಪ್ರಥಮ ಬಾರಿಗೆ ಬಳಸಿದ ಹೆಗ್ಗಳಿಕೆಯೂ ಇಲ್ಲಿದೆ. ವ್ಯಕ್ತಿ ನಿಷ್ಠ ಅನುಭವಕ್ಕಿಂತ ಸಮಾಜದ ಅನುಭವವನ್ನು ತಮ್ಮ ಬರವಣಿಗೆಯಲ್ಲಿ ಸೃಷ್ಠಿಸಿರುವ ಕ್ರಿಯೆ ಕಂಡು ಬರುತ್ತದೆ. ದಲಿತ ಸಂವೇದನೆ ಇವರ ಬರವಣಿಗೆಯಲ್ಲಿ ಸಮೃದ್ಧತೆಯಿಂದ ಕೂಡಿದೆ.

ದೇವನೂರರ ಬರವಣಿಗೆಯಲ್ಲಿ ಎದ್ದು ಕಾಣುವ ಗುಣವೆಂದರೆ ವಸ್ತುವಿನ ಹೊಸತನ ಮತ್ತು ಹೊಸದನ್ನು ಹೇಳುವಾಗ ಸಹಜವಾದ ಹೊರ ಹೊಮ್ಮುವ ಉತ್ಸಾಹ, ಆವೇಶ, ಆರ್ಭಟಗಳಿಂದ ಮುಕ್ತವಾದ ನಿರ್ಲಿಪ್ತ ದಾಟಿ, ಈ ನಿರ್ಲಿಪ್ತತೆ ಕ್ರಮೇಣ ಹಿತಮಿತವಾದ ಹಾಸ್ಯ ವಿನೋದಗಳನ್ನು ಮೈಗೂಡಿಸಿಕೊಂಡು ಮಹಾದೇವ ಕೇವಲ ವೀಕ್ಷಕರಾಗದ ಆ ವೀಕ್ಷಣೆಯನ್ನು ಈ ಹಾಸ್ಯ ವಿನೋದಗಳ ಮೂಲಕ ಆಪ್ತವಾದ ಅನುಭವಗಳ ಹಲವು ಮಗ್ಗುಲಗಳನ್ನು ಪರೀಕ್ಷಿಸುತ್ತಾ ಏಕಕಾಲದಲ್ಲಿ ಒಂದು ಅನುಭವದ ವಿವಿಧ ಮುಖಗಳನ್ನು ಕಾಣಿಸುತ್ತಾ ಹೋಗುತ್ತಾರೆ.

ನೂರು ಇನ್ನೂರು ಪುಸ್ತಕಗಳನ್ನು ಬರೆದು ತಮ್ಮ ಅಸ್ತಿತ್ವ ಎಲ್ಲಿದೆ ಎಂದು ತಡಕಾಡುವ ಲೇಖಕರು ಇರುವಾಗ, ಇನ್ನೂರು ಪುಟಗಳನ್ನು ದಾಟದ ದೇವನೂರು ಮಹಾದೇವ ಅವರ ಸಾಹಿತ್ಯ , ಅಂಗೈಯಲ್ಲಿ ಆಕಾಶವನ್ನು ತೋರಿಸುವಂಥ ಬರಹವನ್ನು ಕೊಟ್ಟಿದೆ. ಅದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಇದರರ್ಥ ಬರೆದಿರುವ ಎಲ್ಲಾ ದಲಿತ ಕತೆಗಾರರು ಸರ್ವಶ್ರೇಷ್ಠರು, ವಿಶ್ವಶ್ರೇಷ್ಠರು ಎಂದು ಭಾವಿಸಬೇಕಾಗಿಲ್ಲ. ಆದರೆ ಬರೆದಿರುವ ಕೆಲವೇ ಕೆಲವರಲ್ಲಿ ವಿಶ್ವಶ್ರೇಷ್ಠ ಕತೆಗಾರ ರಾಗಿದ್ದಾರೆ ಎಂಬುದು ಗಮನಾರ್ಹ ಸಂಗತಿಯಾಗಿದೆ. ಈ ಮುಂಚೆ ಸುಧಾರಣಾ ಮನೋಭಾವದ ಲೇಖಕರು ದಲಿತ ಕಥಾ ಸಾಹಿತ್ಯದ ಹೆಗ್ಗಳಿಕೆ ಎಂದರೆ ದಲಿತರ ಸ್ಥಿತಿಗತಿಗಳನ್ನು ಅನುಕಂಪದಿಂದ ಚಿತ್ರಿಸಿದ್ದರೂ, ಉದಾಹರಣೆಗೆ 'ಸಾಲದ ಮಗು', 'ಶನಿಯರ ಸತ್ಯನಾರಾಯಣ', 'ಮೋಚಿ', 'ಚೋಮ' ಮುಂತಾದವುಗಳು. ಇಲ್ಲೆಲ್ಲಾ ದಲಿತರು ಎಂದರೆ, ಸಂಕಷ್ಟದಲಿರುವವವರು, ಅಸಹಾಯಕರು, ಜೀವಂತಿಕೆ ಇಲ್ಲದವರು, ಅನುಕಂಪೆಗೆ ಅರ್ಹರು ಎಂಬ ದಯನೀಯತೆಯ ಚಿತ್ರಣವೇ ಇರುತ್ತಿತ್ತು. ದಲಿತ ಲೇಖಕರ ದಲಿತ ಸಂವೇದನೆಯ ಮೂಲಕ ಬದುಕನ್ನು ನೋಡುತ್ತಾ, ರಕ್ತ ಮಾಂಸಗಳ, ಅಸಲಿ ಅನುಭವಗಳ ಮೂಲಕ ಬದುಕಿನ ಅಪಾರ ಸಾಧ್ಯತೆಗಳನ್ನು ಬಿಚ್ಚುಡುತ್ತಲೇ ಕಲಾ ಮಾಧ್ಯಮಕ್ಕೆ ಹೊಸ ಆಯಾಮವನ್ನು ನೀಡಿದರು. ದೇವನೂರು ಮಹಾದೇವರ ಕಥಾ ಸಾಹಿತ್ಯ ಇದಕ್ಕೆ ಉತ್ತಮ ಉದಾಹರಣೆ. ಇವರ ವೈಶಿಷ್ಟ್ಯವೆಂದರೆ, ಸಂಘರ್ಷದ ದಿನಗಳ ಪ್ರಾರಂಭದಲ್ಲಿಯೇ ಕತೆಗಳನ್ನು ಸೃಷ್ಠಿಸಿದ ಇವರು ತಮ್ಮ ಮಹಾನ್ ವಿವೇಕದಿಂದ ಮಾನವ ಲೋಕಕ್ಕೆ ಆಸ್ತಿ ಆಗಬಲ್ಲ ಮೂಲ ಸಂವೇಧನೆಯಿಂದ ದಲಿತ ಜಗತ್ತಿನ ಒಳಪದರಗಳನ್ನು ಆಂತರಿಕ ಸಂವೇದನೆಯಿಂದ ಕಟ್ಟಿಕೊಟ್ಟಿದ್ದು, ತಾನು ಸೃಷ್ಟಿಸುತ್ತಿರುವ ಕಥೆ ಅಥವಾ ಕಾಲ್ಪನಿಕ ಜಗತ್ತು ತನ್ನ ಜನಾಂಗದ ಸಂವೇದನೆಯನ್ನು ಸ್ವಲ್ಪವಾದರೂ ಸರಿ, ನಿಜವಾಗಿ ಅದು ಕುತ್ತದೆ.

-ಃ ಗ್ರಂಥ ಋಣ ಃ-

1) ದಲಿತ ಮಾರ್ಗ	-	ಡಾ. ಅರವಿಂದ ಮಾಲಗತ್ತಿ
2) ಕನ್ನಡ ದಲಿತ ಸಾಹಿತ್ಯ	-	ಡಾ. ಅರ್ಜುನ ಗೊಳಸಂಗಿ
3) ಬಂಡಾಯ - ದಲಿತ ಸಾಹಿತ್ಯ	-	ಡಾ. ಪುರುಷೋತ್ತಮ ಬಿಳಿಮಲೆ
4) ದಲಿತ ಸಾಹಿತ್ಯ ದರ್ಶನ	-	ಡಾ. ವಿ. ಮುನಿವೆಂಕಟಪ್ಪ
5) ಕೆ. ಆರ್. ದುರ್ಗಾದಾಸ್	-	ಅನುಸಂಧಾನದ ಹೊಸ ಹಾದಿ.
6) ಕನ್ನಡ ಸಣ್ಣ ಕತೆಗಳಲ್ಲಿ ದಲಿತ ಸಂಸ್ಕೃತಿ	-	ಡಾ. ಸಿ. ಬಿ. ಹೊನ್ನಯ್ಯ
7) ಹೊಸ ಹೆಜ್ಜೆ - ಹೊಸ ಹಾದಿ	-	ಟಿ. ಪಿ. ಅಶೋಕ
8) ಸಾಹಿತ್ಯ ಪರಿಸರ	-	ಶಿವರಾಮಯ್ಯ
9) ದೇವನೂರು ಮಹಾದೇವ ಅವರ ಕೃತಿಗಳು	-	ದೇವನೂರು ಮಹಾದೇವ
10) ಯಾರ ಜಪ್ತಿಗೂ ಸಿಗದ ನವಿಲುಗಳು	-	ಪಿ. ಚಂದ್ರಿಕಾ
11) ಅನುಸಂಧಾನದ ಹೊಸ ಹಾದಿ	-	ಡಾ. ಕೆ. ಆರ್. ದುರ್ಗಾದಾಸ್
12) ಕಾಡು ಮತ್ತು ತೋಪು	-	ಡಾ. ಚಂದ್ರಶೇಖರ್ ನಂಗಲಿ

13) ಕಥಾ ಕಥನ - ಡಾ. ಎಲ್. ಹನುಮಂತಯ್ಯ

14) ಸಾಂಸ್ಕೃತಿಕ ಅಧ್ಯಯನ - ರಹಮತ್ ತರೀಕೆರೆ

15) ಅವಲೋಕನ - ಡಾ. ಎಸ್. ವಿ. ಪ್ರಭಾವತಿ
ಡಾ. ಎಚ್. ಎಲ್. ಪುಷ್ಪ

16) ಹೊಸಗನ್ನಡ ಸಾಹಿತ್ಯ ಚರಿತ್ರೆ - ಎಲ್. ಎಸ್. ಶೇಷಗಿರಿರಾವ್

17) ದಲಿತ ಮಾರ್ಗ - ಅರವಿಂದ ಮಾಲಗತ್ತಿ

18) ಕನ್ನಡ ಸಾಹಿತ್ಯ ಚರಿತ್ರೆ - ರಂ. ಶ್ರೀ ಮುಗಳಿ

19) ಕನ್ನಡ ಸಾಹಿತ್ಯ ಚರಿತ್ರೆ - ತ.ಸು.ಶ್ಯಾಮರಾಯ

20) ಸಾಹಿತ್ಯ ಪ್ರಕ್ರಿಯೆ - ಡಾ. ಆರ್ಕೆ

-----0----